ಶನಿವಾರ, ಆಗಸ್ಟ್ 30, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 240 | ಪುಟ 18

prajavani.net prajavani www.prajavani.net

ಬೇಡರ ವೇಷ
ದಾವಣಗೆರೆಯಲ್ಲಿ ನಡೆದ ಗಣೇಶ ವಿಗ್ರಹ ವಿಸರ್ಜನಾ ಮೆರವಣಿಗೆಯಲ್ಲಿ ಬೇಡರ ವೇಷಧಾರಿ ಗಮನ ಸೆಳೆದರು



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ರಿಬಾಕಿನಾಗೆ ಮುನ್ನಡೆ
ಕಜಾಕಸ್ತಾನದ ಎಲೆನಾ ರಿಬಾಕಿನಾ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಮಾಜಿ ಚಾಂಪಿಯನ್ ಎಮ್ಮಾ ರಾಡುಕಾನು ಅವರನ್ನು ಮಣಿಸಿ ಮಹಿಳೆಯರ ಸಿಂಗಲ್ಸ್‌ನಲ್ಲಿ ನಾಲ್ಕನೇ ಸುತ್ತು ತಲುಪಿದರು

ಸೆನ್ಸೆಕ್ಸ್ 79,809 | ನಿಫ್ಟಿ 24,426 | $/₹ 88.09 | ಚಿನ್ನ (Std. 10g) ₹1,07,100 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,24,300 (ಬೆಂಗಳೂರು)

ತೆರಿಗೆ ನಷ್ಟ ಭರ್ತಿಗೆ ಬಿಗಿಪಟ್ಟು

ಜಿಎಸ್‌ಟಿ ಹಂತ ಸರಳೀಕರಣದಿಂದ ರಾಜ್ಯಕ್ಕೆ ₹15 ಸಾವಿರ ಕೋಟಿ ಖೋತಾ

ಪ್ರಜಾವಾಣಿ ವಾರ್ತೆ



ನವದೆಹಲಿ: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಲ್ಲಿನ ತೆರಿಗೆ ಹಂತಗಳನ್ನು ಕಡಿಮೆ ಮಾಡುವುದರಿಂದ ವಾರ್ಷಿಕ ₹85 ಸಾವಿರ ಕೋಟಿಯಿಂದ ₹2.5 ಲಕ್ಷ ಕೋಟಿ ವರೆಗೆ ವರಮಾನ ನಷ್ಟವಾಗಲಿದೆ. ಈ ನಷ್ಟವನ್ನು ತುಂಬಿ ಕೊಡಬೇಕು ಎಂದು ಕರ್ನಾಟಕ ಸೇರಿ ಎಂಟು ರಾಜ್ಯಗಳು ಹಕ್ಕೊತ್ತಾಯ ಮಂಡಿಸಿವೆ.

ಸಮಾನ ಮನಸ್ಕ ರಾಜ್ಯಗಳ ಹಣಕಾಸು ಸಚಿವರು ಶುಕ್ರವಾರ ಇಲ್ಲಿ ಸಭೆ ಸೇರಿ ಜಿಎಸ್‌ಟಿ ಸರಳೀಕರಣದ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಿದರು. ಸೆಪ್ಟೆಂಬರ್ 3 ಮತ್ತು 4ರಂದು ನಡೆಯಲಿರುವ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ತಮ್ಮ ರಾಜ್ಯಗಳ ಹಿತ ರಕ್ಷಿಸಲು ವಿವಿಧ ಬೇಡಿಕೆಗಳನ್ನು ಮುಂದಿಡಲು ತೀರ್ಮಾನಿಸಿದರು.

2017ರಲ್ಲಿ ಜಿಎಸ್‌ಟಿ ವ್ಯವಸ್ಥೆ ಜಾರಿಯಾದ ಸಂದರ್ಭದಲ್ಲಿ ರಾಜ್ಯಕ್ಕೆ ₹25 ಸಾವಿರ ಕೋಟಿಯಿಂದ ₹30 ಸಾವಿರ ಕೋಟಿಯಷ್ಟು ನಷ್ಟ ಉಂಟಾಯಿತು. ವರಮಾನ ನಷ್ಟ ಸರಿದೂಗಿಸಲು ರಾಜ್ಯಗಳಿಗೆ ಐದು ವರ್ಷ ಪರಿಹಾರ ನೀಡಲಾಯಿತು. ಪರಿಹಾರ ವ್ಯವಸ್ಥೆಯನ್ನು ಇನ್ನಷ್ಟು ವರ್ಷ ಮುಂದುವರಿಸಬೇಕು ಎಂಬ ರಾಜ್ಯದ ಮನವಿಗೆ ಕೇಂದ್ರ ಕಿವಿಗೊಡಲಿಲ್ಲ. ಹೊಸ ವ್ಯವಸ್ಥೆ ಜಾರಿಗೆ ಬಂದರೆ ರಾಜ್ಯಕ್ಕೆ ವಾರ್ಷಿಕ ₹15 ಸಾವಿರ ವರಮಾನ ಖೋತಾ ಆಗಲಿದೆ. ಅದನ್ನು ಕೇಂದ್ರ ತುಂಬಿ ಕೊಡಬೇಕು ಎಂಬುದು ರಾಜ್ಯದ ಬೇಡಿಕೆಯಾಗಿದೆ.

ತೆರಿಗೆ ಹಂಚಿಕೆ ಸೇರಿದಂತೆ ಒಟ್ಟು ಸಂಪನ್ಮೂಲ ಹಂಚಿಕೆಯಲ್ಲಿ ರಾಜ್ಯಕ್ಕೆ ಕೇಂದ್ರ ಸರ್ಕಾರ ನಿರಂತರ ಅನ್ಯಾಯ ಮಾಡುತ್ತಿದೆ ಎಂದು ರಾಜ್ಯ ಸರ್ಕಾರ ವರ್ಷಗಳಿಂದ ಆರೋಪಿಸುತ್ತಿದೆ. ಕರ್ನಾಟಕದಿಂದ ಸಂಗ್ರಹವಾಗುವ ಒಂದು ರೂಪಾಯಿ ತೆರಿಗೆಯಲ್ಲಿ 15 ಪೈಸೆ ಮಾತ್ರ ವಾಪಸ್ ಬರುತ್ತಿದೆ ಎಂದು ದೂರಿದೆ. ಜಿಎಸ್‌ಟಿ ವ್ಯವಸ್ಥೆ ಸರಳೀಕರಣದಿಂದ ರಾಜ್ಯಕ್ಕೆ ಮತ್ತಷ್ಟು ಹೊಡೆತ ಬೀಳಲಿದೆ ಎಂದು ರಾಜ್ಯ ಸರ್ಕಾರ ಬಲವಾಗಿ ಪ್ರತಿಪಾದಿಸಿದೆ.

▶10

ಸಭೆಯಲ್ಲಿ ಯಾರೆಲ್ಲ ಭಾಗಿ?

ಕರ್ನಾಟಕದಿಂದ ಕೃಷ್ಣ ಬೈರೇಗೌಡ, ಹಣಕಾಸು ಸಚಿವರಾದ ತಮಿಳುನಾಡಿನ ತಂಗಮ್ ತೆನ್ನರಸು, ಹಿಮಾಚಲ ಪ್ರದೇಶದ ರಾಜೇಶ್ ಧರ್ಮಾನಿ, ಜಾರ್ಖಂಡ್‌ನ ರಾಧಾಕೃಷ್ಣ ಕಿಶೋರ್, ಪಂಜಾಬ್‌ನ ಹರ್ಪಾಲ್ ಸಿಂಗ್ ಚೀಮಾ, ಕೇರಳದ ಬಾಲಗೋಪಾಲ್, ತೆಲಂಗಾಣದ ಮಲ್ಲು ಭಟ್ಟಿ ವಿಕ್ರಮಾರ್ಕ ಮತ್ತು ಪಶ್ಚಿಮ ಬಂಗಾಳ ಸರ್ಕಾರ ಪರವಾಗಿ ನಿವಾಸಿ ಆಯುಕ್ತರಾದ ಉಜ್ಜೈನಿ ದತ್ತ ಸಭೆಯಲ್ಲಿ ಪಾಲ್ಗೊಂಡಿದ್ದರು.

ರಾಜ್ಯ ಹೇಳುವುದೇನು?

₹1.20 ಲಕ್ಷ ಕೋಟಿ
ರಾಜ್ಯದಲ್ಲಿ ಸದ್ಯ ವಾರ್ಷಿಕ ಜಿಎಸ್‌ಟಿ ಸಂಗ್ರಹ ಪ್ರಮಾಣ

₹75 ಸಾವಿರ ಕೋಟಿ
ರಾಜ್ಯದ ಬೇಡಿಕೆಗೆ ಮಣಿದು ಕೇಂದ್ರವು ಐದು ವರ್ಷ ಪರಿಹಾರ ನೀಡಿದರೆ ಸಿಗುವ ಮೊತ್ತ

(● ಜಿಎಸ್‌ಟಿ ಸಂಗ್ರಹದಲ್ಲಿ ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದ್ದರೆ, ರಾಜ್ಯ ಎರಡನೇ ಸ್ಥಾನದಲ್ಲಿದೆ)

ಶೇ 20 ಜಿಎಸ್‌ಟಿ ಸರಳೀಕರಣದಿಂದ ರಾಜ್ಯಕ್ಕೆ ಆಗುವ ನಷ್ಟದ ಪ್ರಮಾಣ

ಸಮಾನ ಮನಸ್ಕರ ಬೇಡಿಕೆಗಳೇನು?

- ರಾಜ್ಯಗಳ ಆದಾಯ ನಷ್ಟವನ್ನು ಜಿಎಸ್‌ಟಿ ಪರಿಹಾರ ಸೆಸ್‌ನಂತಹ ವ್ಯವಸ್ಥೆ ಮೂಲಕ ಸರಿದೂಗಿಸಬೇಕು
- ಹಾನಿಕಾರಕ ಮತ್ತು ಐಷಾರಾಮಿ ಸರಕುಗಳ ಮೇಲೆ ಹೆಚ್ಚುವರಿ ತೆರಿಗೆ ವಿಧಿಸಿ ಈ ಆದಾಯವನ್ನು ಸಂಪೂರ್ಣವಾಗಿ ರಾಜ್ಯಗಳಿಗೆ ವರ್ಗಾಯಿಸಬೇಕು
- ರಾಜ್ಯಗಳ ಆದಾಯ ನಷ್ಟ ಪರಿಹರಿಸಲು ಕೇಂದ್ರ ಸರ್ಕಾರ ಸಾಲಗಳನ್ನು ಪಡೆಯಬೇಕು. ಈ ಸಾಲವನ್ನು 5 ವರ್ಷಗಳ ನಂತರವೂ ಪರಿಹಾರ ಸೆಸ್ ವಿಸ್ತರಿಸುವ ಮೂಲಕ ಪಾವತಿಸಬೇಕು
- ರಾಜ್ಯಗಳಿಗೆ ಪರಿಹಾರವನ್ನು 2024-25ನೇ ಹಣಕಾಸು ವರ್ಷದಿಂದಲೇ ನೀಡಬೇಕು. ವಾರ್ಷಿಕ ಶೇ 14ರ ದರದಲ್ಲಿ ಪರಿಹಾರ ನೀಡಬೇಕು

ರಾಜ್ಯಗಳ ಆರ್ಥಿಕ ಸ್ವಾಯತ್ತೆಗೆ ಹೊಡೆತ: ಕೃಷ್ಣ ಬೈರೇಗೌಡ

ಜಿಎಸ್‌ಟಿ ವ್ಯವಸ್ಥೆ ಸ್ಥಿರಗೊಳ್ಳುವವರೆಗೆ ರಾಜ್ಯಗಳಿಗೆ ಜಿಎಸ್‌ಟಿ ಕೌನ್ಸಿಲ್ ನಷ್ಟ ಪರಿಹಾರ ನೀಡಲಿ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜಿಎಸ್‌ಟಿ ಕೌನ್ಸಿಲ್ ನಮ್ಮ ಮುಂದಿಟ್ಟಿರುವ ತೆರಿಗೆ ಸರಳೀಕರಣ ವ್ಯವಸ್ಥೆಯನ್ನು ಸ್ವಾಗತಿಸುತ್ತೇವೆ. ಆದರೆ, ಈ ವ್ಯವಸ್ಥೆಯು ರಾಜ್ಯಗಳ ತೆರಿಗೆ ಆದಾಯ ರಕ್ಷಿಸುವಂತಿರಬೇಕು. ಇದರ ಸಂಪೂರ್ಣ ಲಾಭ ದೇಶದ ಜನಸಾಮಾನ್ಯರಿಗೆ ಸಿಗುವಂತಿರಬೇಕೇ ಹೊರತು ಕೆಲವು ಕಂಪನಿಗಳಿಗೆ ಮಾತ್ರ ಲಾಭ ಆಗುವಂತೆ ಆಗಬಾರದು' ಎಂದರು.

▶10



ಗೋಕರ್ಣ–ಶಿರಸಿ ರಾಜ್ಯ ಹೆದ್ದಾರಿಯಲ್ಲಿರುವ ಮಾದನಗೇರಿ ಗ್ರಾಮದ ಬಳಿ ಶುಕ್ರವಾರ ರಸ್ತೆ ಸಂಪೂರ್ಣವಾಗಿ ಜಲಾವೃತಗೊಂಡಿದ್ದರಿಂದ ಬೀದಿ ಬದಿ ವ್ಯಾಪಾರಿಗಳು ತೀವ್ರ ಸಂಕಷ್ಟ ಅನುಭವಿಸಿದರು – ಪ್ರಜಾವಾಣಿ ಚಿತ್ರ

ಮುಂದುವರಿದ ಮಳೆ ಅಬ್ಬರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಶಿವಮೊಗ್ಗ, ಕೊಡಗು, ಉತ್ತರ ಕನ್ನಡದಲ್ಲಿ ರಜೆ ಘೋಷಣೆ
- ಕೊಡಗು, ಉತ್ತರ ಕನ್ನಡದ ತಲಾ ಒಂದು ಕಡೆ ಭೂಕುಸಿತ

ಕಾರವಾರ/ಹೊಸಪೇಟೆ: ರಾಜ್ಯದ ಕರಾವಳಿ ಮತ್ತು ಮಲೆನಾಡು ಭಾಗದಲ್ಲಿ ಮಳೆ ಅಬ್ಬರ ಮುಂದುವರಿದಿದೆ.

ಕಲ್ಯಾಣ ಕರ್ನಾಟಕದ ಕಲಬುರಗಿ, ಯಾದಗಿರಿ ಜಿಲ್ಲೆಗಳಲ್ಲೂ ಮಳೆ ಮುಂದುವರಿದಿದ್ದು, ನದಿ ಪಾತ್ರ ಗ್ರಾಮಗಳಲ್ಲಿ ಜಮೀನಿಗೆ ನೀರು ನುಗ್ಗಿ ಭಾರಿ ಪ್ರಮಾಣದಲ್ಲಿ ಬೆಳೆ ನಷ್ಟವಾಗಿದೆ.

ಉತ್ತರ ಕನ್ನಡ ಜಿಲ್ಲೆಯಾದ್ಯಂತ ಮಳೆ ಅಬ್ಬರಿಸಿದೆ. ಗೇರುಸೊಪ್ಪ ಜಲಾಶಯದಿಂದ 75 ಸಾವಿರ ಕ್ಯೂಸೆಕ್ ನೀರನ್ನು ಶರಾವತಿ ನದಿಗೆ ಹರಿಸಿದ್ದರಿಂದ ಹೊನ್ನಾವರದ ಕೆಲ ಗ್ರಾಮಗಳಲ್ಲಿ ಪ್ರವಾಹ ಸ್ಥಿತಿ ಉಂಟಾಗಿತ್ತು.

ನದಿ ಪಾತ್ರದ ಹೆರಂಗಡಿ, ಸರಳಗಿ, ಗುಂಡಬಾಳ, ಬೇರೊಳ್ಳಿ ಸೇರಿ ಕೆಲ ಗ್ರಾಮಗಳ ಮನೆಗಳಿಗೆ ನೀರು ನುಗ್ಗಿತು. 15 ಕಾಳಜಿ ಕೇಂದ್ರಗಳನ್ನು ತೆರೆದಿದ್ದು,ಬಾಧಿತ ಗ್ರಾಮಗಳ 358 ಜನರು ಆಶ್ರಯ ಪಡೆದಿದ್ದಾರೆ. ಭಟ್ಕಳ ಪಟ್ಟಣ ಸೇರಿ ಗ್ರಾಮಾಂತರ ಪ್ರದೇಶದಲ್ಲೂ ಜಲಾವೃತ ಸಮಸ್ಯೆ ಉಂಟಾಗಿದೆ.

ಗೋಕರ್ಣ–ಶಿರಸಿ ರಾಜ್ಯ ಹೆದ್ದಾರಿಯಲ್ಲಿ ನೀರು ನಿಂತು ಹಲವು ಗಂಟೆ ಸಂಚಾರ ವ್ಯತ್ಯಯವಾಯಿತು. ಹೊನ್ನಾವರ ತಾಲ್ಲೂಕಿನ ಕರ್ನಲ್ ಹಿಲ್ ಸಮೀಪ ಅಲ್ಪ ಪ್ರಮಾಣದಲ್ಲಿ ಗುಡ್ಡ ಕುಸಿದಿದೆ. ಕರಾವಳಿ ಭಾಗದ ಐದು ತಾಲ್ಲೂಕಿನ ಶಾಲೆ, ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು.

ಮಲೆನಾಡು ಭಾಗದಲ್ಲಿ ಬಿರುಸಿನ ಮಳೆಯಿಂದಾಗಿ ಹೊಸಪೇಟೆ ತುಂಗಭದ್ರಾ ಜಲಾಶಯದ ಒಳಹರಿವಿನಲ್ಲಿ ಶುಕ್ರವಾರ ಏರಿಕೆ ಕಂಡುಬಂದಿದೆ. 14 ಗೇಟ್ ತೆರೆದು 55,512 ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗಿದ್ದು, ಹಂಪಿಯ ಸ್ನಾನಘಟ್ಟ, ಕೆಲ ಸ್ಮಾರಕಗಳು ಮತ್ತೆ ಮುಳುಗುವ ಸ್ಥಿತಿಗೆ ತಲುಪಿವೆ.

ತುಂಗಾ, ಭದ್ರಾ ಅಣೆಕಟ್ಟೆಗಳಿಂದ ಅಧಿಕ ನೀರು ಬಿಡುತ್ತಿದ್ದು, ವರದಾ ನದಿಯಲ್ಲಿ ಹರಿವಿನ ಮಟ್ಟ ಏರಿದೆ.

ಉಡುಪಿಯಲ್ಲಿ ಧಾರಾಕಾರ ಮಳೆ: ಜಿಲ್ಲೆಯಾದ್ಯಂತ ಧಾರಾಕಾರ ಮಳೆ ಮುಂದುವರಿದಿದೆ. ಬೈಂದೂರು ತಾಲ್ಲೂಕಿನ ಕೆಲವೆಡೆ ಜಮೀನು ಜಲಾವೃತವಾಗಿವೆ. ಕಾರ್ಕಳ, ಕುಂದಾಪುರ, ಬ್ರಹ್ಮಾವರ, ಕಾಪು, ಹೆಬ್ರಿ ವ್ಯಾಪ್ತಿಯಲ್ಲೂ ಉತ್ತಮ ಮಳೆಯಾಗಿದೆ.

▶7

ಅಭಿಮಾನ್ ಸ್ಟುಡಿಯೊ ಭೂಮಿ ವಾಪಸ್
ವಿವರ ▶5

ಬಿಜೆಪಿ–ಕಾಂಗ್ರೆಸ್ ಕಾರ್ಯಕರ್ತರ ಘರ್ಷಣೆ

ಬಿಹಾರ: ರಾಹುಲ್ ಗಾಂಧಿ ಯಾತ್ರೆಯಲ್ಲಿ ಪ್ರಧಾನಿಯ ಅವಹೇಳನ ಆರೋಪ

ಪಟ್ನಾ (ಪಿಟಿಐ): ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಬಿಹಾರದಲ್ಲಿ ನಡೆಯುತ್ತಿರುವ 'ಮತದಾರರ ಅಧಿಕಾರ ಯಾತ್ರೆ'ಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ನಿಂದಿಸಲಾಗಿದೆ ಎಂಬ ಆರೋಪ ಕೇಳಿಬಂದಿದ್ದು, ಈ ವಿಚಾರವಾಗಿ ಕಾಂಗ್ರೆಸ್–ಬಿಜೆಪಿ ಕಾರ್ಯಕರ್ತರು ಪಟ್ನಾದಲ್ಲಿ ಶುಕ್ರವಾರ ಜಟಾಪಟಿ ನಡೆಸಿದ್ದಾರೆ.

ಬಿಹಾರದ ಸಚಿವರಾದ ನಿತಿನ್ ನವೀನ್, ಸಂಜಯ್ ಸರಾವಗಿ ಹಾಗೂ ಶಾಸಕ ಸಂಜೀವ್ ಚೌರಾಸಿಯಾ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಬಿಹಾರ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಚೇರಿ 'ಸದಾಕತ್ ಆಶ್ರಮ'ಕ್ಕೆ ಮುತ್ತಿಗೆ ಹಾಕಿದ್ದಾರೆ. ಪ್ರಧಾನಿ ಅವರನ್ನು ದರ್ಭಂಗಾದಲ್ಲಿ ಬುಧವಾರ ನಿಂದಿಸಲಾಗಿದೆ ಎಂದು ಆರೋಪಿಸಿ ಕಾಂಗ್ರೆಸ್ ವಿರುದ್ಧ ಘೋಷಣೆಗಳನ್ನು ಕೂಗಿದರಲ್ಲದೆ, ರಾಹುಲ್ ಅವರು ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು.

ಬಿಜೆಪಿ ಕಾರ್ಯಕರ್ತರನ್ನು ತಡೆಯಲು ಕಾಂಗ್ರೆಸ್ ಕಾರ್ಯಕರ್ತರು ಸದಾಕತ್ ಆಶ್ರಮದ ಗೇಟ್‌ಅನ್ನು ಒಳಗಿನಿಂದ ಲಾಕ್ ಮಾಡಿದ್ದಾರೆ. ಕೆಲವರು ಬಿಜೆಪಿ ಕಾರ್ಯಕರ್ತರ ಮೇಲೆ ಕಲ್ಲು ತೂರಾಟ ನಡೆಸಿದರು ಎಂದು ಆರೋಪಿಸಲಾಗಿದೆ. ಈ ವೇಳೆ ಎರಡೂ ಪಕ್ಷಗಳ ಕಾರ್ಯಕರ್ತರ ಮಧ್ಯೆ ಮಾರಾಮಾರಿ ನಡೆದಿದೆ. ಪಕ್ಷದ ಬಾವುಟ ಕಟ್ಟಿದ್ದ ಕೋಲುಗಳನ್ನು ಹಿಡಿದು ಬಡಿದಾಡಿಕೊಂಡರು. ಇದರ ಫೋಟೊ ಹಾಗೂ ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ. ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದರು. ಅಲ್ಲಿಂದ ತೆರಳುವಂತೆ ಬಿಜೆಪಿ ಕಾರ್ಯಕರ್ತರನ್ನು ಮನವೊಲಿಸುವಲ್ಲಿ ಪೊಲೀಸರು ಯಶಸ್ವಿಯಾದರು.

▶11



ಪಟ್ನಾದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಶುಕ್ರವಾರ ಪರಸ್ಪರ ಹೊಡೆದಾಡಿಕೊಂಡರು –ಪಿಟಿಐ ಚಿತ್ರ

> ರಾಹುಲ್ ಗಾಂಧಿ ಅವರಲ್ಲಿ ಏನಾದರೂ ಮಾನ ಮರ್ಯಾದೆ ಉಳಿದಿದ್ದರೆ ಕ್ಷಮೆಯಾಚಿಸಲಿ. ಇಡೀ ದೇಶದ ಜನರು ಅವರನ್ನು ಮತ್ತು ಅವರ ಪಕ್ಷವನ್ನು ಅಸಹ್ಯದಿಂದ ನೋಡುತ್ತಿದ್ದಾರೆ
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

> ಸತ್ಯ, ಅಹಿಂಸೆಯ ಎದುರು ಸುಳ್ಳು, ಹಿಂಸೆಗೆ ಸ್ಥಾನವಿಲ್ಲ. ಎಷ್ಟೇ ತಡೆ ಒಡ್ಡಿದರೂ ಸತ್ಯ, ಸಂವಿಧಾನವನ್ನು ರಕ್ಷಿಸುವ ಕೆಲಸ ಮುಂದುವರಿಸುತ್ತೇವೆ. ಸತ್ಯಮೇವ ಜಯತೇ
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

ಒಬ್ಬನ ಬಂಧನ

ಪ್ರಧಾನಿ ಅವರನ್ನು ಅವಾಚ್ಯ ಪದಗಳಿಂದ ನಿಂದಿಸಿದ ಆರೋಪದ ಮೇಲೆ ವ್ಯಕ್ತಿಯೊಬ್ಬನನ್ನು ಬಿಹಾರ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಬಂಧಿತನನ್ನು ದರ್ಭಂಗಾ ಪಟ್ಟಣದ ಸಿಂಗ್ವಾರ ಪ್ರದೇಶದ ನಿವಾಸಿ ಮೊಹಮ್ಮದ್ ರಿಜ್ವಿ ರಝಾ (20) ಎಂದು ಗುರುತಿಸಲಾಗಿದೆ.

'ಮತದಾರರ ಅಧಿಕಾರ ಯಾತ್ರೆ' ಅಂಗವಾಗಿ ದರ್ಭಂಗಾದಲ್ಲಿ ಬುಧವಾರ ಕಾರ್ಯಕ್ರಮ ಆಯೋಜಿಸಿದ್ದ ವೇದಿಕೆಯಿಂದ ವ್ಯಕ್ತಿಯೊಬ್ಬ ಪ್ರಧಾನಿ ಅವರನ್ನು ಹಿಂದಿಯಲ್ಲಿ ಅವಾಚ್ಯ ಪದಗಳಿಂದ ನಿಂದಿಸಿದ್ದಾನೆ ಎನ್ನಲಾದ ವಿಡಿಯೊ ತುಣುಕು ಹರಿದಾಡಿತ್ತು.

ಬಿಜೆಪಿ ದರ್ಭಂಗಾ ಜಿಲ್ಲಾ ಘಟಕದ ಅಧ್ಯಕ್ಷ ಆದಿತ್ಯ ನಾರಾಯಣ ಚೌಧರಿ ಅವರು ದೂರು ನೀಡಿದ್ದರು.

ಹುದ್ದೆ ಭರ್ತಿಗೆ ಕೆಪಿಎಸ್‌ಸಿ ಆತುರ

ಒಳಮೀಸಲು ಅನ್ವಯಿಸದೆ ನೇಮಕಾತಿಗೆ ಆಯೋಗ ಸಜ್ಜು

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಪರಿಶಿಷ್ಟ ಸಮುದಾಯ ಪ್ರತಿನಿಧಿಸುವ ಸಚಿವರ ವಿರೋಧದ ಮಧ್ಯೆಯೂ ಒಳಮೀಸಲಾತಿ ಅನ್ವಯಿಸದೆ 817 ಸಹಾಯಕ ಕೃಷಿ ಅಧಿಕಾರಿಗಳೂ ಸೇರಿ 945 ಹುದ್ದೆಗಳ ಭರ್ತಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಮುಂದಾಗಿದೆ.

ಕೃಷಿ ಇಲಾಖೆಯಲ್ಲಿ 'ಎ' ಮತ್ತು 'ಬಿ' ವೃಂದದ 3,319 ಹುದ್ದೆಗಳು ಖಾಲಿ ಇದ್ದು, ಅವುಗಳಲ್ಲಿ 'ಎ' ವೃಂದದ 128 ಹುದ್ದೆಗಳೂ ಸೇರಿ 945 ಹುದ್ದೆಗಳ ಭರ್ತಿಗೆ ಪರೀಕ್ಷೆ ನಡೆಸಲು ಕೋರಿ ಕೆಪಿಎಸ್‌ಸಿಗೆ ಪ್ರಸ್ತಾವ ಸಲ್ಲಿಸಲಾಗಿತ್ತು. ನಂತರ 2024ನೇ ಸೆಪ್ಟೆಂಬರ್ 20ರಂದು ನೇಮಕಾತಿ ಅಧಿಸೂಚನೆ ಹೊರಡಿಸಲಾಗಿತ್ತು. ಅದೇ ವೇಳೆಗೆ ಒಳಮೀಸಲಾತಿ ಕುರಿತು ಸುಪ್ರೀಂಕೋರ್ಟ್ ತೀರ್ಪು ಬಂದಿದ್ದರಿಂದ ಅಧಿಸೂಚನೆ ರದ್ದು ಮಾಡಲಾಗಿತ್ತು. ಕೆಪಿಎಸ್‌ಸಿ ಮತ್ತೆ 2024ನೇ ಡಿಸೆಂಬರ್ 31ರಂದು ತಿದ್ದುಪಡಿ ಅಧಿಸೂಚನೆ ಹೊರಡಿಸಿತ್ತು.

ಕಲ್ಯಾಣ ಕರ್ನಾಟಕ	
ಪರೀಕ್ಷಾ ದಿನಾಂಕ	**ವಿಷಯ**
ಸೆಪ್ಟೆಂಬರ್ 6	ಕನ್ನಡ ಭಾಷಾ ಪರೀಕ್ಷೆ
ಸೆಪ್ಟೆಂಬರ್ 7	ಸಾಮಾನ್ಯ/ ನಿರ್ದಿಷ್ಟ ಪತ್ರಿಕೆ
ಸೆಪ್ಟೆಂಬರ್ 4	ನಿರ್ದಿಷ್ಟ ಪತ್ರಿಕೆ–2
ಕಲ್ಯಾಣ ಕರ್ನಾಟಕೇತರ	
ಸೆಪ್ಟೆಂಬರ್ 27	ಕನ್ನಡ ಭಾಷಾ ಪರೀಕ್ಷೆ
ಸೆಪ್ಟೆಂಬರ್ 28	ಸಾಮಾನ್ಯ/ ನಿರ್ದಿಷ್ಟ ಪತ್ರಿಕೆ
ಸೆಪ್ಟೆಂಬರ್ 5	ನಿರ್ದಿಷ್ಟ ಪತ್ರಿಕೆ–2

ಪರಿಶಿಷ್ಟ ಜಾತಿಯಲ್ಲಿನ 101 ಜಾತಿಗಳ ದತ್ತಾಂಶ ಸಂಗ್ರಹಿಸಿ, ಒಳ ಮೀಸಲಾತಿ ಕಲ್ಪಿಸುವ ಕುರಿತು ಪರಿಶೀಲಿಸಿ, ಸೂಕ್ತ ಶಿಫಾರಸುಗಳ ಸಹಿತ ವರದಿ ನೀಡಲು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಅಧ್ಯಕ್ಷತೆಯಲ್ಲಿ ಏಕ ಸದಸ್ಯ ಆಯೋಗವನ್ನು ರಾಜ್ಯ ಸರ್ಕಾರ ರಚಿಸಿತ್ತು.

▶6

'ದ್ವಿಮುಖ ನೀತಿ'

'ಭೂಮಾಪಕರ ಹುದ್ದೆಗಳ ಭರ್ತಿಗೆ 2024ನೇ ಫೆಬ್ರುವರಿಯಲ್ಲಿ ಕೆಪಿಎಸ್‌ಸಿ ಅಧಿಸೂಚನೆ ಹೊರಡಿಸಿತ್ತು. ನಂತರ ಅದೇ ನವೆಂಬರ್‌ನಲ್ಲಿ ತಿದ್ದುಪಡಿ ಆದೇಶ ಹೊರಡಿಸಿತ್ತು. ಒಳ ಮೀಸಲಾತಿ ಆದೇಶದ ನಂತರ ಅಧಿಸೂಚನೆ ರದ್ದು ಮಾಡಿತ್ತು. ಹಾಗೆಯೇ, ಪಶು ವೈದ್ಯಾಧಿಕಾರಿಗಳ ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿಯಲಾಗಿದೆ. ಇತರೆ ಇಲಾಖೆಗಳ ನೇಮಕಾತಿ ಪ್ರಕ್ರಿಯೆಗಳೂ ಸ್ಥಗಿತಗೊಂಡಿವೆ. ಆದರೆ, ಕೃಷಿ ಅಧಿಕಾರಿಗಳ ನೇಮಕಾತಿ ಅಧಿಸೂಚನೆಯನ್ನು ಹಿಂಪಡೆಯದೆ ಪ್ರಕ್ರಿಯೆ ಮುಂದುವರಿಸಿದೆ. ಇದು ಕೆಪಿಎಸ್‌ಸಿಯ ದ್ವಿಮುಖ ನೀತಿ' ಎಂದು ದೂರುತ್ತಾರೆ ಕೃಷಿ ಪದವೀಧರರಾದ ಅನಂತೇಶ್, ಎಂ.ಕೆ. ರಾಜಪ್ಪ.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಕಾಯ್ದೆ ಉಲ್ಲಂಘನೆ: ರಾಯಲ್ ಆರ್ಕಿಡ್‌ಗೆ ಗುತ್ತಿಗೆ

ಸರ್ಕಾರಕ್ಕೆ ₹600 ಕೋಟಿ ನಷ್ಟ

● ಚಿರಂಜೀವಿ ಕುಲಕರ್ಣಿ

ಬೆಂಗಳೂರು: ರಾಯಲ್ ಆರ್ಕಿಡ್ ಹೋಟೆಲ್ಸ್ ಲಿಮಿಟೆಡ್‌ಗೆ 1.07 ಲಕ್ಷ ಚದರಡಿ ಭೂಮಿಯ ಗುತ್ತಿಗೆ ನೀಡುವಲ್ಲಿ ರಾಜ್ಯ ಸರ್ಕಾರ ಕಾನೂನನ್ನು ಉಲ್ಲಂಘಿಸಿರುವುದರಿಂದ ಸರ್ಕಾರಕ್ಕೆ ₹600 ಕೋಟಿ ನಷ್ಟ ಉಂಟಾಗಿದೆ.

ಸ್ಟಾರ್ ಹೋಟೆಲ್‌ಗಳ ಕಾರ್ಯಾಚರಣೆ ನಡೆಸುವ ರಾಯಲ್ ಆರ್ಕಿಡ್ ಹೋಟೆಲ್‌ಗೆ ಟೆಂಡರ್ ಪ್ರಕ್ರಿಯೆ ನಡೆಸದೆ, ಅಧಿಕಾರಿಗಳ ಸಲಹೆಯನ್ನೂ ಪರಿಗಣಿಸದೆ ಅತಿ ಕಡಿಮೆ ಬೆಲೆಗೆ ಗುತ್ತಿಗೆ ನೀಡಲಾಗಿದೆ.

ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದಿರುವ ದಾಖಲೆಗಳ ಪ್ರಕಾರ, ದೊಮ್ಮಲೂರಿನಲ್ಲಿರುವ ಕರ್ನಾಟಕ ಗಾಲ್ಫ್ ಅಸೋಸಿಯೇಷನ್ ಪಕ್ಕದಲ್ಲಿರುವ 2 ಎಕರೆ 19 ಗುಂಟೆ (1,07,593 ಚದರಡಿ) ಭೂಮಿಯ ಗುತ್ತಿಗೆಯನ್ನು ಅಧಿಕಾರಿಗಳ ಆಕ್ಷೇಪಣೆಯ ನಡುವೆಯೂ ಮರು ನವೀಕರಿಸಲಾಗಿದೆ.

ಪ್ರವಾಸೋದ್ಯಮದ ಮೂಲ-ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಹೋಟೆಲ್ ರಾಯಲ್ ಆರ್ಕಿಡ್‌ಗೆ ಹಲವು ಕಡೆ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆಎಸ್‌ಟಿಡಿಸಿ) ವತಿಯಿಂದ ಭೂಮಿ ನೀಡಲಾಗಿದೆ.

▶3B

ಅತಿ ಕಡಿಮೆ ಬೆಲೆಗೆ...

ಗುತ್ತಿಗೆ ನೀಡಿರುವುದು ಕೆಟಿಪಿಪಿ ಕಾಯ್ದೆಗೆ ವಿರುದ್ಧವಾಗಿದ್ದರೂ, ರಾಜ್ಯ ಸರ್ಕಾರ ಮತ್ತೊಂದು ಪ್ರಮಾದ ಎಸಗಿ, ₹600 ಕೋಟಿ ಮೌಲ್ಯದ (ಪ್ರಸ್ತುತ ಮೌಲ್ಯ) ಭೂಮಿಯನ್ನು ಅತಿ ಕಡಿಮೆ ಬೆಲೆಗೆ ನೀಡಿದೆ.

'ಸರ್ಕಾರ ವರ್ಷಕ್ಕೆ ₹2 ಕೋಟಿಗೂ ಕಡಿಮೆ ಹಣವನ್ನು ಪಡೆಯುತ್ತಿದೆ. ಹೋಟೆಲ್ ಕೊಠಡಿಗಳಿರುವ ಈ ಜಾಗವನ್ನು ಹರಾಜು ನಡೆಸಿದ್ದರೆ ಪ್ರತಿ ವರ್ಷ ₹25 ಕೋಟಿ ಪಡೆಯಬಹುದಿತ್ತು. 30 ವರ್ಷಗಳಲ್ಲಿ, ಸರ್ಕಾರಕ್ಕೆ ಸುಮಾರು ₹600 ಕೋಟಿ ನಷ್ಟವಾಗಲಿದೆ' ಎಂದು ಮೂಲಗಳು ತಿಳಿಸಿವೆ.

ಆಸಕ್ತಿದಾಯಕ ಸಂಗತಿಯೆಂದರೆ, ಇದೇ ಕಂಪನಿ ಮೈಸೂರಿನಲ್ಲಿ ರಾಯಲ್ ಆರ್ಕಿಡ್ ಮೆಟ್ರೊಪೋಲೊಗಾಗಿ ಪಡೆದಿರುವ ಗುತ್ತಿಗೆ ಭೂಮಿಯಲ್ಲಿ ಒಟ್ಟಾರೆ ಆದಾಯದ ಶೇ 24ರಷ್ಟು ಅಥವಾ ₹3.23 ಕೋಟಿಯನ್ನು (ನಿಗದಿತ ಗುತ್ತಿಗೆ ಮೊತ್ತ ಮತ್ತು ಲಾಭ ಹಂಚಿಕೆ ಸೇರಿದಂತೆ) ನೀಡುತ್ತಿದೆ. ಮೈಸೂರಿನ ರಾಯಲ್ ಆರ್ಕಿಡ್ ಬೃಂದಾವನ ಗಾರ್ಡನ್ ಪ್ಯಾಲೆಸ್‌ಗೆ ಒಟ್ಟು ಆದಾಯದ ಶೇ 24ರಷ್ಟು, ನಿಗದಿಪಡಿಸಿರುವ ಬಾಡಿಗೆ ಸೇರಿದಂತೆ ₹1.72 ಕೋಟಿ ಪಾವತಿಸುತ್ತಿದೆ.

'ಈ ಒಪ್ಪಂದವನ್ನು ಕೂಡಲೇ ರದ್ದುಗೊಳಿಸಿ, ಹೆಚ್ಚು ಹಣವನ್ನು ಸಂಗ್ರಹಿಸಲು ಹರಾಜು ಪ್ರಕ್ರಿಯೆ ನಡೆಸಬೇಕು' ಎಂದು ಅಧಿಕಾರಿಗಳು ಹೇಳಿದರು.

ಏಪ್ರಿಲ್- ಜೂನ್ ತ್ರೈಮಾಸಿಕ: ಶೇಕಡ 7.8ಕ್ಕೆ ಏರಿಕೆ

ಜಿಡಿಪಿ: 15 ತಿಂಗಳಲ್ಲೇ ಗರಿಷ್ಠ

ನವದೆಹಲಿ (ಪಿಟಿಐ): ಭಾರತದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಬೆಳವಣಿಗೆ ದರವು ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ನಿರೀಕ್ಷೆಗೂ ಮೀರಿ ಶೇಕಡ 7.8ಕ್ಕೆ ಏರಿಕೆ ಕಂಡಿದೆ. ಇದು ಕಳೆದ ಐದು ತ್ರೈಮಾಸಿಕಗಳಲ್ಲಿ (15 ತಿಂಗಳಲ್ಲಿ) ದಾಖಲಾಗಿರುವ ಗರಿಷ್ಠ ಮಟ್ಟದ ಜಿಡಿಪಿ ಬೆಳವಣಿಗೆಯಾಗಿದೆ.


2024ರ ಜನವರಿ –ಮಾರ್ಚ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ಶೇ 8.4ರಷ್ಟಾಗಿತ್ತು. ಇದು ಇದುವರೆಗಿನ ದಾಖಲೆಯಾಗಿತ್ತು.

ಚೀನಾದ ಜಿಡಿಪಿ ಬೆಳವಣಿಗೆಯು ಏಪ್ರಿಲ್– ಜೂನ್ ತ್ರೈಮಾಸಿಕದಲ್ಲಿ ಶೇ 5.2ರಷ್ಟಿದೆ. ಚೀನಾಕ್ಕೆ ಹೋಲಿಸಿದರೆ ಭಾರತವು ವಿಶ್ವದಲ್ಲೇ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಎನಿಸಿಕೊಂಡಿದೆ.

ಭಾರತದ ಮೇಲೆ ಅಮೆರಿಕ ಹೇರಿರುವ ಶೇ 50ರಷ್ಟು ಸುಂಕವು ಬುಧವಾರದಿಂದ ಜಾರಿಗೆ ಬಂದಿದೆ.

▶10

ಜಿಡಿಪಿ ಪ್ರಗತಿ (ಶೇಕಡವಾರು)



> ಅಮೆರಿಕದ ಸುಂಕ ಹೇರಿಕೆಯು ಜಿಡಿಪಿ ಬೆಳವಣಿಗೆ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು. ಆದರೆ, ಜಿಎಸ್‌ಟಿ ಸರಳೀಕರಣವು ದೇಶದ ಆರ್ಥಿಕತೆಗೆ ಉತ್ತೇಜನ ನೀಡಲಿದೆ
> **ಅದಿತಿ ನಾಯರ್,** ಮುಖ್ಯ ಆರ್ಥಿಕ ತಜ್ಞೆ,ಐಸಿಆರ್‌ಎ

ರೂಪಾಯಿ ಮೌಲ್ಯ ಸಾರ್ವಕಾಲಿಕ ಕುಸಿತ

ಮುಂಬೈ (ಪಿಟಿಐ): ಭಾರತದ ಮೇಲೆ ಅಮೆರಿಕ ಹೇರಿರುವ ಶೇಕಡ 50ರಷ್ಟು ಸುಂಕವು, ರೂಪಾಯಿ ವಿನಿಮಯ ಮೌಲ್ಯದ ಮೇಲೆ ಗಂಭೀರ ಪರಿಣಾಮ ಬೀರಿದ್ದು, ಶುಕ್ರವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯ ಡಾಲರ್ ವಿರುದ್ಧ ಸಾರ್ವಕಾಲಿಕ ದಾಖಲೆ ಮಟ್ಟವಾದ ₹88.09ಕ್ಕೆ ಕುಸಿದಿದೆ.



ಡಾಲರ್ ವಿರುದ್ಧ ರೂಪಾಯಿ ಮೌಲ್ಯ ₹88ರ ಗಡಿ ದಾಟಿರುವುದು ಇದೇ ಮೊದಲು. ಇದಕ್ಕೂ ಮುನ್ನ ಫೆಬ್ರುವರಿ 10ರಂದು ಮಧ್ಯಂತರ ವಹಿವಾಟಿನಲ್ಲಿ ರೂಪಾಯಿ ಮೌಲ್ಯ ₹87.95ಕ್ಕೆ ಕುಸಿದಿತ್ತು. ಆಗಸ್ಟ್ 5ರಂದು ₹87.88ಕ್ಕೆ ಇಳಿಕೆಯಾಗಿತ್ತು. ಆ ನಂತರ ದಾಖಲಾದ ದಾಖಲೆ ಕುಸಿತ ಇದಾಗಿದೆ. ಶುಕ್ರವಾರ ಒಂದೇ ದಿನದಲ್ಲಿ ರೂಪಾಯಿ ವಿನಿಮಯ ಮೌಲ್ಯ 51 ಪೈಸೆಗಳಷ್ಟು ಇಳಿಕೆ ಕಂಡಿದೆ.

ಭಾರತದ ಮೇಲೆ ಅಮೆರಿಕದ ಸುಂಕ ಸಮರವೇ ರೂಪಾಯಿ ಮೌಲ್ಯ ಕುಸಿತಕ್ಕೆ ಪ್ರಮುಖ ಕಾರಣ ಎಂದು ಮಾರುಕಟ್ಟೆ ತಜ್ಞರು ವಿಶ್ಲೇಷಿಸಿದ್ದಾರೆ. 'ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಷೇರುಗಳ ಮಾರಾಟಕ್ಕೆ ಮುಂದಾಗಿರುವುದರಿಂದ ಡಾಲರ್ ಒಳ ಹರಿವು ಕಡಿಮೆಯಾಗಿದೆ. ಇನ್ನೊಂದೆಡೆ ಮಾಸಾಂತ್ಯದಲ್ಲಿ ಡಾಲರ್ ಬೇಡಿಕೆಯೂ ಹೆಚ್ಚಿದೆ. ಇದರಿಂದ ರೂಪಾಯಿ ಮೇಲೆ ಹೆಚ್ಚಿನ ಒತ್ತಡ ಉಂಟಾಗಿದ್ದು, ವಿನಿಮಯ ಮೌಲ್ಯ ದಾಖಲೆ ಮಟ್ಟದಲ್ಲಿ ಕುಸಿದಿದೆ' ಎಂದು ವಿದೇಶಿ ವಿನಿಮಯ ವ್ಯಾಪಾರಿಗಳು ಅಭಿಪ್ರಾಯಪಟ್ಟಿದ್ದಾರೆ.

▶10

ಸೂರ್ಯೋದಯ: 6:09 ಸೂರ್ಯಾಸ್ತ : 6:33 | ಚಂದ್ರೋದಯ: ಬೆ. 10:49 ಚಂದ್ರಾಸ್ತ: ರಾ. 10:28 | ಶುಕ್ರವಾರದ ಉಷ್ಣಾಂಶ : ಗರಿಷ್ಠ 27° ಕನಿಷ್ಠ 20°
ಶನಿವಾರದ ಉಷ್ಣಾಂಶ 27° ಗರಿಷ್ಠ 20° ಕನಿಷ್ಠ | ಭಾನುವಾರ 27° : 20° | ಸೋಮವಾರ 27° : 20° | ಮಂಗಳವಾರ 27° : 20°
ಶನಿವಾರ • ಆಗಸ್ಟ್ 30, 2025
ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ

ಬದಲಾಗುತ್ತಿದೆ ಬಿಬಿಎಂಪಿ ಕೇಂದ್ರ ಕಚೇರಿ

ಚುರುಕಾದ ಮರುವಿನ್ಯಾಸದ ಕೆಲಸಗಳು • ಜಿಬಿಎ ಸಭಾಂಗಣವಾಗಲಿದೆ ಕೆಂಪೇಗೌಡ ಪೌರ ಸಭಾಂಗಣ

• ಆರ್. ಮಂಜುನಾಥ್

ಬೆಂಗಳೂರು: 'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ದ (ಜಿಬಿಎ) ಕಚೇರಿಯಾಗುತ್ತಿರುವ ಎನ್.ಆರ್. ಚೌಕದಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಕಚೇರಿಯಲ್ಲಿ ಕಾಮಗಾರಿಗಳದ್ದೇ ಸದ್ದು. ಮರು ವಿನ್ಯಾಸ ಚಟುವಟಿಕೆಗಳು ಚುರುಕುಗೊಂಡಿವೆ.

ಮೇಯರ್ ಕಚೇರಿಯನ್ನು ಜಿಬಿಎ ಅಧ್ಯಕ್ಷರಿಗಾಗಿ ಮರುವಿನ್ಯಾಸಗೊಳಿಸುವ ಕಾಮಗಾರಿ ನಡೆಯುತ್ತಿದ್ದು, ಉಪಾಧ್ಯಕ್ಷ ಹಾಗೂ ಮುಖ್ಯ ಆಯುಕ್ತರಿಗೆ ಕಚೇರಿಗಳನ್ನು ಸಜ್ಜುಗೊಳಿಸಲು ಕಾಮಗಾರಿಗಳು ಆರಂಭವಾಗಿವೆ.

'ಯಾವ ಬಾಬ್ತಿನಲ್ಲಿ ಮರು ವಿನ್ಯಾಸ ಕಾಮಗಾರಿಗಳನ್ನು ನಡೆಸಬೇಕು, ಟೆಂಡರ್ ಕರೆಯಬೇಕೆ, ಬೇಡವೇ?' ಎಂಬ ಗೊಂದಲಗಳಿದ್ದರೂ ಮರು ವಿನ್ಯಾಸ ಚಟುವಟಿಕೆಗಳು ಹೆಚ್ಚಾಗುತ್ತಲೇ ಇವೆ. ಮುಖ್ಯ ಕಟ್ಟಡದ ಹಿಂಭಾಗ ಹಲವು ವರ್ಷಗಳಿಂದ ದುಃಸ್ಥಿತಿಯಲ್ಲಿದ್ದರೂ ಸ್ವಚ್ಛತೆಯನ್ನೂ ಮಾಡದ ಬಿಬಿಎಂಪಿ ಅಧಿಕಾರಿಗಳು, ಜಿಬಿಎ ಕಚೇರಿ ಎಂದಾಗುತ್ತಿದ್ದಂತೆಯೇ ಬೃಹತ್ ಮಟ್ಟದಲ್ಲಿ ಸ್ವಚ್ಛತೆ ಕಾರ್ಯ ಕೈಗೊಂಡಿದ್ದಾರೆ.

ಪೌರಸಭಾಂಗಣ: 198 ಕಾರ್ಪೊರೇಟರ್‌ಗಳ ಸಭಾಂಗಣವಾಗಿದ್ದ 'ಕೆಂಪೇಗೌಡ ಪೌರ ಸಭಾಂಗಣ'ವನ್ನು 243 ಆಸನಗಳಿಗೆ ಹೆಚ್ಚಿಸಿ ಈ ಹಿಂದೆ ಮರುವಿನ್ಯಾಸಗೊಳಿಸುವ ಕಾರ್ಯ ಆರಂಭಿಸಲಾಗಿತ್ತು. ಅದು ಇನ್ನೂ ಮುಗಿದಿರಲಿಲ್ಲ. ಈಗ ಮತ್ತೆ ವಿನ್ಯಾಸ ಬದಲಿಸಲು ನಿರ್ಧರಿಸಲಾಗಿದೆ.

ಜಿಬಿಎ ಸಭೆಗಳನ್ನು ನಡೆಸಲು 'ಕೆಂಪೇಗೌಡ ಪೌರ ಸಭಾಂಗಣ'ವನ್ನು ಬಳಸಿಕೊಳ್ಳಲು ನಿರ್ಧರಿಸಲಾಗಿದೆ. ಅಧ್ಯಕ್ಷ, ಉಪಾಧ್ಯಕ್ಷರಲ್ಲದೆ 72 ಸದಸ್ಯರನ್ನು ಜಿಬಿಎಗೆ ಈಗಾಗಲೇ ನೇಮಿಸಲಾಗಿದೆ. ಸಭೆ ನಡೆಯುವ ಸಂದರ್ಭದಲ್ಲಿ ಇನ್ನೂ ಹಲವರು ಅತಿಥಿಗಳಾಗಿ ಭಾಗವಹಿಸಲಿದ್ದು, ಅಧಿಕಾರಿಗಳೂ ಇರಲಿದ್ದಾರೆ. ಹೀಗಾಗಿ, ದೊಡ್ಡ ಸಭಾಂಗಣ ಅಗತ್ಯವಿದೆ. ಹೀಗಾಗಿ, 'ಪೌರ ಸಭಾಂಗಣ'ವನ್ನು ಜಿಬಿಎ ಸಭಾಂಗಣವಾಗಿ ಪರಿವರ್ತಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

5 ನಗರ ಪಾಲಿಕೆಗಳಲ್ಲಿ ತಲಾ ಎರಡು ವಲಯ

- **ಕೇಂದ್ರ:** ಪೂರ್ವ ವಲಯ ಕಚೇರಿ, ಕೇಂದ್ರ ಕಚೇರಿಯ ಅನೆಕ್ಸ್-3
- **ಪೂರ್ವ:** ಮಹದೇವಪುರ ವಲಯ ಕಚೇರಿ, ಕೆ.ಆರ್. ಪುರ ಸಿಇ ಕಚೇರಿ
- **ಪಶ್ಚಿಮ:** ಆರ್.ಆರ್. ನಗರ ವಲಯ ಕಚೇರಿ; ಪಾಲಿಕೆ ಸೌಧ, ಚಂದ್ರಾಲೇಔಟ್
- **ಉತ್ತರ:** ಯಲಹಂಕ ವಲಯ ಕಚೇರಿ; ದಾಸರಹಳ್ಳಿ ವಲಯ ಕಚೇರಿ
- **ದಕ್ಷಿಣ:** ಜಯನಗರದ ವಲಯ ಕಚೇರಿ, ಬೊಮ್ಮನಹಳ್ಳಿ ವಲಯ ಕಚೇರಿ

ತಡವಾಗಲಿದೆ ಎಲ್ಲರಿಗೂ 'ಎ' ಖಾತಾ

ಬಿಬಿಎಂಪಿ ಐದು ನಗರ ಪಾಲಿಕೆಗಳಾಗಿ ವಿಂಗಡಣೆಯಾಗುತ್ತಿರುವುದರಿಂದ ಎಲ್ಲ ನಿವೇಶನಗಳಿಗೂ 'ಎ' ಖಾತಾ ನೀಡುವ ಪ್ರಕ್ರಿಯೆ ಆರಂಭ ವಿಳಂಬವಾಗಲಿದೆ.

'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ದ ವ್ಯಾಪ್ತಿಯಲ್ಲಿ ಐದು ನಗರ ಪಾಲಿಕೆಗಳು ರಚನೆಯಾಗಲಿದ್ದು, ಅವುಗಳಿಗೆ ಅನುಸಾರವಾಗಿ 'ಖಾತಾ'ಗಳನ್ನು ನೀಡಬೇಕಾಗುತ್ತದೆ. ಹೀಗಾಗಿ, ಆಗಸ್ಟ್ 15ಕ್ಕೇ ಆರಂಭವಾಗಬೇಕಿದ್ದ ಈ ಯೋಜನೆ ತಡವಾಗುತ್ತಿದೆ. ಹೊಸ ನಗರ ಪಾಲಿಕೆಗಳ ಹೆಸರಿನಡಿ, ಅವುಗಳ ವಾರ್ಡ್‌ಗಳನ್ನೂ ಖಾತೆಯಲ್ಲಿ ನಮೂದಿಸಬೇಕೇ ಎಂಬ ಬಗ್ಗೆ ಚರ್ಚೆಗಳು ನಡೆಯುತ್ತಿವೆ ಎಂದು ಅಧಿಕಾರಿಗಳು ತಿಳಿಸಿದರು.



ಬಿಬಿಎಂಪಿ ಕೇಂದ್ರ ಕಚೇರಿ ಯಲ್ಲಿರುವ ಕೆಂಪೇಗೌಡ ಪೌರ ಸಭಾಂಗಣ



ಬಿಬಿಎಂಪಿ ಅಧಿಕಾರಿ– ನೌಕರರ ಕ್ಷೇಮಾಭಿವೃದ್ಧಿ ಸಂಘದ ಆವರಣದಲ್ಲಿ 'ಜಿಬಿಎ' ಫಲಕವನ್ನು ಆಡಳಿತಾಧಿಕಾರಿ ತುಷಾರ್ ಗಿರಿನಾಥ್ ಅವರು ಗುರುವಾರ ಅನಾವರಣಗೊಳಿಸಿದರು

ಪ್ರಮುಖ ಇಲಾಖೆಗಳು ಜಿಬಿಎ ವ್ಯಾಪ್ತಿಗೆ

ಬಿಬಿಎಂಪಿಯಲ್ಲಿರುವ ನಗರ ಯೋಜನೆ, ಸಾರ್ವಜನಿಕ ಕಾಮಗಾರಿಗಳು, ಸಾರ್ವಜನಿಕ ಆರೋಗ್ಯ, ತೋಟಗಾರಿಕೆ, ಶಿಕ್ಷಣ, ಕೆರೆಗಳು, ಅರಣ್ಯ ವಿಭಾಗಗಳು ಜಿಬಿಎ ವ್ಯಾಪ್ತಿಗೆ ಬರಲಿವೆ.

ಜಿಬಿಎಯಲ್ಲಿ 'ಹವಾಮಾನ ಕ್ರಿಯಾ ಕೋಶ' ಸ್ಥಾಪನೆಯಾಗಲಿದೆ. ಹವಾಮಾನ ಕ್ರಿಯಾ ಮತ್ತು ಸ್ಥಿತಿಸ್ಥಾಪಕತ್ವ ಯೋಜನೆ ಸೇರಿದಂತೆ ಅರಣ್ಯ, ಕೆರೆ, ತೋಟಗಾರಿಕೆ ವಿಭಾಗಗಳು ಇದರಡಿ ಈಗಾಗಲೇ ಕಾರ್ಯನಿರ್ವಹಿಸುತ್ತಿವೆ. ಹೀಗಾಗಿ, ಇವೆಲ್ಲ ವಿಭಾಗಗಳು ಜಿಬಿಎ ಸೇರಿಕೊಳ್ಳಲಿವೆ.

ಕಾಮಗಾರಿಗಳಿಗಾಗಿ ರಸ್ತೆ ಮೂಲಸೌಕರ್ಯ, ಯೋಜನೆ ವಿಭಾಗಗಳಿವೆ. ಇವುಗಳನ್ನು ರದ್ದು ಮಾಡಿ, ನಗರ ಪಾಲಿಕೆಗಳ ಮುಖ್ಯ ಎಂಜಿನಿಯರ್ ವ್ಯಾಪ್ತಿಗೇ ಎಲ್ಲ ಕಾಮಗಾರಿಗಳನ್ನು ವಹಿಸಲು ನಿರ್ಧರಿಸಲಾಗಿದೆ. ಬೃಹತ್ ಕಾಮಗಾರಿಗಳನ್ನು 'ಬಿ-ಸ್ಮೈಲ್' ನಿರ್ವಹಿಸುವುದರಿಂದ ಆಯಾ ನಗರ ಪಾಲಿಕೆಗಳ ವ್ಯಾಪ್ತಿಯ ಉಳಿದ ಕಾಮಗಾರಿಗಳಿಗೆ ಮುಖ್ಯ ಎಂಜಿನಿಯರ್ ವ್ಯಾಪ್ತಿಗೆ ತರಲಾಗುತ್ತಿದೆ ಎನ್ನಲಾಗಿದೆ.

ಸಂಘಗಳ ಹೆಸರೂ ಬದಲು

'ಬಿಬಿಎಂಪಿ'ಯನ್ನು ಸೇರಿಸಿಕೊಂಡು ಅಧಿಕಾರಿ–ನೌಕರರ ಸಂಘ, ಸಹಕಾರಿ ಬ್ಯಾಂಕ್ ಸೇರಿದಂತೆ ಪೌರ ಕಾರ್ಮಿಕರು, ಗುತ್ತಿಗೆದಾರರು ಸಂಘಗಳನ್ನು ನೋಂದಣಿ ಮಾಡಿಕೊಂಡಿದ್ದರು. ಈಗ ಅಂತಹ ಎಲ್ಲ ಸಂಘಗಳು 'ಬಿಬಿಎಂಪಿ' ಬದಲಿಗೆ 'ಗ್ರೇಟರ್ ಬೆಂಗಳೂರು' ಎಂದು ಬದಲಾವಣೆ ಮಾಡಿಕೊಳ್ಳಲು ಸಂಘದ ಪದಾಧಿಕಾರಿಗಳು ನಿರ್ಧರಿಸಿದ್ದಾರೆ. 'ಬಿಬಿಎಂಪಿ ಅಧಿಕಾರಿ–ನೌಕರರ ಕ್ಷೇಮಾಭಿವೃದ್ಧಿ ಸಂಘ'ವು 'ಗ್ರೇಟರ್ ಬೆಂಗಳೂರು ಅಧಿಕಾರಿ– ನೌಕರರ ಕ್ಷೇಮಾಭಿವೃದ್ಧಿ ಸಂಘ' ಎಂದು ಪ್ರಧಾನ ಸಂಘವಾಗಲಿದ್ದು, ಜಿಲ್ಲಾ ಸಂಘಟನೆಗಳಂತೆ ಐದು ನಗರ ಪಾಲಕೆಗಳಲ್ಲಿ ಅಲ್ಲಲ್ಲಿ ಪ್ರತ್ಯೇಕ ಸಂಘಗಳು ಅದರಡಿ ರಚನೆ ಮಾಡಲು ಚಿಂತಿಸಲಾಗುತ್ತಿದೆ ಎಂದು ಸಂಘದ ಅಧ್ಯಕ್ಷ ಎ. ಅಮೃತ್ ರಾಜ್ ತಿಳಿಸಿದರು. 'ಬಿಬಿಎಂಪಿ ಗುತ್ತಿಗೆದಾರರ ಸಂಘವು 'ಗ್ರೇಟರ್ ಬೆಂಗಳೂರು ಗುತ್ತಿಗೆದಾರರ ಸಂಘ'ವಾಗಿ ಪರಿವರ್ತನೆಯಾಗಲಿದ್ದು, ಅಗತ್ಯ ಬಿದ್ದರೆ ಐದು ನಗರ ಪಾಲಿಕೆಗಳಲ್ಲೂ ನಮ್ಮ ಸಂಘದಡಿಯಲ್ಲಿ ಪ್ರತ್ಯೇಕ ಸಂಘಗಳನ್ನು ರಚಿಸಲಾಗುತ್ತದೆ' ಎಂದು ಸಂಘದ ಅಧ್ಯಕ್ಷ ನಂದಕುಮಾರ್ ಮಾಹಿತಿ ನೀಡಿದರು.

'ಬಿಬಿಎಂಪಿ'ಯನ್ನು ಸೇರಿಸಿಕೊಂಡು ರಚನೆಯಾಗಿರುವ ನೂರಾರು ಸಂಘಗಳಿದ್ದು, ಅವುಗಳೆಲ್ಲವೂ ಬದಲಾವಣೆಯಾಗುವ ಅನಿವಾರ್ಯ ಸೃಷ್ಟಿಯಾಗಿದೆ. 'ಸಂಘಗಳನ್ನು ಮರುಹೆಸರಿಸಿ ನೋಂದಣಿ ಮಾಡಿಸಿಕೊಳ್ಳಲು ಒಂದಷ್ಟು ಹಣವೂ ವ್ಯಯವಾಗಲಿದೆ' ಎಂದು ಸಂಘಗಳ ಪದಾಧಿಕಾರಿಗಳು ತಿಳಿಸಿದರು.

ಸುದ್ದಿ 2 ನಿಮಿಷ

ಕನಕ ಭವನದಲ್ಲಿ ಪಾಲಿಕೆ ಕಚೇರಿ ಬೇಡ: ಈಶ್ವರಾನಂದಪುರಿ

ಬೆಂಗಳೂರು: 'ಗ್ರೇಟರ್ ಬೆಂಗಳೂರು ವ್ಯಾಪ್ತಿಯ 'ಬೆಂಗಳೂರು ಪಶ್ಚಿಮ ನಗರ ಪಾಲಿಕೆ' ಕಚೇರಿಯನ್ನು ಚಂದ್ರಾ ಲೇಔಟ್‌ನ 'ಕನಕ ಭವನ'ದಲ್ಲಿ ಸ್ಥಾಪಿಸುವುದು ಬೇಡ' ಎಂದು ಕಾಗಿನೆಲೆ ಮಹಾಸಂಸ್ಥಾನ ಕನಕ ಗುರು ಪೀಠದ ಈಶ್ವರಾನಂದಪುರಿ ಸ್ವಾಮೀಜಿ ಮನವಿ ಮಾಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, 'ಹಿಂದಿನ ಸರ್ಕಾರ, ಬಿಬಿಎಂಪಿ ವತಿಯಿಂದ ಚಂದ್ರಾ ಲೇಔಟ್‌ನಲ್ಲಿ 'ಕನಕ ಭವನ'ವನ್ನು ಕಟ್ಟಿ, ಅದನ್ನು ಗುರುಪೀಠಕ್ಕೆ 30 ವರ್ಷಗಳಿಗೆ ಗುತ್ತಿಗೆಗೆ ನೀಡಿದೆ. ಕುರುಬ ಸಮಾಜದ ಕಲ್ಯಾಣಕ್ಕೆ ನೀಡಲಾಗಿರುವ ಈ ಭೂಮಿಯನ್ನು ವಾಪಸ್ ಪಡೆಯುವುದು ಬೇಡ' ಎಂದು ಹೇಳಿದ್ದಾರೆ.

'ಕನಕ ಭವನ' ಆವರಣದಲ್ಲಿ ರೇವಣಸಿದ್ದೇಶ್ವರ ಸ್ವಾಮಿ ದೇವಸ್ಥಾನವಿದ್ದು, ಅದನ್ನು ಪುನರುಜ್ಜೀವನಗೊಳಿಸಲಾಗಿದೆ. ಕನಕ ಗುರುಪೀಠ ಬೆಂಗಳೂರು ವಿಭಾಗದ ಶಾಖಾ ಮಠ ಈ ಕಟ್ಟಡದಲ್ಲಿ ಆಧ್ಯಾತ್ಮಿಕ, ಧಾರ್ಮಿಕ ಚಟುವಟಿಕೆಗಳನ್ನು ನಡೆಸುತ್ತಿದೆ. ಅಲ್ಲದೆ, ಸಾಮಾಜಿಕ, ಸಾಂಸ್ಕೃತಿಕ ಸಭೆ-ಸಮಾರಂಭಗಳೂ ನಡೆಯುತ್ತಿವೆ' ಎಂದು ಮಾಹಿತಿ ನೀಡಿದ್ದಾರೆ.

'ಕನಕ ಗುರುಪೀಠಕ್ಕೆ ನೀಡಲಾಗಿರುವ ಕಟ್ಟಡದಲ್ಲಿ ನಗರ ಪಾಲಿಕೆ ಕಚೇರಿ ಸ್ಥಾಪಿಸುವುದು ಸರಿಯಲ್ಲ. ಉದ್ದೇಶಿತ ನಗರ ಪಾಲಿಕೆ ಕಚೇರಿಯನ್ನು ಬೇರೆಡೆಗೆ ಸ್ಥಳಾಂತರಿಸಿ, ಮಠದಲ್ಲಿ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಸೇವೆ ನಡೆಸಲು ಅವಕಾಶ ನೀಡಬೇಕು' ಮನವಿ ಮಾಡಿದ್ದಾರೆ.

'ಕಾಗಿನೆಲೆ ಮಹಾಸಂಸ್ಥಾನಕ್ಕೆ ನೀಡಿರುವ ಕಟ್ಟಡದಲ್ಲಿ ಯಾವುದೇ ಕಾರಣಕ್ಕೂ ಪಾಲಿಕೆ ಕಚೇರಿ ಆರಂಭಿಸಲು ಬಿಜೆಪಿ ಬಿಡುವುದಿಲ್ಲ. ಪರಿಸ್ಥಿತಿಯ ಗಂಭೀರತೆಯನ್ನು ಅರಿತು, ಅಧಿಕಾರಿಗಳು ತಮ್ಮ ನಿರ್ಧಾರವನ್ನು ಬದಲಿಸಬೇಕು' ಎಂದು ಬಿಬಿಎಂಪಿ ಮಾಜಿ ಸದಸ್ಯ ಬಿ. ಸೋಮಶೇಖರ್ ಆಗ್ರಹಿಸಿದ್ದಾರೆ.

₹50 ಕೋಟಿ ಆಸ್ತಿ ವಶ



ಬೆಂಗಳೂರು: ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಮುಂದುವರಿಸಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಶುಕ್ರವಾರ ಕೆಂಗೇರಿ ಉಪನಗರದಲ್ಲಿ ₹50 ಕೋಟಿ ಆಸ್ತಿ ವಶಪಡಿಸಿಕೊಂಡಿದೆ.

ಕೆಂಗೇರಿ ಉಪನಗರ ಬಡಾವಣೆಯ ನಿವೇಶನ ಸಂಖ್ಯೆ 2040, 2041, 2043, 2049, 2096, 2098, 2099, 2100, 2101, 2152, 2142, 2143, 2135, 2103/23 ಮತ್ತು 2167ರಲ್ಲಿ ಅನಧಿಕೃವಾಗಿ ನಿರ್ಮಾಣವಾಗಿದ್ದ ಗ್ಯಾರೇಜ್, ತಗಡಿನ ಶೀಟ್ ಮನೆಗಳು, ಅಂಗಡಿ ಮಳಿಗೆ, ಶೆಡ್ ಮತ್ತು ಕಾಂಪೌಂಡ್ ಗೋಡೆಗಳನ್ನು ಜೆಸಿಬಿ ಮೂಲಕ ತೆರವುಗೊಳಿಸಿ, 3,7000 ಚದರ ಅಡಿ ವಿಸ್ತೀರ್ಣದ ಸುಮಾರು ₹50 ಕೋಟಿ ಬೆಲೆ ಬಾಳುವ ಪ್ರದೇಶವನ್ನು ವಶಪಡಿಸಿಕೊಳ್ಳಲಾಗಿದೆ. ಈ ಜಾಗದ ಸುತ್ತಲೂ ಬೇಲಿ ಹಾಕಿ, ಎಚ್ಚರಿಕೆ ಫಲಕ ಅಳವಡಿಸಲಾಗಿದೆ.

ರಾಜ್ಯಮಟ್ಟದ ಸಮಾಲೋಚನೆ ಕಾರ್ಯಕ್ರಮ: ಹೈಕೋರ್ಟ್ ಮುಖ್ಯ ನ್ಯಾ. ವಿಭು ಬಖ್ರು ಸೂಚನೆ

ಬಾಲ ಅಪರಾಧ ನಿಗ್ರಹ: ಮಾದರಿ ರೂಪಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪ್ರಾಪ್ತ ವಯಸ್ಸಿನ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳ ವಿಚಾರಣೆ ವಿಳಂಬವಾಗುವುದನ್ನು ತಪ್ಪಿಸಬೇಕು. ಜೊತೆಗೆ ನೀತಿಗಳನ್ನು ಗಟ್ಟಿಗೊಳಿಸಿ ಕರ್ನಾಟಕ ಮಾದರಿ ರೂಪಿಸಲು ಎಲ್ಲ ಭಾಗಿದಾರರು ಪ್ರಯತ್ನಿಸಬೇಕು ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಸೂಚಿಸಿದರು.

'ಅಪ್ರಾಪ್ತ ವಯಸ್ಸಿನ ಹೆಣ್ಣುಮಕ್ಕಳ ರಕ್ಷಣೆ: ಭಾರತದಲ್ಲಿ ಸುರಕ್ಷಿತ ವಾತಾವರಣ ನಿರ್ಮಾಣ', 'ಪೋಕ್ಸೊ ಕಾಯ್ದೆ: ಪ್ರಗತಿ, ಸವಾಲುಗಳು, ಅವಕಾಶಗಳು ಹಾಗೂ ಭವಿಷ್ಯದ ಹಾದಿ' ಬಗ್ಗೆ ಕರ್ನಾಟಕ ಹೈಕೋರ್ಟ್ ಬಾಲಾಪರಾಧಿ ನ್ಯಾಯ ಸಮಿತಿ, ಪೋಕ್ಸೊ ಸಮಿತಿಯು ಗೃಹ, ಕಾನೂನು ಇಲಾಖೆ, ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿರುವ ಎರಡು ದಿನಗಳ ರಾಜ್ಯ ಮಟ್ಟದ ಭಾಗಿದಾರರ ಸಮಾಲೋಚನೆ ಕಾರ್ಯಕ್ರಮವನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿದರು.

ಸಂವಿಧಾನದ 14,15, 21ನೇ ವಿಧಿ ಅಡಿಯಲ್ಲಿ ಹೆಣ್ಣು ಮಗುವಿನ ಘನತೆ ಬದುಕಿಗೆ ಒತ್ತು ನೀಡಲಾಗಿದೆ. ಕಾನೂನಿನ ಬಲದ ಜತೆಗೆ ಸಮಾಜದ ಗೌರವವೂ ಬೇಕಾಗುತ್ತದೆ. ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶಗಳಲ್ಲಿ ಆಗುವ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳು ಬೆಳಕಿಗೆ ಬರುವುದಿಲ್ಲ. ಕೆಳ ಹಂತದಲ್ಲಿಯೇ ಸಮಾಜದಲ್ಲಿ ಮಕ್ಕಳಿಗೆ ಭಯ ಮುಕ್ತ ವಾತಾವರಣ ನಿರ್ಮಿಸಬೇಕು. ಕಾನೂನು ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ಸಂತ್ರಸ್ತರ ಆರೋಗ್ಯಕ್ಕೆ ಒತ್ತು ನೀಡಿ, ಮನೋಬಲ ಹೆಚ್ಚಿಸುವ ಕಡೆಗೂ ಗಮನ ನೀಡಬೇಕು. ತ್ವರಿತ ರಕ್ಷಣೆ, ಪುನರ್ವಸತಿಯನ್ನು ಸಮರ್ಪಕವಾಗಿ ಒದಗಿಸಬೇಕು. ಪೋಕ್ಸೊ ಹಾಗೂ ಬಾಲಾಪರಾಧಿ ನ್ಯಾಯ ಕಾಯ್ದೆ, ಪ್ರತ್ಯೇಕ ನ್ಯಾಯಾಲಯಗಳಿದ್ದರೂ ದೌರ್ಜನ್ಯದ ಪ್ರಮಾಣ ತಗ್ಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಈಗ ಡಿಜಿಟಲ್ ಹಾಗೂ ಆನ್‌ಲೈನ್ ಮೂಲಕ ದೌರ್ಜನ್ಯ ಪ್ರಕರಣಗಳು ಹೆಚ್ಚಿವೆ. ಮಕ್ಕಳು ಸುಲಭವಾಗಿ ಡಿಜಿಟಲ್ ಬಲೆಯಲ್ಲಿ ಸಿಲುಕಿ ಸಂಕಷ್ಟ ಅನುಭವಿಸುತ್ತಾರೆ. ಈ ಕುರಿತು ಎಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದರು.

ಹೈಕೋರ್ಟ್ ಬಾಲಾಪರಾಧಿ ನ್ಯಾಯ ಹಾಗೂ ಪೋಕ್ಸೊ ಸಮಿತಿ ಅಧ್ಯಕ್ಷ ನ್ಯಾ. ಎಸ್. ಸುನಿಲ್ ದತ್ತ ಯಾದವ್, ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷೆ ನ್ಯಾ. ಅನು ಶಿವರಾಮನ್, ಕರ್ನಾಟಕ ನ್ಯಾಯಾಂಗ ಅಕಾಡೆಮಿ ಅಧ್ಯಕ್ಷೆ ನ್ಯಾ. ಕೆ.ಎಸ್. ಮುದಗಲ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮಕ್ಕಳ ಆಯೋಗದ ಅಧ್ಯಕ್ಷ ಕೆ. ನಾಗಣ್ಣ ಗೌಡ, ಮಕ್ಕಳ ಹಕ್ಕುಗಳ ತಜ್ಞ ಸೋನಿ ಕುಟ್ಟಿ ಜಾರ್ಜ್ ಹಾಜರಿದ್ದರು.

> **ಮನೆಯಲ್ಲಿ ಮಾತ್ರವಲ್ಲದೇ ಶಾಲೆ, ಸಮುದಾಯದಲ್ಲೂ ಅಪ್ರಾಪ್ತ ವಯಸ್ಸಿನ ಹೆಣ್ಣುಮಕ್ಕಳು ಸುರಕ್ಷಿತವಾಗಿರುವ ನಿಟ್ಟಿನಲ್ಲಿ ಜನರನ್ನು ಜಾಗೃತಿಗೊಳಿಸಬೇಕು**
> **ವಿಭು ಬಖ್ರು,** ಮುಖ್ಯನ್ಯಾಯಮೂರ್ತಿ, ಕರ್ನಾಟಕ ಹೈಕೋರ್ಟ್



ಕರ್ನಾಟಕ ನ್ಯಾಯಾಂಗ ಅಕಾಡೆಮಿಯಲ್ಲಿ ಆಯೋಜಿಸಿದ್ದ ಸಮಾಲೋಚನೆ ಕಾರ್ಯಕ್ರಮದಲ್ಲಿ ವಿಭು ಬಖ್ರು ಅವರು ಬಾಲ ನ್ಯಾಯ ಸಮಿತಿ ವೆಬ್‌ಸೈಟ್‌ಗೆ ಚಾಲನೆ ನೀಡಿದರು. ಸೋನಿ ಕುಟ್ಟಿ ಜಾರ್ಜ್, ಎಸ್. ಸುನಿಲ್ ದತ್ ಯಾದವ್, ಅನು ಶಿವರಾಮನ್, ಕೆ.ಎಸ್. ಮುದಗಲ್, ಶಾಲಿನಿ ರಜನೀಶ್ ಮತ್ತು ಕೆ.ನಾಗಣ್ಣ ಗೌಡ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ವೆಬ್‌ಸೈಟ್ ಅನಾವರಣ

ಹೈಕೋರ್ಟ್‌ನ ಬಾಲಾಪರಾಧಿ ನ್ಯಾಯ ಸಮಿತಿ ಹಾಗೂ ಪೋಕ್ಸೊ ಸಮಿತಿಯ ಎಲ್ಲ ಮಾಹಿತಿಗಳಿರುವ ವೆಬ್‌ಸೈಟ್ ಅನ್ನು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಜನಾರ್ಪಣೆಗೊಳಿಸಿದರು.

ವೆಬ್‌ಸೈಟ್ judiciary.karnataka.gov.in/jjb ನಲ್ಲಿ ಬಾಲ ನ್ಯಾಯ ಪ್ರಕರಣ, ಪೋಕ್ಸೊಗೆ ಸಂಬಂಧಿಸಿದ ಮಾಹಿತಿಗಳು ಲಭ್ಯ.

73 ಸಾವಿರ ಮೂರ್ತಿಗಳ ವಿಸರ್ಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗುರುವಾರ 73 ಸಾವಿರ ಗಣೇಶ ಮೂರ್ತಿಗಳನ್ನು ವಿಸರ್ಜನೆ ಮಾಡಲಾಗಿದೆ.

ಸಂಚಾರಿ ಟ್ಯಾಂಕ್ ಹಾಗೂ ಕೆರೆ ಅಂಗಳದ ಶಾಶ್ವತ/ತಾತ್ಕಾಲಿಕ ಕಲ್ಯಾಣಿಗಳಲ್ಲಿ ಮೂರ್ತಿಗಳನ್ನು ವಿಸರ್ಜನೆ ಮಾಡಲಾಗಿದೆ. ಪೂರ್ವ ವಲಯದಲ್ಲಿ 9,306, ಪಶ್ಚಿಮ ವಲಯದಲ್ಲಿ 10,568, ದಕ್ಷಿಣ ವಲಯದಲ್ಲಿ 44,521, ಬೊಮ್ಮನಹಳ್ಳಿ ವಲಯದಲ್ಲಿ 2,347, ದಾಸರಹಳ್ಳಿ ವಲಯದಲ್ಲಿ 168, ಮಹದೇವಪುರ ವಲಯದಲ್ಲಿ 2,737, ಆರ್.ಆರ್.ನಗರ ವಲಯದಲ್ಲಿ 2,113, ಯಲಹಂಕ ವಲಯದಲ್ಲಿ 2,199 ಮೂರ್ತಿಗಳನ್ನು ವಿಸರ್ಜಿಸಲಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ವಾಹನ ಸಂಚಾರ ಮಾರ್ಪಾಡು

ಬೆಂಗಳೂರು: ಯಲಹಂಕ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆಗಸ್ಟ್ 31ರಂದು ಗಣೇಶ ಮೂರ್ತಿಗಳ ವಿಸರ್ಜನಾ ಮೆರವಣಿಗೆ ನಡೆಯಲಿರುವ ಕಾರಣ ಸಂಚಾರ ಮಾರ್ಗದಲ್ಲಿ ಬದಲಾವಣೆ ಮಾಡಲಾಗಿದೆ.

ಗಣೇಶ ಮೂರ್ತಿಗಳ ವಿಸರ್ಜನೆಗೂ ಮುನ್ನ ನಡೆಯುವ ಮೆರವಣಿಗೆಯು ಯಲಹಂಕ ನ್ಯೂಟೌನ್, ಸಿಂಗಾಪುರ, ಚಿಕ್ಕಬೆಟ್ಟಹಳ್ಳಿ, ದೊಡ್ಡಬೆಟ್ಟಹಳ್ಳಿ ಮತ್ತು ವಿದ್ಯಾರಣ್ಯಪುರ ಪ್ರದೇಶಗಳಲ್ಲಿ ಸಾಗಲಿದೆ. ಹಾಗಾಗಿ ಬೆಳಿಗ್ಗೆ 9ರಿಂದ ರಾತ್ರಿ 10 ಗಂಟೆಯವರೆಗೆ ತಾತ್ಕಾಲಿಕವಾಗಿ ವಾಹನ ಸಂಚಾರ ನಿರ್ಬಂಧಿಸಿ, ಪರ್ಯಾಯ ಮಾರ್ಗಗಳನ್ನು ಸೂಚಿಸಲಾಗಿದೆ.

ನಿರ್ಬಂಧ: ಜಾಲಹಳ್ಳಿ, ಪೀಣ್ಯ, ಯಶವಂತಪುರ, ವಿಜಯನಗರ, ಕೆಂಗೇರಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಂದ ಯಲಹಂಕಕ್ಕೆ ಬರುವ ವಾಹನಗಳಿಗೆ ನಿರ್ಬಂಧ ಹೇರಲಾಗಿದೆ.

ಎಂ.ಎಸ್. ಪಾಳ್ಯ ಜೆಲ್ಲಿ ಮಿಷನ್ ಕ್ರಾಸ್, ಜಿಕೆವಿಕೆ ಬ್ಯಾಕ್ ಗೇಟ್, ತಿರುಮಲ ಢಾಬಾ, ಅಟ್ಟೂರು ಜಂಕ್ಷನ್, ಮದರ್ ಡೇರಿ ಜಂಕ್ಷನ್ ಕಡೆಗೆ ಹೋಗುವ ವಾಹನಗಳಿಗೆ ಬೆಳಿಗ್ಗೆ 9ರಿಂದ ರಾತ್ರಿ 10ರವರೆಗೆ ನಿರ್ಬಂಧ ಇದೆ.

ಪರ್ಯಾಯ ಮಾರ್ಗ: ಜಾಲಹಳ್ಳಿ ಮತ್ತು ಪೀಣ್ಯದಿಂದ ಯಲಹಂಕ ಕಡೆಗೆ ಹೋಗುವ ವಾಹನಗಳು ಗಂಗಮ್ಮ ವೃತ್ತದಲ್ಲಿ ಬಲಕ್ಕೆ ತಿರುಗಬೇಕು. ನಂತರ ಬಿಇಎಲ್ ವೃತ್ತದಲ್ಲಿ ಎಡಕ್ಕೆ ತಿರುಗಿ, ದೊಡ್ಡಬೊಮ್ಮಸಂದ್ರ ಕಮಾನು, ನಂಜಪ್ಪ ವೃತ್ತ, ತಿಂಡ್ಲು ಮುಖ್ಯರಸ್ತೆ ಮೂಲಕ ಜಿಕೆವಿಕೆ ಡಬಲ್ ರಸ್ತೆಯಲ್ಲಿ ಎಡ ತಿರುವು ಪಡೆದು ಜಿಕೆವಿಕೆ ಹಿಂಭಾಗದ ಗೇಟ್‌ನಿಂದ ಉನ್ನಿಕೃಷ್ಣನ್ ರಸ್ತೆ ಮೂಲಕ ಯಲಹಂಕ ತಲುಪಬಹುದು.

'ಕರುನಾಡ ಸವಿಯೂಟ' ಸ್ಪರ್ಧೆ ನಾಳೆ

'ಪ್ರಜಾವಾಣಿ' ಕಾರ್ಯಕ್ರಮಕ್ಕೆ ಫ್ರೀಡಂ ಕುಕ್ಕಿಂಗ್ ಆಯಿಲ್ ಸಹಯೋಗ

Freedom Healthy Cooking Oils presents ಕರುನಾಡ ಸವಿಯೂಟ ಆವೃತ್ತಿ 4

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಮತ್ತು 'ಫ್ರೀಡಂ ಕುಕ್ಕಿಂಗ್ ಆಯಿಲ್' ಸಹಯೋಗದಲ್ಲಿ ರಾಜಾಜಿನಗರದ ಲುಲು ಮಾಲ್‌ನಲ್ಲಿ ಆ.31ರಂದು ಬೆಳಿಗ್ಗೆ 9.30ಕ್ಕೆ 'ಕರುನಾಡ ಸವಿಯೂಟ' ಸ್ಪರ್ಧೆ (ನಾಲ್ಕನೇ ಆವೃತ್ತಿ) ಆಯೋಜಿಸಲಾಗಿದೆ. ಅಡುಗೆ ಮಾಡಿ ತಂದು, ಸ್ಪರ್ಧಿಸಿ ಬಹುಮಾನ ಗೆಲ್ಲುವ ಅವಕಾಶವೂ ಇದೆ.

ರಾಜ್ಯದ ಅತಿದೊಡ್ಡ ಅಡುಗೆ ಸ್ಪರ್ಧೆಯ ಮೂರು ಆವೃತ್ತಿಗಳು ಈಗಾಗಲೇ ಬೇರೆ ಬೇರೆ ನಗರಗಳಲ್ಲಿ ನಡೆದಿವೆ. ಈಗ ಮೊದಲ ಬಾರಿಗೆ ಬೆಂಗಳೂರು ನಗರದಲ್ಲಿ ಸ್ಪರ್ಧೆ ಆಯೋಜಿಸಲಾಗಿದೆ. ಗೆಳೆಯರು ಅಥವಾ ಕುಟುಂಬ ಸದಸ್ಯರೊಂದಿಗೆ ಆಸಕ್ತರು ಸ್ಪರ್ಧೆಯಲ್ಲಿ ಪಾಲ್ಗೊಳ್ಳಬಹುದು. ಅಡುಗೆ ಕೌಶಲದಿಂದ ತೀರ್ಪುಗಾರರ ಮೆಚ್ಚುಗೆಗೆ ಪಾತ್ರರಾಗಿ, ಆಕರ್ಷಕ ಬಹುಮಾನವನ್ನೂ ಗೆಲ್ಲಬಹುದು.

ಕ್ಯೂಆರ್ ಕೋಡ್

ಮನೆಯಲ್ಲಿ ತಯಾರಿಸಿದ ಒಂದು ಆಹಾರ ಪದಾರ್ಥವನ್ನು ಸ್ಪರ್ಧೆಗೆ ತರಬಹುದು. 'ಒಗ್ಗರಣೆ ಡಬ್ಬಿ' ಮುರಳಿ ಮತ್ತು ನಿರೂಪಕಿ ಸುಚಿತ್ರಾ ನಡೆಸಿಕೊಡುವ ಅಡುಗೆ ಸಿದ್ಧಪಡಿಸುವುದರ ಕುರಿತ ಮಾಸ್ಟರ್ ಕ್ಲಾಸ್‌ಗೆ ಹಾಜರಾಗಬಹುದು. ಸ್ಪರ್ಧೆಯಲ್ಲಿ ಆಹಾರ ಪದಾರ್ಥಗಳನ್ನು ಸವಿಯಲಿರುವ ಅವರು ತೀರ್ಪು ನೀಡಲಿದ್ದಾರೆ.

ಪ್ರಥಮ ಸ್ಥಾನ ಪಡೆದವರು ₹10,000, ದ್ವಿತೀಯ ಸ್ಥಾನ ಪಡೆದವರು ₹5,000, ಹಾಗೂ ತೃತೀಯ ಸ್ಥಾನ ಪಡೆದವರು ₹3,000 ನಗದು ಬಹುಮಾನ ಪಡೆಯಲಿದ್ದಾರೆ. ಅಲ್ಲದೇ ಮೆಚ್ಚುಗೆ ಪಡೆದವರಿಗೂ ವಿಶಿಷ್ಟ ಬಹುಮಾನ ದೊರೆಯಲಿದೆ. ವಿಜೇತರು 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ದಿನಪತ್ರಿಕೆಗಳಲ್ಲದೇ 'ಸುಧಾ' ವಾರಪತ್ರಿಕೆಯಲ್ಲೂ ಕಾಣಿಸಿಕೊಳ್ಳಲಿದ್ದಾರೆ.

ಆಸಕ್ತರು, ಮನೆಯಲ್ಲಿ ಸಿದ್ಧಪಡಿಸಿದ ಆಹಾರ ಪದಾರ್ಥದೊಂದಿಗೆ ಅಂದು ಬೆಳಿಗ್ಗೆ 9.30ರ ವೇಳೆಗೆ ಕಾರ್ಯಕ್ರಮದ ಸ್ಥಳದಲ್ಲಿ ಹಾಜರಿರಬೇಕು. ನೀವು ತರುವ ಆಹಾರ ಪದಾರ್ಥವು ಕರ್ನಾಟಕದ ಖಾದ್ಯ ಆಗಿರಬೇಕು. ರುಚಿ, ಹೊಸತನ ಹಾಗೂ ಪ್ರಸ್ತುತಿಯ ಮಾನದಂಡಗಳನ್ನು ಆಧರಿಸಿ ತೀರ್ಪು ನೀಡಲಾಗುತ್ತದೆ. ಆಹಾರ ಪದಾರ್ಥವನ್ನು ಇಡುವುದಕ್ಕೆ ಬೇಕಾದ ತಟ್ಟೆಗಳು, ಪರಿಕರಗಳು ಮತ್ತು ಅಗತ್ಯ ಖಾದ್ಯಾಲಂಕಾರ ಸಾಮಗ್ರಿಗಳನ್ನು ಸ್ಪರ್ಧಿಗಳೇ ತರಬೇಕು.

ಇಲ್ಲಿ ನೀಡಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ನೋಂದಣಿ ಮಾಡಿಕೊಳ್ಳಬಹುದು. ವಿವರಗಳಿಗೆ ಮೊಬೈಲ್ ಸಂಖ್ಯೆ: 7338018541 ಸಂಪರ್ಕಿಸಬಹುದು.

ಎರಡು ದಿನ ಮದ್ಯ ಮಾರಾಟ ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣೇಶ ಮೂರ್ತಿಗಳ ವಿಸರ್ಜನಾ ಕಾರ್ಯಕ್ರಮದ ಸಂಬಂಧ ನಗರದ ಕೆಲವು ಕಡೆ ಆಗಸ್ಟ್ 30 ಮತ್ತು 31ರಂದು ಮದ್ಯ ಮಾರಾಟ ನಿಷೇಧಿಸಿ ನಗರ ಪೊಲೀಸ್ ಆಯುಕ್ತ ಸೀಮಾಂತ್ ಕುಮಾರ್ ಸಿಂಗ್ ಆದೇಶ ಹೊರಡಿಸಿದ್ದಾರೆ.

ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಕೆಲವು ವಿಭಾಗಗಳ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಸಿಎಲ್-4 ಮತ್ತು ಸಿಎಲ್-6 ಪರವಾನಗಿ ಹೊರತುಪಡಿಸಿ, ಉಳಿದ ಎಲ್ಲಾ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳು, ವೈನ್‌ಶಾಪ್‌ಗಳು, ಪಬ್‌ಗಳು, ಎಂ.ಎಸ್.ಐ.ಎಲ್. ಮಳಿಗೆಗಳು ಸೇರಿ ಎಲ್ಲಾ ರೀತಿಯ ಮದ್ಯ ಮಾರಾಟ ಮಾಡುವ ಅಂಗಡಿ ಮುಚ್ಚಲು ಆದೇಶಿಸಿದ್ದಾರೆ. ರೆಸ್ಟೋರೆಂಟ್ ಹಾಗೂ ಹೋಟೆಲ್‌ಗಳಲ್ಲಿ ಆಹಾರ ಸೇವೆಗಳಿಗೆ ಮಾತ್ರ ವಿನಾಯಿತಿ ನೀಡಲಾಗಿದೆ.

ಎಲ್ಲೆಲ್ಲಿ ನಿಷೇಧ?: ಆರ್.ಟಿ.ನಗರ, ಜೆ.ಸಿ. ನಗರ, ಸಂಜಯ ನಗರ, ಹೆಬ್ಬಾಳ, ಡಿ.ಜೆ. ಹಳ್ಳಿ, ಭಾರತಿನಗರ, ಪುಲಕೇಶಿನಗರ, ಯಲಹಂಕ, ಯಲಹಂಕ ಉಪನಗರ, ಕೊಡಿಗೇಹಳ್ಳಿ, ವಿದ್ಯಾರಣ್ಯಪುರ, ಚಂದ್ರಾ ಲೇಔಟ್ ಠಾಣಾ ವ್ಯಾಪ್ತಿಯಲ್ಲಿ ಆಗಸ್ಟ್ 30ರ ಬೆಳಿಗ್ಗೆ 6 ರಿಂದ ಆಗಸ್ಟ್ 31ರ ಬೆಳಿಗ್ಗೆ 6ರವರೆಗೆ ಮದ್ಯ ಮಾರಾಟ ನಿಷೇಧಿಸಲಾಗಿದೆ.

ಕೆ.ಜಿ.ಹಳ್ಳಿ, ಡಿ.ಜೆ.ಹಳ್ಳಿ, ಗೋವಿಂದಪುರ, ಬಾಣಸವಾಡಿ, ರಾಮಮೂರ್ತಿನಗರ, ಹೆಣ್ಣೂರು, ಕಮರ್ಷಿಯಲ್ ಸ್ಟ್ರೀಟ್, ಶಿವಾಜಿನಗರ, ಭಾರತೀನಗರ, ಪುಲಕೇಶಿನಗರ, ಹಲಸೂರು, ಕೊತ್ತನೂರು, ಅಮೃತಹಳ್ಳಿ, ಸಂಪಿಗೆಹಳ್ಳಿ, ಜೆ.ಸಿ.ನಗರ, ಆರ್.ಟಿ.ನಗರ, ಹೆಬ್ಬಾಳ, ಯಶವಂತಪುರ, ಸಂಜಯನಗರ, ಜಾಲಹಳ್ಳಿ, ಆರ್.ಎಂ.ಸಿ. ಯಾರ್ಡ್, ಸದಾಶಿವನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆಗಸ್ಟ್ 31ರ ಬೆಳಿಗ್ಗೆ 6ರಿಂದ ಸೆಪ್ಟೆಂಬರ್1ರ ಬೆಳಿಗ್ಗೆ 6ರವರೆಗೆ ಮದ್ಯ ಮಾರಾಟ ಇರುವುದಿಲ್ಲ.

ತಲಘಟ್ಟಪುರ, ಸುಬ್ರಮಣ್ಯಪುರ, ಕೆಂಗೇರಿ, ಜ್ಞಾನಭಾರತಿ, ಕುಂಬಳಗೋಡು ಹಾಗೂ ಎಲೆಕ್ಟ್ರಾನಿಕ ಸಿಟಿ ವಿಭಾಗದ ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆಗಸ್ಟ್ 31ರ ಬೆಳಿಗ್ಗೆ 6ರಿಂದ ಮಧ್ಯರಾತ್ರಿ 12ರವರೆಗೆ ಮದ್ಯ ಮಾರಾಟ ನಿಷೇಧಿಸಲಾಗಿದೆ.

ಬೆಂಗಳೂರು ನಗರ ವ್ಯಾಪ್ತಿಯ ರೈಲು ಯೋಜನೆ: ಸಚಿವ ವಿ.ಸೋಮಣ್ಣ ಹೇಳಿಕೆ

'ರೈಲ್ವೆ ಸೇತುವೆ: ಸಮನ್ವಯ ಸಮಿತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ವ್ಯಾಪ್ತಿಯ ರೈಲ್ವೆ ಮೇಲ್ಸೇತುವೆ, ರೈಲ್ವೆ ಕೆಳಸೇತುವೆ ನಿರ್ಮಾಣದ ಮೇಲ್ವಿಚಾರಣೆಗೆ ರಾಜ್ಯ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಸಮನ್ವಯ ಸಮಿತಿ ರಚಿಸಲಾಗಿದೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

ನೈರುತ್ಯ ರೈಲ್ವೆ, ಬಿಬಿಎಂಪಿ, ಬಿಡಿಎ, ಜಲಮಂಡಳಿ, ಕೆ-ರೈಡ್ ಮತ್ತು ಬೆಸ್ಕಾಂ ಅಧಿಕಾರಿಗಳ ಜತೆಗೆ ಸೋಮಣ್ಣ ಶುಕ್ರವಾರ ಸಭೆ ನಡೆಸಿದರು.

ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮಳೆ ಬಂದಾಗಲೆಲ್ಲಾ ರೈಲ್ವೆ ಮೇಲ್ಸೇತುವೆ, ರೈಲ್ವೆ ಕೆಳಸೇತುವೆ ಬಳಿ ನೀರು ನಿಂತು ರಾದ್ಧಾಂತವಾಗುತ್ತದೆ. ರೈಲ್ವೆ, ಬಿಬಿಎಂಪಿ, ಬಿಡಿಎ, ಕೆ-ರೈಡ್ ಅಧಿಕಾರಿಗಳು ಪರಸ್ಪರರ ಮೇಲೆ ಹೊಣೆ ಹೊರಿಸುತ್ತಾರೆ. ಆದರೆ, ಸಮಸ್ಯೆ ಬಗೆಹರಿಯುವುದಿಲ್ಲ. ಹೀಗಾಗಿ ಸಮಿತಿ ರಚಿಸಲಾಗಿದೆ' ಎಂದರು.

'ನಗರ ವ್ಯಾಪ್ತಿಯ 14 ರೈಲ್ವೆ ಮೇಲ್ಸೇತುವೆಗಳ ಕಾಮಗಾರಿ ಕುಂಟುತ್ತಿದೆ. ಅವುಗಳನ್ನು 2026ರ ಮಾರ್ಚ್ ಅಂತ್ಯದ ವೇಳೆಗೆ ಪೂರ್ಣಗೊಳಿಸಬೇಕು ಎಂದು ಸೂಚಿಸಿದ್ದೇನೆ. ಸಮನ್ವಯ ಸಮಿತಿಯು ಅದರ ಮೇಲ್ವಿಚಾರಣೆ ನಡೆಸಲಿದೆ. ಕೆಲವು ಕಾಮಗಾರಿಗಳಲ್ಲಿ ರಾಜ್ಯ ಸರ್ಕಾರವು ತನ್ನ ಪಾಲಿನ ಹಣವನ್ನು ಒದಗಿಸಿಲ್ಲ' ಎಂದರು.

ವಿಳಂಬ ಸಾಧ್ಯತೆ: 'ಮೊದಲನೇ ಮತ್ತು 2ನೇ ಹಂತದ ಉಪನಗರ ರೈಲು ಯೋಜನೆ ಕಾಮಗಾರಿಗಳು ವಿಳಂಬವಾಗಿವೆ. ರಾಜ್ಯ ಸರ್ಕಾರದ ಆಸಕ್ತಿಯನ್ನು ಪರಿಗಣಿಸಿದರೆ, ಯೋಜನೆಗಳು ಇನ್ನಷ್ಟು ವಿಳಂಬವಾಗಲಿವೆ. ಈ ಬಗ್ಗೆ ಮುಖ್ಯಮಂತ್ರಿಗೆ ಪತ್ರ ಬರೆಯುತ್ತೇನೆ' ಎಂದು ಸೋಮಣ್ಣ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಉಪನಗರ ರೈಲು ಯೋಜನೆಗಳಿಗೆ ರಾಜ್ಯ ಸರ್ಕಾರವು ಶೇ 51ರಷ್ಟು ವೆಚ್ಚ ಭರಿಸಿದರೆ, ಕೇಂದ್ರವು ಶೇ 49ರಷ್ಟು ವೆಚ್ಚ ಒದಗಿಸಲಿದೆ. ಆದರೆ, ರಾಜ್ಯ ಸರ್ಕಾರವು ಅನುದಾನ ಒದಗಿಸುತ್ತಿಲ್ಲ. ಅಗತ್ಯವಿರುವ ಹಣವನ್ನು ಕೇಂದ್ರದಿಂದಲೇ ಭರಿಸಬೇಕೆ ಅಥವಾ ರಾಜ್ಯ ಸರ್ಕಾರಕ್ಕೆ ಅನ್ಯರೂಪದಲ್ಲಿ ನೆರವು ಒದಗಿಸಬೇಕೆ ಎಂಬುದನ್ನು ಪರಿಶೀಲಿಸಿ, 15–20 ದಿನಗಳಲ್ಲಿ ನಿರ್ಧಾರ ಪ್ರಕಟಿಸುತ್ತೇವೆ' ಎಂದರು.

'ಯಲಹಂಕ ರೈಲು ಗಾಲಿ ಕಾರ್ಖಾನೆಯ ವಾರ್ಷಿಕ ತಯಾರಿಕಾ ಸಾಮರ್ಥ್ಯವನ್ನು 1.12 ಲಕ್ಷ ಆ್ಯಕ್ಸೆಲ್‌ಗಳಿಗೆ ಹೆಚ್ಚಿಸಲಾಗುತ್ತದೆ. ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ ಟರ್ಮಿನಲ್ ಅನ್ನು ₹1,378 ಕೋಟಿ ವೆಚ್ಚದಲ್ಲಿ ಆಧುನೀಕರಿಸಲಾಗುತ್ತದೆ. ದೇವನಹಳ್ಳಿಯಲ್ಲಿ ರೈಲು ಟರ್ಮಿನಲ್ ನಿರ್ಮಿಸಲಾಗುತ್ತದೆ' ಎಂದು ಪುನರುಚ್ಚರಿಸಿದರು.



> **ಶ್ರೀನಿವಾಸಪುರದಲ್ಲಿ ರೈಲ್ವೆ ಇಲಾಖೆಯ ಜಾಗವೇ ಇಲ್ಲ. ರಾಜ್ಯ ಸರ್ಕಾರವೂ ಜಮೀನು ಒದಗಿಸಿಲ್ಲ. ಹೀಗಿರುವಾಗ ಅಲ್ಲಿ ರೈಲು ಬೋಗಿ ಕಾರ್ಖಾನೆ ನಿರ್ಮಾಣದ ಪ್ರಶ್ನೆಯೇ ಬರುವುದಿಲ್ಲ**
> **ವಿ.ಸೋಮಣ್ಣ,** ರೈಲ್ವೆ ರಾಜ್ಯ ಸಚಿವ

ಹಗ್ಗದಿಂದ ಕುತ್ತಿಗೆ ಬಿಗಿದು ಪತ್ನಿ ಕೊಲೆ

ನಿತ್ಯ ಕುಡಿದು ಬಂದು ಗಲಾಟೆ ಮಾಡುತ್ತಿದ್ದ ಪತಿ ● ದಂಪತಿ ಉತ್ತರ ಪ್ರದೇಶದವರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಂಪತಿ ನಡುವೆ ನಡೆದ ಜಗಳ ಪತ್ನಿಯ ಕೊಲೆಯಲ್ಲಿ ಅಂತ್ಯವಾಗಿದೆ. ಮದ್ಯದ ಅಮಲಿನಲ್ಲಿ ಹಗ್ಗದಿಂದ ಪತ್ನಿಯ ಕತ್ತು ಬಿಗಿದು ಕೊಲೆ ಮಾಡಿದ ಪತಿಯನ್ನು ವರ್ತೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಉತ್ತರ ಪ್ರದೇಶ ಮೂಲದ ದೊಮ್ಮಸಂದ್ರದ ನಿವಾಸಿ ರವೀಂದ್ರ ಸಿಂಗ್ (29) ಬಂಧಿತ ಆರೋಪಿ.

2020ರಲ್ಲಿ ಪೂನಂ ಸಿಂಗ್ ಮತ್ತು ರವೀಂದರ್ ಸಿಂಗ್ ವಿವಾಹವಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಮೂರು ವರ್ಷಗಳ ಹಿಂದೆ ನಗರಕ್ಕೆ ಬಂದ ದಂಪತಿ, ದೊಮ್ಮಸಂದ್ರದ ಹಮ್ಮಿಂಗ್ ಸ್ಪೋರ್ಟ್ಸ್ ಅಕಾಡೆಮಿಯ ಹತ್ತಿರದಲ್ಲಿರುವ ಮೂರ್ತಿ ಅವರ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು.

ರವೀಂದರ್ ಸಿಂಗ್, ಕಾರ್ಪೆಂಟರ್ ಕೆಲಸ ಮಾಡಿಕೊಂಡಿದ್ದ. ಆರಂಭದಲ್ಲಿ ದಂಪತಿ ಅನ್ಯೋನ್ಯವಾಗಿದ್ದರು. ಇತ್ತೀಚೆಗೆ ಇಬ್ಬರ ನಡುವೆ ಜಗಳ ನಡೆಯುತ್ತಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ನಿತ್ಯ ಮದ್ಯ ಸೇವಿಸಿ ಬಂದು ಪತ್ನಿ ಜೊತೆಗೆ ಜಗಳ ಮಾಡುತ್ತಿದ್ದ. ಆಗಸ್ಟ್ 28ರಂದು ದಂಪತಿ ನಡುವೆ ಜಗಳವಾಗಿದ್ದು, ತಾರಕಕ್ಕೇರಿದಾಗ ಜೋಕಾಲಿಗೆ ಕಟ್ಟುವ ಹಗ್ಗದಿಂದ ಪೂನಂ ಸಿಂಗ್ ಕುತ್ತಿಗೆ ಬಿಗಿದು ಕೊಲೆ ಮಾಡಿದ್ದು, ಕೂಗಾಟ ಕೇಳಿ ನೆರೆಯವರು ಬಂದು ನೋಡಿದಾಗ ಕೊಲೆ ನಡೆದ ವಿಚಾರ ಗೊತ್ತಾಗಿದೆ.

ಮೃತಳ ಚಿಕ್ಕಪ್ಪ ಬಿಜೇಂದರ್ ಸಿಂಗ್ ನೀಡಿದ ದೂರಿನ ಮೇರೆಗೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ರವೀಂದರ್ ಸಿಂಗ್‌ನನ್ನು ವಿಚಾರಣೆ ನಡೆಸಿದಾಗ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದು, ಆರೋಪಿಯನ್ನು ಬಂಧಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಮುಖ್ಯಾಂಶಗಳು

- ಮೂರು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ ದಂಪತಿ
- ಇತ್ತೀಚೆಗೆ ಇಬ್ಬರ ನಡುವೆ ಜಗಳ
- ಜೋಕಾಲಿಗೆ ಕಟ್ಟುವ ಹಗ್ಗದಿಂದ ಕುತ್ತಿಗೆ ಬಿಗಿದು ಕೊಲೆ


ರವೀಂದರ್ ಸಿಂಗ್, ಪೂನಂ ಸಿಂಗ್

ಅಪರಾಧ ಸುದ್ದಿ

ಭ್ರೂಣಲಿಂಗ ಹತ್ಯೆ ಆರೋಪ: ಪ್ರಕರಣ ದಾಖಲಿಸಲು ಸಿದ್ಧತೆ

ರಾಮನಗರ: ಇಲ್ಲಿನ ಜಿಲ್ಲಾ ಆಸ್ಪತ್ರೆಯಲ್ಲಿ ಗರ್ಭಿಣಿಯೊಬ್ಬರ ಭ್ರೂಣಲಿಂಗ ಪತ್ತೆ ಮಾಡಿ, ಬೆಂಗಳೂರಿನ ಅಜ್ಞಾತಸ್ಥಳದಲ್ಲಿ ಶಸ್ತ್ರಚಿಕಿತ್ಸೆ ಮೂಲಕ ಭ್ರೂಣ ತೆಗೆಸಿದ ಆರೋಪಕ್ಕೆ ಸಂಬಂಧಿಸಿದಂತೆ, ರಾಮನಗರ ಮತ್ತು ಬೆಂಗಳೂರಿನಲ್ಲಿ ಪ್ರತ್ಯೇಕವಾಗಿ ಪ್ರಕರಣ ದಾಖಲಿಸಲು ಆರೋಗ್ಯ ಇಲಾಖೆ ಸಿದ್ಧತೆ ಮಾಡಿಕೊಂಡಿದೆ.

ವಿಷಯ ಬೆಳಕಿಗೆ ಬರುತ್ತಿದ್ದಂತೆ, ಇಲಾಖೆಯ ಪ್ರಸವಪೂರ್ವ ಲಿಂಗ ಪತ್ತೆ ಮತ್ತು ಭ್ರೂಣ ಹತ್ಯೆ ತಡೆ (ಪಿಸಿ ಆ್ಯಂಡ್ ಪಿಎನ್‌ಡಿಟಿ) ಕಾರ್ಯಕ್ರಮದ ಉಪ ನಿರ್ದೇಶಕ ಡಾ. ವಿವೇಕ್ ದೊರೈ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿದ್ದರು. ಸ್ಕ್ಯಾನಿಂಗ್ ವಿಭಾಗದ ರೇಡಿಯಾಲಜಿಸ್ಟ್ ಮತ್ತು ಸಿಬ್ಬಂದಿಯನ್ನು ವಿಚಾರಣೆ ನಡೆಸಿದ್ದ ಅವರು, ತನಿಖೆ ಮುಗಿಯುವವರೆಗೆ ಭ್ರೂಣಲಿಂಗ ಪತ್ತೆ ಮಾಡಿದ್ದೆನ್ನಲಾದ ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಯಂತ್ರ ಬಳಸದಂತೆ ಸೂಚಿಸಿದ್ದರು.

ಕೋರ್ಟ್–ಠಾಣೆಗೆ ದೂರು: ‘ಭ್ರೂಣಲಿಂಗ ಪತ್ತೆ ಮಾಡಿಸಿಕೊಂಡಿದ್ದಕ್ಕಾಗಿ ಬೆಂಗಳೂರಿನ ತಾತಗುಣಿಯ ಮಹಿಳೆ, ಆಕೆಯ ಪತಿ, ಆಸ್ಪತ್ರೆಯ ರೇಡಿಯಾಲಜಿಸ್ಟ್ ಹಾಗೂ ಇಬ್ಬರು ಅನಾಮಧೇಯ ವ್ಯಕ್ತಿಗಳ ವಿರುದ್ಧ ರಾಮನಗರದ ಸ್ಥಳೀಯ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಲಾಗುವುದು’ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಿರಂಜನ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಆರೋಪಕ್ಕೆ ಸಂಬಂಧಿಸಿದಂತೆ ಮಹಿಳೆ, ಆಕೆಯ ಪತಿ, ರೇಡಿಯಾಲಜಿಸ್ಟ್, ಅಜ್ಞಾತಸ್ಥಳದಲ್ಲಿ ಶಸ್ತ್ರಚಿಕಿತ್ಸೆ ಮಾಡಿದವರು, ಅದಕ್ಕೆ ಸಹಕರಿಸಿದವರು ಸೇರಿದಂತೆ ಕೃತ್ಯದಲ್ಲಿ ಭಾಗಿಯಾದವರನ್ನು ವಿಚಾರಣೆ ನಡೆಸಿ, ಸ್ಥಳ ಪರಿಶೀಲನೆ ಮಾಡಿ ವರದಿ ಸಿದ್ಧಪಡಿಸಲಾಗಿದೆ. ಅದರ ಆಧಾರದ ಮೇಲೆ, ಬೆಂಗಳೂರಿನ ಜಿಲ್ಲಾ ಆರೋಗ್ಯಾಧಿಕಾರಿ ಮೂಲಕ ಎಲ್ಲರ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿ ಪ್ರಕರಣ ದಾಖಲಿಸಲಾಗುವುದು’ ಎಂದು ಡಾ. ವಿವೇಕ್ ದೊರೈ ಹೇಳಿದರು.

ಪಟಾಕಿ ಸ್ಫೋಟ: ಬಾಲಕ ಸಾವು

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ನಗರದ ಮುತ್ತೂರಿನಲ್ಲಿ ಶುಕ್ರವಾರ ಸಂಜೆ ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ಪಟಾಕಿ ಸ್ಫೋಟದಲ್ಲಿ ಬಾಲಕನೊಬ್ಬ ಮೃತಪಟ್ಟಿದ್ದಾನೆ.

ಪಟಾಕಿ ಸ್ಫೋಟದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ತನುಷ್ ರಾವ್ (15) ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ.

ಮುತ್ತೂರಿನ ಫ್ರೆಂಡ್ಸ್ ವಿನಾಯಕ ಗ್ರೂಪ್ ಗಣೇಶ ವಿಸರ್ಜನೆ ಮೆರವಣಿಗೆಯ ಪವರ್ ಲಿಫ್ಟ್ ವಾಹನ ಬಿಸಿಯಾಗಿ ಅದರ ಮೇಲೆ ಇಡಲಾಗಿದ್ದ ಪಟಾಕಿಗಳು ಏಕಾಏಕಿ ಸ್ಫೋಟಗೊಂಡಿವೆ. ಪಟಾಕಿ ಬಳಿ ಇದ್ದ ತನುಷ್‌ಗೆ ಗಾಯಗೊಂಡ. ತೀವ್ರ ಸುಟ್ಟು ಗಾಯಗಳಿಂದ ಅಸ್ವಸ್ಥನಾದ ಆತನನ್ನು ಕೂಡಲೇ ಆಸ್ಪತ್ರೆಗೆ ಸೇರಿಸಲಾಗಿತ್ತು.

ಈ ಘಟನೆ ಸಂಬಂಧ ಇನ್ನೂ ಯಾರನ್ನು ಬಂಧಿಸಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ರಾಹುಲ್, ಪ್ರಿಯಾಂಕ್ ವಿರುದ್ಧದ ದೂರುದಾರನಿಗೆ ‘ವೈ ಪ್ಲಸ್’ ಭದ್ರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ವಯನಾಡ್ ಸಂಸದೆ ಪ್ರಿಯಾಂಕಾ ಗಾಂಧಿ ವಿರುದ್ಧ ದೇಶದ ಹಲವು ಪೊಲೀಸ್ ಠಾಣೆಗಳಲ್ಲಿ ದೂರು ನೀಡಿರುವ ಹಾಗೂ ನ್ಯಾಯಾಲಯಗಳಲ್ಲಿ ಪಿಐಎಲ್ ಸಲ್ಲಿಸಿರುವ ಕರ್ನಾಟಕದ ಕಾರ್ಯಕರ್ತ ಎಸ್.ವಿಘ್ನೇಶ್ ಶಿಶಿರ್ ಅವರಿಗೆ ವೈ ಪ್ಲಸ್ ಭದ್ರತೆ ನೀಡಿ ಎಂದು ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠವು ಕೇಂದ್ರ ಗೃಹ ಸಚಿವಾಲಯಕ್ಕೆ ಸೂಚಿಸಿದೆ.


ಎಸ್.ವಿಘ್ನೇಶ್ ಶಿಶಿರ್

ಬಿಜೆಪಿ ರಾಜ್ಯ ಘಟಕದ ಸದಸ್ಯರಾಗಿರುವ ವಿಘ್ನೇಶ್ ಅವರು, ‘ರಾಹುಲ್ ಗಾಂಧಿ ಅವರು ಬ್ರಿಟನ್ ಪಾಸ್‌ಪೋರ್ಟ್ ಹೊಂದಿದ್ದಾರೆ. ಅವರ ಲೋಕಸಭೆ ಸದಸ್ಯತ್ವವನ್ನು ರದ್ದುಪಡಿಸಬೇಕು ಮತ್ತು ತಮ್ಮ ಪೌರತ್ವದ ಬಗ್ಗೆ ಸುಳ್ಳು ಮಾಹಿತಿ ನೀಡಿದ್ದಕ್ಕೆ ಕಾನೂನು ಕ್ರಮ ತೆಗೆದುಕೊಳ್ಳಬೇಕು’ ಎಂದು ಕೋರಿ ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠಕ್ಕೆ ಅರ್ಜಿ ಸಲ್ಲಿಸಿದ್ದರು.

ಆ ಅರ್ಜಿಯನ್ನು ಇದೇ ಮೇ 5ರಂದು ಪೀಠವು ವಜಾ ಮಾಡಿತ್ತು. ಜತೆಗೆ, ಸಾಕ್ಷ್ಯಗಳು ದೊರೆತರೆ ಮರುಪರಿಶೀಲನಾ ಅರ್ಜಿ ಸಲ್ಲಿಸಬಹುದು ಎಂದು ಹೇಳಿತ್ತು. ಅದರಂತೆ ಮೇ 15ರಂದೇ ವಿಘ್ನೇಶ್ ಮರುಪರಿಶೀಲನಾ ಅರ್ಜಿ ಸಲ್ಲಿಸಿದ್ದರು. ಆ ನಂತರ ರಾಯಬರೇಲಿಯ ಎಸ್‌ಪಿಗೆ ದೂರು ನೀಡಿದ್ದರು.

ಅದರ ಬೆನ್ನಲ್ಲೇ ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠಕ್ಕೆ ರಿಟ್ ಅರ್ಜಿ ಸಲ್ಲಿಸಿದ್ದ ವಿಘ್ನೇಶ್, ‘ದೂರು ದಾಖಲಿಸಿದ ಮತ್ತು ಅರ್ಜಿಗಳನ್ನು ಸಲ್ಲಿಸಿದ ನಂತರ ನನಗೆ ಪ್ರತಿದಿನ ಜೀವ ಬೆದರಿಕೆ ಬರುತ್ತಿದೆ. ಹೀಗಾಗಿ ನನಗೆ ವೈ ಪ್ಲಸ್ ಭದ್ರತೆ ಒದಗಿಸಬೇಕು’ ಎಂದು ಕೋರಿದ್ದರು.

ವಿಜಯಲಕ್ಷ್ಮೀಗೆ ಅಶ್ಲೀಲ ಸಂದೇಶ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದರ್ಶನ್ ಪತ್ನಿ ವಿಜಯಲಕ್ಷ್ಮೀ ಮತ್ತು ಅವರ ಮಗನ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಅಶ್ಲೀಲ ಹಾಗೂ ಅವಾಚ್ಯ ಶಬ್ದಗಳಿಂದ ನಿಂದಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಚೆನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ವಿಜಯಲಕ್ಷ್ಮೀ ಕುರಿತು ಯೂಟ್ಯೂಬ್ ಚಾನೆಲ್‌ವೊಂದು ಕಾರ್ಯಕ್ರಮ ಮಾಡಿತ್ತು. ಈ ಕಾರ್ಯಕ್ರಮದ ವಿಡಿಯೊ ಕುರಿತು ಕೆಲವು ವ್ಯಕ್ತಿಗಳು ವಿಜಯಲಕ್ಷ್ಮಿ ಬಗ್ಗೆ ಅಶ್ಲೀಲವಾಗಿ ಪ್ರತಿಕ್ರಿಯಿಸಿದ್ದರು. ಈ ಬಗ್ಗೆ ಸಾಮಾಜಿಕ ಹೋರಾಟಗಾರ ಬಿ.ಆರ್. ಭಾಸ್ಕರ್ ಪ್ರಸಾದ್ ಅವರು ಮಹಿಳಾ ಆಯೋಗಕ್ಕೆ ದೂರು ನೀಡಿದ್ದರು.

ಈ ದೂರಿನ ಆಧಾರದ ಮೇಲೆ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಅವರು ನಗರ ಪೊಲೀಸ್ ಕಮಿಷನರ್ ಅವರಿಗೆ ಪತ್ರ ಬರೆದು, ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರು.

ಅಶ್ಲೀಲವಾಗಿ ಪ್ರತಿಕ್ರಿಯಿಸಿದವರ ವಿರುದ್ಧ ಪ್ರಕರಣ ದಾಖಲಾಗಿದ್ದು, ಆರೋಪಿಗಳ ಪತ್ತೆ ಕಾರ್ಯ ನಡೆದಿದೆ ಎಂದು ಪೊಲೀಸರು ತಿಳಿಸಿದರು.

ಮಂದಿರ ಸ್ಫೋಟಿಸುವ ಬೆದರಿಕೆ ಸಂದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲಸೂರು ಕೆರೆ ಸಮೀಪದ ಗುರು ಸಿಂಗ್ ಸಭಾ ಸಿಖ್ ಗುರುದ್ವಾರಕ್ಕೆ ಬಾಂಬ್ ಬೆದರಿಕೆಯ ಇ-ಮೇಲ್ ಬಂದಿದ್ದು, ತಪಾಸಣೆ ಬಳಿಕ ಹುಸಿ ಕರೆ ಎಂಬುದು ಗೊತ್ತಾಗಿದೆ.

ಹಲಸೂರು ಗುರುದ್ವಾರದ ಮುಖ್ಯರಸ್ತೆಯಲ್ಲಿರುವ ಗುರುದ್ವಾರದ ಅಧಿಕೃತ ವಿಳಾಸಕ್ಕೆ ದುಷ್ಕರ್ಮಿಗಳು ಆಗಸ್ಟ್ 24ರ ಮಧ್ಯಾಹ್ನ 1.54ರ ಸುಮಾರಿಗೆ ಇ-ಮೇಲ್ ಸಂದೇಶ ಕಳುಹಿಸಿ, ಮಂದಿರವನ್ನು ಆರ್‌ಡಿಎಕ್ಸ್ ಬಾಂಬ್‌ನಿಂದ ಸ್ಫೋಟಗೊಳಿಸುವ ಬೆದರಿಕೆ ಹಾಕಿದ್ದಾರೆ. ಇ-ಮೇಲ್ ಸಂದೇಶ ಗಮನಿಸಿದ ಗುರುದ್ವಾರದ ಸಿಬ್ಬಂದಿ ತಕ್ಷಣ ಹಲಸೂರು ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಶ್ವಾನದಳ, ಬಾಂಬ್ ನಿಷ್ಕ್ರಿಯ ತಂಡದೊಂದಿಗೆ ಬಂದು ಮಂದಿರದ ಆವರಣ, ಶೌಚಗೃಹ ಪರಿಶೀಲನೆ ನಡೆಸಿದ್ದಾರೆ. ಆದರೆ, ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲ. ಇದೊಂದು ಹುಸಿ ಬಾಂಬ್ ಬೆದರಿಕೆ ಸಂದೇಶ ಎಂದು ಪೊಲೀಸರು ಹೇಳಿದ್ದಾರೆ.

ಸಂದೇಶದಲ್ಲೇನಿದೆ?: ರಾಜ್‌ಗಿರಿ ಎಂಬುವವರ ಇ-ಮೇಲ್‌ನಿಂದ ಸಂದೇಶ ಕಳುಹಿಸಲಾಗಿದೆ. ಮಂದಿರದ ಶೌಚ ಗೃಹದಲ್ಲಿ ಆರ್‌ಡಿಎಕ್ಸ್ ಹಾಗೂ 4 ಐಇಡಿ ಬಾಂಬ್‌ಗಳನ್ನು ಇಡಲಾಗಿದೆ. 8 ಗಂಟೆ ಒಳಗೆ ದೇವಸ್ಥಾನ ಖಾಲಿ ಮಾಡಬೇಕು. ಇಲ್ಲದಿದ್ದರೆ ಬಾಂಬ್‌ಗಳು ಸ್ಫೋಟಗೊಳ್ಳಲಿವೆ ಎಂದು ಉಲ್ಲೇಖಿಸಲಾಗಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

36 ದ್ವಿಚಕ್ರ ವಾಹನ ಜಪ್ತಿ

ಬೆಂಗಳೂರು: ನಕಲಿ ಕೀ ಬಳಸಿ ದ್ವಿಚಕ್ರ ವಾಹನಗಳನ್ನು ಕಳವು ಮಾಡಿದ್ದ ಆರೋಪಿಯನ್ನು ದೇವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರ ಪ್ರದೇಶದ ಮಡಕಶಿರಾ ಮೂಲದ ಆನಂದ್ (33) ಎಂಬಾತನನ್ನು ಬಂಧಿಸಿ, ₹16 ಲಕ್ಷ ಮೌಲ್ಯದ 36 ವಾಹನಗಳನ್ನು ಜಪ್ತಿ ಮಾಡಲಾಗಿದೆ.

ಕೆಲ ದಿನಗಳ ಹಿಂದೆ ಮಂಚೇನಹಳ್ಳಿಯ ವೃಕ್ಷೋದ್ಯಾನದ ಪ್ರವೇಶ ದ್ವಾರದ ಬಳಿ ನಿಲ್ಲಿಸಿದ ಬೈಕ್ ಕಳ್ಳತನವಾಗಿತ್ತು. ಈ ಬಗ್ಗೆ ತನಿಖೆ ನಡೆಸಿದ ಪೊಲೀಸರು, ತಾಂತ್ರಿಕ ಮಾಹಿತಿ ಆಧರಿಸಿ, ಆರೋಪಿಯನ್ನು ಪತ್ತೆಹಚ್ಚಿ, ಮಾರತ್ತಹಳ್ಳಿಯ ಶ್ರೀರಾಮ ದೇವಸ್ಥಾನದ ಬಳಿ ದ್ವಿಚಕ್ರ ವಾಹನ ಸಮೇತ ವಶಕ್ಕೆ ಪಡೆದಿದ್ದರು.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ, ಚಿತ್ರದುರ್ಗ ಜಿಲ್ಲೆಗಳಲ್ಲಿ ಕಳವು ಮಾಡಿರುವುದಾಗಿ ಆರೋಪಿ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಗ್ರಾಮಾಂತರ ಜಿಲ್ಲೆಯ ವಿಶ್ವನಾಥಪುರ ಪೊಲೀಸ್ ಠಾಣೆ ವ್ಯಾಪ್ತಿಯ ಖಾಸಗಿ ಕಂಪನಿಯೊಂದರ ಪಕ್ಕದ ರಸ್ತೆಯ ಖಾಲಿ ಜಾಗದಲ್ಲಿ ಹಾಗೂ ಚನ್ನರಾಯಪಟ್ಟಣ ಕೈಗಾರಿಕಾ ಪ್ರದೇಶದ ಅಕ್ಕಪಕ್ಕದ ರಸ್ತೆಯ ಖಾಲಿ ಜಾಗದಲ್ಲಿ ನಿಲ್ಲಿಸಿದ್ದ ಕದ್ದ ವಾಹನಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. 17 ದ್ವಿಚಕ್ರ ವಾಹನಗಳ ಕಳವು ಪ್ರಕರಣ ಪತ್ತೆಯಾಗಿದ್ದು, ಉಳಿದ 19 ವಾಹನಗಳ ವಾರಸುದಾರರ ಪತ್ತೆ ಕಾರ್ಯ ಮುಂದುವರಿದಿದೆ.

ಕಳ್ಳತನಕ್ಕೆ ಸಂಬಂಧಿಸಿದಂತೆ ಆನಂದ್ ವಿರುದ್ಧ ಈಗಾಗಲೇ 18 ಪ್ರಕರಣಗಳು ವಿವಿಧ ಠಾಣೆಗಳಲ್ಲಿ ದಾಖಲಾಗಿವೆ. ಸಾರ್ವಜನಿಕ ಸ್ಥಳಗಳು, ಮನೆ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನಗಳನ್ನು ನಕಲಿ ಕೀ ಬಳಸಿ ಕಳವು ಮಾಡುತ್ತಿದ್ದ. ಕದ್ದ ವಾಹನಗಳನ್ನು ತನ್ನ ಗ್ರಾಮದ ಸುತ್ತಮುತ್ತಲ ಹಳ್ಳಿಗಳಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡಿ ಬಂದ ಹಣದಲ್ಲಿ ಮೋಜು, ಮಸ್ತಿ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಪಿಎಸ್‌ಐ ಮೇಲೆ ವಾಹನ ಹತ್ತಿಸಲು ಯತ್ನ

ಬೆಂಗಳೂರು: ರಾತ್ರಿ ಗಸ್ತಿನಲ್ಲಿದ್ದ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಮೇಲೆ ಯುವಕರ ಗುಂಪೊಂದು ಕಾರು ಹತ್ತಿಸಲು ಯತ್ನಿಸಿದ ಘಟನೆ ರಾಜಗೋಪಾಲನಗರ ಠಾಣಾ ವ್ಯಾಪ್ತಿಯಲ್ಲಿ ಗುರುವಾರ ರಾತ್ರಿ ನಡೆದಿದೆ.

ಠಾಣಾ ವ್ಯಾಪ್ತಿಯ ಮಾರ್ಕ್ ಬಾರ್ ಬಳಿ 4–5 ಜನರ ಗುಂಪು ವಾಹನ ನಿಲ್ಲಿಸಿಕೊಂಡು ಮದ್ಯ ಸೇವಿಸುತ್ತಿತ್ತು. ಗಸ್ತಿನಲ್ಲಿದ್ದ ಪಿಎಸ್‌ಐ ಮುರುಳಿ ಅವರು ಬಾರ್ ಬಳಿ ನಿಂತಿದ್ದ ಯುವಕರನ್ನು ಪ್ರಶ್ನಿಸಲು ಮುಂದಾದರು. ಪಿಎಸ್‌ಐ ಅವರನ್ನು ನೋಡುತ್ತಿದ್ದಂತೆ ಎಲ್ಲರೂ ಕಾರು ಒಳಗೆ ಕುಳಿತುಕೊಂಡಿದ್ದಾರೆ. ತಕ್ಷಣ ಚಾಲಕ ವಾಹನವನ್ನು ಹಿಂದಕ್ಕೆ ತೆಗೆದುಕೊಂಡಿದ್ದಾರೆ. ವಾಹನ ನಿಲ್ಲಿಸುವಂತೆ ಅಧಿಕಾರಿ ಹೇಳಿದರೂ, ವೇಗವಾಗಿ ಅವರ ಮೇಲೆ ಹತ್ತಿಸಲು ಯತ್ನಿಸಿ, ಪರಾರಿಯಾಗಿದ್ದಾರೆ.

ಈ ವೇಳೆ ಪಿಎಸ್‌ಐ ಅವರ ಕೈಗೆ ಗಾಯವಾಗಿ ರಕ್ತ ಸುರಿದಿದೆ. ವಾಹನದ ಮೇಲೆ ಜಯ ಕರ್ನಾಟಕ ಸಂಘಟನೆ ಎಂಬ ಹೆಸರು ಇದೆ. ವಾಹನದ ನೋಂದಣಿ ಸಂಖ್ಯೆ ಆಧರಿಸಿ, ಮಾಲೀಕನನ್ನು ಪತ್ತೆ ಮಾಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬ್ಯಾಟ್‌ನಿಂದ ಹಲ್ಲೆ: ನಾಲ್ವರಿಗೆ ಗಾಯ

ಬೆಂಗಳೂರು: ಮದುವೆ ಕಾರ್ಯಕ್ರಮಕ್ಕೆ ಹೋಗಿದ್ದ ವೇಳೆ ರೌಡಿಶೀಟರ್ ಒಬ್ಬನ ಸ್ನೇಹಿತನ ತಾಯಿಗೆ ಬೈಕ್ ತಾಗಿದ್ದಕ್ಕೆ ಎರಡು ಗುಂಪುಗಳ ನಡುವೆ ಮಾರಾಮಾರಿ ನಡೆದಿದೆ.

ಸಿದ್ದಾಪುರ ಪೊಲೀಸ್ ಠಾಣೆ ವ್ಯಾಪ್ತಿಯ ಕಾವೇರಮ್ಮ ಕೊಳೆಗೇರಿ ಬಳಿಯ ಬೈರಸಂದ್ರದಲ್ಲಿ ಆಗಸ್ಟ್ 28ರಂದು ರಾತ್ರಿ ನಡೆಯುತ್ತಿದ್ದ ವಿವಾಹ ಕಾರ್ಯಕ್ರಮಕ್ಕೆ ರೌಡಿಶೀಟರ್ ವಿಜಯ್ ಸೇರಿದಂತೆ ಆತನ ಸ್ನೇಹಿತರು ಹೋಗಿದ್ದರು. ಬೈಕ್ ತಾಗಿರುವುದನ್ನು ಪ್ರಶ್ನಿಸಿದಕ್ಕೆ ಎರಡು ಗುಂಪಿನ ನಡುವೆ ಮಾತಿನ ಚಕಮಕಿ ನಡೆದು, ಗಲಾಟೆ ನಡೆದಿದೆ.

ಕ್ರಿಕೆಟ್ ಬ್ಯಾಟ್‌ನಿಂದ ಬಡಿದಾಡಿಕೊಂಡ ಪರಿಣಾಮ ಪ್ರಭು, ಪ್ರವೀಣ್, ಸಂದೀಪ್, ರೋಹಿತ್ ಎಂಬುವವರು ಗಾಯಗೊಂಡಿದ್ದಾರೆ.

ಸ್ಥಳಕ್ಕೆ ಸಿದ್ದಾಪುರ ಠಾಣೆ ಪೊಲೀಸರು ಭೇಟಿ ನೀಡಿ ಆರು ಮಂದಿಯನ್ನು ವಶಕ್ಕೆ ಪಡೆದು ಎಫ್‌ಐಆರ್ ದಾಖಲಿಸಿದ್ದಾರೆ.

ರಾಮನಗರ ಜಿಲ್ಲಾಸ್ಪತ್ರೆ ಭ್ರೂಣಲಿಂಗ ಪತ್ತೆ ಮಾಡಿ ಹತ್ಯೆ ಆರೋಪ

ಪ್ರಕರಣ ದಾಖಲಿಸಲು ಇಲಾಖೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ರಾಮನಗರ: ಇಲ್ಲಿನ ಜಿಲ್ಲಾಸ್ಪತ್ರೆಯಲ್ಲಿ ಗರ್ಭಿಣಿಯೊಬ್ಬರ ಭ್ರೂಣಲಿಂಗ ಪತ್ತೆ ಮಾಡಿ, ಬೆಂಗಳೂರಿನ ಅಜ್ಞಾತಸ್ಥಳದಲ್ಲಿ ಶಸ್ತ್ರಚಿಕಿತ್ಸೆ ಮೂಲಕ ಭ್ರೂಣ ತೆಗೆಸಿದ ಆರೋಪಕ್ಕೆ ಸಂಬಂಧಿಸಿದಂತೆ, ರಾಮನಗರ ಮತ್ತು ಬೆಂಗಳೂರಿನಲ್ಲಿ ಪ್ರತ್ಯೇಕವಾಗಿ ಪ್ರಕರಣ ದಾಖಲಿಸಲು ಆರೋಗ್ಯ ಇಲಾಖೆ ಸಿದ್ಧತೆ ಮಾಡಿಕೊಂಡಿದೆ.

ವಿಷಯ ಬೆಳಕಿಗೆ ಬರುತ್ತಿದ್ದಂತೆ, ಇಲಾಖೆಯ ಪ್ರಸವಪೂರ್ವ ಲಿಂಗ ಪತ್ತೆ ಮತ್ತು ಭ್ರೂಣ ಹತ್ಯೆ ತಡೆ (ಪಿಸಿ ಆ್ಯಂಡ್ ಪಿಎನ್‌ಡಿಟಿ) ಕಾರ್ಯಕ್ರಮದ ಉಪ ನಿರ್ದೇಶಕ ಡಾ. ವಿವೇಕ್ ದೊರೈ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದ್ದರು. ಸ್ಕ್ಯಾನಿಂಗ್ ವಿಭಾಗದ ರೇಡಿಯಾಲಜಿಸ್ಟ್ ಮತ್ತು ಸಿಬ್ಬಂದಿಯನ್ನು ವಿಚಾರಣೆ ನಡೆಸಿದ್ದ ಅವರು, ತನಿಖೆ ಮುಗಿಯುವವರೆಗೆ ಭ್ರೂಣಲಿಂಗ ಪತ್ತೆ ಮಾಡಿದ್ದೆನ್ನಲಾದ ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಯಂತ್ರ ಬಳಸದಂತೆ ಸೂಚಿಸಿದ್ದರು.

ಕೋರ್ಟ್–ಠಾಣೆಗೆ ದೂರು: ‘ಭ್ರೂಣಲಿಂಗ ಪತ್ತೆ ಮಾಡಿಸಿಕೊಂಡಿದ್ದಕ್ಕಾಗಿ ಬೆಂಗಳೂರಿನ ತಾತಗುಣಿಯ ಮಹಿಳೆ, ಆಕೆಯ ಪತಿ, ಆಸ್ಪತ್ರೆಯ ರೇಡಿಯಾಲಜಿಸ್ಟ್ ಹಾಗೂ ಇಬ್ಬರು ಅನಾಮಧೇಯ ವ್ಯಕ್ತಿಗಳ ವಿರುದ್ಧ ರಾಮನಗರದ ಸ್ಥಳೀಯ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಲಾಗುವುದು’ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಿರಂಜನ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಆರೋಪಕ್ಕೆ ಸಂಬಂಧಿಸಿದಂತೆ ಮಹಿಳೆ, ಆಕೆಯ ಪತಿ, ರೇಡಿಯಾಲಜಿಸ್ಟ್, ಅಜ್ಞಾತಸ್ಥಳದಲ್ಲಿ ಶಸ್ತ್ರಚಿಕಿತ್ಸೆ ಮಾಡಿದವರು, ಅದಕ್ಕೆ ಸಹಕರಿಸಿದವರು ಸೇರಿದಂತೆ ಕೃತ್ಯದಲ್ಲಿ ಭಾಗಿಯಾದವರನ್ನು ವಿಚಾರಣೆ ನಡೆಸಿ, ಸ್ಥಳ ಪರಿಶೀಲನೆ ಮಾಡಿ ವರದಿ ಸಿದ್ಧಪಡಿಸಲಾಗಿದೆ. ಅದರ ಆಧಾರದ ಮೇಲೆ, ಬೆಂಗಳೂರಿನ ಜಿಲ್ಲಾ ಆರೋಗ್ಯಾಧಿಕಾರಿ ಮೂಲಕ ಎಲ್ಲರ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿ ಪ್ರಕರಣ ದಾಖಲಿಸಲಾಗುವುದು’ ಎಂದು ಡಾ. ವಿವೇಕ್ ದೊರೈ ಹೇಳಿದರು.

ಲೈಂಗಿಕ ಕಿರುಕುಳ ಆರೋಪ: ನಿಯೋಜನೆ ರದ್ದು

ಬೆಂಗಳೂರು: ನೆಲಮಂಗಲ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಮಹಿಳಾ ಸಿಬ್ಬಂದಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಹೊತ್ತಿರುವ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ರಾಜ್‌ಕುಮಾರ್ ಅವರ ನಿಯೋಜನೆಯನ್ನು (ಕಾರ್ಯನಿರ್ವಹಣಾ ವ್ಯವಸ್ಥೆ) ರದ್ದುಪಡಿಸಿ ಮೂಲ ಕಚೇರಿಗೆ ವರ್ಗಾವಣೆ ಮಾಡಲಾಗಿದೆ.

‘ಕಚೇರಿಯಲ್ಲಿ ಜರ್ಕಿನ್ ತೆಗೆಸಿ ಲೈಂಗಿಕ ಕಿರುಕುಳ ನೀಡಿದ್ದಾರೆ’ ಎಂದು ಮೋಟಾರು ವಾಹನ ನಿರೀಕ್ಷಕಿ ಪೊಲೀಸರಿಗೆ ದೂರು ನೀಡಿದ್ದರು. ಈ ಬಗ್ಗೆ ಶಿಸ್ತು ಕ್ರಮ ಕೈಗೊಳ್ಳುವಂತೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರಿಗೆ ಸೂಚಿಸಿದ್ದರು.

ರಾಜ್‌ಕುಮಾರ್ ಅವರಿಗೆ ನೆಲಮಂಗಲ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಗೆ ಮಾಡಿರುವ ನಿಯೋಜನೆ ರದ್ದು ಮಾಡಲಾಗಿದೆ. ಮೂಲ ಕಚೇರಿಯಾದ ಬೆಂಗಳೂರು (ಪಶ್ಚಿಮ) ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಗೆ ಹಿಂತಿರುಗಿಸಲಾಗಿದೆ ಎಂದು ಆಯುಕ್ತರು ತಿಳಿಸಿದ್ದಾರೆ.

ಮೋಟಾರು ವಾಹನ ನಿರೀಕ್ಷಕಿಯವರ ನಿಯೋಜನೆಯನ್ನು ರದ್ದು ಮಾಡಿ, ಮೂಲ ಕಚೇರಿಯಾದ ತುಮಕೂರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಗೆ ಹಿಂದಿರುಗಿಸಿ ಆದೇಶಿಸಿದ್ದಾರೆ.

ಲೈಂಗಿಕ ಕಿರುಕುಳದ ದೂರನ್ನು ಇಲಾಖೆಯ ಆಂತರಿಕ ಮಹಿಳಾ ದೌರ್ಜನ್ಯ ಸಮಿತಿಗೆ ವರ್ಗಾಯಿಸಲಾಗಿದ್ದು, ವಿಚಾರಣೆ ನಡೆಯಲಿದೆ ಎಂದು ಸಾರಿಗೆ ಅಧಿಕಾರಿಗಳು ತಿಳಿಸಿದ್ದಾರೆ.

₹1.79 ಕೋಟಿಯ ಕಟ್ಟಡಗಳ ಮುಟ್ಟುಗೋಲು

ಬೆಂಗಳೂರು: ಐಷಾರಾಮಿ ಕಾರು ಖರೀದಿಯ ನಕಲಿ ಇನ್ವಾಯ್ಸ್‌ಗಳನ್ನು ಸಲ್ಲಿಸಿ, ಹಲವು ಬ್ಯಾಂಕ್‌ಗಳಿಂದ ವಾಹನ ಸಾಲ ಪಡೆದಿದ್ದ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ₹1.79 ಕೋಟಿ ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿದೆ.

ಉದ್ಯಮಿಗಳಾದ ಕೆ.ಜಿ.ಭದ್ರಾರಾಧ್ಯ, ಅಶೋಕ್ ಕುಮಾರ್ ಅವರು ಔಡಿ ಮತ್ತು ಮರ್ಸಿಡೆಸ್ ಬೆಂಜ್ ಕಂಪನಿಯ ಕಾರುಗಳನ್ನು ಖರೀದಿಸಿದ್ದೇವೆ ಎಂದು ಕೆನರಾ ಬ್ಯಾಂಕ್, ಕಾರ್ಪೊರೇಷನ್ ಬ್ಯಾಂಕ್, ಸಾರಸ್ವತ್ ಸಹಕಾರ ಬ್ಯಾಂಕ್‌ಗಳಿಗೆ ನಕಲಿ ಇನ್ವಾಯ್ಸ್ ಸಲ್ಲಿಸಿದ್ದರು. ಆ ಮೂಲಕ ₹4.84 ಕೋಟಿ ಮೊತ್ತದ ವಾಹನ ಸಾಲ ಪಡೆದಿದ್ದರು.

ಆದರೆ ಸಾಲದ ಹಣದಲ್ಲಿ ವಾಹನಗಳನ್ನು ಖರೀದಿಸದೆ, ತುಮಕೂರಿನ ಅಂತರಸನಹಳ್ಳಿಯಲ್ಲಿ ಕೃಷಿ ಜಮೀನು, ಬೆಂಗಳೂರಿನ ನಾಗರಬಾವಿಯಲ್ಲಿ ಮನೆಗಳನ್ನು ಖರೀದಿಸಿದ್ದರು. ಈ ಸಂಬಂಧ ಮೂರೂ ಬ್ಯಾಂಕ್‌ಗಳು 2016ರಲ್ಲಿ ಪ್ರಕರಣ ದಾಖಲಿಸಿದ್ದವು. ಬಹುಕೋಟಿ ವಂಚನೆ ಪ್ರಕರಣವಾದ ಕಾರಣ ಇ.ಡಿಯು ಇಸಿಐಆರ್ ದಾಖಲಿಸಿ, ತನಿಖೆ ಆರಂಭಿಸಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಅಂತರಸನಹಳ್ಳಿಯ ಕೃಷಿ ಜಮೀನನ್ನು ಈ ಹಿಂದೆಯೇ ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು. ಈಗ ಭದ್ರಾರಾಧ್ಯ ಅವರ ಪತ್ನಿ ವಿಜಯಲಕ್ಷ್ಮೀ ಅವರ ಹೆಸರಿನಲ್ಲಿದ್ದ ಎರಡು ಕಟ್ಟಡಗಳನ್ನು ಶುಕ್ರವಾರ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇ.ಡಿ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಚಿತ್ರಾವಳಿ


ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಶುಕ್ರವಾರ ಜಯನಗರದ ಶಿವರಾತ್ರೀಶ್ವರ ವೃತ್ತದಲ್ಲಿ ಆಯೋಜಿಸಿದ್ದ ಸಂಸ್ಥಾಪಕರ ದಿನಾಚರಣೆ, ವಚನ ದಿನ ಕಾರ್ಯಕ್ರಮದಲ್ಲಿ ಸುಮಂಗಲಿ ಸೇವಾಶ್ರಮದ ಕಾರ್ಯದರ್ಶಿ ಶ್ರೀದೇವಿ ಅವರನ್ನು ಸನ್ಮಾನಿಸಲಾಯಿತು. ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷೆ ಪ್ರಮೀಳಾ ಗರಡಿ, ಸಮಾಜ ಸೇವಕಿ ಗೀತಾ ಜಯಂತ್, ಜಯನಗರದ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪಿ. ವಿಜಯ್‌ಕುಮಾರ್ ಉಪಸ್ಥಿತರಿದ್ದರು


ರಾಜ್ಯದ ಮಾಜಿ ಅಡ್ವೊಕೇಟ್ ಜನರಲ್ ರವಿವರ್ಮ ಕುಮಾರ್ ಅವರು ಬಡ ಹಾಗೂ ಆರ್ಥಿಕವಾಗಿ ಹಿಂದುಳಿದ ರೋಗಿಗಳ ಚಿಕಿತ್ಸೆಗಾಗಿ ಜಯದೇವ ಹೃದ್ರೋಗ ವಿಜ್ಞಾನ ಹಾಗೂ ಸಂಶೋಧನಾ ಸಂಸ್ಥೆಗೆ ₹10 ಲಕ್ಷ ದೇಣಿಗೆ ನೀಡಿದ್ದು ಸಂಸ್ಥೆಯ ನಿರ್ದೇಶಕ ಡಾ. ಕೆ.ಎಸ್. ರವೀಂದ್ರನಾಥ್ ಅವರಿಗೆ ಚೆಕ್ ಅನ್ನು ಹಸ್ತಾಂತರಿಸಿದರು

ನೀರಾವರಿ ಹೋರಾಟಗಾರ ಡಾ.ಮಧು ಸೀತಪ್ಪ ಚಿರಮೌನ


ಮಧು ಸೀತಪ್ಪ

ಚಿಕ್ಕಬಳ್ಳಾಪುರ: ಕರ್ನಾಟಕ ನೀರಾವರಿ ವೇದಿಕೆ ಅಧ್ಯಕ್ಷ ಹಾಗೂ ಬಯಲು ಸೀಮೆಯಲ್ಲಿ ಶಾಶ್ವತ ನೀರಾವರಿ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದ ಡಾ.ಮಧು ಸೀತಪ್ಪ (59) ಬುಧವಾರ ರಾತ್ರಿ ಚೇಳೂರು ತಾಲ್ಲೂಕಿನ ಶಿವಪುರ ಬಳಿಯ ತಮ್ಮ ತೋಟದ ಮನೆಯಲ್ಲಿ ನಿಧನರಾದರು. ಅಂತ್ಯಸಂಸ್ಕಾರವು ಚಿಲಕಲನೇರ್ಪು ಗ್ರಾಮದಲ್ಲಿ ಭಾನುವಾರ ಮಧ್ಯಾಹ್ನ 2 ಗಂಟೆಗೆ ನಡೆಯಲಿದೆ.

ಮಧು ಅವರು ಚಿಂತಾಮಣಿ ತಾಲ್ಲೂಕಿನ ಚಿಲಕಲನೇರ್ಪು ಗ್ರಾಮದಲ್ಲಿ ಜನಿಸಿದರು. ಅವರ ತಂದೆ ಸೀತಪ್ಪ ಸ್ವಾತಂತ್ರ್ಯ ಹೋರಾಟಗಾರರು. ಲಂಡನ್‌ನಲ್ಲಿ ವೈದ್ಯರಾಗಿದ್ದ ಮಧು ಸೀತಪ್ಪ ನಂತರ ಶಿವಪುರ ಬಳಿಯ ತಮ್ಮ ತೋಟದಲ್ಲಿ ನೆಲೆ ನಿಂತರು.

ಬೆಂಗಳೂರು ಗ್ರಾಮಾಂತರ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿನ ಶಾಶ್ವತ ನೀರಾವರಿ ಹೋರಾಟಗಳಲ್ಲಿ ಮಧು ಸೀತಪ್ಪ ಮುಂಚೂಣಿಯಲ್ಲಿ ಇದ್ದರು. ಬಯಲು ಸೀಮೆಯ ನೀರಾವರಿ ವಿಚಾರವಾಗಿ ಅವರು 'ಮತ್ತೆ ದೊಂಬಾ ಬೇಡ', 'ಬರ ಬೇಡ' ಎನ್ನುವ ಸಾಕ್ಷ್ಯಚಿತ್ರಗಳನ್ನೂ ನಿರ್ಮಿಸಿದ್ದರು. ನೀರಾವರಿಗೆ ಸಂಬಂಧಿಸಿದ ಕ್ರಾಂತಿಕಾರಿ ಗೀತೆಗಳ ಧ್ವನಿ ಸುರುಳಿ ಸಹ ರೂಪಿಸಿದ್ದರು.

ಕೆಲವು ಸಮಯ ಜೆಡಿಎಸ್‌ನೊಂದಿಗೆ ಗುರುತಿಸಿಕೊಂಡ ಮಧು, ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಕಣಕ್ಕೆ ಇಳಿಯಲು ತಯಾರಿ ನಡೆಸಿದ್ದರು. ಆದರೆ ಪಕ್ಷವು ಟಿಕೆಟ್ ನೀಡಲಿಲ್ಲ. 2023ರ ವಿಧಾನಸಭಾ ಚುನಾವಣೆಯಲ್ಲಿ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಿಂದ ಎಎಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಜನಪರ ಹೋರಾಟ ನಡೆಸಿದ್ದರು.

ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯಲ್ಲಿ ಭೂಸ್ವಾಧೀನ ವಿರೋಧಿಸಿ ರೈತರು ನಡೆಸಿದ ಹೋರಾಟದಲ್ಲಿಯೂ ತೊಡಗಿಸಿಕೊಂಡಿದ್ದರು.

ಲಂಡನ್‌ನಿಂದ ಬಂದ ನಂತರ ಅಂತ್ಯಕ್ರಿಯೆ

ನೇತ್ರ ತಜ್ಞರಾದ ಮಧು ಸೀತಪ್ಪ ಕೆಲ ಕಾಲ ಲಂಡನ್‌ನಲ್ಲಿಯೂ ವೈದ್ಯಕೀಯ ವೃತ್ತಿ ಮಾಡಿದ್ದರು. ಅವರ ಪತ್ನಿ ಮತ್ತು ಪುತ್ರ ಲಂಡನ್‌ನಲ್ಲಿದ್ದು ಅವರು ಬಂದ ತರುವಾಯ ಅಂತ್ಯಕ್ರಿಯೆ ಬಗ್ಗೆ ನಿರ್ಧಾರ ಕೈಗೊಳ್ಳಲಾಗುತ್ತದೆ. ದೇವನಹಳ್ಳಿಯ ಆಸ್ಪತ್ರೆಯೊಂದರಲ್ಲಿ ಅವರ ಶವವನ್ನು ಇರಿಸಲಾಗಿದೆ.

'ವಿಶ್ವವಿದ್ಯಾಲಯಕ್ಕೆ ಹೆಗಡೆ ಹೆಸರಿಡಿ'

ರಾಮಕೃಷ್ಣ ಹೆಗಡೆಯವರ 99ನೇ ಜನ್ಮ ದಿನಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಕೃಷ್ಣ ಹೆಗಡೆ ಅವರ ಹೆಸರನ್ನು ಯಾವುದಾದರೂ ವಿಶ್ವವಿದ್ಯಾಲಯಕ್ಕೆ ಇಡಬೇಕು. ಅವರ ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಅಧ್ಯಯನ ನಡೆಯಬೇಕು ಎಂದು ಭಾರತ್ ಸ್ಕೌಟ್ ಆ್ಯಂಡ್ ಗೈಡ್ಸ್‌ನ ರಾಜ್ಯ ಪ್ರಧಾನ ಆಯುಕ್ತ ಪಿ.ಜಿ.ಆರ್. ಸಿಂಧ್ಯ ತಿಳಿಸಿದರು.

ರಾಮಕೃಷ್ಣ ಅವರ 99ನೇ ಜನ್ಮ ದಿನಾಚರಣೆ ಪ್ರಯುಕ್ತ ಶುಕ್ರವಾರ ನಡೆದ ಚಿಂತನ-ಮಂಥನ ಸಭೆಯಲ್ಲಿ ಅವರು ಮಾತನಾಡಿದರು.

'ಮನಮೋಹನ ಸಿಂಗ್, ಅಕ್ಕಮಹಾದೇವಿ, ರಾಣಿ ಚನ್ನಮ್ಮ ಸಹಿತ ಅನೇಕರ ಹೆಸರುಗಳನ್ನು ವಿಶ್ವವಿದ್ಯಾಲಯಗಳಿಗೆ ಇಡಲಾಗಿದೆ. ಅದಕ್ಕೆ ನನ್ನ ವಿರೋಧವಿಲ್ಲ. ಹಲವು ಪ್ರಥಮಗಳಿಗೆ ಕಾರಣರಾದ ಹೆಗಡೆಯವರ ಹೆಸರಲ್ಲಿಯೂ ವಿಶ್ವವಿದ್ಯಾಲಯ ಇರಬೇಕು' ಎಂದು ಆಶಿಸಿದರು.

ದೇಶದಲ್ಲಿಯೇ ಮೊದಲ ಬಾರಿಗೆ ವಿಧವಾ ವೇತನ, ರೈತರ ಸಾಲ ಮನ್ನಾ ಯೋಜನೆ ಜಾರಿಯಾಗಿದ್ದು ಕರ್ನಾಟಕದಲ್ಲಿ. ಅದನ್ನು ಜಾರಿಗೆ ತಂದವರು ಹೆಗಡೆ ಅವರು ಎಂದು ನೆನಪು ಮಾಡಿಕೊಂಡರು.

ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರು ರಾಮಕೃಷ್ಣ ಹೆಗಡೆ ಮತ್ತು ವೀರೇಂದ್ರ ಪಾಟೀಲರನ್ನು ಲವ-ಕುಶ ಎಂದು ಕರೆಯುತ್ತಿದ್ದರು. ಇಬ್ಬರನ್ನೂ ಬೆಳೆಸಿದರು. ಆ ನಂತರ ನಿಜಲಿಂಗಪ್ಪ ಅವರನ್ನು ಬಿಟ್ಟು ಬಂದರೆ ಮುಖ್ಯಮಂತ್ರಿ ಮಾಡುವುದಾಗಿ ಇಂದಿರಾಗಾಂಧಿ ಅವರು ಹೆಗಡೆಯವರನ್ನು ಆಹ್ವಾನಿಸಿದ್ದರು. ಆದರೆ, ಹೆಗಡೆ ಹೋಗಲಿಲ್ಲ. ನಿಜಲಿಂಗಪ್ಪ ಅವರ ಜೊತೆಗೆ ಕೊನೆಯವರೆಗೂ ಉಳಿದವರು ಹೆಗಡೆ ಒಬ್ಬರೇ. ಈಗ ಬೆಳೆಸುವವರೂ ಇಲ್ಲ. ಈ ರೀತಿ ನಿಷ್ಠೆ ತೋರುವವರೂ ಇಲ್ಲ ಎಂದು ಹೇಳಿದರು.

ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೈಪ್ರಕಾಶ್ ಬಂಧು ಅಧ್ಯಕ್ಷತೆ ವಹಿಸಿದ್ದರು.

ಭರತನಾಟ್ಯ ಕಲಾವಿದ ಪ್ರತಿಭಾ ಪ್ರಹ್ಲಾದ್, ವಿಧಾನ ಪರಿಷತ್ತಿನ ಮಾಜಿ ಸದಸ್ಯ ಎಂ.ಪಿ. ನಾಡಗೌಡ, ಕನ್ನಡಪ್ರಭ ಪ್ರಧಾನ ಸಂಪಾದಕ ರವಿ ಹೆಗಡೆ, ಜನತಾಪಕ್ಷದ ರಾಷ್ಟ್ರೀಯ ಮಹಿಳಾ ಅಧ್ಯಕ್ಷೆ ವಾಣಿ ಎಸ್. ಶೆಟ್ಟಿ, ಸ್ವಾಮಿ ವಿವೇಕಾನಂದ ಪೀಠಾಧ್ಯಕ್ಷ ಮಹಾಂತೇಶ ಸಿದ್ಧ ಗುರೂಜಿ, ಜನತಾ ಪಕ್ಷದ ರಾಜ್ಯ ನಾಯಕರಾದ ರಾಜ್ ಎ., ಮಾದೇಗೌಡ, ಸಂಘಟಕ ನಾಗೇಶ್ ಉಪಸ್ಥಿತರಿದ್ದರು. ವಿವಿಧ ರಂಗಗಳ ಸಾಧಕರಿಗೆ ಮೌಲ್ಯಾಧಾರಿತ 'ಕಾಯಕಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು.


ಜನತಾ ಪಕ್ಷ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ರಾಮಕೃಷ್ಣ ಹೆಗಡೆ ಜನ್ಮದಿನಾಚರಣೆ, ಚಿಂತನ ಮಂಥನ ಸಭೆಯಲ್ಲಿ ಪುಷ್ಪಾರ್ಚನೆ ಮಾಡಲಾಯಿತು. ಕೋಡಿಹಳ್ಳಿ ಚಂದ್ರಶೇಖರ್, ಪಿ.ಜಿ.ಆರ್. ಸಿಂಧ್ಯ,ಜೈ. ಪ್ರಕಾಶ್ ಬಂಧು, ಪ್ರತಿಭಾ ಪ್ರಹ್ಲಾದ್, ಎಂ.ಪಿ. ನಾಡಗೌಡ,ಪಿ.ಜಿ.ಆರ್. ಸಿಂಧ್ಯ,ರವಿ ಹೆಗಡೆ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಕಾವೇರಿ ವಿವಾದ ಇತ್ಯರ್ಥವಾಗುತ್ತಿತ್ತು!

ತಮಿಳುನಾಡು ಮತ್ತು ಕರ್ನಾಟಕದ ಮಧ್ಯೆ ಕಾವೇರಿ ನೀರು ಹಂಚಿಕೆ ವಿವಾದ ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿ ಇತ್ಯರ್ಥವಾಗುವ ಹಂತಕ್ಕೆ ಬಂದಿತ್ತು ಎಂದು ಪಿ.ಜಿ.ಆರ್. ಸಿಂಧ್ಯ ತಿಳಿಸಿದರು.

ತಮಿಳುನಾಡಿನಲ್ಲಿ ಎಂ.ಜಿ.ರಾಮಚಂದ್ರನ್ ಮುಖ್ಯಮಂತ್ರಿಯಾಗಿದ್ದರು. ಕರ್ನಾಟಕದಲ್ಲಿ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆಯವರು ಎಂ.ಜಿ.ಆರ್ ಅವರನ್ನು ಕಾವೇರಿ ನೀರಿನ ಸಮಸ್ಯೆ ಬಗ್ಗೆ ಚರ್ಚಿಸಲು ಕರೆದಿದ್ದರು. ಆ ಸಭೆಯಲ್ಲಿ ಎಚ್.ಡಿ. ದೇವೇಗೌಡ, ಎಸ್.ಆರ್. ಬೊಮ್ಮಾಯಿ ಸಹಿತ ಅನೇಕರಿದ್ದರು. 180 ಟಿಎಂಸಿ ಅಡಿ ನೀರು ಬಿಡುವುದಿದ್ದರೆ ಒಪ್ಪಂದಕ್ಕೆ ಸಹಿ ಹಾಕಲು ತಯಾರು ಎಂದು ಎಂ.ಜಿ.ಆರ್. ತಿಳಿಸಿದ್ದರು. ಹೆಗಡೆಯವರೂ ಒಪ್ಪಿದ್ದರು. ಆದರೆ, ನಮ್ಮಲ್ಲಿ ಕೆಲವರು ವಿರೋಧಿಸಿದ್ದರಿಂದ ಆಗ ಒಪ್ಪಂದವಾಗಲಿಲ್ಲ ಎಂದು ನೆನಪು ಮಾಡಿಕೊಂಡರು.

ಸಮಸ್ಯೆ ಇತ್ಯರ್ಥವಾಗಬೇಕು ಎಂದು ಬಯಸಿದ್ದ ಎಂಜಿಆರ್ ಆ ಮೇಲೆ ಹೆಚ್ಚು ಸಮಯ ಬದುಕಲಿಲ್ಲ. ಆ ನಂತರ ಬಂದ ರಾಜಕಾರಣಿಗಳಿಗೆ ವಿವಾದ ಮುಕ್ತಾಯವಾಗುವುದು ಇಷ್ಟವಾಗದೇ ಜೀವಂತವಾಗಿಡುತ್ತಾ ಬಂದರು. ನ್ಯಾಯಾಧೀಕರಣದ ಆದೇಶದಂತೆ 195 ಟಿಎಂಸಿ ಅಡಿ ನೀರು ಬಿಡಬೇಕಾಗಿ ಬಂತು ಎಂದರು.

ನಗರದ ಪ್ರಮುಖ ಸ್ಥಳಕ್ಕೆ ಹೆಗಡೆ ಹೆಸರು: ಡಿಕೆಶಿ ಭರವಸೆ

ಬೆಂಗಳೂರು: 'ನಗರದ ಪ್ರಮುಖ ಸ್ಥಳಕ್ಕೆ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರ ಹೆಸರನ್ನು ಇಡಲಾಗುವುದು' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭರವಸೆ ನೀಡಿದರು.

ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಶುಕ್ರವಾರ ನಡೆದ ಮಾಜಿ ಮುಖ್ಯಮಂತ್ರಿ ದಿವಂಗತ ರಾಮಕೃಷ್ಣ ಹೆಗಡೆ ಅವರ 99ನೇ ಜನ್ಮದಿನ ಕಾರ್ಯಕ್ರಮದಲ್ಲಿ ಶಿವಕುಮಾರ್ ಅವರು ಮಾತನಾಡಿದರು.

'ರಾಮಕೃಷ್ಣ ಹೆಗಡೆ ಅವರ ಹೆಸರು ಶಾಶ್ವತವಾಗಿ ಉಳಿಯಬೇಕು. ಹೀಗಾಗಿ ಎಲ್ಲರೊಂದಿಗೆ ಜೊತೆ ಚರ್ಚೆ ಮಾಡಿ, ನಗರದ ಪ್ರಮುಖ ಸ್ಥಳಕ್ಕೆ ಅವರ ಹೆಸರು ಇಡಲಾಗುವುದು. ಇದಕ್ಕೆ ನಾನು ಬದ್ಧ' ಎಂದರು.

'ಹೆಗಡೆ ಅವರು ಕನಕಪುರದಿಂದ ಸ್ಪರ್ಧೆ ಮಾಡಿದ್ದರು. ಅವರನ್ನು ಸೋಲಿಸಲು ನಾನು ವಿದ್ಯಾರ್ಥಿ ನಾಯಕನಾಗಿ ಹೋರಾಟ ಮಾಡಿದೆ. ನನ್ನ ಹೋರಾಟ ಗಮನಿಸಿ 1985ರಲ್ಲಿ ಪಕ್ಷ ನನಗೆ ಟಿಕೆಟ್ ನೀಡಿತು. ಅವರು ಮುಖ್ಯಮಂತ್ರಿ ಆಗಿದ್ದಾಗ ನಡೆದ ಲೋಕಸಭೆ ಚುನಾವಣೆಯಲ್ಲಿ ಅವರ ಪಕ್ಷಕ್ಕೆ ಹಿನ್ನಡೆಯಾದಾಗ, ನನ್ನ ನಾಯಕತ್ವಕ್ಕೆ ಬೆಂಬಲ ಸಿಗಲಿಲ್ಲ ಎಂದು ಮತ್ತೆ ಚುನಾವಣೆಗೆ ಹೋದರು' ಎಂದು ಮೆಲುಕು ಹಾಕಿದರು.

'ಹೆಗಡೆ ಅವರು ಬಿಟ್ಟುಹೋದ ಆದರ್ಶ, ಸಾಕ್ಷಿಗುಡ್ಡೆಗಳು ಇನ್ನೂ ಜೀವಂತವಾಗಿವೆ. ಅವರು ದೂರದೃಷ್ಟಿಯುಳ್ಳ ನಾಯಕ. ನೂರಾರು ನಾಯಕರನ್ನು ಬೆಳೆಸಿದ್ದಾರೆ. ಕೆಲವರು ಅವರ ಪ್ರಾಮಾಣಿಕತೆಗೆ ನಿಯತ್ತು ತೋರಿದರು. ಮತ್ತೆ ಕೆಲವರು ಹತ್ತಿದ ಏಣಿಯನ್ನು ಒದೆಯುವಂತೆ ಬಿಸಾಕಿದರು. ರಾಮಕೃಷ್ಣ ಹೆಗಡೆ ಅವರನ್ನು ಉಚ್ಚಾಟನೆ ಮಾಡಿದ ದಿನ ನನಗೆ ಚೆನ್ನಾಗಿ ನೆನಪಿದೆ. ನಾನು ವಿಧಾನಸಭೆಗೆ ಹೋಗುತ್ತಿರುವಾಗ ದೇಶಪಾಂಡೆ ಅವರು ಗಾಬರಿಯಿಂದ ಕೆಳಗೆ ಇಳಿದು ಬರುತ್ತಿದ್ದರು. ನಾನು ಯಾಕೆ ಎಂದು ಕೇಳಿದೆ. ಆ ಸಂದರ್ಭದಲ್ಲಿ ಕೇವಲ ದೇಶಪಾಂಡೆ ಮಾತ್ರ ಧ್ವನಿ ಎತ್ತಿದ್ದರು, ಉಳಿದವರು ಅಧಿಕಾರದ ಆಸೆಯಿಂದ ಮೌನಕ್ಕೆ ಶರಣಾಗಿದ್ದರು' ಎಂದರು.

ಬೆಂಗಳೂರು ವಿ.ವಿಯಲ್ಲಿ 'ಶ್ರೀರಾಮ'ನ ವಿವಾದ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ವಿಚಾರಸಂಕಿರಣಕ್ಕೆ ಪ್ರಬಂಧಗಳ ಆಹ್ವಾನ
- ವಿರೋಧ ವ್ಯಕ್ತವಾದ ಬೆನ್ನಲ್ಲೇ ವೆಬ್‌ಸೈಟ್‌ನಲ್ಲಿ ಇದ್ದ ಸುತ್ತೋಲೆ ತೆಗೆಯಲಾಯಿತು

ಬೆಂಗಳೂರು: ಶ್ರೀರಾಮ ಅವರ ಬಗ್ಗೆ ಹಮ್ಮಿಕೊಂಡಿರುವ ವಿಚಾರಸಂಕಿರಣಕ್ಕೆ ಪ್ರಬಂಧಗಳನ್ನು ಸಲ್ಲಿಸುವಂತೆ ಬೆಂಗಳೂರು ವಿಶ್ವವಿದ್ಯಾಲಯ ಹೊರಡಿಸಿರುವ ಸುತ್ತೋಲೆ ವಿವಾದಕ್ಕೆ ಎಡೆಮಾಡಿಕೊಟ್ಟಿದ್ದು, ವಿಶ್ವವಿದ್ಯಾಲಯದ ಹಲವು ಬೋಧಕರು, ವಿದ್ಯಾರ್ಥಿಗಳು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಧಾರವಾಡದ ಕರ್ನಾಟಕ ಐತಿಹಾಸಿಕ ಸಂಶೋಧನಾ ಸೊಸೈಟಿ (ಕೆಎಚ್‌ಆರ್‌ಎಸ್) ಧಾರವಾಡದ ಬಹುಶಿಸ್ತೀಯ ಅಭಿವೃದ್ಧಿ ಸಂಶೋಧನಾ ಕೇಂದ್ರದ ಸಹಯೋಗದೊಂದಿಗೆ 'ಸಮಕಾಲೀನ ಜೀವನ ಅಧ್ಯಯನಗಳು ಮತ್ತು ಆಧುನಿಕ ಸಮಾಜಕ್ಕಾಗಿ ಶ್ರೀರಾಮನ ಜೀವನದ ಪಾಠಗಳು' ಬಗ್ಗೆ ರಾಷ್ಟ್ರೀಯ ವಿಚಾರಸಂಕಿರಣವನ್ನು ಸೆಪ್ಟೆಂಬರ್ 10 ಮತ್ತು 11ರಂದು ಧಾರವಾಡದಲ್ಲಿ ಆಯೋಜಿಸಲಾಗಿದೆ.

ಈ ಬಗ್ಗೆ ಆಗಸ್ಟ್ 6ರಂದು ಸುತ್ತೋಲೆ ಹೊರಡಿಸಿರುವ ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವರು, ವಿಚಾರಸಂಕಿರಣದಲ್ಲಿ ಭಾಗವಹಿಸಿ ಪ್ರಬಂಧಗಳನ್ನು ಮಂಡಿಸುವಂತೆ ವಿಶ್ವವಿದ್ಯಾಲಯದ ಎಲ್ಲ ವಿಭಾಗಗಳಿಗೆ ಸೂಚಿಸಿದ್ದಾರೆ. ಸುತ್ತೋಲೆಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿತ್ತು. ಇದಕ್ಕೆ ವಿರೋಧ ವ್ಯಕ್ತವಾಗುತ್ತಿದ್ದಂತೆಯೇ ವೆಬ್‌ಸೈಟ್‌ನಿಂದ ಸುತ್ತೋಲೆಯನ್ನು ಶುಕ್ರವಾರ ತೆಗೆಯಲಾಗಿದೆ.

ಈ ಕಾರ್ಯಕ್ರಮದ ಪ್ರಚಾರಕ್ಕಾಗಿ ಬೆಂಗಳೂರು ವಿಶ್ವವಿದ್ಯಾಲಯವನ್ನು ಬಳಸಿಕೊಂಡಿರುವುದಕ್ಕೆ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಶೈಕ್ಷಣಿಕ ಕ್ಷೇತ್ರದ ಹಲವರು ವಿರೋಧ ವ್ಯಕ್ತಪಡಿಸಿದ್ದಾರೆ.

'ಇದು ಕಳವಳಕಾರಿ ಬೆಳವಣಿಗೆ. ಇದರಿಂದ ವಿಶ್ವವಿದ್ಯಾಲಯದ ಜಾತ್ಯತೀತ ಸ್ವರೂಪಕ್ಕೆ ಧಕ್ಕೆಯಾಗಲಿದೆ. ಸಂವಿಧಾನದ ಸ್ಪಷ್ಟ ಉಲ್ಲಂಘನೆಯಾಗಿದೆ' ಎಂದು ಪ್ರಾಧ್ಯಾಪಕರೊಬ್ಬರು ತಿಳಿಸಿದರು.

'ವಿಶ್ವವಿದ್ಯಾಲಯದ ಜಾತ್ಯತೀತ ತತ್ವವನ್ನೇ ಪ್ರಶ್ನಿಸುವ ಇಂಥ ಸಮ್ಮೇಳನವನ್ನು ಯಾಕೆ ಪ್ರೋತ್ಸಾಹಿಸಬೇಕು' ಎಂದು ಬೆಂಗಳೂರು ವಿಶ್ವವಿದ್ಯಾಲಯದ ಎಸ್.ಸಿ, ಎಸ್.ಟಿ ಬೋಧಕರ ಸಂಘದ ಅಧ್ಯಕ್ಷ ಜಿ.ಕೃಷ್ಣಮೂರ್ತಿ ಪ್ರಶ್ನಿಸಿದ್ದಾರೆ.

ಈ ಸುತ್ತೋಲೆಯನ್ನು ವಾಪಸ್ ಪಡೆಯಲು ಕುಲಪತಿಯವರಿಗೆ ಮನವಿ ಮಾಡಲಾಗುವುದು. ಅವರು ಸುತ್ತೋಲೆ ವಾಪಸ್ ಪಡೆಯದೇ ಇದ್ದರೆ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಂ.ಎಸ್. ಜಯಕರ ಮತ್ತು ಕುಲಸಚಿವರ ಪ್ರತಿಕ್ರಿಯೆಗಾಗಿ ಪ್ರಯತ್ನಿಸಲಾಯಿತು. ಆದರೆ, ಅವರು ಮೊಬೈಲ್ ಕರೆಯನ್ನು ಸ್ವೀಕರಿಸಲಿಲ್ಲ.

ಬಿಎಂಸಿಆರ್‌ಐಗೆ ಡಾ.ಕಾವ್ಯ ನಿರ್ದೇಶಕಿ

ಪ್ರಜಾವಾಣಿ ವಾರ್ತೆ


ಡಾ.ಕಾವ್ಯ ಎಸ್‌.ಟಿ

ಬೆಂಗಳೂರು: ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ (ಬಿಎಂಸಿಆರ್‌ಐ) ವೈದ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಡಾ.ಕಾವ್ಯ ಎಸ್‌.ಟಿ. ಅವರಿಗೆ, ಬಿಎಂಸಿಆರ್‌ಐ ನಿರ್ದೇಶಕಿ ಮತ್ತು ಡೀನ್ ಹುದ್ದೆಯ ಹೆಚ್ಚುವರಿ ಹೊಣೆ ನೀಡಿ ವೈದ್ಯಕೀಯ ಶಿಕ್ಷಣ ಇಲಾಖೆ ಆದೇಶಿಸಿದೆ.

ಈ ಹುದ್ದೆಯ ಹೆಚ್ಚುವರಿ ಹೊಣೆಯಿಂದ ಡಾ.ರಾಮಕೃಷ್ಣ ಕೆ. ಅವರನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ.

ಚಿಟಿಕೆ ಸುದ್ದಿ

ತಿರು ಓಣಂ: 90 ವಿಶೇಷ ಬಸ್ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳದಲ್ಲಿ ಸೆಪ್ಟೆಂಬರ್ 5ರಂದು ತಿರು ಓಣಂ ಹಬ್ಬದ ಆಚರಣೆ ಇರುವ ಪ್ರಯುಕ್ತ ಬೆಂಗಳೂರಿನಿಂದ ಕೇರಳದ ವಿವಿಧ ಪ್ರದೇಶಗಳಿಗೆ ಕೆಎಸ್‌ಆರ್‌ಟಿಸಿಯ 90 ವಿಶೇಷ ಬಸ್‌ಗಳು ಸೆ.2ರಿಂದ ಸಂಚರಿಸಲಿವೆ.

ಸೆಪ್ಟೆಂಬರ್ 2ರಿಂದ 4ರವರೆಗೆ ಬೆಂಗಳೂರಿನಿಂದ ಕೇರಳಕ್ಕೆ ಹಾಗೂ ಸೆ. 7ರಂದು ಕೇರಳದಿಂದ ಬೆಂಗಳೂರಿಗೆ ಈ ವಿಶೇಷ ಬಸ್‌ಗಳ ವ್ಯವಸ್ಥೆ ಇರಲಿದೆ.

ಮೈಸೂರು ರಸ್ತೆ ಬಸ್ ನಿಲ್ದಾಣ ಹಾಗೂ ಶಾಂತಿನಗರ ಬಸ್ ನಿಲ್ದಾಣದಿಂದ ಕಣ್ಣೂರು, ಕೋಯಿಕ್ಕೋಡ್, ಎರ್ನಾಕುಲಂ, ಪಾಲಕ್ಕಾಡ್, ತ್ರಿಶೂರ್, ಕೋಟಯಂ, ತಿರುವನಂತಪುರಂ ಮುಂತಾದ ಸ್ಥಳಗಳಿಗೆ ವಿಶೇಷ ಬಸ್‌ಗಳು ಸಂಚರಿಸಲಿವೆ.

ಸಾರ್ವಜನಿಕರಿಗೆ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. www.ksrtc.karnataka.gov.in ವೆಬ್‌ಸೈಟ್ ಮೂಲಕ ಇ-ಟಿಕೆಟ್ ಬುಕಿಂಗ್ ಮಾಡಬಹುದು. ನಾಲ್ಕು ಅಥವಾ ಹೆಚ್ಚು ಪ್ರಯಾಣಿಕರು ಒಟ್ಟಾಗಿ ಮುಂಗಡ ಟಿಕೆಟ್ ಕಾಯ್ದಿರಿಸಿದಲ್ಲಿ ಶೇಕಡ 5ರಷ್ಟು ರಿಯಾಯಿತಿ ದೊರೆಯಲಿದೆ. ಹೋಗುವ ಮತ್ತು ಬರುವ ಪ್ರಯಾಣದ ಟಿಕೆಟ್ ಒಟ್ಟಿಗೆ ಕಾಯ್ದಿರಿಸಿದಾಗ ಬರುವ ಪ್ರಯಾಣ ದರದಲ್ಲಿ ಶೇಕಡ 10 ರಷ್ಟು ರಿಯಾಯಿತಿ ನೀಡಲಾಗುವುದು ಎಂದು ಕೆಎಸ್‌ಆರ್‌ಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕರು ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನ್ಯತಾ 66/11 ಕೆ.ವಿ. ಉಪ ಕೇಂದ್ರದಲ್ಲಿ ತುರ್ತು ನಿರ್ವಹಣೆ ಕೈಗೊಳ್ಳುವ ಕಾರಣ ಇದೇ 30ರಂದು ಬೆಳಿಗ್ಗೆ 9ರಿಂದ ಸಂಜೆ 6 ಗಂಟೆಯವರೆಗೆ ನಗರದ ಕೆಲವೆಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಶೋಭಾ ನಗರ, ಚೊಕ್ಕನಹಳ್ಳಿ, ಡೊಮಿನೊ ಪಿಜ್ಜಾ ಇನ್ ಪ್ಯಾರಡೈಸ್, ನೂರ್ ನಗರ, ಮಾಜಿ ಸೈನಿಕ ಲೇಔಟ್, ಪೊಲೀಸ್ ಕ್ವಾರ್ಟರ್ಸ್, ಆರ್.ಕೆ. ಹೆಗಡೆ ನಗರ, ಶಬರಿ ನಗರ, ಹೊಸ ಶಾಂತಿ ನಗರ, ಕೆಂಪೇಗೌಡ ಲೇಔಟ್, ನಾಗೇನಹಳ್ಳಿ ಗ್ರಾಮ, ರೀಜೆನ್ಸಿ ಪಾರ್ಕ್, ಎಸ್ತರ್ ಹಾರ್ಮೋನಿಕ್ ಲೇಔಟ್, ಬಾಲಾಜಿ ಲೇಔಟ್, ನಾಗೇನಹಳ್ಳಿ ಜಿಮ್, ಸ್ಲಂ ಬೋರ್ಡ್ ಮತ್ತು ಬೆಂಚ್ ರಾಯಲ್‌ವುಡ್, ಅರ್ಕಾವತಿ ಲೇಔಟ್, ಥಣಿಸಂದ್ರ, ಬೆಳ್ಳಹಳ್ಳಿ ಗ್ರಾಮ, ತಿರುಮೇನಹಳ್ಳಿ ಗ್ರಾಮ, ಮಿತ್ತಗಾನಹಳ್ಳಿ, ಕೋಗಿಲು ಗ್ರಾಮ, ಬೆಲಹಳ್ಳಿ, ವಿಧಾನಸೌಧ ಲೇಔಟ್, ಕರ್ನಾಟಕ ಕಾಲೇಜು, ಭಾರತಿ ಸಿಟಿ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಕಾನ್‌ಸ್ಟೆಬಲ್ ಆತ್ಮಹತ್ಯೆ

ಕೋಲಾರ: ತಾಲ್ಲೂಕಿನ ಚಿನ್ನಾಪುರ ಗ್ರಾಮದ ತಮ್ಮ ನಿವಾಸದಲ್ಲಿ ಸಶಸ್ತ್ರ ಮೀಸಲು ಪಡೆಯ (ಡಿಎಆರ್) ಕಾನ್‌ಸ್ಟೆಬಲ್ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಹೇಂದ್ರ ಪ್ರಸಾದ್ ಆತ್ಮಹತ್ಯೆಗೆ ಶರಣಾದವರು. ಜೀವನದಲ್ಲಿ ಜುಗುಪ್ಸೆಗೊಂಡು ಡೆತ್ ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಗೊತ್ತಾಗಿದೆ.

ಚಿಟಿಕೆ ಸುದ್ದಿ

'ತಲ್ಲಣಿಸದಿರು ಮನವೇ' ಚಿಂತನಾ ಕಾರ್ಯಕ್ರಮ

ರಾಜರಾಜೇಶ್ವರಿ ನಗರ: ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ಕೆತೋಹಳ್ಳಿ ಶಾಖಾಮಠದ ವತಿಯಿಂದ 'ತಲ್ಲಣಿಸದಿರು ಮನವೇ' ಎಂಬ ವಿಶಿಷ್ಟ ಸಾಂಸ್ಕೃತಿಕ ಚಿಂತನಾ ಕಾರ್ಯಕ್ರಮವನ್ನು ಆಗಸ್ಟ್ 30ರ ಶನಿವಾರದಂದು ಏರ್ಪಡಿಸಲಾಗಿದೆ ಎಂದು ಕರ್ನಾಟಕ ಗ್ಯಾರಂಟಿ ಅನುಷ್ಠಾನ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ ತಿಳಿಸಿದರು.

'ಸಾಮಾಜಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಚಿಂತನೆಗಳ ವೈಚಾರಿಕ ನೆಲೆಗಟ್ಟಿನ ಚಿಂತಕರ ಚಾವಡಿಯಾಗಿಸುವ ಆಶಯದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಕೈಗಾರಿಕೋದ್ಯಮಿ ಆರ್. ಶಿವಕುಮಾರ್, ಕಾರ್ಯಕ್ರಮ ಸಂಚಾಲಕ ಡಾ.ಬಿ. ಮಂಜಪ್ಪ ಮಾಗೋದಿ, ಮನೋಹರ್, ಉಷಾರಾಣಿ, ರಮೇಶ್ ಬಂಡೆ, ಚಂದ್ರು ಬೊಮ್ಮಯ್ಯ, ರಮೇಶ್ ರಾಮೋಹಳ್ಳಿ ಗ್ರಾಮಪಂಚಾಯಿತಿ ಅಧ್ಯಕ್ಷ ಜಿ.ಮಹೇಶ್, ರಾಜ್ಯ ಕುರುಬರ ಸಂಘದ ನಿರ್ದೇಶಕ ಎಂ.ಸಿ ರಾಜಣ್ಣ, ವೆಂಕಟೇಶ್ ಉಪಸ್ಥಿತರಿದ್ದರು.

'ಒಳ ಮೀಸಲು ಜಾಗೃತಿ: ಬಿಜೆಪಿ ದೂರವಿಡಿ'

ಬೆಂಗಳೂರು: 'ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸಿರುವ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಇದೇ 31ಕ್ಕೆ ನಡೆಯಲಿರುವ ಕಾರ್ಯಕ್ರಮದಿಂದ ಮಾಜಿ ಸಚಿವ ಎ. ನಾರಾಯಣಸ್ವಾಮಿ ಮತ್ತು ಬಿಜೆಪಿ ಸಂಸದ ಗೋವಿಂದ ಕಾರಜೋಳ ಅವರನ್ನು ದೂರ ಇಡಬೇಕು' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಎಚ್.ಪಿ. ಸುಧಾಮ್ ದಾಸ್ ಆಗ್ರಹಿಸಿದ್ದಾರೆ.

'ಈ ಇಬ್ಬರು ನಾಯಕರು ಎಡಗೈ ಸಮುದಾಯಕ್ಕೆ ದ್ರೋಹ ಬಗೆದಿದ್ದಾರೆ. ಅಂಥವರ ಜೊತೆ ವೇದಿಕೆ ಹಂಚಿಕೊಳ್ಳುವುದು ಎಷ್ಟು ಸರಿ' ಎಂದು ಅವರು ಪ್ರಕಟಣೆಯಲ್ಲಿ ಪ್ರಶ್ನಿಸಿದ್ದಾರೆ.

ಪಿಎಚ್‌.ಡಿ ಪ್ರವೇಶಕ್ಕೂ ಸಂದರ್ಶನ

ಬೆಂಗಳೂರು ವಿಶ್ವವಿದ್ಯಾಲಯದಿಂದ ಹೊಸ ಮಾರ್ಗಸೂಚಿ ಪ್ರಕಟ

● ಎ.ಎಂ.ಸುರೇಶ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಈ ವರ್ಷದಿಂದ ಪಿಎಚ್‌.ಡಿಗೆ ಪ್ರವೇಶ ಪಡೆಯಲು ಬಯಸುವವರು ಸಂದರ್ಶನದಲ್ಲಿ ಶೇ 30ರಷ್ಟು ಅಂಕಗಳು ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ.

ಪಿಎಚ್‌.ಡಿ ಪ್ರವೇಶಕ್ಕೆ ಪರಿಷ್ಕೃತ ನಿಯಮಗಳನ್ನು ವಿಶ್ವವಿದ್ಯಾಲಯ ಪ್ರಕಟಿಸಿದೆ. ಸ್ನಾತಕೋತ್ತರ ಪದವಿ ಮತ್ತು ಪ್ರವೇಶ ಪರೀಕ್ಷೆಯಲ್ಲಿ ಪಡೆದಿರುವ ಶೇ 70ರಷ್ಟು ಹಾಗೂ ಸಂದರ್ಶನದಲ್ಲಿ ಪಡೆದಿರುವ ಶೇ 30ರಷ್ಟು ಅಂಕಗಳನ್ನು ಆಧರಿಸಿ ಪ್ರವೇಶ ನೀಡಲಾಗುತ್ತದೆ.

'ಈ ಸಂಬಂಧ ವಿಶ್ವವಿದ್ಯಾಲಯ ರೂಪಿಸಿರುವ ನಿಯಮಾವಳಿಗೆ ಕುಲಾಧಿಪತಿಯೂ ಆದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಒಪ್ಪಿಗೆ ನೀಡಿದ್ದಾರೆ. ಆ ಪ್ರಕಾರ ಪಿಎಚ್‌.ಡಿ ಪ್ರವೇಶಕ್ಕೆ ಸಂದರ್ಶನ ಕಡ್ಡಾಯಗೊಳಿಸಲಾಗಿದೆ' ಎಂದು ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಪ್ರೊ.ಚಂದ್ರಕಾಂತ್ ಕರಿಗಾರ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಲಭ್ಯ ಸೀಟುಗಳಲ್ಲಿ ಶೇ 50ರಷ್ಟು ಸೀಟುಗಳನ್ನು ಪ್ರವೇಶ ಪರೀಕ್ಷೆ ಮೂಲಕ ತುಂಬಲಾಗುತ್ತದೆ. ಇನ್ನುಳಿದ ಶೇ 50ರಷ್ಟು ಸೀಟುಗಳನ್ನು ವಿವಿಧ ಫೆಲೋಶಿಪ್ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ (ಉದಾಹರಣೆಗೆ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ (ಸಿಎಸ್‌ಐಆರ್), ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿ (ಐಸಿಸಿಆರ್), ಯುಜಿಸಿ ಫೆಲೋಶಿಪ್) ಮೀಸಲಿಡಲಾಗಿದೆ. ಇವರು ಪ್ರವೇಶ ಪರೀಕ್ಷೆ ಬರೆಯುವ ಅಗತ್ಯವಿಲ್ಲ. ನೇರವಾಗಿ ಪಿಎಚ್‌.ಡಿಗೆ ಪ್ರವೇಶ ಪಡೆಯಬಹುದು ಎಂದು ಅವರು ವಿವರಿಸಿದರು.

ಅಧಿಸೂಚನೆಗೆ ಕಾಯಲೇಬೇಕು: ಪ್ರವೇಶ ಪರೀಕ್ಷೆ ವ್ಯಾಪ್ತಿಗೆ ಬಾರದವರು ಪಿಎಚ್‌.ಡಿಗೆ ಪ್ರವೇಶ ಪಡೆಯಲು ಯಾವುದೇ ಸಂದರ್ಭದಲ್ಲಿ ಬೇಕಾದರೂ ಅರ್ಜಿ ಹಾಕಬಹುದು. ಸೀಟುಗಳು ಲಭ್ಯವಿದ್ದರೆ ನೇರವಾಗಿ ಪ್ರವೇಶ ನೀಡಲಾಗುತ್ತದೆ. ಮೊದಲಿನ ಹಾಗೆ ವಿ.ವಿ. ಅಧಿಸೂಚನೆ ಹೊರಡಿಸುವವರೆಗೂ ಇವರು ಕಾಯಬೇಕಾಗಿಲ್ಲ. ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರ ನೇತೃತ್ವದ ಸಮಿತಿ ದಾಖಲೆಗಳನ್ನು ಪರಿಶೀಲಿಸಿ ಪ್ರವೇಶಕ್ಕೆ ಒಪ್ಪಿಗೆ ನೀಡಲಿದೆ.

ಮುಂಚೆ ಹೇಗಿತ್ತು?: ಸ್ನಾತಕೋತ್ತರ ಪದವಿಯಲ್ಲಿ ಗಳಿಸಿರುವ ಶೇ 50ರಷ್ಟು ಹಾಗೂ ಪ್ರವೇಶ ಪರೀಕ್ಷೆಯಲ್ಲಿ ಗಳಿಸಿರುವ ಶೇ 50ರಷ್ಟು ಅಂಕಗಳನ್ನು ಆಧರಿಸಿ ಇದುವರೆಗೆ ಪಿಎಚ್‌.ಡಿಗೆ ಪ್ರವೇಶ ನೀಡಲಾಗುತ್ತಿತ್ತು. ಆದರೆ, ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಪಿಎಚ್‌.ಡಿ ಪ್ರವೇಶ ಸಂಬಂಧ ಹೊಸ ಮಾರ್ಗಸೂಚಿ ರೂಪಿಸಿದ್ದು, ಅದನ್ನು ವಿಶ್ವವಿದ್ಯಾಲಯವು ಅಳವಡಿಸಿಕೊಂಡಿದೆ.

ವಿನಾಯಿತಿ: ಸ್ನಾತಕೋತ್ತರ ಪದವಿಯಲ್ಲಿ ಶೇ 55ರಷ್ಟು ಅಂಕಗಳನ್ನು ಪಡೆದಿರುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಪಿಎಚ್‌.ಡಿಗೆ ಅರ್ಜಿ ಸಲ್ಲಿಸಬಹುದು. ಇತರೆ ಹಿಂದುಳಿದ ವರ್ಗದವರು, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ವಿನಾಯಿತಿ ಇದ್ದು, ಶೇ 50ರಷ್ಟು ಅಂಕಗಳನ್ನು ಪಡೆದಿದ್ದರೂ ಅರ್ಹರಾಗುತ್ತಾರೆ. ಒಟ್ಟಾರೆ ಸ್ನಾತಕೋತ್ತರ ಪದವಿ ಮತ್ತು ಪಿಎಚ್‌.ಡಿ ಪ್ರವೇಶ ಪರೀಕ್ಷೆಯಲ್ಲಿನ ಶೇ 70ರಷ್ಟು ಅಂಕ ಪರಿಗಣಿಸಲಾಗುತ್ತದೆ ಎಂದು ಅವರು ವಿವರಿಸಿದರು.

ಮುಖ್ಯಾಂಶಗಳು

- ಯುಜಿಸಿ ನಿರ್ದೇಶನದಂತೆ ಹೊಸ ನಿಯಮಾವಳಿ
- 2025–26ನೇ ಸಾಲಿನಿಂದಲೇ ಜಾರಿ
- ಪಿಎಚ್‌.ಡಿ ಪ್ರವೇಶಕ್ಕೆ ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಅಧಿಸೂಚನೆ
- 48 ವಿಷಯಗಳಲ್ಲಿ 250 ಸೀಟುಗಳು ಲಭ್ಯ

> ವಿವಿಧ ಫೆಲೋಶಿಪ್ ಪಡೆಯುತ್ತಿರುವ ವಿದೇಶಿ ವಿದ್ಯಾರ್ಥಿಗಳಿಗೂ ಇದರಿಂದ ಅನುಕೂಲವಾಗಲಿದೆ. ಸ್ಥಳೀಯರಿಗೆ ₹25 ಸಾವಿರ ಶುಲ್ಕವಿದ್ದರೆ, ಹೊರಗಿನವರಿಗೆ ನಾಲ್ಕು ಪಟ್ಟು ಅಧಿಕವಿರಲಿದೆ
>
> **ಪ್ರೊ.ಚಂದ್ರಕಾಂತ್ ಕರಿಗಾರ್** ಕುಲಸಚಿವ (ಮೌಲ್ಯಮಾಪನ), ಬೆಂ. ವಿ.ವಿ

'ನಿವೃತ್ತಿಗೆ 3 ವರ್ಷ ಇದ್ದವರಿಗೆ ಅವಕಾಶ ಇಲ್ಲ'

'ನಿವೃತ್ತಿಗೆ ಮೂರು ವರ್ಷ ಇರುವ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಹಾಗೂ ಸಹಾಯಕ ಪ್ರಾಧ್ಯಾಪಕರಿಗೆ ಪಿಎಚ್‌.ಡಿ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಲು ಅವಕಾಶ ಇಲ್ಲ. ಕೆಲವು ವಿದ್ಯಾರ್ಥಿಗಳು ಪಿಎಚ್‌.ಡಿ ಪೂರ್ಣಗೊಳಿಸಲು 5–6 ವರ್ಷ ತೆಗೆದುಕೊಳ್ಳುತ್ತಾರೆ. ಮಾರ್ಗದರ್ಶಕರು ಮಧ್ಯದಲ್ಲೇ ನಿವೃತ್ತಿಯಾದರೆ ತೊಂದರೆಯಾಗುತ್ತದೆ ಎಂಬ ಕಾರಣಕ್ಕೆ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ' ಎಂದು ಕರಿಗಾರ್ ತಿಳಿಸಿದರು.

ತೆಂಗು ಉತ್ಕೃಷ್ಟತಾ ಕೇಂದ್ರಕ್ಕೆ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೆಂಗು ಸಂಶೋಧನೆ, ಕೀಟ ನಿವಾರಣೆ ಮತ್ತು ಮೌಲ್ಯವರ್ಧನೆಗಾಗಿ ತುಮಕೂರಿನಲ್ಲಿ ಉತ್ಕೃಷ್ಟತಾ ಕೇಂದ್ರ ಆರಂಭಿಸುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತದೆ ಎಂದು ಕೇಂದ್ರ ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

ತೆಂಗು ಬೆಳೆಯಲ್ಲಿ ಕೀಟ ಮತ್ತು ರೋಗ ಸಮಸ್ಯೆಗಳ ಕುರಿತು ತೆಂಗು ಅಭಿವೃದ್ಧಿ ಮಂಡಳಿ, ತೋಟಗಾರಿಕಾ ಇಲಾಖೆ, ಕೃಷಿ ವಿಜ್ಞಾನ ಕೇಂದ್ರ, ತೋಟಗಾರಿಕಾ ವಿಶ್ವವಿದ್ಯಾಲಯಗಳ ಅಧಿಕಾರಿಗಳ ಜತೆ ಅವರು ಶುಕ್ರವಾರ ಸಭೆ ನಡೆಸಿದರು.

ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್.ಮಂಜುನಾಥ್, ಹಾಸನ ಸಂಸದ ಶ್ರೇಯಸ್ ಪಟೇಲ್ ಮತ್ತು ತಿಪಟೂರು ಶಾಸಕ ಷಡಕ್ಷರಿ ಅವರು ಸಭೆಯಲ್ಲಿ ಭಾಗಿಯಾಗಿದ್ದರು.

'ಕೀಟ ಮತ್ತು ರೋಗ ಸಮಸ್ಯೆಗಳನ್ನು ತಡೆಗಟ್ಟುವ ಬಗ್ಗೆ, ಈ ಸಂಬಂಧ ಗ್ರಾಮ ಮಟ್ಟದಲ್ಲಿ ಸಭೆ ನಡೆಸುವ ಬಗ್ಗೆ ಚರ್ಚಿಸಲಾಯಿತು. ಈ ವೇಳೆ ತುಮಕೂರಿನಲ್ಲಿ ಉತ್ಕೃಷ್ಟತಾ ಕೇಂದ್ರ ಆರಂಭಿಸಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ಈ ಬಗ್ಗೆ ಅಧಿಕಾರಿಗಳ ಜತೆ ಚರ್ಚಿಸಿದ ಅವರು, ಪರಿಶೀಲನೆ ನಡೆಸುತ್ತೇನೆ' ಎಂದು ತಿಳಿಸಿದರು.



ಬೆಂಗಳೂರು ವಕೀಲರ ಸಂಘ ಮತ್ತು ರವಿವರ್ಮ ಕುಮಾರ್ ಅಸೋಸಿಯೇಟ್ಸ್ ಜಂಟಿಯಾಗಿ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ವಕೀಲ ಪ್ರೊ.ರವಿವರ್ಮ ಕುಮಾರ್ ಮತ್ತು ಶಾರದಾ ಬಾಯಿ ದಂಪತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸನ್ಮಾನಿಸಿದರು. ಮುಖ್ಯಮಂತ್ರಿ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ನ್ಯಾಯಮೂರ್ತಿ ಎಚ್.ಟಿ.ನರೇಂದ್ರ ಪ್ರಸಾದ್, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಮತ್ತು ನ್ಯಾಯಮೂರ್ತಿ ಅನು ಶಿವರಾಮನ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಚಿತ್ರಾವಳಿ



ನಗರದ ಮತ್ತಿಕೆರೆ ಎಚ್‌ಎಂಟಿ ಲೇಔಟ್‌ನ ಲಲಿತಕಲಾ ಅಕಾಡೆಮಿಯಲ್ಲಿ ಲೋಕ್ ಶಕ್ತಿ ಪಾರ್ಟಿ ಶುಕ್ರವಾರ ಆಯೋಜಿಸಿದ ರಾಮಕೃಷ್ಣ ಹೆಗಡೆ ಅವರ ಜನ್ಮ ದಿನಾಚರಣೆ ಪ್ರಯುಕ್ತ ಲೋಕ್ ಶಕ್ತಿ ಪಾರ್ಟಿ ರಾಷ್ಟ್ರೀಯ ಅಧ್ಯಕ್ಷ ಮಾಜಿ ಸಂಸದ ದೇವೇಂದ್ರ ಸಿಂಗ್ ಆರ್ಯ ಬಘೇಲ್, ಮಾಜಿ ಸಂಸದೆ ಸಾರಿಕಾ ಸಿಂಗ್ ಆರ್ಯ ಬಘೇಲ್, ಲೋಕ್ ಶಕ್ತಿ ಪಾರ್ಟಿ ರಾಜ್ಯಾಧ್ಯಕ್ಷ ಚಂದ್ರಶೇಖರ ವಿ. ಸ್ಥಾವರಮಠ್ ಇತರರು ರಾಮಕೃಷ್ಣ ಹೆಗಡೆ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ



ಶಿವಾಜಿ ನಗರದ ಸೇಂಟ್ ಮೇರಿಸ್ ಬೆಸಿಲಿಕಾ ಚರ್ಚ್‌ನ ಸೇಂಟ್ ಮೇರಿಸ್ ವಾರ್ಷಿಕ ಹಬ್ಬ ಮತ್ತು ಉತ್ಸವದ ಧಾರ್ಮಿಕ ಕಾರ್ಯಗಳು ಶುಕ್ರವಾರ ಆರಂಭಗೊಂಡ ಹಿನ್ನೆಲೆಯಲ್ಲಿ ಸೇರಿದ್ದ ಭಕ್ತ ಸಮೂಹ ಪ್ರಜಾವಾಣಿ ಚಿತ್ರ

ಗ್ರಾಹಕರು ಪೂರ್ಣ ಹಣ ಪಾವತಿಸಿದರೆ ಐದು ದಿನಗಳಲ್ಲಿ ನೋಂದಣಿ

ಕಣಿಮಿಣಿಕೆ: ಇಂದು ಬಿಡಿಎ ಫ್ಲ್ಯಾಟ್ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಆಗಸ್ಟ್ 30ರಂದು ಕಣಿಮಿಣಿಕೆ ವಸತಿ ಸಮುಚ್ಚಯದಲ್ಲಿ ಫ್ಲ್ಯಾಟ್ ಮೇಳವನ್ನು ಆಯೋಜಿಸಿದೆ. ಗ್ರಾಹಕರು ಪೂರ್ಣ ಹಣ ಪಾವತಿಸಿದರೆ ಐದು ದಿನಗಳಲ್ಲಿ ನೋಂದಣಿ ಮಾಡಲಾಗುವುದು ಎಂದು ಬಿಡಿಎ ಹೇಳಿದೆ.

ನಾನಾ ಬಡಾವಣೆಗಳಲ್ಲಿ ಬಿಡಿಎ ನಿರ್ಮಿಸಿರುವ ಫ್ಲ್ಯಾಟ್‌ಗಳನ್ನು ಮೇಳದಲ್ಲಿ ಮಾರಾಟ ಮಾಡಲಾಗುವುದು. 2,604 ಫ್ಲ್ಯಾಟ್‌ಗಳು ಮತ್ತು 241 ವಿಲ್ಲಾಗಳು ಮಾರಾಟಕ್ಕೆ ಲಭ್ಯವಿದ್ದು, ಸ್ಥಳದಲ್ಲಿಯೇ ಗೃಹ ಸಾಲ ಸೌಲಭ್ಯ ಕೂಡ ಇದೆ.

ಮೈಸೂರಿನ ರಸ್ತೆಯಲ್ಲಿರುವ ಕಣಿಮಿಣಿಕೆ ವಸತಿ ಸಮುಚ್ಚಯದಲ್ಲಿ ಆಗಸ್ಟ್ 30ರಂದು ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ಫ್ಲ್ಯಾಟ್ ಮೇಳ ನಡೆಯಲಿದೆ. ಸಾಮಾನ್ಯವಾಗಿ ಬಿಡಿಎನಲ್ಲಿ ಫ್ಲ್ಯಾಟ್ ಅಥವಾ ವಿಲ್ಲಾ ಖರೀದಿಸಿದರೆ ನೋಂದಣಿಗೆ ಅಲೆದಾಡಬೇಕಾಗಿತ್ತು. ಆದರೆ, ಇದೀಗ ಐದೇ ದಿನಗಳಲ್ಲಿ ನೋಂದಣಿ ಆಗಲಿದೆ. ಬಿಡಿಎ ನಿರ್ಮಿಸಿರುವ ನಾನಾ ವಸತಿ ಸಮುಚ್ಚಯಗಳಲ್ಲಿ 4,468 ಫ್ಲ್ಯಾಟ್‌ಗಳು ಮತ್ತು 322 ವಿಲ್ಲಾಗಳ ಪೈಕಿ 1,864 ಫ್ಲ್ಯಾಟ್ ಮತ್ತು 81 ವಿಲ್ಲಾಗಳು ಮಾರಾಟವಾಗಿವೆ. ಈ ಪೈಕಿ 2,604 ಫ್ಲ್ಯಾಟ್‌ಗಳು, 241 ವಿಲ್ಲಾಗಳು ಖಾಲಿಯಿವೆ.

'ಕಣಿಮಿಣಿಕೆಯಲ್ಲಿ 50 ಎಕರೆ ಪ್ರದೇಶದಲ್ಲಿ ಫೇಸ್ 1ರಿಂದ 5ನೇ ಬ್ಲಾಕ್‌ವರೆಗೆ ಆಧುನಿಕ ತಂತ್ರಜ್ಞಾನದಲ್ಲಿ ನಿರ್ಮಿಸಲಾಗಿದೆ. ಮೊದಲ ಬಾರಿಗೆ ಫ್ಲ್ಯಾಟ್‌ನ ಪೂರ್ಣ ಮೊತ್ತವನ್ನು ಪಾವತಿಸಿ, 16 'ಬಿ' ಫಾರಂ ಸಲ್ಲಿಸಿದಲ್ಲಿ ಐದು ದಿನಗಳಲ್ಲಿ ಫ್ಲ್ಯಾಟ್ ನೋಂದಣಿ ಮಾಡಿಕೊಡಲಾಗುವುದು' ಎಂದು ಬಿಡಿಎ ಆರ್ಥಿಕ ಸದಸ್ಯ ಡಾ.ಎ.ಲೋಕೇಶ್ ಹೇಳಿದ್ದಾರೆ.

ಪ್ರದೇಶ, ಬಿಎಚ್‌ಕೆ (ವಿಸ್ತೀರ್ಣ), ದರ ಹಾಗೂ ಖಾಲಿ ಫ್ಲ್ಯಾಟ್‌ಗಳು

ಕೊಮ್ಮಘಟ್ಟ ಹಂತ 1	3 ಬಿಎಚ್‌ಕೆ	₹65.20 ಲಕ್ಷ	426
ಕೊಮ್ಮಘಟ್ಟ ಹಂತ 2	2 ಬಿಎಚ್‌ಕೆ	₹ 53.85 ಲಕ್ಷ	323
ಕೊಮ್ಮಘಟ್ಟ ಹಂತ 3	2 ಬಿಎಚ್‌ಕೆ	₹48.70 ಲಕ್ಷ	336
ಕಣಿಮಿಣಿಕೆ ಹಂತ 2	2ಬಿಎಚ್‌ಕೆ	₹25 ಲಕ್ಷ	106
ಕಣಿಮಿಣಿಕೆ ಹಂತ 5	3 ಬಿಎಚ್‌ಕೆ	₹ 64 ಲಕ್ಷ	405
ಆಲೂರು ಹಂತ 1	1 ಬಿಎಚ್‌ಕೆ (38.55 ಚ.ಮೀ.)	₹11.20 ಲಕ್ಷ	531
ಗುಂಜೂರು ಹಂತ 1	1 ಬಿಎಚ್‌ಕೆ (42.73 ಚ.ಮೀ.)	₹13.20 ಲಕ್ಷ	163
ಹುಣ್ಣಿಗೆರೆ ವಿಲ್ಲಾ	3 ಬಿಎಚ್‌ಕೆ (117.97, 18.44 ಚ.ಮೀ)	₹ 90 ಲಕ್ಷ	91
–	3 ಬಿಎಚ್‌ಕೆ(161.41 ಚ.ಮೀ.)	₹1.15 ಕೋಟಿ	24
–	4 ಬಿಎಚ್‌ಕೆ (167.73, 171.39 ಚ.ಮೀ.)	₹1.26 ಕೋಟಿ	126
–	1 ಬಿಎಚ್‌ಕೆ (44.27 ಚ.ಮೀ)	₹14 ಲಕ್ಷ	314

ಚೆನ್ನೈ ರೇಸ್

ಗೋಲ್ಡನ್ ಮೆರಿನ ಗೆಲ್ಲುವ ನಿರೀಕ್ಷೆ

ವೆಲ್‌ಕಮ್ ಕಪ್ ಶನಿವಾರದ ಚೆನ್ನೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಗೋಲ್ಡನ್ ಮೆರಿನ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಏವಿಯೊಥಿಕ್ 2, ರಾಯಲ್ ಮಾರ್ಕ್ವೆಸ್ 5, ಕ್ರೌನ್ ಏಂಜೆಲ್ 1
2ನೇ ರೇಸ್: ರಾಂಪಿಂಗ್ ಹೋಮ್ 8, ಗೋಲ್ಡ್ ರೈಡ್ 2, ರಾಯಲ್ ಚಿವಾಲ್ರಿ 7
3ನೇ ರೇಸ್: ರೆಡ್ ಫಾಲ್ಕನ್ 3, ಲಾಕ್ ಲೆಮೆಂಡೊ 1, ಕ್ವೀನ್ ಅನೂಲ 5
4ನೇ ರೇಸ್: ವಿರ್ಲ್‌ವಿಂಡ್ 3, ಗ್ರೆನೊಬಲ್ 4, ಲೆಗಸಿ 8
5ನೇ ರೇಸ್: ಗೋಲ್ಡನ್ ಮೆರಿನ 2, ಆಸ್ಪಿರ 9, ಆಲ್ ಸ್ಟಾರ್ಸ್ 3
6ನೇ ರೇಸ್: ಬ್ರೂಕ್ ಮ್ಯಾಜಿಕ್ 8, ಲಾರಾಡೊ 3, ವಾರ್ ಎಂಬ್ಲಮ್ 4

ಉತ್ತಮ ಬೆಟ್: ರಾಂಪಿಂಗ್ ಹೋಮ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	2,3,4	4,5,6

ಸರ್ಕಾರಕ್ಕೆ ₹600 ಕೋಟಿ ನಷ್ಟ

ಒಂದನೇ ಪುಟದಿಂದ...

1992ರಲ್ಲಿ ರಾಯಲ್ ಆರ್ಕಿಡ್ಸ್‌ಗೆ 4 ಎಕರೆ 32 ಗುಂಟೆಯನ್ನು ಪ್ರತಿ ಎಕರೆಗೆ ₹1.11 ಲಕ್ಷ ವಾರ್ಷಿಕ ಬಾಡಿಗೆ ನಿಗದಿಪಡಿಸಿ 30 ವರ್ಷಕ್ಕೆ ಗುತ್ತಿಗೆಗೆ ನೀಡಲಾಗಿತ್ತು. ಈ ಗುತ್ತಿಗೆ ಅವಧಿ 2022ರ ಜನವರಿ 1ರಂದು ಮುಗಿದಿತ್ತು. ಕಂಪನಿ ಗುತ್ತಿಗೆ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿತ್ತು. ಷರತ್ತಿನಂತೆ, ಗುತ್ತಿಗೆ ನವೀಕರಣವಾಗಬೇಕಿದ್ದರೆ 'ಪರಸ್ಪರ ಒಪ್ಪಿಗೆ'ಯಾಗಬೇಕಿತ್ತು.

ಈ ಗುತ್ತಿಗೆ ನವೀಕರಣದ ಸಂದರ್ಭದಲ್ಲಿ ಕೆಎಸ್‌ಟಿಡಿಸಿ ಅಧಿಕಾರಿಗಳು ಕಡತವನ್ನು ಪರಿಶೀಲಿಸಿದಾಗ ಆಶ್ಚರ್ಯಗೊಂಡಿದ್ದಾರೆ. ಮೂಲ ಗುತ್ತಿಗೆಯ ನಿಯಮಗಳನ್ನು ಉಲ್ಲಂಘಿಸಿ, 25 ಗುಂಟೆ (27,000 ಚದರಡಿ) ಭೂಮಿಯನ್ನು ₹23 ಲಕ್ಷಕ್ಕೆ ಮತ್ತೊಂದು ಕಂಪನಿ 'ಗಾಲ್ಫ್ ವ್ಯೂ ಹೋಮ್ಸ್'ಗೆ ಉಪ ಗುತ್ತಿಗೆ ನೀಡಲಾಗಿತ್ತು. ಹೀಗಿದ್ದರೂ, ಕಂಪನಿ ವಿರುದ್ಧ ಯಾವುದೇ ಶಿಸ್ತುಕ್ರಮ ಕೈಗೊಂಡಿರಲಿಲ್ಲ.

2022ರಲ್ಲಿ ಕೆಎಸ್‌ಟಿಡಿಸಿಯ ವ್ಯವಸ್ಥಾಪಕ ನಿರ್ದೇಶಕರು ಸರ್ಕಾರಕ್ಕೆ ಪತ್ರ ಬರೆದು, ಗುತ್ತಿಗೆ ನವೀಕರಣದ ಮನವಿಯನ್ನು ತಿರಸ್ಕರಿಸಬೇಕು ಎಂದು ತಿಳಿಸಿದ್ದರು. 'ಗುತ್ತಿಗೆದಾರರು ಯಾವುದೇ ರೀತಿಯಲ್ಲೂ ಭೂಮಿಯನ್ನು ಉಪ ಗುತ್ತಿಗೆ, ಅಡಮಾನ ಅಥವಾ ಇತರೆ ಯಾವುದೇ ರೀತಿಯ ಪ್ರಕ್ರಿಯೆಯನ್ನು ಪೂರ್ವಾನುಮತಿ ಇಲ್ಲದೆ ನಡೆಸುವಂತಿಲ್ಲ' ಎಂದು 1992ರ ಜುಲೈ 20ರಲ್ಲಿ ಸರ್ಕಾರ ಹೊರಡಿಸಿದ್ದ ಆದೇಶವನ್ನು ಅವರು ಉಲ್ಲೇಖಿಸಿದ್ದರು.

'ರಾಯಲ್ ಆರ್ಕಿಡ್ ಹೋಟೆಲ್ ಪೂರ್ವಾನುಮತಿ ಇಲ್ಲದೆ ಸರ್ಕಾರಿ ಭೂಮಿಯನ್ನು ಗಾಲ್ಫ್ ವ್ಯೂ ಹೋಮ್ಸ್‌ಗೆ ಉಪಗುತ್ತಿಗೆ ನೀಡಿರುವುದು ಅಕ್ರಮ. 30 ವರ್ಷಗಳ ಗುತ್ತಿಗೆ ನವೀಕರಣವನ್ನು ತಿರಸ್ಕರಿಸಬೇಕು. ಗುತ್ತಿಗೆ ನೀಡಲು ಟೆಂಡರ್ ಆಹ್ವಾನಿಸಬೇಕು' ಎಂದು ಪ್ರವಾಸೋದ್ಯಮ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಪತ್ರ ಬರೆದಿದ್ದರು.

ಹೀಗಿದ್ದರೂ, 2023ರ ಮಾರ್ಚ್‌ನಲ್ಲಿ ಪ್ರವಾಸೋದ್ಯಮ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಸಭೆ ನಡೆಸಿ, ರಾಯಲ್ ಆರ್ಕಿಡ್ ಅಕ್ರಮವಾಗಿ ಉಪ-ಗುತ್ತಿಗೆಗೆ ನೀಡಿದ್ದ ಗುತ್ತಿಗೆಯನ್ನು ರದ್ದುಪಡಿಸಿ, 2 ಎಕರೆ 19 ಗುಂಟೆ ಜಮೀನಿನ ಗುತ್ತಿಗೆಯನ್ನು ನವೀಕರಿಸಲು ನಿರ್ಧರಿಸಿದರು.

ಕೆಎಸ್‌ಟಿಡಿಸಿ ಮತ್ತು ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಲು ಪ್ರಯತ್ನಿಸಿದಾಗ, ಅವರು ಪ್ರತಿಕ್ರಿಯಿಸಲಿಲ್ಲ.

ಕಂಪನಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಚಂದರ್ ಕೆ. ಬಾಲ್ಜಿ ಅವರು ಇ-ಮೇಲ್‌ಗಳಿಗೆ ಪ್ರತಿಕ್ರಿಯಿಸಲಿಲ್ಲ.

ನಗರದಲ್ಲಿ ಇಂದು

ಮೂರನೇ ಘಟಿಕೋತ್ಸವ: ಅಧ್ಯಕ್ಷತೆ: ಎ.ವಿ. ಎಸ್. ಮೂರ್ತಿ, ಅತಿಥಿ: ಕೈಲಾಶ್ ಸತ್ಯಾರ್ಥಿ, ಆಯೋಜನೆ: ಆರ್.ವಿ. ವಿಶ್ವವಿದ್ಯಾಲಯ, ಸ್ಥಳ: ಮಂಗಳಾ ಮಂಟಪ, ಎನ್‌ಎಂಕೆಆರ್‌ವಿ ಕಾಲೇಜು, ಜಯನಗರ ಮೂರನೇ ಬ್ಲಾಕ್, ಬೆಳಿಗ್ಗೆ 9.30

'ಒಂದು ತಲೆ ಚವುರದ ಕಥೆ' ಲೇಖಕರ ಜೊತೆ ಸಂವಾದ: ಶಿವರಾಜ ಬ್ಯಾಡರಹಳ್ಳಿ, ಆಯೋಜನೆ ಮತ್ತು ಸ್ಥಳ: ನ್ಯೂ ಹೊರೈಝನ್ ಕಾಲೇಜು, ಮಾರತ್‌ಹಳ್ಳಿ, ಬೆಳಿಗ್ಗೆ 10

'ತ್ರಿಭಾಷಾ ನೀತಿ ಸಾಕು ಎರಡು ನುಡಿ ಕಲಿಕೆ ಬೇಕು' ಮಾಹಿತಿ–ಚಿತ್ರ ಪ್ರದರ್ಶನ: ಆಯೋಜನೆ: ಬನವಾಸಿ ಬಳಗ, ಸ್ಥಳ: ಆರ್ಟ್ ಗ್ಯಾಲರಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10ರಿಂದ

ರಾಜ್ಯಮಟ್ಟದ ಚಾರ್ಟರ್ಡ್ ಅಕೌಂಟೆಂಟ್ಸ್ ಸಮ್ಮೇಳನ: ಅತಿಥಿಗಳು: ದಿನೇಶ್ ಗುಂಡೂರಾವ್, ಚರಣ್‌ಜೋತ್ ಸಿಂಗ್ ನಂದ, ಬಿ.ಪಿ. ರಾವ್, ಕೆ. ರಘು, ಆಯೋಜನೆ: ದಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ, ಸ್ಥಳ: ಪ್ರಿನ್ಸೆಸ್ ಶ್ರೈನ್, ಅರಮನೆ ಮೈದಾನ, ಬೆಳಿಗ್ಗೆ 10ರಿಂದ

'ಕರ್ನಾಟಕ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ–2' ಈಡೇರುವುದೇ ಸರ್ವ ಸಮುದಾಯ ಗಳ ನಿರೀಕ್ಷೆ? ವಿಚಾರಸಂಕಿರಣ: ಭಾಗವಹಿಸುವವರು: ಎ. ನಾರಾಯಣ್, ಎಲ್. ಕೆ. ಅತೀಕ್, ರಾಮಚಂದ್ರಪ್ಪ, ಕೆ.ಎನ್. ಲಿಂಗಪ್ಪ, ರಾಜಲಕ್ಷ್ಮಿ ಅಂಕಲಗಿ, ಸಿ.ಎಸ್. ದ್ವಾರಕಾನಾಥ್, ಪಿ.ಎನ್. ಶ್ರೀನಿವಾಸಾಚಾರಿ, ರವಿ ಬೋಸರಾಜು, ಸಾಸಲು ಸತೀಶ್, ಕೆ.ಜೆ. ಜಯಲಕ್ಷ್ಮಿ ನಾಯಕ, ಜಿ.ಬಿ. ವಿನಯ್ ಕುಮಾರ್, ಸಿದ್ದಪ್ಪ ಮೂಲಗೆ, ಬಿ.ಸಿ. ಬಸವರಾಜ್, ಆಯೋಜನೆ: ಜಾಗೃತ ಕರ್ನಾಟಕ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30ರಿಂದ

ರಾಜ್ಯದ ಎಲ್ಲ ವಕೀಲರ ಸಂಘದ ಪದಾಧಿಕಾರಿಗಳ ಸಭೆ: ಉದ್ಘಾಟನೆ: ಕಿರಣ್ ರಿಜಿಜು, ಅತಿಥಿಗಳು: ಮನನ್ ಕುಮಾರ್ ಮಿಶ್ರಾ, ತೇಜಸ್ವಿ ಸೂರ್ಯ, ಬಿ.ವೈ. ವಿಜಯೇಂದ್ರ, ಅರವಿಂದ್ ಕಾಮತ್, ಉಪಸ್ಥಿತಿ: ಶಶಿಕಿರಣ್ ಶೆಟ್ಟಿ, ಸದಾಶಿವ ರೆಡ್ಡಿ ವೈ.ಆರ್., ಎಸ್.ಎಸ್. ಮಿಟ್ಟಲಕೋಡ, ಸನ್ಮಾನ ಸಮಾರಂಭ: ಅತಿಥಿಗಳು: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಎಚ್.ಕೆ. ಪಾಟೀಲ, ಆಯೋಜನೆ: ಕರ್ನಾಟಕ ರಾಜ್ಯ ವಕೀಲರ ಪರಿಷತ್ತು, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 10.30ರಿಂದ

ಕಲೋತ್ಸವ: ನೃತ್ಯ ಪ್ರದರ್ಶನ: ಸೌಮ್ಯಾ ವಿಶಾಲ್, ಸಿಂಧು ಭೈರವಿ, ರಕ್ಷಾ ಆರ್. ಕುಮಾರ್, ಆಯೋಜನೆ: ಅನುರಾ ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ಸ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10.30ರಿಂದ

ಪೊಲೀಸ್ ಪದಕ ಪ್ರದಾನ: ಥಾವರಚಂದ್ ಗೆಹಲೋತ್, ಅಧ್ಯಕ್ಷತೆ: ಸಿದ್ದರಾಮಯ್ಯ, ಅತಿಥಿ: ಜಿ. ಪರಮೇಶ್ವರ, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ರಾಜಭವನ, ಬೆಳಿಗ್ಗೆ 11

'ಸೂಜಿ–ದಾರದೊಂದಿಗಿನ ಬದುಕು' ನಗರದಲ್ಲಿ ಗಾರ್ಮೆಂಟ್ಸ್ ಕೆಲಸ ಮತ್ತು ಸಂಘಟನೆ ಕುರಿತು ಪ್ರದರ್ಶನ: ಆಯೋಜನೆ: ಗಾರ್ಮೆಂಟ್ ಆ್ಯಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್, ಸ್ಥಳ: ಡಿ.ದೇವರಾಜ ಅರಸು ಸಭಾಂಗಣ, ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಮಧ್ಯಾಹ್ನ 3ರಿಂದ

ಪೊಲೀಸ್ ಕಲಾಸಂಗಮ, ಅಪ್ಪ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ವಿ. ನಾಗೇಂದ್ರ ಪ್ರಸಾದ್, ಪ್ರಶಸ್ತಿ ಪ್ರದಾನ: ವಿಜಯ ರಾಘವೇಂದ್ರ, ಧ್ವನಿ ಸುರುಳಿ ಬಿಡುಗಡೆ: ಸಾ.ರಾ. ಫಾತೀಮಾ, ಅತಿಥಿಗಳು: ಎಸ್. ಉಷಾರಾಣಿ, ಶ್ರೀಶೈಲ್ ಎಸ್. ಮೇಟಿ, 'ಅಪ್ಪ ಪ್ರಶಸ್ತಿ' ಪ್ರಶಸ್ತಿ ಸ್ವೀಕರಿಸುವವರು: ವಿನಯಕುಮಾರ್ ಜಿ.ಬಿ., ಮಹೇಶ್ ಪೋತದಾರ, ಆಯೋಜನೆ: ನಬಿರೋಶನ್ ಪ್ರಕಾಶನ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3



ಸಂತೋಷ್ ಹೆಗ್ಡೆ

ಕೆ.ಈ. ರಾಧಾಕೃಷ್ಣ ಅವರು ಅನುವಾದಿಸಿರುವ ನೇತಾಜಿ ಸುಭಾಷ್‌ಚಂದ್ರ ಬೋಸರ 'ಒಂದು ಅಪೂರ್ಣ ಆತ್ಮಕಥೆ', 'ಭಾರತೀಯ ಹೋರಾಟ', 'ಅಸಾಮಾನ್ಯ ದಿನಚರಿ' ಪುಸ್ತಕಗಳ ಬಿಡುಗಡೆ: ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಡಿ.ಕೆ. ಶಿವಕುಮಾರ್, ಅತಿಥಿಗಳು: ಜಿ. ಪರಮೇಶ್ವರ, ಎಚ್.ಸಿ. ಮಹದೇವಪ್ಪ, ಸುಮಂತ್ರ ಬೋಸ್, ರಮೇಶ್ ಹಲಗಲಿ, ಎಂ. ರಾಜ್‌ಕುಮಾರ್, ರೊನಾಲ್ಡ್ ಕೊಲಾಸೊ, ಜಿ.ಆರ್. ಶಿವಶಂಕರ್, ಆಯೋಜನೆ: ನೇತಾಜಿ ಸುಭಾಷ್‌ಚಂದ್ರ ಬೋಸ್ ಟ್ರಸ್ಟ್, ಸನ್‌ಸ್ಟಾರ್ ಪಬ್ಲಿಷರ್ಸ್, ಸ್ಥಳ: ಪುರಭವನ, ಮಧ್ಯಾಹ್ನ 3.30

ಗಣೇಶೋತ್ಸವ ವಿಶೇಷ:
ಆಯೋಜನೆ: ಬೆಂಗಳೂರು ಅಡ್ವೊಕೇಟ್ ಫ್ರೆಂಡ್ಸ್ ಸರ್ಕಲ್, ಬೆಂಗಳೂರು ವಕೀಲರ ಸಂಘ, ಮಧ್ಯಾಹ್ನ 1.30ಕ್ಕೆ ಭಕ್ತಿ ಗೀತೆಗಳ ಗಾಯನ: ಪದ್ಮಿನಿ ಎಲ್. ಓಕಾ ಮತ್ತು ತಂಡ, ಸ್ಥಳ: ವಕೀಲರ ಸಂಘ, ಹೈಕೋರ್ಟ್ ಯೂನಿಟ್ ಹಾಲ್–1
ಸಂಗೀತ ಕಛೇರಿ: ಪ್ರಸ್ತುತಿ: ಗುರುಕಿರಣ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸ್ವಸ್ತಿಕ್ ಯುವಕರ ಸಂಘ, ಐದನೇ ಮುಖ್ಯ ರಸ್ತೆ, ಮಿಲ್ಕ್ ಕಾಲೊನಿ, ರಾಜಾಜಿನಗರ, ಎರಡನೇ ಹಂತ, ಸಂಜೆ 7.30



ಕನ್ನಡ ಸಾಹಿತ್ಯ ಪರಿಷತ್ತು ಕೆ.ಆರ್. ವಿಧಾನಸಭಾ ಕ್ಷೇತ್ರದ ಪದಾಧಿಕಾರಿಗಳ ಪದಗ್ರಹಣ ಸಮಾರಂಭ: ಮಹೇಶ ಜೋಶಿ, ಅಧ್ಯಕ್ಷತೆ: ಸುರೇಶ ಎಸ್. ಹೊಸಮನಿ, ಅತಿಥಿಗಳು: ಬೈರತಿ ಬಸವರಾಜು, ಬಿ.ಎಂ. ಪಟೇಲ್‌ಪಾಂಡು, ವಿ.ಎಸ್. ಹಿರೇಮಠ್, ಸ್ಥಳ: ಇಂಡಿಯನ್ ಐಎಎಸ್ ಕೆಎಎಸ್ ಸ್ಟಡಿ ಸೆಂಟರ್, ಶ್ರೀಸಾಯಿ ಗೋಲ್ಡ್ ಪ್ಯಾಲೆಸ್ ಎದುರು, ಕೆ.ಆರ್. ಪುರ, ಸಂಜೆ 4

'ಗಾಂಪರ ಗುಂಪು' ನಾಟಕ ಪ್ರದರ್ಶನ: ಕಥೆ: ದಾಶರಥಿ ದೀಕ್ಷಿತ, ನಿರ್ದೇಶನ: ಶ್ರೀಪಾದ ಎಸ್. ಶ್ರೀವತ್ಸ, ಆಯೋಜನೆ: ಬೆಂಗಳೂರು ಪ್ಲೇಯರ್ಸ್ ಥಿಯೇಟರ್ ಅಸೋಸಿಯೇಷನ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 4 ಹಾಗೂ 7ಕ್ಕೆ

ಭರತನಾಟ್ಯ ರಂಗಪ್ರವೇಶ: ಶ್ರೇಯಾ ರಾಜಶೇಖರ್ ಹಿರೇಮಠ, ಅತಿಥಿಗಳು: ಶ್ರೀಧರ್, ಅರ್ಜುನ್ ಭಾರದ್ವಾಜ್, ಪದ್ಮಿನಿ ಎಸ್. ಉಪಾಧ್ಯಾಯ, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ, ಸಂಜೆ 5.30

ಸಂಗೀತ ಕಛೇರಿ: ಗಾಯನ: ಮಧುಮಿತ, ಸುಶ್ಮಿತ, ಪಿಟೀಲು: ಅರುಣಾಚಲ ಕಾರ್ತಿಕ್, ಮೃದಂಗ: ಅಶ್ವತ್ಥನಾರಾಯಣ ರಾವ್, ಘಟ: ಉತ್ತಮ್ ಎಸ್., ಆಯೋಜನೆ: ಮಲ್ಲೇಶ್ವರಂ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.15

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in



ಚಿತ್ರಗಳು: ಅರ್ಜುನ್ ಜುವೆಲರ್ಸ್





'ಬಂಗಾರದೊಡವೆ ಬೇಕೇ ನೀರೆ' ಎಂಬ ಗೀತೆಯ ಸಾಲುಗಳನ್ನು ಮುಂದೊಂದು ದಿನ ಬದಲಿಸಬೇಕಾಗಬಹುದು! ಏಕೆಂದರೆ, ಈಗ ಪುರುಷರಲ್ಲೂ ಆಭರಣಗಳ ಮೋಹ ಶುರುವಾಗಿದೆ, ಬಗೆಬಗೆ ಆಭರಣ ತೊಟ್ಟು ನಲಿಯುವ ಟ್ರೆಂಡ್ ಸೃಷ್ಟಿಯಾಗಿದೆ

ಆಭರಣಪ್ರಿಯ ಗಂಡಸರು!

• ಸುಕೃತ ಎಸ್.

ಬೆರಳಿಗೆ ಹಾಕಿಕೊಂಡಿದ್ದ ದೊಡ್ಡ ಉಂಗುರ, ಕೈಯಲ್ಲಿ ಮಿರುಗುತ್ತಿದ್ದ ಹರಳಿನ ಕಡಗ, ಕೊರಳಲ್ಲಿ ನಳನಳಿಸುತ್ತಿದ್ದ ಬಂಗಾರದ ಹಾರವನ್ನು ಕನ್ನಡಿ ಮುಂದೆ ನಿಂತು ಆಸೆಗಣ್ಣಿನಿಂದ ನೋಡುತ್ತಾ, ಅದರಿಂದ ಕಳೆಗಟ್ಟಿದ್ದ ತಮ್ಮ ರೂಪವನ್ನು ಆಸ್ವಾದಿಸುತ್ತಾ ನಿಂತಿದ್ದವರು ಖ್ಯಾತ ಚಿತ್ರನಟ ಮೋಹನ್ ಲಾಲ್!

ಇದು ಆಭರಣ ಕಂಪನಿಯೊಂದರ ಜಾಹೀರಾತಿನ ದೃಶ್ಯ. ಈ ಜಾಹೀರಾತಿನ ದೃಶ್ಯಗಳು ಸಾಮಾಜಿಕ ಜಾಲತಾಣದಲ್ಲಿ ಇತ್ತೀಚೆಗೆ ಭಾರಿ ಪ್ರಮಾಣದಲ್ಲಿ ಹಂಚಿಕೆಯಾದವು. ಮೋಹನ್ ಲಾಲ್ ಅವರ ನಟನೆಗೆ ಅಪಾರ ಮೆಚ್ಚುಗೆ ವ್ಯಕ್ತವಾಯಿತು.

ಸಾಮಾನ್ಯವಾಗಿ ಆಭರಣ ಮಳಿಗೆಗಳ ಜಾಹೀರಾತಿನಲ್ಲಿ ಹೆಣ್ಣುಮಕ್ಕಳದ್ದೇ ಪ್ರಾಬಲ್ಯ. ಅವರನ್ನೇ ಮಾಡೆಲ್ ಆಗಿಸಿಕೊಂಡು ಜಾಹೀರಾತು ಸಿದ್ಧಪಡಿಸಲಾಗುತ್ತದೆ ಮತ್ತು ಈ ಜಾಹೀರಾತುಗಳ ಗುರಿ ಕೂಡ ಮಹಿಳೆಯರೇ ಆಗಿರುತ್ತಾರೆ. ಆದರೆ, ಮೋಹನ್ ಲಾಲ್ ಅವರ ಈ ಜಾಹೀರಾತು ಮಾತ್ರ ಭಿನ್ನ ಸ್ವರೂಪದಲ್ಲಿದೆ. ಪುರುಷನೊಬ್ಬ ಆಭರಣದ ಜಾಹೀರಾತಿನ ಮಾಡೆಲ್ ಆದದ್ದು ಸಹ ಇದು ಭಾರಿ ಸದ್ದು ಮಾಡಿದ್ದಕ್ಕೆ ಕಾರಣವಾಗಿರಬಹುದು. ಎಲ್ಲ ಸಂಪ್ರದಾಯ, ಸಂಕೋಲೆಗಳನ್ನೂ ಮೀರಿದ ಜಾಹೀರಾತು ಇದು ಎಂದು ನೆಟ್ಟಿಗರು ಕೊಂಡಾಡಿದರು.

ಹಾಗಾದರೆ ಪುರುಷನನ್ನು, ಅದರಲ್ಲೂ ಒಬ್ಬ ಸೆಲೆಬ್ರಿಟಿಯನ್ನು ಆಭರಣ ಕಂಪನಿಯ ಜಾಹೀರಾತಿಗೆ ಮಾಡೆಲ್ ಆಗಿ ಆಯ್ಕೆ ಮಾಡಿಕೊಂಡಿದ್ದೇಕೆ? ಈ ಜಾಹೀರಾತಿನ ಮುಖ್ಯ ಗುರಿ ಏನು? ಯಾರನ್ನು ಸೆಳೆಯುವ ಸಲುವಾಗಿ ಅದನ್ನು ರೂಪಿಸಲಾಯಿತು ಎನ್ನುವಂತಹ ಪ್ರಶ್ನೆಗಳು ಕಾಡುವುದು ಸಹಜ. ಅಂತಹದ್ದೊಂದು ಕುತೂಹಲದಿಂದ ಹುಡುಕುತ್ತಾ ಹೋದರೆ, ಈ ವಿಭಿನ್ನ ಜಾಹೀರಾತಿನ ಹಿಂದೆ ಇರುವ ಒಂದು ಹೊಸ ಲೋಕವೇ ನಮ್ಮೆದುರು ತೆರೆದುಕೊಳ್ಳುತ್ತದೆ.

ಬಂಗಾರಪ್ರೇಮ ಹೊಸದಲ್ಲ

ಭಾರತದ ಮಟ್ಟಿಗೆ ಇದು ಹೊಸ ವಿಷಯವೇನೂ ಅಲ್ಲ. ರಾಜ–ಮಹಾರಾಜರ ಕಾಲದಲ್ಲಿ ಪುರುಷರು ಬಂಗಾರದ ಆಭರಣಗಳನ್ನು ತೊಡುತ್ತಿದ್ದರು. ಅದು ಅಧಿಕಾರದ ಸಂಕೇತವಾಗಿತ್ತು. ಆದರೆ ಈಗ ಇದು ಫ್ಯಾಷನ್ ಸ್ಟೇಟ್‌ಮೆಂಟ್ ಆಗಿದೆ. ಕಿವಿಗೆ ಒಂಟಿ, ಹೆಚ್ಚೆಂದರೆ ಕೊರಳಿಗೆ ಸಣ್ಣದಾದ ಸರ, ಕೈಗೆ ಸಣ್ಣ ಎಳೆಯ ಬ್ರೇಸ್ಲೆಟ್‌ಗಳನ್ನು ಪುರುಷರು ತೊಡುವುದು ಸಾಮಾನ್ಯ. ಒಂಟಿಯೊಂದನ್ನು ಬಿಟ್ಟು ಉಳಿದವೆಲ್ಲವೂ ವಿಶೇಷ ಸಮಾರಂಭಗಳಲ್ಲಿ ತೊಡುವಂತಹವಾಗಿದ್ದವು. ಅದರಲ್ಲೂ ಮದುವೆಯಂಥ ಸಮಾರಂಭಗಳಲ್ಲಿ ಮದುಮಗ ಇವನ್ನೆಲ್ಲಾ ತೊಡುವುದು ರೂಢಿ.

ಈಗ ಕಾಲ ಬದಲಾಗಿದೆ. ಬಂಗಾರ, ಪ್ಲಾಟಿನಂ, ಡೈಮಂಡ್, ಬ್ಲ್ಯಾಕ್‌ಮೆಟಲ್, ಬೆಳ್ಳಿ... ಹೀಗೆ ವಿವಿಧ ಬಗೆಯ ಲೋಹಗಳಿಂದ ತಯಾರಿಸಿದ ಆಭರಣಗಳನ್ನು ಸಾಮಾನ್ಯ ಪುರುಷರೂ ಹೆಚ್ಚಾಗಿ ಇಷ್ಟಪಡುತ್ತಿದ್ದಾರೆ. ಜೊತೆಗೆ, ಇವು ವಿಶೇಷ ಸಮಾರಂಭಗಳಲ್ಲಿ ಮಾತ್ರವೇ ಅವರು ತೊಡುವ ಆಭರಣಗಳಾಗಿ ಉಳಿದಿಲ್ಲ. ನಿತ್ಯವೂ ಇಂಥ ಆಭರಣಗಳನ್ನು ತೊಡಲು ಆರಂಭಿಸಿದ್ದಾರೆ.

ಇಂತಹವರನ್ನು ಸೆಳೆಯುವುದಕ್ಕಾಗಿಯೇ ವಿವಿಧ ಆಭರಣ ಕಂಪನಿಗಳು ತಮ್ಮ ಮಳಿಗೆಗಳಲ್ಲಿ ಪುರುಷರಿಗಾಗಿ ಪ್ರತ್ಯೇಕ ವಿಭಾಗವನ್ನೇ ತೆರೆದಿವೆ. ಪುರುಷ ಗ್ರಾಹಕರನ್ನು ಗುರಿಯಾಗಿಟ್ಟು ಪ್ರತ್ಯೇಕ ವೆಬ್‌ಸೈಟ್‌ಗಳು ಸಹ ಶುರುವಾಗಿವೆ. ಬಂಗಾರವಲ್ಲದ ಲೋಹಗಳಿಂದ ತಯಾರಿಸಿದ, ನಿತ್ಯ ಬಳಕೆಯ ಫ್ಯಾಷನಬಲ್ ಆಭರಣದ ಮಾಹಿತಿಯುಳ್ಳ ನೂರಾರು ಪೇಜ್‌ಗಳು ಜಾಲತಾಣಗಳಲ್ಲಿ ಸೃಷ್ಟಿಯಾಗಿವೆ. ಈವರೆಗೆ ಇವೆಲ್ಲ ಮಹಿಳೆಯರಿಗೆ ಮಾತ್ರವೇ ಎನ್ನುವಂತಿದ್ದವು.

ಪುರುಷರ ಆಭರಣ ಪ್ರೇಮ ಸದ್ಯ ಬೆಂಗಳೂರು, ದೆಹಲಿ, ಮುಂಬೈ ಸೇರಿದಂತೆ ದೇಶದ ಮೆಟ್ರೊ ನಗರಗಳಿಗೆ ಸೀಮಿತವಾಗಿದೆ. ಬಂಗಾರ, ವಜ್ರದ ಬೆಲೆ ಗಗನಮುಖಿಯಾಗಿರುವ ಕಾರಣ ಹೆಚ್ಚಿನವರು ಇಂಥ ಆಭರಣಗಳನ್ನು ಖರೀದಿಸುವುದು ಸಾಧ್ಯವೇ ಇಲ್ಲ ಎಂಬಂತಹ ಸ್ಥಿತಿ ಇದೆ. ಆದರೆ, ಕಡಿಮೆ ಬೆಲೆಗೆ ಸಿಗುವ ವಿವಿಧ ಲೋಹದ ಆಭರಣಗಳ ಖರೀದಿ ನಡೆದೇ ಇದೆ.


ರಾಜರ ಕಾಲದಲ್ಲಿ ಪುರುಷರು ಒಡವೆಗಳನ್ನು ಹಾಕಿಕೊಳ್ಳುತ್ತಿದ್ದರೂ ಕಾಲಾಂತರದಲ್ಲಿ ಈ ಸಂಪ್ರದಾಯ ಹಿಂದಕ್ಕೆ ಸರಿಯಿತು. ಆಭರಣಗಳು ಮಹಿಳೆಯರಿಗೆ ಮಾತ್ರವೇ ಸೀಮಿತ ಎನ್ನುವ ಕಾಲ ಬಂದಿತು. ಮಹಿಳೆ ಒಡವೆ ತೊಡುವುದೇ ಕ್ರಮ, ಅದೇ ಸಂಪ್ರದಾಯ ಎನ್ನುವ ಅಭಿಪ್ರಾಯದಲ್ಲಿ ಇಂದಿಗೂ ಹೆಚ್ಚಿನ ಬದಲಾವಣೆಯೇನಾಗಿಲ್ಲ. ಆದರೆ ಇದರ ನಡುವೆಯೇ ಬಹುತೇಕ ಪುರುಷರಲ್ಲಿ ಅದರಲ್ಲೂ ಯುವಕರಲ್ಲಿ ಆಭರಣ ಪ್ರೇಮ ಚಿಗುರೊಡೆಯುತ್ತಿದೆ. ಇಂಥ ಯುವಕರನ್ನು ವಿಚಿತ್ರವಾಗಿ ನೋಡುವ ಕಣ್ಣುಗಳೂ ಇವೆ. 'ಹೆಂಗಸರು ಹಾಕಿಕೊಳ್ಳುವುದನ್ನು ಹುಡುಗರು ಹಾಕಿಕೊಂಡಿದ್ದಾರಲ್ಲ. ಇದೆಂಥಾ ಕಾಲ ಬಂತಪ್ಪಾ' ಎಂದು ನಮ್ಮೂರಿನ ಅಜ್ಜ, ಅಜ್ಜಿ ಟಿ.ವಿ. ನೋಡುತ್ತಾ ಮಾತನಾಡಿಕೊಳ್ಳುತ್ತಿದ್ದಾರೆ. ಆದರೆ ದಿಲ್ಲಿಗೆ ಬಂದದ್ದು ಹಳ್ಳಿಗೆ ಬರಲಾರದೇ? ಸದ್ಯದ ಟ್ರೆಂಡ್ ಗಮನಿಸಿದರೆ, ಆಭರಣ ಮೋಹದಲ್ಲಿ ಪುರುಷರು ಮಹಿಳೆಯರೊಂದಿಗೆ ಸಮಾನತೆ ಸಾಧಿಸುವ ದಿನ ದೂರವಿಲ್ಲ ಎನ್ನಿಸುತ್ತದೆ.

ಜೆನ್–ಝಿ ಗ್ರಾಹಕರು

ಚಿತ್ರನಟರು, ಸೆಲೆಬ್ರಿಟಿಗಳು, ಸಾಮಾಜಿಕ ಜಾಲತಾಣಗಳ ಇನ್‌ಫ್ಲುಯೆನ್ಸರ್‌ಗಳ ಕಾರಣದಿಂದಾಗಿ ಜೆನ್–ಝಿ ಹುಡುಗರಲ್ಲಿ ಫ್ಯಾಷನ್ ಬಗ್ಗೆ ಹೆಚ್ಚು ಆಸಕ್ತಿ ಮೂಡಿದೆ. ಅವರಂತೆ ತಾವೂ ಆಭರಣಗಳನ್ನು ಧರಿಸಬೇಕು ಎನ್ನುವ ಕಾರಣಕ್ಕೆ ಬಗೆಬಗೆ ಲೋಹಗಳ ಆಭರಣಗಳತ್ತ ಅವರು ಮುಖ ಮಾಡಿದ್ದಾರೆ. ಬಾಲಿವುಡ್ ನಟರು, ಕ್ರಿಕೆಟಿಗರು ಸೇರಿದಂತೆ ವಿವಿಧ ಕ್ಷೇತ್ರಗಳ ಸೆಲೆಬ್ರಿಟಿಗಳು ತಮ್ಮ ಆಭರಣ ಪ್ರೇಮವನ್ನು ತೋರಿಸಿಕೊಳ್ಳಲು ಆರಂಭಿಸಿದ್ದಾರೆ. ದೊಡ್ಡ ದೊಡ್ಡ ಉದ್ಯಮಿಗಳ ಮಕ್ಕಳ ಮದುವೆಗಳಲ್ಲಿ, ಪ್ರಶಸ್ತಿ ಪ್ರದಾನ ಸಮಾರಂಭಗಳಲ್ಲಿ ಸೆಲೆಬ್ರಿಟಿಗಳು ಯಾವ ಹೆಂಗಳೆಯರಿಗೂ ಕಮ್ಮಿ ಇಲ್ಲ ಎಂಬಂತೆ ಚಿನ್ನ, ವಜ್ರದ ದೊಡ್ಡ ದೊಡ್ಡ ಹಾರಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಇದು ಕೂಡ ಜೆನ್–ಝಿ ಪೀಳಿಗೆಯನ್ನು ಆಕರ್ಷಿಸಿದೆ.

ಜೆನ್– ಝಿ ಅಂದರೆ, 1997ರಿಂದ 2012ರ ನಡುವೆ ಜನಿಸಿದವರು. 2025ರ ಹೊತ್ತಿಗೆ 13ರಿಂದ 28 ವರ್ಷ ವಯೋಮಾನದ ಒಳಗೆ ಇರುವವರು.

ಇದು ವಿಶ್ವದ ಟ್ರೆಂಡ್



ಜಾಗತಿಕ ಮಟ್ಟದಲ್ಲಿ ಪುರುಷರ ಚಿನ್ನಾಭರಣ ಮಾರುಕಟ್ಟೆಯು 2024ರ ಅಂತ್ಯದ ವೇಳೆಗೆ 48 ಬಿಲಿಯನ್ ಡಾಲರ್‌ಗಳಷ್ಟಿತ್ತು (₹ 4.22 ಲಕ್ಷ ಕೋಟಿ). ಅದು ವಾರ್ಷಿಕ ಶೇ 10ರಷ್ಟು ಬೆಳವಣಿಗೆ ದಾಖಲಿಸುವ ಅಂದಾಜಿದೆ. ಏಷ್ಯಾದ ದೇಶಗಳಲ್ಲಿ ಈ ಬೆಳವಣಿಗೆಯು ಶೇ 10ಕ್ಕಿಂತಲೂ ಹೆಚ್ಚು ಎನ್ನಲಾಗಿದೆ. ಇದೆಲ್ಲ ಲೆಕ್ಕಾಚಾರದ ಮಾತಾಯಿತು. ಸೌಂದರ್ಯವರ್ಧನೆಗೆ ಹಣ ಹೊಂದಿಸಲು ಸಾಧ್ಯವಾಗುವಷ್ಟು ಆದಾಯ, ಕಣ್ಸೆಳೆಯುವ ವಿನ್ಯಾಸದ ಆಭರಣಗಳ ಪ್ರಮಾಣ ಹೆಚ್ಚಾದುದು ಪುರುಷರ ಚಿನ್ನಾಭರಣ ಮಾರುಕಟ್ಟೆಯ ಚಾಲಕ ಶಕ್ತಿ ಎನ್ನುತ್ತವೆ ಮಾರುಕಟ್ಟೆ ವಿಶ್ಲೇಷಣೆಗಳು.

ಬೆಳೆಯುತ್ತಿದೆ ಮಾರುಕಟ್ಟೆ



ಪುರುಷರು ಈಗ ಹೆಚ್ಚು ಹೆಚ್ಚು ಆಭರಣ ಖರೀದಿ ಮಾಡುತ್ತಿದ್ದಾರೆ. ಇದು ದೊಡ್ಡ ಮಾರುಕಟ್ಟೆಯಾಗಿ ರೂಪುಗೊಳ್ಳುತ್ತಿದೆ. ಮೊದಲೆಲ್ಲ ಹುಟ್ಟಿದ ಹೆಣ್ಣುಮಕ್ಕಳಿಗೆ ಬಂಗಾರ ಖರೀದಿ ಮಾಡುತ್ತಿದ್ದರು. ಈಗ ಗಂಡುಮಕ್ಕಳಿಗೂ ವಿವಿಧ ವಿನ್ಯಾಸದ ಆಭರಣಗಳನ್ನು ಜನ ಖರೀದಿಸುತ್ತಿದ್ದಾರೆ. ಯುವಕರು ಹೆಚ್ಚು ಹಗುರವಾದ ಒಡವೆಗಳನ್ನು ಇಷ್ಟಪಡುತ್ತಿದ್ದಾರೆ. ಸಾಮಾನ್ಯವಾಗಿ ಉಳಿತಾಯದ ಆಲೋಚನೆಯಲ್ಲಿಯೇ ಬಂಗಾರವನ್ನು ಜನ ಕೊಳ್ಳುತ್ತಾರೆ. ಆದರೆ, ಯುವಕರು ಫ್ಯಾಷನ್‌ಗಾಗಿಯೂ ಒಡವೆಗಳನ್ನು ಖರೀದಿಸುತ್ತಿದ್ದಾರೆ. ಪುರುಷರ ಆಭರಣಪ್ರಿಯತೆ ಕುರಿತು ಭಾರತದಲ್ಲಿ ಅಷ್ಟೊಂದು ಅಂಕಿ–ಅಂಶಗಳು ಲಭ್ಯವಿಲ್ಲ ಮತ್ತು ಈ ಕುರಿತು ಸಮೀಕ್ಷೆಗಳೂ ನಡೆಯುತ್ತಿಲ್ಲ.

ರಾಹುಲ್ ಜೈನ್, ಅರ್ಜುನ್ ಜುವೆಲರ್ಸ್
ಜಯನಗರ, ಬೆಂಗಳೂರು



ಬಾಡೂಟವೇ ಯಾಕೆ? ಮೀನೂಟ ಆಗದೇ?

ವರ್ಷದ ತೊಡಕು

ಶ್ರಾವಣ ಬಂತೆಂದರೆ ಮಾಂಸಾಹಾರ ಪ್ರಿಯರಿಗೆ ಒಂದು ರೀತಿ 'ಜ್ವರ' ಬಂದಂತೆ. ಈ ಮಾಸದಲ್ಲಿ ಬಹುತೇಕರ ಮನೆಗಳಲ್ಲಿ ಮಾಂಸಾಹಾರ ವರ್ಜ್ಯ. ಮಧ್ಯ ಕರ್ನಾಟಕ, ಮಂಡ್ಯ, ಮೈಸೂರು, ಉತ್ತರ ಕರ್ನಾಟಕ ಭಾಗಗಳಲ್ಲಿ ಆ ಒಂದು ತಿಂಗಳು ಎಷ್ಟೇ ಕಷ್ಟವೆನಿಸಿದರೂ ಬಾಡೂಟಕ್ಕೆ ರಜೆ ಹಾಕಲೇಬೇಕು. ಶ್ರಾವಣ ಕಳೆದು 'ಗಣಪತಿ' (ಗಣೇಶ ಚತುರ್ಥಿ) ಮನ– ಮನೆಗಳಿಗೆ ಅಡಿಯಿಟ್ಟು, ಮೂರು ದಿನವೋ ಐದು ದಿನವೋ ಕಳೆದ ಬಳಿಕ, ಅವನನ್ನು ನೀರಲ್ಲಿ ಮುಳುಗಿಸಿದ ಮಾರನೇ ದಿನವೇ 'ಕರಿ ದಿನ' ಮನೆಮನೆಗಳಲ್ಲಿ ಕಳೆಗಟ್ಟುತ್ತದೆ. 'ಪಥ್ಯ'ದ ದಿನಗಳು ಒಮ್ಮೆಲೇ ದೂರವಾದಂತೆ, ಎಷ್ಟೋ ವರ್ಷಗಳಿಂದ ತಿಂದೇ ಇಲ್ಲವೇನೋ ಎನ್ನುವಂತೆ, ಆ ದಿನಕ್ಕಾಗಿ ಹಪಹಪಿಸುತ್ತಿದ್ದವರಂತೆ ಮಾಡುವ 'ಬಾಡೂಟ'ದ ಘಮ್ಮತ್ತೇ ಅಂಥದ್ದು...

ಶ್ರಾವಣ ಮಾಸದ ದಿನಗಳಲ್ಲಿ 'ಮಾಂಸದೂಟ'ಕ್ಕೆ ಪರ್ಯಾಯವಾಗಿ ಕೆಲವರು ಮಶ್ರೂಮ್‌ಗೆ ಮೊರೆ ಹೋಗುವುದುಂಟು. ಜತೆಗೆ ಕಡಲೆಹಿಟ್ಟಿನಲ್ಲೇ ಕೈಮಾ ಉಂಡೆ ಮಾಡಿ, ಮಂಸಾಹಾರದ ಮಸಾಲೆ ಹಾಕಿ 'ಹಿಟ್ಟಿನ ಸಾಂಬಾರ್' ಮಾಡಿ ಸವಿಯುವವರೂ ಉಂಟು. ಮೊಳಕೆ ಬರಿಸಿದ ಹುರುಳಿಕಾಳು, ಆಲೂಗಡ್ಡೆಗೆ ಮಟನ್ ಮಸಾಲೆ ಬೆರೆಸಿ ತಯಾರಿಸುವವರೂ ಅನೇಕರು. ಅದೇನೇ ತಿಂದರೂ ಮಾಂಸಾಹಾರದ ಅರೋಮ ಬಾರದು, ಪರಿಪೂರ್ಣ ಊಟ ಎಂದೆನಿಸದು. ಅದಕ್ಕಾಗಿ 'ಕರಿ ದಿನ', 'ವರ್ಷದ ತೊಡಕು' ಹಬ್ಬ ಕಳೆಗಟ್ಟುತ್ತದೆ.

ಈ ಹಬ್ಬಕ್ಕೆ ಚಿಕನ್ ಗ್ರೇವಿ, ಮಟನ್ ಸಾಂಬಾರ್, ಬಿರಿಯಾನಿ ಮಾಡುವವರೇ ಹೆಚ್ಚು. ಈ ಬಾರಿ ಮೀನಿನ ರೆಸಿಪಿ ಮಾಡಿ ಸವಿಯಿರಿ ಎನ್ನುತ್ತಾರೆ 'ಮಂಗಳೂರು ರಶ್ಮಿ ರೆಸಿಪಿ' ಯೂಟ್ಯೂಬ್ ಚಾನೆಲ್‌ನ ರಶ್ಮಿ. 'ಮೀನಿನೂಟ'ವೆಂದರೆ ಇಷ್ಟ, ಆದರೆ, ಅದರ ಮುಳ್ಳುಗಳನ್ನು ತೆಗೆದು ಪದಾರ್ಥ ತಯಾರಿಸುವುದು ಬಹುತೇಕರಿಗೆ ಕಷ್ಟ. ಹೊಸದಾಗಿ ಮೀನಿನ ಖಾದ್ಯ ಮಾಡಲು ಮುಂದಾಗುವವರಿಗೂ ಅನುಕೂಲವಾಗುವಂತೆ, ಮುಳ್ಳುಗಳನ್ನು ಸುಲಭವಾಗಿ ತೆಗೆಯುವ ವಿಧಾನವನ್ನು ಹಂಚಿಕೊಂಡಿದ್ದಾರೆ ರಶ್ಮಿ. ಒಂದೊಂದು ಬಗೆಯ ಮೀನನ್ನೂ ಸ್ವಚ್ಛಗೊಳಿಸುವ ವಿಧಾನ ಬೇರೆ ಬೇರೆ. ಆ ಎಲ್ಲವನ್ನೂ ಸಹಜವಾಗಿ ಹೇಳಿಕೊಡುವ ಅವರ ಶೈಲಿ ಬಹುತೇಕರನ್ನು ಸೆಳೆದಿದೆ.

ತುಳುನಾಡಿನವರಾದ ರಶ್ಮಿ ತರಾವರಿ ಮೀನಿನ ರೆಸಿಪಿಗಳನ್ನು ಮತ್ಸ್ಯಪ್ರಿಯರ ಮುಂದಿಟ್ಟಿದ್ದಾರೆ. ಬೂತಾಯಿ, ಪಾಂಪ್ಲೆಟ್, ಅಂಜಲ್, ಸ್ಕ್ವಿಡ್ ಫಿಶ್, ಬಂಗುಡೆ, ಕಾಣೆ, ಬೊಂಡಾಸ್, ಕಲ್ಲೂರು, ಕೊಡ್ವಾಯಿ, ಮಾಂಜಿ, ಬೊಳಂಜೀರ್, ಕೊಲ್ಲತ್ತರು, ಡಿಸ್ಕೊ, ಮುರು, ಬೆರಕೆ (ಅನೇಕ ಬಗೆಯ ಸಣ್ಣಸಣ್ಣ ಮೀನುಗಳು)... ಹೀಗೆ ಹಲವು ಬಗೆಯ ಮೀನುಗಳು ಇವರ ಪಾಕಶಾಲೆಯಲ್ಲಿ ಪ್ರಯೋಗಕ್ಕೆ ಒಡ್ಡಿಕೊಂಡಿವೆ. ಮೀನು ತಿನ್ನುವುದು ಹೇಗೆ, ಯಾವುದರಲ್ಲಿ ಹೆಚ್ಚು ಮುಳ್ಳಿರುತ್ತದೆ, ಯಾವುದರಲ್ಲಿ ಕಡಿಮೆ ಇರುತ್ತದೆ, ಮಕ್ಕಳಿಗೆ ಯಾವ ಬಗೆಯ ಮೀನು ಕೊಡಬಹುದು... ಹೀಗೆ ಮೀನಿನ ಕುರಿತು ಹಲವು ವಿಷಯಗಳನ್ನು ಹಂಚಿಕೊಂಡಿರುವ ಅವರಿಗೆ ಬೂತಾಯಿ ಮೀನೆಂದರೆ ಅಚ್ಚುಮೆಚ್ಚು. ಹೀಗಾಗಿ , ಅವರ ಅಡುಗೆ ಮನೆಯಲ್ಲಿ ಇದೇ ಅತಿಹೆಚ್ಚು ಬಾರಿ ಕಾಣಿಸಿಕೊಂಡಿದೆ. ತವಾ ಫ್ರೈ, ರವಾ ಫ್ರೈ, ಡೀಪ್ ಫ್ರೈ, ಘೀ ರೋಸ್ಟ್, ಮೀನು ಕರಿ, ಪುಳಿಮುಂಜಿ, ಮೀನ್ಸಾರು, ಸುಟ್ಟ ಮೀನು... ಹೀಗೆ ಅವರು ತೋರಿಸಿರುವ ಬಗೆಬಗೆ ಖಾದ್ಯಗಳು ನೋಡುಗರ ಬಾಯಿಯಲ್ಲಿ ನೀರೂರಿಸುತ್ತವೆ.

'ಮೀನು ತಿನ್ನು ಬುದ್ಧಿ ಚುರುಕಾಗುತ್ತೆ' ಎಂದು ಮಂದಬುದ್ಧಿಯವರಿಗೆ ಹೇಳುವುದುಂಟು. ಮೀನು ತಿನ್ನುವುದರಿಂದ ಬುದ್ಧಿ ಚುರುಕಾಗುತ್ತದೊ ಇಲ್ಲವೊ, ಆದರೆ ಆರೋಗ್ಯವರ್ಧನೆಯಂತೂ ಖಂಡಿತ. ಸಂತುಲಿತ, ಸಮತೋಲಿತ ಆಹಾರಗಳಲ್ಲಿ ಮೀನು ಅಗ್ರಗಣ್ಯ ಎಂದೇ ಹೇಳಬಹುದು. ಜತೆಗೆ ಮೀನಿನ ಖಾದ್ಯ ತಯಾರಿಯೂ ಸುಲಭ. ಮೀನು ಸ್ವಚ್ಛಗೊಳಿಸಿದ ಬಳಿಕ ಯಾವುದೇ ಬಗೆಯ ಖಾದ್ಯವಾದರೂ 20ರಿಂದ 30 ನಿಮಿಷದೊಳಗೆ ಸಿದ್ಧಪಡಿಸಬಹುದು.

'ನಾವು ಮಾಡೊ ಎಲ್ಲ ಪದಾರ್ಥಗಳೂ ಹೊಟ್ಟೆಯನ್ನೇನೋ ತುಂಬಿಸ್ತವೆ. ಆದ್ರೆ ಮನಸ್ಸು ತುಂಬಬೇಕಲ್ಲ. ರುಚಿಯಾಗಿ ಮಾಡಿದ್ರೆ ಮಾತ್ರವೇ ಮನಸ್ಸು ತುಂಬೋದು. ನಿತ್ಯ ಮನೆಯಲ್ಲೇ ಮಾಡುವಂಥದ್ದನ್ನ ನಿಮ್ಮ ಮುಂದೆ ತೋರಿಸ್ತೇನೆ. ಯಾವ ಅಡುಗೆಯಲ್ಲಾದರೂ ಹೊಸತನ ಬಯಸ್ತೇನೆ. ಅದನ್ನೇ ಎಲ್ಲರೂ ಮೆಚ್ಚಿಕೊಂಡಿದ್ದಾರೆ. ನೀವು ಯಾವ ರೆಸಿಪಿ ತೋರ್ಸಿದ್ರೂ ರುಚಿಯಾಗಿ ಬರ್ತದೆ ಎಂದು ವೀಕ್ಷಕರು ಹೇಳುವಾಗ ಖುಷಿ ಆಗ್ತದೆ. ನನ್ನ ಅಮ್ಮಂದಿರ ವಯಸ್ಸಿನ ಕೆಲವರೂ ನನ್ನ ರೆಸಿಪಿ ಮಾಡಿ ಕಲಿತದ್ದಿದೆ. ಆಗ ಅವರ ಪ್ರತಿಕ್ರಿಯೆ ನೋಡಿ ತುಂಬಾ ಖುಷಿ ಅನಿಸ್ತದೆ. ನನ್ನ ಕಾರ್ಯಕ್ಕೆ ಸಾರ್ಥಕತೆ ಸಿಕ್ಕಹಾಗೆ ಆಗ್ತದೆ' ಎನ್ನುತ್ತಾ ನಗೆ ಬೀರಿದರು ರಶ್ಮಿ.

982 ಪಾಕ ವಿಧಾನಗಳನ್ನು ಯೂಟ್ಯೂಬ್ ಅಂಗಳದಲ್ಲಿ ಹಂಚಿಕೊಂಡಿರುವ ರಶ್ಮಿ, ಮೀನಿನ ಖಾದ್ಯಗಳಲ್ಲದೇ ಅಕ್ಕಿ, ಉದ್ದಿನಬೇಳೆಯಲ್ಲಿ ಮಾಡುವ ಸಾಂಪ್ರದಾಯಿಕ ರೆಸಿಪಿಯಾದ ಮೂಡೆ, ಮಂಗಳೂರು ಇಡ್ಲಿ ಜೊತೆಗೆ ಕೋಳಿ ಸಾರು, ಮಟನ್ ಬಾಡೂಟ, ಕೇಟರಿಂಗ್ ಶೈಲಿಯ ಮಟನ್ ಗ್ರೇವಿ, ಮೆದು ಕೋಳಿ ಸಾರು, ಘಮಘಮ ಮಟನ್ ಗಸಿ... ಹೀಗೆ ರುಚಿಭರಿತ ರೆಸಿಪಿಗಳನ್ನು ಹೇಳಿಕೊಟ್ಟಿದ್ದಾರೆ.

ಸುಮಾ ಬಿ.





ಅಡುಗೆ ರೆಸಿಪಿಯೊಂದಿಗೆ ರಶ್ಮಿ

ಬೂತಾಯಿ ಮೀನಿನ ಸುಕ್ಕ

ಜಂಜಿ ಸುಕ್ಕ, ಎಟ್ಟಿ ಸುಕ್ಕ, ಮರವಾಯಿ ಸುಕ್ಕದ ಬಗೆಗೆ ನೀವು ಕೇಳಿರಬಹುದು, ಆದರೆ ಬೂತಾಯಿ ಮೀನಿನ ಸುಕ್ಕ ಮಾಡಿರಲಿಕ್ಕಿಲ್ಲ. ಮೀನುಪ್ರಿಯರಿಗಂತೂ ಇದು ತುಂಬಾ ಸ್ಪೆಷಲ್. ರಶ್ಮಿ ಅವರ ಮುತ್ತಜ್ಜಿ ಕಾಲದ ಈ ಸಾಂಪ್ರದಾಯಿಕ ರೆಸಿಪಿ ತಯಾರಿಸುವ ವಿಧಾನ ನಿಮಗಾಗಿ:

ಬೇಕಾಗುವ ಸಾಮಗ್ರಿ ಅರ್ಧ ಕೆ.ಜಿ. ಬೂತಾಯಿ ಮೀನಿನಲ್ಲಿ ಸುಕ್ಕ ತಯಾರಿಸಲು– 15 ಒಣಮೆಣಸಿನ ಕಾಯಿ, ಒಂದು ಚಮಚ ಕೊತ್ತಂಬರಿ ಬೀಜ, 1/4 ಚಮಚ ಮೆಂತ್ಯ ಕಾಳು, ಮುಕ್ಕಾಲು ಚಮಚ ಜೀರಿಗೆ, 4–5 ಕಾಳುಮೆಣಸು, ಚಿಟಿಕೆ ಓಂಕಾಳು, ನಿಂಬೆಹಣ್ಣು ಗಾತ್ರದಷ್ಟು ಹುಣಿಸೆಹಣ್ಣು, ಅರಸಿನ, ಉಪ್ಪು.

ಒಗ್ಗರಣೆಗೆ: ಒಂದು ಚಮಚದಷ್ಟು ಶುಂಠಿ– ಬೆಳ್ಳುಳ್ಳಿ ಪೇಸ್ಟ್, ಸಣ್ಣದಾಗಿ ಕತ್ತರಿಸಿದ ಎರಡು ಈರುಳ್ಳಿ, ಅರ್ಧ ಕರಟದಷ್ಟು ಹಸಿ ಕಾಯಿತುರಿ.

ಬಾಣಲೆಯಲ್ಲಿ ಒಣಮೆಣಸಿನಕಾಯಿ, ಕೊತ್ತಂಬರಿ ಬೀಜ, ಮೆಂತ್ಯ, ಜೀರಿಗೆ, ಮೆಣಸು, ಓಂಕಾಳು ಹಾಕಿ ಡ್ರೈ ರೋಸ್ಟ್ ಮಾಡಿಕೊಳ್ಳಬೇಕು. ಇದು ತಣ್ಣಗಾದ ಬಳಿಕ ಸಣ್ಣಗೆ ಪುಡಿಮಾಡಿಕೊಳ್ಳಬೇಕು. 2– 3 ಚಮಚ ಪುಡಿ, ಅದಕ್ಕೆ 3 ಚಮಚ ಹುಣಿಸೆರಸ, ಅರ್ಧ ಚಮಚ ಅರಸಿನ, ಉಪ್ಪು ಹಾಕಿ ಗಟ್ಟಿಯಾಗಿ ಕಲಸಬೇಕು. ಇದಕ್ಕೆ ತೊಳೆದಿಟ್ಟ ಮೀನು ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ. ನಾನ್‌ಸ್ಟಿಕ್ ತವಾದಲ್ಲಿ ಎಣ್ಣೆ ಬಿಸಿ ಮಾಡಿ. ಬಳಿಕ ಮಸಾಲೆಯಲ್ಲಿ ಮಿಕ್ಸ್ ಮಾಡಿಟ್ಟ ಮೀನನ್ನು ತವಾ ಮೇಲೆ ಹಾಕಿ, ಹೈಫ್ಲೇಮ್‌ನಲ್ಲಿ ಇಟ್ಟು ಎರಡೂ ಕಡೆ ಫ್ರೈ ಮಾಡಿದ ಬಳಿಕ, ಸಣ್ಣ ಉರಿಯಲ್ಲಿ ಮತ್ತೆ ಫ್ರೈ ಮಾಡಬೇಕು. ಮಸಾಲೆ ಪುಡಿ ಉಳಿದಿದ್ದರೆ ಅದರ ಮೇಲೆ ಉದುರಿಸಬಹುದು.

ಇನ್ನೊಂದು ಬಾಣಲೆಯಲ್ಲಿ ಎಣ್ಣೆ ಬಿಸಿ ಮಾಡಿ, ಶುಂಠಿ– ಬೆಳ್ಳುಳ್ಳಿ ಪೇಸ್ಟ್, ಹೆಚ್ಚಿದ ಈರುಳ್ಳಿ, ಕಾಯಿತುರಿ ಹಾಗೂ ಉಳಿದ ಮಸಾಲೆಪುಡಿ ಹಾಕಿ ಎರಡು ನಿಮಿಷ ಚೆನ್ನಾಗಿ ಹುರಿದುಕೊಳ್ಳಬೇಕು. ನಂತರ ಹುಣಿಸೆರಸ, ಅರಸಿನ, ಉಪ್ಪು ಹಾಕಿ ಕೈಯಾಡಬೇಕು. ತಟ್ಟೆ ಮುಚ್ಚಿ ಎರಡು ನಿಮಿಷ ಬೇಯಲು ಬಿಡಬೇಕು. ಚೆನ್ನಾಗಿ ಬೆಂದ ಈ ಮಸಾಲೆಗೆ ಫ್ರೈ ಮಾಡಿದ ಮೀನು ಹಾಕಿ ಪುಡಿಯಾಗದಂತೆ ನಾಜೂಕಾಗಿ ಮಿಕ್ಸ್ ಮಾಡಬೇಕು. ಕುಚಲಕ್ಕಿ ಅನ್ನದೊಂದಿಗೆ ಬೂತಾಯಿ ಮೀನಿನ ಸುಕ್ಕ ಸವಿದರೆ ಹೆಚ್ಚು ರುಚಿಕರ.

ಫೈಬ್ರಾಯ್ಡ್ ಜಾಗ್ರತೆ ವಹಿಸಿ



ಡಾ. ವಿದ್ಯಾ ಭಟ್

ಬೆಂಗಳೂರಿನಲ್ಲಿ ಈಚೆಗೆ 50 ವರ್ಷದ ಮಹಿಳೆಯೊಬ್ಬರ ಗರ್ಭಾಶಯದಲ್ಲಿದ್ದ 7.5 ಕೆ.ಜಿ. ತೂಕದ ನಾರುಗಡ್ಡೆಯನ್ನು (ಫೈಬ್ರಾಯ್ಡ್) ಶಸ್ತ್ರಚಿಕಿತ್ಸೆಯ ಮೂಲಕ ತೆಗೆಯಲಾಯಿತು. ಗರ್ಭಾಶಯದಲ್ಲಿ ಫೈಬ್ರಾಯ್ಡ್‌ಗಳಿದ್ದರೆ ಆರೋಗ್ಯದ ಮೇಲೆ ಎಂಥ ಪರಿಣಾಮಗಳನ್ನು ಉಂಟು ಮಾಡಬಲ್ಲವು ಎಂಬುದರ ಕುರಿತು ಬೆಂಗಳೂರಿನ ರಾಧಾಕೃಷ್ಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ನಿರ್ದೇಶಕಿ ಡಾ. ವಿದ್ಯಾ ಭಟ್ ಮಾಹಿತಿ ನೀಡಿದ್ದಾರೆ

• **ಫೈಬ್ರಾಯ್ಡ್‌ಗಳು ಎಂದರೇನು? ಏಕೆ ರೂಪುಗೊಳ್ಳುತ್ತವೆ?**

ಫೈಬ್ರಾಯ್ಡ್ ಎನ್ನುವುದು ಒಂದು ಗಡ್ಡೆ. ಆದರೆ, ಅದು ಕ್ಯಾನ್ಸರ್ ಗಡ್ಡೆ ಅಲ್ಲ. ಶೇ 50ರಿಂದ 60ರಷ್ಟು ಹೆಣ್ಣುಮಕ್ಕಳ ಗರ್ಭಕೋಶದಲ್ಲಿ ಇದು ಕಂಡುಬರುತ್ತದೆ. ಹೈಪರ್ ಈಸ್ಟ್ರೊಜನಿಕ್ ಸ್ಥಿತಿಯಿಂದ, ಅಂದರೆ ಈಸ್ಟ್ರೊಜನ್ ಹಾರ್ಮೋನ್ ಹೆಚ್ಚಿನ ಪ್ರಮಾಣದಲ್ಲಿ ಬಿಡುಗಡೆಯಾದಾಗ ರೂಪುಗೊಳ್ಳುತ್ತದೆ. ಹೆಣ್ಣುಮಕ್ಕಳಲ್ಲಿ ಈ ಗಡ್ಡೆಗಳ ಸಮಸ್ಯೆ ಮೊದಲಿನಿಂದಲೂ ಇದೆ. ಆದರೆ ಈಗೀಗ ಸ್ಕ್ಯಾನಿಂಗ್ ಪರೀಕ್ಷೆಗಳು ಹೆಚ್ಚುತ್ತಿರುವುದರಿಂದ ಫೈಬ್ರಾಯ್ಡ್ ಪ್ರಕರಣಗಳು ಹೆಚ್ಚಾಗಿ ಪತ್ತೆಯಾಗುತ್ತಿವೆ.

• **ಫೈಬ್ರಾಯ್ಡ್ ಇರುವಿಕೆಯ ಲಕ್ಷಣ ಗೋಚರಿಸದೇ ಇರುವ ಸಾಧ್ಯತೆ ಇದೆಯೇ?**


ಫೈಬ್ರಾಯ್ಡ್‌ಗಳಲ್ಲಿ ಶೇ 30ರಷ್ಟು ಯಾವುದೇ ರೀತಿಯ ರೋಗಲಕ್ಷಣಗಳನ್ನೂ ತೋರಿಸುವುದಿಲ್ಲ. ಇವು ತೊಂದರೆ ಕೊಡುವುದಿಲ್ಲ. ಗರ್ಭಕೋಶದ ಒಳಗೆ ಅಥವಾ ಸ್ರಾವ ಆಗುವ ಕಡೆಗಳಲ್ಲಿ ಫೈಬ್ರಾಯ್ಡ್‌ಗಳಿದ್ದರೆ ಬೇಗ ತಿಳಿಯುತ್ತದೆ. ಕೆಲವು ಫೈಬ್ರಾಯ್ಡ್‌ಗಳು ಗರ್ಭಕೋಶದ ಮೇಲೆ ಕುಳಿತಿರುತ್ತವೆ. ಇವು ಇರುವಿಕೆಯ ಲಕ್ಷಣಗಳನ್ನು ತೋರಿಸದೇ ಇರಬಹುದು. ಆದರೆ, ಗರ್ಭಚೀಲದ ಮೇಲೆ ಒತ್ತಡ ತರಬಹುದು. ಕೆಲವು ಗರ್ಭಿಣಿಯರಲ್ಲಿಯೂ ಇಂಥ ಫೈಬ್ರಾಯ್ಡ್‌ಗಳು ಕಾಣಿಸಿಕೊಂಡ ಉದಾಹರಣೆಗಳಿವೆ. ಇದರಿಂದ ತಾಯಿಗಾಗಲಿ, ಮಗುವಿಗಾಗಲಿ ಯಾವುದೇ ರೀತಿಯ ತೊಂದರೆಯಾಗದು.

• **ಫೈಬ್ರಾಯ್ಡ್ ಇರುವಿಕೆಯನ್ನು ಪತ್ತೆ ಹಚ್ಚುವುದು ಹೇಗೆ?**

ಸ್ಕ್ಯಾನಿಂಗ್‌ನಿಂದಲೇ ಇವುಗಳ ಇರುವಿಕೆಯನ್ನು ಪತ್ತೆ ಹಚ್ಚಲಾಗುತ್ತದೆ. ಹೊಟ್ಟೆ ದಪ್ಪಗಾಗಿದ್ದರೆ, ಪದೇಪದೇ ಹೊಟ್ಟೆ ನೋವು ಬರುತ್ತಿದ್ದರೆ, ಅತಿಯಾದ ರಕ್ತಸ್ರಾವ ಆದರೆ ವೈದ್ಯರಲ್ಲಿ ಪರೀಕ್ಷೆ ಮಾಡಿಸಿಕೊಳ್ಳಬೇಕು. ಗರ್ಭಚೀಲದ ಗಾತ್ರ ಸ್ವಲ್ಪ ದೊಡ್ಡದಾಗಿದ್ದರೂ ಫೈಬ್ರಾಯ್ಡ್ ಇರಬಹುದು ಎಂದು ಅಂದಾಜಿಸಬಹುದು. ವೈದ್ಯಕೀಯ ಪರೀಕ್ಷೆಯಿಂದಲೂ ಇದನ್ನು ತಿಳಿಯಬಹುದು.

• **ಜಾಗ್ರತೆ ವಹಿಸುವುದು ಹೇಗೆ?**

ಸಾಮಾನ್ಯವಾಗಿ ಫೈಬ್ರಾಯ್ಡ್‌ಗಳು ಒಂದು ಸಣ್ಣ ಕಾಳಿನಿಂದ ಮೂಸಂಬಿ ಗಾತ್ರದವರೆಗೆ ಬೆಳೆಯಲು ಐದು ವರ್ಷ ತೆಗೆದುಕೊಳ್ಳುತ್ತವೆ. ಕೆಲವು ಫೈಬ್ರಾಯ್ಡ್‌ಗಳು ಮಾತ್ರ ಒಂದು ವರ್ಷದ ಅವಧಿಯಲ್ಲಿಯೇ ಬೇಗ ಬೆಳೆಯುತ್ತವೆ. ಅತಿಯಾದ ಹೊಟ್ಟೆನೋವು, ರಕ್ತಸ್ರಾವ ಆಗುತ್ತಿದ್ದರೆ ಕೂಡಲೇ ವೈದ್ಯರನ್ನು ಸಂಪರ್ಕಿಸಿ. ಉದರದರ್ಶಕದ ಮೂಲಕ ಫೈಬ್ರಾಯ್ಡ್ ಪತ್ತೆಹಚ್ಚಿ ಅದನ್ನು ತೆಗೆಯಬಹುದು.



ಕಾರಣವಿಲ್ಲದೆ ಬೇಸರ ಆಗುವುದೇಕೆ?



ಅಂತರಂಗ

ಅಕ್ಷರ ದಾಮ್ಲೆ , ಮನಃಶಾಸ್ತ್ರಜ್ಞ

• **ಕಾರಣವಿಲ್ಲದೆ ಆಗಾಗ ಬೇಸರವಾಗುತ್ತದೆ. ಯಾವುದರಲ್ಲಿಯೂ ಆಸಕ್ತಿ ಇರದು. ವೈರಾಗ್ಯದಂಥ ಭಾವ. ಏನೂ ಕೆಟ್ಟದ್ದು ಸಂಭವಿಸದೇ ಇದ್ದರೂ ಬದುಕಿನಲ್ಲಿ ನಿರಾಸಕ್ತಿ ಮೂಡುತ್ತದೆ. ಇದು ಖಿನ್ನತೆ ಇರಬಹುದೇ? ಈ ಭಾವದಿಂದ ಹೊರಬರುವುದು ಹೇಗೆ?**

• **ರಾಶಿ,** ಮಲೇಬೆನ್ನೂರು

ಜೀವನದ ವಿವಿಧ ಮಜಲುಗಳಲ್ಲಿ ವಿವಿಧ ಬಗೆಯ ಆಕಾಂಕ್ಷೆಗಳು ಕಾಣಿಸಿಕೊಳ್ಳುತ್ತವೆ. ಅವುಗಳಿಗೆ ಬೇರೆ ಬೇರೆ ಮೂಲ ಕಾರಣಗಳಿರಬಹುದು. ಮೊದಲು ನಾವು ಇಲ್ಲಿ ಅರ್ಥ ಮಾಡಿಕೊಳ್ಳಬೇಕಾದುದು ವೈರಾಗ್ಯ ಮತ್ತು ನಿರಾಸಕ್ತಿಯ ನಡುವಿನ ವ್ಯತ್ಯಾಸವನ್ನು. ಅವೆರಡೂ ಹೊರನೋಟಕ್ಕೆ ಒಂದೇ ಅನ್ನುವಂತೆ ಕಂಡರೂ ವಾಸ್ತವದಲ್ಲಿ ಒಂದೇ ಅಲ್ಲ!

ವೈರಾಗ್ಯವು 'ರಾಗ'ಕ್ಕೆ (ಆಸಕ್ತಿ) ವಿರುದ್ಧವಾಗಿದೆ. ವೈರಾಗ್ಯ ಎಂದರೆ ನಿರ್ಲಿಪ್ತ ಮನೋಭಾವ, ಇಂದ್ರಿಯ ಸುಖದಿಂದ ವಿಮುಖರಾಗುವುದು. ವೈರಾಗ್ಯ ಸ್ವಭಾವದ ಮನುಷ್ಯನಿಗೆ ಭೌತಿಕ ಪ್ರಪಂಚದತ್ತ ಯಾವುದೇ ಆಕರ್ಷಣೆ ಇರುವುದಿಲ್ಲ. ವೈರಾಗ್ಯವು ನಿಸ್ಸಂದೇಹವಾಗಿ, ಮನಸ್ಸು ಇಂದ್ರಿಯಗಳ ಸುಳಿಯಲ್ಲಿ ಸಿಲುಕಿಕೊಳ್ಳದ ಮಾನಸಿಕ ಸ್ಥಿತಿಯಾಗಿದೆ. ಆಗ ಮನಸ್ಸು ಆತ್ಮದ ಕಡೆಗೆ, ದೇವರ ಕಡೆಗೆ ಚಲಿಸುತ್ತದೆ. ಈಗ ನಿಮ್ಮ ಮನಸ್ಸಿನಲ್ಲಿ ಇರುವುದು ವೈರಾಗ್ಯವೋ ನಿರಾಸಕ್ತಿಯೋ ಎಂಬುದನ್ನು ನೀವೇ ಪರೀಕ್ಷಿಸಿಕೊಳ್ಳಬೇಕು.

ನಿರಾಸಕ್ತಿ ಅಂತಾದರೆ ಅದರ ಕುರಿತು ಒಂದಷ್ಟು ವಿವೇಚಿಸಬೇಕಾಗುತ್ತದೆ.

1. ನಿರಾಸಕ್ತಿ ಎಂಬುದು ಯಾವಾಗಿನಿಂದ ಶುರುವಾಯಿತು? ಘನಘೋರವಾದ ಘಟನೆಯೇ ನಿರಾಸಕ್ತಿಗೆ ಕಾರಣವಾಗಿರಬೇಕಾಗಿಲ್ಲ. ಕೆಲವೊಮ್ಮೆ ಸಣ್ಣ ಸಣ್ಣ ವಿಷಯಗಳೂ ಕಾಲಕ್ರಮೇಣ ಸೇರಿಕೊಂಡು, ಆಮೇಲೆ ಯಾವುದೋ ಒಂದು ಸಣ್ಣ ಘಟನೆಯೇ ನೆವವಾಗಿ ನಿರಾಸಕ್ತಿಯನ್ನು ಉಂಟುಮಾಡಿರಬಹುದು.
2. ನಿರಾಸಕ್ತಿಯ ಜೊತೆಗೆ ಯಾವ ರೀತಿಯ ಭಾವನೆಗಳು ನಿಮ್ಮೊಳಗೆ ಸ್ಫುರಿಸುತ್ತಿವೆ ಎಂಬುದನ್ನು ಗಮನಿಸಿ.
3. ನಿರಾಸಕ್ತಿ ಅನ್ನುವುದು ನಿಮ್ಮಲ್ಲೇ ಹುಟ್ಟಿಕೊಂಡದ್ದೋ ಅಥವಾ ಇನ್ಯಾರದ್ದೋ ಪ್ರಭಾವದಿಂದ ಆಗಿರುವುದೋ ಎಂಬುದನ್ನು ಕಂಡುಕೊಳ್ಳಿ. ಇವೆಲ್ಲಕ್ಕೂ ಉತ್ತರ ಸಿಕ್ಕಿದಾಗ ನಿಮಗೆ ನಿಮ್ಮ ನಿರಾಸಕ್ತಿಯ ಮೂಲ ಅರ್ಥವಾಗುತ್ತದೆ.

ಆಮೇಲೆ ಈ ರೀತಿಯ ಸ್ಥಿತಿಯಿಂದ ಹೊರಬರುವುದಕ್ಕೆ ಒಂದಷ್ಟು ಕ್ರಮಗಳನ್ನು ಕೈಗೊಳ್ಳಬೇಕು:

ಮೊದಲಿನಿಂದಲೂ ಇಷ್ಟವಿದ್ದ ಯಾವುದಾದರೂ ಹವ್ಯಾಸವನ್ನು ಗುರುತಿಸಿಕೊಳ್ಳಿ ಮತ್ತು ಪುನಃ ಅದರಲ್ಲಿ ತೊಡಗಿಕೊಳ್ಳಲು ಯತ್ನಿಸಿ.

ದೈನಂದಿನ ಚಟುವಟಿಕೆಗಳನ್ನು ಸರಿಪಡಿಸಿಕೊಳ್ಳಿ. ಸರಿಯಾದ ಸಮಯಕ್ಕೆ ನಿದ್ರಿಸಿ, ಸರಿಯಾದ ಸಮಯಕ್ಕೆ ಆಹಾರವನ್ನು ಸೇವಿಸಿ.

ಪ್ರತಿದಿನವೂ ತಪ್ಪದೇ ದೈಹಿಕ ವ್ಯಾಯಾಮ ಮಾಡಿ. ಆರಂಭದಲ್ಲಿ ಈ ಎಲ್ಲಾ ಚಟುವಟಿಕೆಗಳಲ್ಲಿ ತೊಡಗುವುದು ಸ್ವಲ್ಪ ಕಷ್ಟ ಎನಿಸಿದರೂ ನಿಮ್ಮನ್ನು ನೀವೇ ಪ್ರೇರೇಪಿಸಿಕೊಂಡು, ಪ್ರತಿ ಚಟುವಟಿಕೆಯನ್ನೂ ತಪ್ಪದೇ ಮಾಡಿ.

ಜೀವನದಲ್ಲಿ ಬಹಳ ಉತ್ಸುಕರಾಗಿ ಇದ್ದಂತಹ ಕಾಲದಲ್ಲಿ ನಿಮಗೆ ಖುಷಿ ಕೊಡುತ್ತಿದ್ದ ಚಟುವಟಿಕೆಗಳನ್ನು ಪುನರಾರಂಭಿಸಿ. ಹಾಗೆ ಮಾಡಿದಾಗ, ಜುಗುಪ್ಸೆ ಬಂದಿರುವ ಸ್ಥಿತಿಯಿಂದ ಉಲ್ಲಾಸದ ಕಡೆಗೆ ಮತ್ತೆ ವಾಲಬಹುದು. ಇಲ್ಲದಿದ್ದರೆ, ಈ ನಿರಾಸಕ್ತಿ ನಿಧಾನವಾಗಿ ಮುಂದುವರಿದು ಖಿನ್ನತೆಗೆ ಕಾರಣವಾಗಬಹುದು. ಹಾಗೆ ಆಗುವ ಮುನ್ನ ಎಚ್ಚರ ವಹಿಸಿ, ಮನಸ್ಸಿನ ಆರೋಗ್ಯವನ್ನು ಕಾಪಾಡಿಕೊಳ್ಳಿ.



ಮಹಿಳೆ, ಮಕ್ಕಳು, ಕುಟುಂಬ, ಸಂಬಂಧ, ಬಾಂಧವ್ಯ, ಭಾವನಾತ್ಮಕ ಬೆಸುಗೆಯಂತಹ ಸಂಗತಿಗಳ ಬಗ್ಗೆ ನೀವು ಲೇಖನ, ಲಹರಿ, ಪುಟ್ಟ ಪುಟ್ಟ ಬರಹಗಳನ್ನು 'ಭೂಮಿಕಾ'ಗೆ ಬರೆಯಬಹುದು. ಆರೋಗ್ಯಕರ ಜೀವನಶೈಲಿಗೆ ಪೂರಕವಾಗುವ ಟಿಪ್ಸ್‌ಗಳನ್ನು ಹಂಚಿಕೊಳ್ಳಬಹುದು. ನಮ್ಮ ಇ–ಮೇಲ್ ಐ.ಡಿ– bhoomika@prajavani.co.in

ಅಮ್ಮ ಹೇಳ್ತಾಳೆ



ಬೆಂಡೆಕಾಯಿ ಹುರಿಯುವಾಗ ಒಂದೆರಡು ಚಮಚ ಎಣ್ಣೆ ಹಾಕುವುದು ಸಾಮಾನ್ಯ. ಆದರೆ, ಇದರ ಜೊತೆಗೆ ಸ್ವಲ್ಪ ನಿಂಬೆರಸ ಅಥವಾ ಹುಣಿಸೆರಸ ಸೇರಿಸಿದರೆ ಬೇಗ ಲೋಳೆ ಬಿಟ್ಟುಕೊಳ್ಳುತ್ತದೆ. ಹೋಳು ಕಪ್ಪಾಗದೆ ಹಸಿರಾಗಿಯೇ ಉಳಿಯುತ್ತದೆ.



ಅಭಿಮಾನ್ ಸ್ಟುಡಿಯೊ ಭೂಮಿ ವಾಪಸ್

ವಿಷ್ಣುವರ್ಧನ್ ಸಮಾಧಿ ಇರುವ ಪ್ರದೇಶ ಬೆಂಗಳೂರು ಡಿಸಿಗೆ ಅರಣ್ಯ ಇಲಾಖೆ ಪತ್ರ


ಪ್ರಜಾವಾಣಿ ವಾರ್ತೆ



ವಿಷ್ಣುವರ್ಧನ್

ಬೆಂಗಳೂರು: ನಟ ಟಿ.ಎನ್. ಬಾಲಕೃಷ್ಣ ಅವರ ಅಭಿಮಾನ್ ಸ್ಟುಡಿಯೊಕ್ಕೆ ಮಂಜೂರು ಮಾಡಿದ್ದ, ನಟ ವಿಷ್ಣುವರ್ಧನ್ ಅವರ ಸಮಾಧಿ ತೆರವಿನಿಂದ ವಿವಾದಕ್ಕೆ ಗುರಿಯಾಗಿದ್ದ ಕೆಂಗೇರಿಯ ಅರಣ್ಯ ಭೂಮಿಯನ್ನು ವಾಪಸ್ ಪಡೆಯುವಂತೆ ಅರಣ್ಯ ಇಲಾಖೆಯು ಬೆಂಗಳೂರು ನಗರ ಜಿಲ್ಲಾಧಿಕಾರಿಗೆ ಪತ್ರ ಬರೆದಿದೆ.

'ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ಮೈಲಸಂದ್ರ ಗ್ರಾಮದ ಸರ್ವೆ ನಂ. 26ರಲ್ಲಿ ಹಂಚಿಕೆ ಮಾಡಲಾಗಿದ್ದ ಅರಣ್ಯ ಪ್ರದೇಶದ 20 ಎಕರೆ ಭೂಮಿಯ ಮಂಜೂರಾತಿ ಆದೇಶ ರದ್ದುಪಡಿಸಬೇಕು. ಇದರ ಖಾತೆಯನ್ನು ಅರಣ್ಯ ಇಲಾಖೆಗೆ ಇಂಡೀಕರಣ ಮಾಡಿಕೊಡಬೇಕು' ಎಂದು ನಗರ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಸ್. ರವೀಂದ್ರಕುಮಾರ್ ಅವರು ಬೆಂಗಳೂರು ನಗರ ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದಾರೆ.



ಅಭಿಮಾನ್ ಸ್ಟುಡಿಯೋಗೆ ನೀಡಿದ್ದ ಭೂಮಿ

ಅರಣ್ಯ ಭೂಮಿಯ ವಿವಾದದಲ್ಲಿ ಸುಪ್ರೀಂ ಕೋರ್ಟ್ 2025ರ ಮೇ 15ರಂದು ನೀಡಿರುವ ಆದೇಶದ ಮೇರೆಗೆ ನಿಗದಿತ ಉದ್ದೇಶ ಬಿಟ್ಟು ಮಾರಾಟ ಮಾಡಿರುವ ಭೂಮಿಯನ್ನು ಹಿಂಪಡೆಯಬೇಕೆಂದು 1995ರ ಟಿ.ಎನ್.ಗೋದವರ್ಮನ್ ತಿರುಮಲಪಾಡ್ ಹಾಗೂ ಕೇಂದ್ರ ಸರ್ಕಾರ, ಇತರರ ನಡುವಿನ ವ್ಯಾಜ್ಯ ಪ್ರಕರಣದ ತೀರ್ಪಿನ ಆದೇಶವನ್ನು ಆಧರಿಸಿ ಮಂಜೂರಾತಿ ರದ್ದು ಮಾಡಿ ಭೂಮಿಯನ್ನು ಅರಣ್ಯ ಇಲಾಖೆಗೆ ಮರಳಿಸಬೇಕು ಎಂದೂ ಅವರು ಕೋರಿದ್ದಾರೆ.

> ಅಭಿಮಾನ್ ಸ್ಟುಡಿಯೋದ ಜಾಗ ಅರಣ್ಯಭೂಮಿ ಎಂದು ಘೋಷಿಸಿರುವುದು ಗೊಂದಲ ಸೃಷ್ಟಿಸಿದೆ. ಅರಣ್ಯಭೂಮಿ ಎನ್ನುವ ಕಾರಣ ನೀಡಿ ಅಲ್ಲಿ ವಿಷ್ಣುವರ್ಧನ್ ಪುಣ್ಯಭೂಮಿ, ಬಾಲಕೃಷ್ಣರ ಸಮಾಧಿ ನಿರ್ಮಿಸದಂತೆ ತಡೆಯುವುದು ಬೇಡ
> **ವೀರಕಪುತ್ರ ಶ್ರೀನಿವಾಸ**, ಅಧ್ಯಕ್ಷ, ವಿಷ್ಣು ಸೇನಾ ಸಮಿತಿ

> 10 ಎಕರೆ ಅರಣ್ಯ ಭೂಮಿ ಮರಳಿ ಪಡೆಯಲು ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ. ನಟ ವಿಷ್ಣುವರ್ಧನ್ ಬಗ್ಗೆ ಗೌರವ ಇದೆ. ವಿಷ್ಣು ಸ್ಮಾರಕಕ್ಕೆ ಭೂಮಿ ನೀಡುವ ಬಗ್ಗೆ ಮುಖ್ಯಮಂತ್ರಿ ನಿರ್ಧಾರ ಮಾಡುತ್ತಾರೆ
> **ಈಶ್ವರ ಬಿ ಖಂಡ್ರೆ**, ಅರಣ್ಯ ಸಚಿವ

ಮುಂದೆ ಏನಾಗಲಿದೆ?

'ಕರ್ನಾಟಕ ಅರಣ್ಯ ಸಂರಕ್ಷಣಾ ಕಾಯ್ದೆ1980 ಜಾರಿಗೆ ಬರುವ ಮುನ್ನ ಅರಣ್ಯ ಭೂಮಿಯನ್ನು ಉದ್ಯಮ ಸ್ಥಾಪನೆ ಸಹಿತ ನಾನಾ ಉದ್ದೇಶಗಳಿಗೆ ನೀಡಲಾಗುತ್ತಿತ್ತು. ಈ ರೀತಿ ಕರ್ನಾಟಕದಲ್ಲಿ ಹಲವು ಕಡೆ ಭೂಮಿ ನೀಡಲಾಗಿದೆ. ಈ ಕಾಯ್ದೆ ಬಂದ ನಂತರ ಅರಣ್ಯ ಭೂಮಿ ನೀಡಲು ಅವಕಾಶವಿಲ್ಲ. ಹಿಂದೆ ಭೂಮಿ ನೀಡಿ ನಿಗದಿತ ಉದ್ದೇಶಕ್ಕೆ ಬಳಕೆ ಮಾಡದೇ ಇದ್ದರೆ ಅದನ್ನು ವಾಪಸ್ ಪಡೆಯಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ' ಎಂದು ಅರಣ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಮನೋಜ್ ಕುಮಾರ್ ಹೇಳಿದರು.

'ಅರಣ್ಯ ಇಲಾಖೆ, ಕಂದಾಯ ಇಲಾಖೆ ವರದಿ ಆಧರಿಸಿ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಂಡು ಅರಣ್ಯ ಭೂಮಿ ಕುರಿತು ಕೇಂದ್ರ ಸರ್ಕಾರಕ್ಕೆ ಮಾಹಿತಿ ನೀಡಲಾಗುತ್ತದೆ. ಕೇಂದ್ರ ಸರ್ಕಾರ ಅರಣ್ಯ ಭೂಮಿ ಎಂದು ಅಧಿಸೂಚನೆ ಹೊರಡಿಸಿದರೆ ಯಾವುದೇ ಉದ್ದೇಶಕ್ಕೂ ಆ ಭೂಮಿ ನೀಡಲು ಬರುವುದಿಲ್ಲ.

ಈಗ ಬೆಂಗಳೂರಿನಲ್ಲಿ ಎಚ್‌ಎಂಟಿಗೆ ನೀಡಿದ ಭೂಮಿಯ ವಿವಾದವೂ ಇದೇ ಸ್ವರೂಪದಲ್ಲಿದೆ. ಇಂತಹದೇ ಹಲವು ಪ್ರಕರಣಗಳಲ್ಲಿ ಕಾನೂನು ಹೋರಾಟ ಮುಂದುವರಿದಿದೆ' ಎಂದೂ ಅವರು ವಿವರಿಸಿದರು.

ಡಿಸಿಎಫ್ ಪತ್ರದಲ್ಲಿ ಏನಿದೆ?

- ಮೈಲಸಂದ್ರ ಗ್ರಾಮದ ಎರಡು ಸರ್ವೆ ನಂ. 22ರಲ್ಲಿ 78 ಎಕರೆ 18ಗುಂಟೆ ಹಾಗೂ ಸರ್ವೆ ನಂ. 26ರಲ್ಲಿ 62 ಎಕರೆ 20 ಗುಂಟೆ ಪ್ರದೇಶವನ್ನು ತುರಹಳ್ಳಿ ಕಾಯ್ದಿಟ್ಟ ಮೀಸಲು ಅರಣ್ಯ ಪ್ರದೇಶವೆಂದು ಘೋಷಣೆ ಮಾಡಲಾಗಿದೆ. ಒಮ್ಮೆ ಒಂದು ಪ್ರದೇಶವನ್ನು ಅರಣ್ಯ ಎಂದು ಅಧಿಸೂಚನೆ ಹೊರಡಿಸಿದ ಬಳಿಕ, ಅದನ್ನು ಅರಣ್ಯೇತರ ಎಂದು ಯಾವುದೇ ಅಧಿಸೂಚನೆ ಹೊರಡಿಸದೇ ಇದ್ದರೆ, ಅದನ್ನು ಅರಣ್ಯ ಪ್ರದೇಶ ಎಂದೇ ಪರಿಭಾವಿಸಲಾಗುತ್ತದೆ
- 1979ರ ಮಾರ್ಚ್ 21ರಂದು ಸರ್ಕಾರಿ ಆದೇಶದಲ್ಲಿ ಅಭಿಮಾನ್ ಸ್ಟುಡಿಯೊ ನಿರ್ಮಾಣ ಹೊರತಾಗಿ ಬೇರೆ ಯಾವುದೇ ಉದ್ದೇಶಕ್ಕೆ ಬಳಸಬಾರದು ಎಂದು ಷರತ್ತು ವಿಧಿಸಿ ಅನುಮತಿ ನೀಡಲಾಗಿದೆ. ಸರ್ಕಾರದ ಪೂರ್ವಾನುಮತಿ ಇಲ್ಲದೇ ಪರಭಾರೆ ಮಾಡಬಾರದು. ಹಾಗೇನಾದರೂ ಮಾಡಿದರೆ ಮಂಜೂರಾತಿ ರದ್ದುಪಡಿಸಿ ಭೂಮಿ ಹಿಂಪಡೆಯಲಾಗುವುದು ಎಂದು ಆದೇಶದಲ್ಲಿ ಉಲ್ಲೇಖಿಸಿದೆ
- ನಟ ಟಿ.ಎನ್. ಬಾಲಕೃಷ್ಣ ಅವರು ಭೂ ಪರಿವರ್ತನಾ ಶುಲ್ಕ ವಿನಾಯಿತಿ ನೀಡುವಂತೆ, ಅದೇ ವರ್ಷ ಪತ್ರ ಬರೆದಿದ್ದರು. ಐದು ವರ್ಷದೊಳಗೆ ಅಭಿಮಾನ್ ಸ್ಟುಡಿಯೊ ನಿರ್ಮಾಣ ಪೂರ್ಣಗೊಳಿಸುವಂತೆ, ಈ ಉದ್ದೇಶ ಬಿಟ್ಟು ಬೇರೆ ಕಾರಣಗಳಿಗಾಗಿ ಬಳಸಿದರೆ ಷರತ್ತಿನ ಉಲ್ಲಂಘನೆಯಾಗಲಿದ್ದು, ಮಂಜೂರಾತಿ ರದ್ದಾಗಿ ಭೂಮಿ ವಾಪಸ್ ಪಡೆದಾಗ ಯಾವುದೇ ಪರಿಹಾರವನ್ನೂ ನೀಡಲಾಗುವುದಿಲ್ಲ ಎಂದೂ ತಿಳಿಸಲಾಗಿದೆ
- ಇದಾದ ಬಳಿಕ ಟಿ.ಎನ್.ಬಾಲಕೃಷ್ಣ ಅವರ ಪುತ್ರರಾದ ಶ್ರೀನಿವಾಸ್ ಹಾಗೂ ಗಣೇಶ್ ಅವರು ಹಂಚಿಕೆ ಮಾಡಿರುವ 20 ಎಕರೆಯಲ್ಲಿ 10 ಎಕರೆ ಜಮೀನನ್ನು ಮಾರಾಟ ಮಾಡಲು ಕೋರಿದ್ದು, ಇದಕ್ಕೆ ಬೆಂಗಳೂರು ನಗರ ವಿಶೇಷ ಜಿಲ್ಲಾಧಿಕಾರಿ ಅನುಮತಿ ನೀಡಿದ್ದರು. ಮಾರಾಟ ಮಾಡಿ ಬಂದ ಹಣದಲ್ಲಿ ಸ್ಟುಡಿಯೊವನ್ನು ಅಭಿವೃದ್ಧಿಪಡಿಸಿ, ವಾಣಿ ನಿರ್ಮಿಸಬೇಕು ಎಂದು ಷರತ್ತುಗಳನ್ನೂ ವಿಧಿಸಿದ್ದರು. ಆದರೆ, ಇದರಲ್ಲಿ 12 ಎಕರೆಯನ್ನು ಮಾರಾಟ ಮಾಡಿದ್ದರೂ ಸ್ಟುಡಿಯೊವನ್ನು ನಿರ್ಮಿಸಿಲ್ಲ. ಜಾಗ ಯಥಾಸ್ಥಿತಿಯಲ್ಲಿದೆ. ಈ ಸಂಬಂಧ 2015ರಲ್ಲಿಯೇ ಗಣೇಶ್ ಅವರಿಗೆ ಜಿಲ್ಲಾಧಿಕಾರಿ ಕಚೇರಿಯಿಂದ ನೋಟಿಸ್ ಜಾರಿ ಮಾಡಲಾಗಿದೆ
- ಈಗ ಗಣೇಶ್ ಹಾಗೂ ಶ್ರೀನಿವಾಸ್ ಪುತ್ರ ಬಿ.ಎಸ್.ಕಾರ್ತಿಕ್ ಅವರು ಬಿ.ಕೆ.ರಾಘವೇಂದ್ರ ಅವರಿಗೆ ಒಂದು ಎಕರೆಗೆ ₹14.37 ಕೋಟಿಯಂತೆ (ಪ್ರತಿ ಚದರಡಿ ₹3,500) 10 ಎಕರೆಯನ್ನು 2021ರ ಆಗಸ್ಟ್ 16ರಂದು ಮಾರಾಟ ಮಾಡುವುದಾಗಿ ಒಪ್ಪಂದ ಮಾಡಿಕೊಂಡಿದ್ದಾರೆ. ಇದು ಅನಧಿಕೃತ. ಅಲ್ಲದೇ, ಮೂರನೇ ವ್ಯಕ್ತಿಯ ಮಾಲೀಕತ್ವವನ್ನು ಸೃಷ್ಟಿಸಿರುವುದು ಕಂಡು ಬಂದಿದ್ದು, 1970ರಲ್ಲಿ ವಿಧಿಸಿದ್ದ ಷರತ್ತಿನ ಉಲ್ಲಂಘನೆಯೂ ಆಗಿದೆ

ಕೆಪಿಟಿಸಿಎಲ್: ಅಂತಿಮ ಆಯ್ಕೆ ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ (ಕೆಪಿಟಿಸಿಎಲ್) ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಪವರ್‌ಮನ್ ಹುದ್ದೆಗಳ ನೇಮಕಾತಿಯ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ.

433 ಕಿರಿಯ ಸ್ಟೇಷನ್ ಪರಿಚಾರಕ ಹುದ್ದೆ, 90 ಕಿರಿಯ ಪವರ್‌ಮನ್ ಹುದ್ದೆಗಳು ಸೇರಿ ಒಟ್ಟು 523 ನಿರ್ವಹಣಾ ಪದ ವೃಂದದ ಹುದ್ದೆಗಳ ಆಯ್ಕೆ ಪಟ್ಟಿ ಪ್ರಕಟಗೊಂಡಿದೆ. ಈ ಹುದ್ದೆಗಳ ನೇಮಕಾತಿಗೆ ಮೇ ತಿಂಗಳಲ್ಲಿ ಸಹನ ಶಕ್ತಿ ಪರೀಕ್ಷೆ ನಡೆಸಲಾಗಿತ್ತು.

ಅಭ್ಯರ್ಥಿಗಳಿಂದ ನಿಗದಿತ ಸಮಯದಲ್ಲಿ ಬಂದ ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ಆಯ್ಕೆ ಪಟ್ಟಿಯನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ https://kptcl.karnataka.gov.in/recruitment ಪ್ರಕಟಿಸಲಾಗಿದೆ. ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ನಡೆದಿರುವ ಕಿರಿಯ ಪವರ್‌ಮನ್ ಹುದ್ದೆಯ ನೇಮಕಾತಿ ಆಯ್ಕೆ ಪಟ್ಟಿಗಳನ್ನು ಶೀಘ್ರವೇ ಪ್ರಕಟಿಸುವುದಾಗಿ ಇಂಧನ ಇಲಾಖೆಯ ಪ್ರಕಟಣೆ ತಿಳಿಸಿದೆ.

ಬಾನು ಮುಷ್ತಾಕ್ ಸ್ಪಷ್ಟನೆ ನೀಡಲಿ: ಸಂಸದ ಯದುವೀರ್ ಒತ್ತಾಯ

ಪ್ರಜಾವಾಣಿ ವಾರ್ತೆ

ಮೈಸೂರು: 'ಕನ್ನಡಾಂಬೆ ಕುರಿತ ಹೇಳಿಕೆಗೆ ಬಾನು ಮುಷ್ತಾಕ್ ಮೊದಲು ಸ್ಪಷ್ಟನೆ ಕೊಡಬೇಕು. ಇಲ್ಲದಿದ್ದರೆ, ಅವರು ದಸರಾ ಉದ್ಘಾಟಿಸಲು ನನ್ನ ವಿರೋಧವಿದೆ' ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಉದ್ಘಾಟನೆಗೆ ಸರ್ಕಾರ ಅವರನ್ನು ಆಯ್ಕೆ ಮಾಡಿದಾಗ ಸ್ವಾಗತಿಸಿದ್ದೆ. ಭುವನೇಶ್ವರಿ ಕುರಿತ ಅವರ ಹಳೆಯ ಭಾಷಣ ಈಚೆಗೆ ನೋಡಿದೆ. ಆ ಭಾಷಣಕ್ಕೆ ಸ್ಪಷ್ಟೀಕರಣ ಕೊಡಲಿ. ಇಲ್ಲವೇ ಹೇಳಿಕೆ ವಾಪಸ್ ಪಡೆಯಲಿ' ಎಂದು ಪ್ರತಿಕ್ರಿಯಿಸಿದರು.

'ಈ ಎರಡನ್ನೂ ಮಾಡದಿದ್ದರೆ ನನ್ನ ವಿರೋಧವಿದೆ. ಈ ವಿಷಯದಲ್ಲಿ ಪಕ್ಷದ ನಿರ್ಧಾರವೇ ನಮ್ಮ ನಿರ್ಧಾರ. ಪಕ್ಷಕ್ಕೆ ವಿರುದ್ಧವಾದ ನಿಲುವು ನನ್ನದಲ್ಲ' ಎಂದು ಸ್ಪಷ್ಟಪಡಿಸಿದರು.

'ಬಾನು ಅವರ ಹೇಳಿಕೆಯಿಂದ ನಮ್ಮ ಭಾವನೆಗಳಿಗೆ ಧಕ್ಕೆಯಾಗಿದೆ. ಅದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಅವರ ಧರ್ಮದ ಆಚರಣೆ ಬಗ್ಗೆ ನಾನು ಮಾತನಾಡಲಾರೆ. ನಮ್ಮ ಧರ್ಮದಲ್ಲಂತೂ ಮೂರ್ತಿ ಪೂಜೆಯೇ ಶ್ರೇಷ್ಠ. ಚಾಮುಂಡಿ ಮಾತೆಯ ಗೌರವಿಸಿ ದಸರಾ ಉದ್ಘಾಟನೆಗೆ ಬರಲಿ' ಎಂದರು.

> **ಕನ್ನಡ ತಾಯಿಯ ಬಗ್ಗೆ ಲಘುವಾಗಿ ಮಾತನಾಡಿದವರು ದಸರಾ ಉದ್ಘಾಟಿಸುತ್ತಿರುವುದು ವಿಷಾದನೀಯ ಸಂಗತಿಯಾಗಿದೆ**
> **ಸಿ.ಎನ್.ಮಂಜೇಗೌಡ**, ವಿಧಾನಪರಿಷತ್ ಸದಸ್ಯ

> **ಸಂಪ್ರದಾಯ ಬಿಟ್ಟು ಮಾಡುವ ಕ್ರಮವನ್ನು ಹಿಂದೂ ಸಮಾಜ ಒಪ್ಪದು. ಬಾನು ಮುಷ್ತಾಕ್ ಸ್ಪಷ್ಟೀಕರಣ ನೀಡಿದರೆ ವಿವಾದಕ್ಕೆ ತೆರೆ ಬೀಳಲಿದೆ**
> **ಪ್ರೀತಂ ಜೆ.ಗೌಡ**, ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ

'ದಸರಾ : ರಾಜಕೀಯ ಮಾಡಬೇಡಿ'

ಬೆಂಗಳೂರು: 'ಬಾನು ಮುಷ್ತಾಕ್ ಅವರು ನಾಡಹಬ್ಬ ದಸರಾ ಉದ್ಘಾಟನೆ ಮಾಡುವುದರಿಂದ ಯಾವುದೇ ರೀತಿಯ ಸಮಸ್ಯೆ ಆಗುವುದಿಲ್ಲ. ಇದನ್ನು ವಿವಾದ ಮಾಡಿ, ರಾಜಕೀಯ ಮಾಡುತ್ತಿರುವುದು ಸರಿಯಲ್ಲ' ಎಂದು ಬೆಂಗಳೂರಿನ ಜಾಮಿಯಾ ಮಸೀದಿಯ ಮುಖ್ಯ ಇಮಾಮ್ ಮೌಲಾನಾ ಮಹಮ್ಮದ್ ಮಕ್ಸೂದ್ ಇಮ್ರಾನ್ ರಶದಿ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಮ್ಮ ದೇಶದಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತರು ಸೇರಿ ಎಲ್ಲರೂ ಸೌಹಾರ್ದದಿಂದ ಇದ್ದಾರೆ. ಇಲ್ಲಿ ದೇವಸ್ಥಾನ, ಮಸೀದಿ, ಚರ್ಚ್, ಗುರುದ್ವಾರ ಎಲ್ಲವೂ ಇದೆ. ನಮ್ಮಲ್ಲಿ ಯಾವುದೇ ರೀತಿಯ ಭೇದ-ಭಾವ ಇಲ್ಲ. ಬಾನು ಮುಷ್ತಾಕ್ ಅವರು ನಾಡಹಬ್ಬ ದಸರಾ ಉದ್ಘಾಟನೆ ಮಾಡುತ್ತಿದ್ದಾರೆ. ಇದಕ್ಕಾಗಿ ಫತ್ವಾ ಹೊರಡಿಸಬೇಕಾಗಿಲ್ಲ. ಈ ಉತ್ಸವದಲ್ಲಿ ಎಲ್ಲ ಸಮುದಾಯದವರು ಭಾಗವಹಿಸಬಹುದು' ಎಂದು ಹೇಳಿದರು.

'ಮುಸ್ಲಿಂ ಸಮುದಾಯದವರು ದೇವಸ್ಥಾನಕ್ಕೆ ಹೋದರೆ ಹಿಂದೂಗಳಾಗುತ್ತಾರೆಯೇ? ಹಿಂದೂಗಳು ಮಸೀದಿಗೆ ಹೋದರೆ, ಮುಸ್ಲಿಂ ಆಗುತ್ತಾರೆಯೇ? ಶಾಸಕ ಉದಯ್ ಬಿ. ಗರುಡಾಚಾರ್ ಅವರು ಮಸೀದಿಗೆ ಬಂದು ನಮಾಜ್ ಮಾಡಿದ್ದಾರೆ, ಅವರನ್ನು ಮುಸ್ಲಿಂ ಎಂದು ಹೇಳುವುದಕ್ಕೆ ಆಗುತ್ತದೆಯೇ ಎಂದರು.

ಮುಸ್ಲಿಂ ಮುಖಂಡ ಅಬ್ದುಲ್ ರಜಾಕ್ ಸುದ್ದಿಗೋಷ್ಠಿಯಲ್ಲಿದ್ದರು.

ಧರ್ಮಾಧಿಕಾರಿ ಪರ ಭಟ್ಟಾರಕರ ಒಗ್ಗಟ್ಟು

ಧರ್ಮಸ್ಥಳದಲ್ಲಿ ಧರ್ಮಸಂರಕ್ಷಣಾ ಸಮಾವೇಶ
• ಜೈನರ ದನಿ ವಿಧಾನಸೌಧಕ್ಕೆ ಮುಟ್ಟಿಸಲು ಪಣ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): 'ಧರ್ಮಸ್ಥಳ ಕ್ಷೇತ್ರ ಮತ್ತು ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರ ಕುಟುಂಬದ ಬಗ್ಗೆ ಅವಹೇಳನ ಮುಂದುವರಿದರೆ ಜೈನರ ಧ್ವನಿಯು ವಿಧಾನಸೌಧದ ಮುಂದೆ ಮೊಳಗಲಿದೆ' ಎಂದು ಶುಕ್ರವಾರ ಇಲ್ಲಿ ನಡೆದ ಧರ್ಮಸಂರಕ್ಷಣಾ ಸಮಾವೇಶವು ಎಚ್ಚರಿಕೆ ನೀಡಿದೆ.

ಧರ್ಮಸ್ಥಳ ಮುಖ್ಯದ್ವಾರದ ಗೋಪುರದ ಬಳಿ ನಡೆದ 'ಕರ್ನಾಟಕ, ತಮಿಳುನಾಡು ಮತ್ತು ಮಹಾರಾಷ್ಟ್ರದ ಜೈನ ಕ್ಷೇತ್ರಗಳ ಭಟ್ಟಾರಕರು, ಶ್ರಾವಕ-ಶ್ರಾವಕಿಯರು ಮತ್ತು ಸ್ಥಳೀಯರ ಸಮಾವೇಶ'ದಲ್ಲಿ ವೀರೇಂದ್ರ ಹೆಗ್ಗಡೆ ಅವರನ್ನು ಸನ್ಮಾನಿಸಿ 'ನಿಮ್ಮೊಂದಿಗೆ ನಾವಿದ್ದೇವೆ' ಎಂಬ ಭರವಸೆ ನೀಡಲಾಯಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ಚೆನ್ನೈನ ಅರಿಹಂತಗಿರಿ ಜೈನಮಠದ ಧವಳಕೀರ್ತಿ ಭಟ್ಟಾರಕ ಸ್ವಾಮೀಜಿ, 'ಧರ್ಮಸ್ಥಳದ ಹೆಸರಿಗೆ ಚ್ಯುತಿಯುಂಟು ಮಾಡಲು ಹೊಟ್ಟೆಕಿಚ್ಚಿನ ಅಧರ್ಮಿಗಳು ಕುತಂತ್ರ ಮಾಡಿದ್ದಾರೆ. ಈ ಅನ್ಯಾಯವನ್ನು ಸರ್ಕಾರ ಹಿಮ್ಮೆಟ್ಟಿಸದೇ ಇದ್ದರೆ ವಿಧಾನಸೌಧಕ್ಕೆ ಹೋಗುವುದು ಖಚಿತ' ಎಂದರು.

'ಧರ್ಮಸ್ಥಳಕ್ಕೆ ಸಂಬಂಧಿಸಿದ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಲಾಗುತ್ತಿದೆ. ಇದು ಶಮನ ಆಗದೇ ಇದ್ದರೆ ಜೈನಧರ್ಮೀಯರಿಗೆ ಶೀಘ್ರದಲ್ಲಿಯೇ ಕರೆ ನೀಡಲಾಗುವುದು. ಅದಕ್ಕೆ ಓಗೊಟ್ಟು ಎಲ್ಲರೂ ವಿಧಾನಸೌಧದ ಬಳಿ ಬರಬೇಕು' ಎಂದು ಕರೆ ನೀಡಿದರು.

ಹೊಂಬುಜ ಜೈನಮಠದ ದೇವೇಂದ್ರ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯರು ಅವರು, 'ಧರ್ಮಸ್ಥಳದ ಮೇಲೆ ಮಾಡಿರುವ ಆರೋಪಗಳೆಲ್ಲ ಇಲ್ಲಿ ತೋಡಿರುವ ಗುಂಡಿಗಳಲ್ಲಿ ಮುಚ್ಚಿ ಹೋಗಿವೆ. ಆಪಕೀರ್ತಿ ತರಲು ಬಯಸುವವರು ತೋಡುವ ಗುಂಡಿಗಳಲ್ಲಿ ಮತ್ತೆ ಯಾರೂ ಬೀಳಬಾರದು' ಎಂದು ಹೇಳಿದರು.

ಸಾಹಿತಿ ಹಂಪಾ ನಾಗರಾಜಯ್ಯ ಮಾತನಾಡಿ 'ಈಗ ಧರ್ಮಸ್ಥಳಕ್ಕೆ ಆಗಿರುವ ನೋವು ಇಡೀ ಸಮಾಜದ ನೋವು. ಆದ್ದರಿಂದ ನಾವೆಲ್ಲ ಈ ಕ್ಷೇತ್ರದ ಜೊತೆ ಇರುವುದಾಗಿ ತಿಳಿಸಲು ಬಂದಿದ್ದೇವೆ. ಅಗಾಧ ಸಂಯಮ ಇರುವ ವೀರೇಂದ್ರ ಹೆಗ್ಗಡೆಯವರು ಭಗವದ್ಗೀತೆಯಲ್ಲಿ ಹೇಳಿರುವ ಸ್ಥಿತಪ್ರಜ್ಞರ ಲಕ್ಷಣಗಳ ಮನುಷ್ಯ ರೂಪ. ಮೌನಕ್ಕೆ ಮಹಾಶಕ್ತಿ ಇದೆ ಎಂಬುದನ್ನು ಈ ಪ್ರಕರಣದಲ್ಲಿ ಅವರು ತೋರಿಸಿ ಕೊಟ್ಟಿದ್ದಾರೆ. ಆ ಮೌನಕ್ಕೆ ಈಗ ಕರ್ನಾಟಕವೇ ದನಿಯಾಗಿದೆ' ಎಂದರು.

ವರೂರು ಜೈನಮಠದ ಧರ್ಮಸೇನ ಭಟ್ಟಾರಕ ಪಟ್ಟಾಚಾರ್ಯ, ಆರತಿಪುರದ ಸಿದ್ಧಾಂತಕೀರ್ತಿ ಭಟ್ಟಾರಕ ಪಟ್ಟಾಚಾರ್ಯ, ಕಾರ್ಕಳದ ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯ, ಸೋಂದಾ ಮಠದ ಭಟ್ಟಾಕಲಂಕ ಭಟ್ಟಾರಕ ಪಟ್ಟಾಚಾರ್ಯ, ನರಸಿಂಹರಾಜಪುರ ಜೈನಮಠ ಲಕ್ಷ್ಮಿಸೇನ ಭಟ್ಟಾರಕ ಪಟ್ಟಾಚಾರ್ಯ, ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ, ಹೇಮಾವತಿ ಹೆಗ್ಗಡೆ, ಡಿ.ಸುರೇಂದ್ರ ಕುಮಾರ್, ಡಿ.ಹರ್ಷೇಂದ್ರ ಕುಮಾರ್ ಅವರು ಪಾಲ್ಗೊಂಡಿದ್ದರು.

'ಇನ್ನಷ್ಟು ಧೈರ್ಯ ಬಂದಿದೆ...'

'ಸತ್ಯ ಇರುವುದು ಒಂದೇ. ಅದಕ್ಕೆ ಒಂದೇ ಮುಖವಿದೆ. ಆದ್ದರಿಂದ ಎಲ್ಲವನ್ನು ಸ್ವಾಮಿಯ (ಮಂಜುನಾಥ) ಮೇಲೆ ಬಿಟ್ಟಿದ್ದೇನೆ. ಸ್ವಾಮೀಜಿಗಳು ಬಂದು ಬೆಂಬಲ ಸೂಚಿಸಿದ್ದರಿಂದ ಇನ್ನಷ್ಟು ಧೈರ್ಯ ಬಂದಿದೆ' ಎಂದು ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಹೇಳಿದರು.

'ಧರ್ಮಸ್ಥಳಕ್ಕೆ ಜನರು, ಸ್ವಾಮೀಜಿಗಳ ಬೆಂಬಲವಿದೆ. ಹೋರಾಟ ನಡೆಸುವುದಾಗಿ ಅನೇಕ ಮಹಿಳೆಯರು ಹೇಳಿದ್ದಾರೆ. ಈಗ ಯಾರೂ ಸಂಯಮ ಕಳೆದುಕೊಳ್ಳಬಾರದು. ಎಲ್ಲರೂ ಸಂಯಮ ಪಾಲಿಸಬೇಕು' ಎಂದರು.


ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರನ್ನು ಧರ್ಮಸಂರಕ್ಷಣಾ ಸಮಾವೇಶದಲ್ಲಿ ಭಟ್ಟಾರಕರು ಗೌರವಿಸಿದರು

ಜಾತಿ, ಧರ್ಮದ ಬೇಧವಿಲ್ಲದೆ ಸೇವೆ ಮಾಡುತ್ತಿರುವ ವೀರೇಂದ್ರ ಹೆಗ್ಗಡೆ ಅವರ ಮನಸ್ಸು ನೋಯಿಸಿದರೆ ಸಮಾಜವೇ ನಾಶ ಆಗಲಿದೆ
ಧವಳಕೀರ್ತಿ ಭಟ್ಟಾರಕ ಸ್ವಾಮೀಜಿ, ಅರಿಹಂತಗಿರಿ ಜೈನಮಠ, ಚೆನ್ನೈ

ದುಃಖ ದುಮ್ಮಾನ ಮರೆಯಲು ಬರುವ ಪವಿತ್ರವಾದ ಜಾಗ ಧರ್ಮಸ್ಥಳವನ್ನು ಅಗೆದಾಗಲೇ ಕುತಂತ್ರಿಗಳಿಗೆ ಕೇಡುಗಾಲ ಶುರುವಾಗಿದೆ
ಭುವನಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಸ್ವಾಮೀಜಿ, ಕನಕಗಿರಿ

ಹೆಗ್ಗಡೆ ಅವರು ದೊಡ್ಡ ಪರೀಕ್ಷೆ ಎದುರಿಸಿ, ಅದರಲ್ಲಿ ರ್‍ಯಾಂಕ್‌ನೊಂದಿಗೆ ತೇರ್ಗಡೆ ಹೊಂದಿದ್ದಾರೆ. ಇನ್ನು ಆತಂಕಪಡುವಂಥಾದ್ದು ಏನೂ ಇಲ್ಲ
ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯ, ಶ್ರವಣಬೆಳಗೊಳ ಜೈನಮಠ

'ಧರ್ಮಸ್ಥಳದ ಆಸ್ತಿ ಕಬಳಿಸಲು ಬಿಜೆಪಿ ಹುನ್ನಾರ'

ಮಾಗಡಿ (ರಾಮನಗರ): 'ಧರ್ಮಸ್ಥಳ ಆಸ್ತಿ ಕಬಳಿಸುವುದು ಬಿಜೆಪಿಯ ಆಂತರಿಕ ಯೋಜನೆಯಾಗಿದೆ. ಅದಕ್ಕಾಗಿಯೇ ಬಿಜೆಪಿಯವರು ಧರ್ಮಸ್ಥಳದ ವಿಷಯದಲ್ಲಿ ರಾಜಕಾರಣ ಮಾಡುತ್ತಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಶುಕ್ರವಾರ ಇಲ್ಲಿ ಮಾತನಾಡಿ, 'ಧರ್ಮಸ್ಥಳದ ಆಸ್ತಿ ಕಬಳಿಸಲು ರಾಜ್ಯ ಸರ್ಕಾರ ಹುನ್ನಾರ ನಡೆಸಿದೆ' ಎನ್ನುವ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರಿಗೆ ಬುದ್ಧಿಭ್ರಮಣೆಯಾಗಿದೆ. ಅವರಿಗೆ ತಾನೇನು ಮಾತನಾಡುತ್ತೇನೆ ಎಂಬ ಅರಿವು ಇರುವುದಿಲ್ಲ' ಎಂದು ವಾಗ್ದಾಳಿ ನಡೆಸಿದರು.

ಎಸ್‌ಐಟಿ ಕಚೇರಿ, ಬೆಳ್ತಂಗಡಿ ಠಾಣೆಗೆ ತಿಮರೋಡಿ ಹಾಜರು

ಬೆಳ್ತಂಗಡಿ (ದಕ್ಷಿಣ ಕನ್ನಡ): ಧರ್ಮಸ್ಥಳ ಬೆಳವಣಿಗೆಗೆ ಸಂಬಂಧಿಸಿ ಸಾಕ್ಷಿ ದೂರುದಾರನಿಗೆ ಆಶ್ರಯ ನೀಡಿದ್ದ ಆರೋಪದಲ್ಲಿ ಮಹೇಶ್ ಶೆಟ್ಟಿ ತಿಮರೋಡಿ ಅವರನ್ನು ಎಸ್‌ಐಟಿ ಅಧಿಕಾರಿಗಳು ವಿಚಾರಣೆಗೊಳಪಡಿಸಿದರು.

ನೋಟಿಸ್ ನೀಡಿದ್ದರಿಂದ ಶುಕ್ರವಾರ ಮಧ್ಯಾಹ್ನ ಎಸ್‌ಐಟಿ ಕಚೇರಿಗೆ ತಿಮರೋಡಿ ಹಾಜರಾದರು. ಅಧಿಕಾರಿಗಳು ಅವರಿಂದ ಹೇಳಿಕೆ ದಾಖಲಿಸಿಕೊಂಡರು.

'ಮಗಳು ಅನನ್ಯಾ ಭಟ್ ವರ್ಷಗಳ ಹಿಂದೆ ಧರ್ಮಸ್ಥಳದಲ್ಲಿ ನಾಪತ್ತೆಯಾಗಿದ್ದಾಳೆ' ಎಂದು ದೂರು ನೀಡಿದ್ದ ಸುಜಾತಾ ಭಟ್ ನಾಲ್ಕನೇ ದಿನವೂ ಎಸ್‌ಐಟಿ ಕಚೇರಿಯಲ್ಲಿ ವಿಚಾರಣೆಗೆ ಹಾಜರಾದರು. ಅವರನ್ನು ವಶಕ್ಕೆ ಪಡೆಯಬೇಕೇ ಬೇಡವೇ ಎಂಬುದರ ಬಗ್ಗೆ ನಿರ್ಧಾರಕ್ಕೆ ಬಂದಿಲ್ಲ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಬೆಳ್ತಂಗಡಿ ಠಾಣೆಗೂ ಹಾಜರು: ಅಲ್ಲದೆ, ತಿಮರೋಡಿ ಅವರು ವಿಚಾರಣೆಗಾಗಿ ಬೆಳ್ತಂಗಡಿ ಠಾಣೆಗೂ ಹಾಜರಾಗಿದ್ದರು.

ಉಡುಪಿ ಜಿಲ್ಲೆಯ ಬ್ರಹ್ಮಾವರ ಠಾಣೆ ಪೊಲೀಸರು ಮಹೇಶ್ ಶೆಟ್ಟಿ ತಿಮರೋಡಿ ಬಂಧಿಸಲು ಆ.21ರಂದು ತೆರಳಿದ್ದಾಗ, ಕರ್ತವ್ಯಕ್ಕೆ ಅಡ್ಡಿಪಡಿಸಿ ಸಂಬಂಧದ ಪ್ರಕರಣದ ಇವರು 3ನೇ ಆರೋಪಿಯಾಗಿದ್ದಾರೆ.

ನಿರೀಕ್ಷಣಾ ಜಾಮೀನು ಪಡೆಯಲ್ಲ: ಎಸ್‌ಐಟಿ ಕಚೇರಿಗೆ ಗಿರೀಶ ಮಟ್ಟೆಣ್ಣವರ ಕೂಡ ಶುಕ್ರವಾರ ಹಾಜರಾದರು. ಈ ವೇಳೆ ಮಾತನಾಡಿದ ಅವರು, 'ನನ್ನನ್ನು ಜೈಲಿಗೆ ಹಾಕುವ ಹುನ್ನಾರ ಮಾಡಿದರೆ ನಿರೀಕ್ಷಣಾ ಜಾಮೀನು ಪಡೆಯದೆ ಗಾಂಧಿ ತತ್ವದಡಿ ಹೋರಾಡಲು ನಿರ್ಧರಿಸಿದ್ದೇನೆ' ಎಂದು ತಿಳಿಸಿದರು.

'ಶವಗಳನ್ನು ಹೂತಿರುವಲ್ಲಿ ಅಕ್ರಮ ನಡೆದಿದೆ. ಎಸ್‌ಐಟಿ ತನಿಖೆ ಸರಿಯಾದ ಹಾದಿಯಲ್ಲಿ ಸಾಗುತ್ತಿದೆ. ಅದನ್ನು ಹಾಳುಮಾಡುವ ಪ್ರಯತ್ನ ಮಾಡಬಾರದು' ಎಂದು ಅವರು ಹೇಳಿದರು.

ಆರ್ಥಿಕ ನೆರವಿನ ತನಿಖೆ: ತಿಮರೋಡಿ ಮತ್ತು ಅವರ ಜೊತೆಗಿರುವವರು ಸಾಕ್ಷಿ ದೂರುದಾರನಿಗೆ ಆರ್ಥಿಕ ನೆರವು ನೀಡಿದ್ದಾರೆ ಎಂಬ ಆರೋಪ ಕುರಿತು ತನಿಖೆ ನಡೆಯುತ್ತಿದೆ. ಈಗ ವಿವರಗಳನ್ನು ಬಹಿರಂಗ ಮಾಡಿದರೆ ಸಾಕ್ಷ್ಯ ನಾಶ ಆಗುವ ಸಾಧ್ಯತೆ ಇದೆ ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ತನಿಖಾ ವರದಿಯನ್ನು ಕೋರ್ಟ್‌ಗೆ ಸಲ್ಲಿಸಲಾಗುವುದು ಎಂದು ತಿಳಿಸಿವೆ.

ಕ್ಷೇತ್ರವನ್ನು ವಿವಾದಿತ ಕೇಂದ್ರವಾಗಿಸಲು ಯತ್ನ: ಸುತ್ತೂರು ಶ್ರೀ ವಿಷಾದ

ಮೈಸೂರು: 'ಧರ್ಮಸ್ಥಳ ಕ್ಷೇತ್ರವನ್ನು ವಿವಾದಿತ ಕೇಂದ್ರವಾಗಿಸಲು ಕೆಲವರು ಯತ್ನಿಸುತ್ತಿರುವುದು ವಿಷಾದನೀಯ' ಎಂದು ಸುತ್ತೂರು ಕ್ಷೇತ್ರದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದ್ದಾರೆ.

'ಕ್ಷೇತ್ರದ ಪರಿಸರದಲ್ಲಿ ನಡೆದ ಕೆಲವು ಅಸಹಜ ಸಾವಿನ ಪ್ರಕರಣ ಗಂಭೀರವಾದುವೇ ಆಗಿರಬಹುದು. ಆದರೆ, ಅವುಗಳನ್ನು ಶ್ರೀಕ್ಷೇತ್ರದೊಂದಿಗೆ ತಳಕು ಹಾಕುವುದು ದುಡುಕಿನ ನಿರ್ಧಾರವಾಗುತ್ತದೆ' ಎಂದು ತಿಳಿಸಿದ್ದಾರೆ.

'ತನಿಖೆ ಮಾಡಿ ಸತ್ಯದ ಅನಾವರಣ ಮಾಡುವುದು ಸರ್ಕಾರದ ಹೊಣೆ. ಅದಕ್ಕಾಗಿ ಎಸ್‌ಐಟಿ ರಚನೆ ಆಗಿದ್ದು, ಸದ್ಭಕ್ತರು ಸಂಯಮದಿಂದ ಇರಬೇಕು' ಎಂದು ಈ ಕುರಿತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಜೆಪಿ ವಿರೋಧ ಏಕೆ: ಲಾಡ್ ಪ್ರಶ್ನೆ

'ಧರ್ಮಸ್ಥಳ ಪ್ರಕರಣದ ತನಿಖೆಯನ್ನು ಎಸ್‌ಐಟಿಗೆ ಒಪ್ಪಿಸಿದ್ದನ್ನು ಬಿಜೆಪಿ ಆರಂಭದಲ್ಲಿ ಸ್ವಾಗತಿಸಿತ್ತು. ಈಗ ವಿರೋಧಿಸುತ್ತಿರುವುದು ಏಕೆ' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬಿಜೆಪಿಯವರು ರಾಜಕೀಯ ಲಾಭಕ್ಕಾಗಿ ಹೋರಾಡುತ್ತಿದ್ದಾರೆ. ಇದು, ಅಂತರರಾಷ್ಟ್ರೀಯ ವಿಷಯವಾಗಿದೆ. ತನಿಖೆಯಿಂದ ಸತ್ಯ ಹೊರಬರಲಿದೆ' ಎಂದರು.

'ಜಡ್ಜ್ ಆಗುವುದು ಬೇಡ'

'ಎಸ್‌ಐಟಿ ತನಿಖಾ ವರದಿ ಬರುವವರೆಗೆ ಯಾರೂ ನ್ಯಾಯಾಧೀಶರಾಗುವುದು ಬೇಡ. ಶಿಕ್ಷಣ ಸಂಸ್ಥೆಯನ್ನು ಕಟ್ಟುವುದು ಕಷ್ಟ. ಕಪ್ಪು ಚುಕ್ಕೆ ಇಡುವುದು ಸುಲಭ' ಎಂದು ಸ್ಪೀಕರ್ ಯು.ಟಿ.ಖಾದರ್ ತಿಳಿಸಿದರು.

ವಕೀಲ ಜಗದೀಶ್ ವಿಚಾರಣೆ

ಬೆಳ್ತಂಗಡಿ: ಜಾಲತಾಣದಲ್ಲಿ ಧರ್ಮಸ್ಥಳದ ಬಗ್ಗೆ ಅವಹೇಳನಕಾರಿ ಹೇಳಿಕೆಗೆ ಸಂಬಂಧಿಸಿದ ವಿಡಿಯೊ ಹಂಚಿದ ಪ್ರಕರಣದಲ್ಲಿ ವಕೀಲ ಜಗದೀಶ್ ಶುಕ್ರವಾರ ವಿಚಾರಣೆಗಾಗಿ ಬೆಳ್ತಂಗಡಿ ಠಾಣೆಗೆ ಹಾಜರಾದರು.

ಧರ್ಮಸ್ಥಳ ನಿವಾಸಿ ಪ್ರಭಾಕರ್ ಗೌಡ ಅವರು ಆ.13ರಂದು ಜಗದೀಶ್ ವಿರುದ್ಧ ದೂರು ದಾಖಲಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಮರ್ಯಾದೆಗೇಡು ಹತ್ಯೆ–ತಂದೆ ಸೆರೆ

ಕಲಬುರಗಿ: ಅನ್ಯಜಾತಿ ಯುವಕನನ್ನು ಪ್ರೀತಿಸುತ್ತಿದ್ದ ಮಗಳನ್ನು ತಂದೆಯೇ ಕತ್ತು ಹಿಸುಕಿ ಮರ್ಯಾದೆಗೇಡು ಹತ್ಯೆ ಮಾಡಿರುವ ಘಟನೆ ತಾಲ್ಲೂಕಿನ ಮೇಳಕುಂದಾ (ಬಿ) ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಯುವತಿ ಕವಿತಾ ಕೊಳ್ಳುರ (18) ಮೃತರು. ಯುವತಿಯ ತಂದೆ ಶಂಕರ ಕೊಳ್ಳುರ ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಲಿಂಗಾಯತ ಸಮುದಾಯದ ಯುವತಿಯು ಗ್ರಾಮದ ಕುರುಬ ಜಾತಿಯ ಆಟೊ ಚಾಲಕನ ಪ್ರೀತಿಸುತ್ತಿದ್ದಳು. 'ಆ ಯುವಕನನ್ನೇ ಮದುವೆ ಆಗುವೆ. ಇಲ್ಲ ಮನೆ ಬಿಟ್ಟು ಹೋಗುವೆ' ಎಂದು ಪಟ್ಟು ಹಿಡಿದಿದ್ದಳು.

ಈ ಕುರಿತು ಆ.27ರಂದು ಯುವತಿ ಹಾಗೂ ಕುಟುಂಬದ ನಡುವೆ ಮತ್ತೆ ಗಲಾಟೆ ನಡೆದಿತ್ತು. ಮಗಳು ಅನ್ಯಜಾತಿ ಯುವಕನ ಜೊತೆ ಹೋದರೆ, ಮರ್ಯಾದೆ ಹೋಗುತ್ತದೆ ಎಂದುಕೊಂಡು ತಂದೆ ಹಾಗೂ ಇತರ ಇಬ್ಬರು ಸೇರಿಕೊಂಡು ಯುವತಿಯ ಕತ್ತು ಹಿಸುಕಿ ಕೊಲೆ ಮಾಡಿದ್ದಾರೆ. ನಂತರ ಯುವತಿ ಬಾಯಲ್ಲಿ ಕ್ರಿಮಿನಾಶಕ ಹಾಕಿದ್ದಾರೆ. ವಿಷ ಕುಡಿದು ಮೃತಪಟ್ಟಿದ್ದಾಳೆ ಎಂದು ಗ್ರಾಮದಲ್ಲಿ ಸುದ್ದಿ ಹಬ್ಬಿಸಿ, ಆಗಸ್ಟ್ 28ರಂದು ಬೆಳಿಗ್ಗೆ 9 ಗಂಟೆ ಹೊತ್ತಿಗೆ ಶವವನ್ನು ಸುಟ್ಟು ಹಾಕಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಯುವತಿಯ ತಂದೆಯನ್ನು ಬಂಧಿಸಲಾಗಿದೆ. ಈ ಕೃತ್ಯಕ್ಕೆ ನೆರವಾದ ಇಬ್ಬರ ಬಗ್ಗೆ ಮಾಹಿತಿ ಸಿಕ್ಕಿದೆ' ಎಂದು ನಗರ ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ. ತಿಳಿಸಿದ್ದಾರೆ. ಫರಹತಾಬಾದ್ ಠಾಣೆ ಪೊಲೀಸರು ಈ ಕುರಿತು ಮೂವರ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದ್ದಾರೆ.

ಮಾದಕ ವಸ್ತು ವಿರುದ್ಧ ಜಾಗೃತಿಗೆ ಬೈಕ್ ಜಾಥಾ



ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಜಾಗೃತಿಗಾಗಿ ಚಾಮರಾಜನಗರ ಜಿಲ್ಲೆಯಿಂದ ಬೀದರ್‌ವರೆಗೆ ನಡೆಯುವ ಬೈಕ್ ಜಾಥಾಗೆ ಶುಕ್ರವಾರ ಚಾಲನೆ ದೊರೆಯಿತು.

ಕೇಂದ್ರ ಸರ್ಕಾರದ 'ನಶಾ ಮುಕ್ತ ಭಾರತ ಅಭಿಯಾನ'ದ ಅಂಗವಾಗಿ ಆ.31ರವರೆಗೆ ನಡೆಯುವ ಜಾಥಾದಲ್ಲಿ ವಿವಿಧ ಜಿಲ್ಲೆಗಳ 20 ಬೈಕ್ ಸವಾರರು ಭಾಗವಹಿಸಿದ್ದಾರೆ.

ಜಾಥಾ ಸಾಗುವ ಮಾರ್ಗದ ವಿವಿಧೆಡೆ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಪ್ರತಿಜ್ಞಾವಿಧಿ ಸ್ವೀಕರಿಸಲಿರುವುದು ವಿಶೇಷ.

ದೇಶದಾದ್ಯಂತ 1 ಲಕ್ಷ ಕಿ.ಮೀ ಸೈಕ್ಲಿಂಗ್ ಮಾಡಿರುವ ರೈಡರ್ ನಂದಿನಿ ಮಿಥುನ್ ಜಾಥಾದಲ್ಲಿ ಭಾಗವಹಿಸಿ ಅನುಭವ ಹಂಚಿಕೊಳ್ಳಲಿದ್ದಾರೆ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಅರಣ್ಯ, ಗೃಹ, ಪ್ರವಾಸೋದ್ಯಮ ಇಲಾಖೆ, ಎನ್.ಎಸ್.ಎಸ್, ಎನ್.ಸಿ.ಸಿ ಸೇರಿ 15 ಅಧಿಕಾರಿಗಳ ತಂಡವೂ ಭಾಗವಹಿಸಿದೆ.

960 ಕಿ.ಮೀ ದೂರದ ಜಾಥಾ ಮೊದಲ ದಿನ ಬೆಂಗಳೂರಿನಲ್ಲಿ, ಎರಡನೇ ದಿನ ವಿಜಯನಗರದ ಹಂಪಿಯಲ್ಲಿ ತಂಗಲಿದ್ದು, 31ರಂದು ಬೀದರ್ ತಲುಪಲಿದೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸಫಾರಿ ಕೇಂದ್ರದ ಬಳಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಸ್. ಪ್ರಭಾಕರನ್ ಚಾಲನೆ ನೀಡಿದರು.

ಚಿತ್ರದುರ್ಗದ ಕಾಂಗ್ರೆಸ್ ಶಾಸಕ ವೀರೇಂದ್ರ ವಿರುದ್ಧದ ಬೆಟ್ಟಿಂಗ್ ಆರೋಪದ ಪ್ರಕರಣ

ಅನಿಲ್ ಗೌಡ ವಿಚಾರಣೆ ಜರೂರಿದೆ: ಇ.ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ.ವೀರೇಂದ್ರ ವಿರುದ್ಧದ ಅಕ್ರಮ ಆನ್ ಲೈನ್ ಮತ್ತು ಆಫ್ ಲೈನ್ ಬೆಟ್ಟಿಂಗ್ ಆರೋಪದ ಪ್ರಕರಣ ಸಾಮಾನ್ಯವಾದುದಲ್ಲ. ಹಾಗಾಗಿ, ಅವರ ಆರ್ಥಿಕ ವ್ಯವಹಾರಗಳ ಪ್ರಮುಖ ಪಾಲುದಾರ ಎಚ್.ಅನಿಲ್ ಗೌಡ ವಿಚಾರಣೆ ಅತ್ಯಂತ ಜರೂರಾಗಿದೆ' ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಹೈಕೋರ್ಟ್‌ಗೆ ಅರುಹಿದೆ.

'ಇ.ಡಿ ಅಧಿಕಾರಿಗಳು ನನಗೆ ಜಾರಿಗೊಳಿಸಿರುವ ಸಮನ್ಸ್ ರದ್ದುಪಡಿಸಬೇಕು' ಎಂದು ಕೋರಿ ವಕೀಲರೂ ಆದ ರಾಜರಾಜೇಶ್ವರಿ ನಗರದ ನಿವಾಸಿ, ಕಾಂಗ್ರೆಸ್ ಮುಖಂಡ ಹನುಮಂತರಾಯಪ್ಪ ಅವರ ಪುತ್ರ ಎಚ್.ಅನಿಲ್ ಗೌಡ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರ ಅನಿಲ್ ಗೌಡ ಪರ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ವಿಕಾಸ್ ಪಹ್ವಾ, 'ಅರ್ಜಿದಾರರು ವೃತ್ತಿನಿರತ ವಕೀಲರಿದ್ದು ಅವರಿಗೆ ಸಮನ್ಸ್ ಜಾರಿಗೊಳಿಸಿ ತನಿಖೆಗೆ ಬರಮಾಡಿಕೊಳ್ಳುವ ಇ.ಡಿ ಇರಾದೆಯು ಸುಪ್ರೀಂ ಕೋರ್ಟ್‌ನ ತೀರ್ಪಿಗೆ ವಿರುದ್ಧವಾಗಿದೆ. ಆದ್ದರಿಂದ, ಅವರಿಗೆ ಜಾರಿಗೊಳಿಸಿರುವ ಸಮನ್ಸ್ ರದ್ದುಪಡಿಸಬೇಕು. ಅರ್ಜಿ ಇತ್ಯರ್ಥ ವಾಗುವತನಕ ಸಮನ್ಸ್‌ಗೆ ತಡೆ ನೀಡಬೇಕು ಹಾಗೂ ಅರ್ಜಿದಾರರ ವಿರುದ್ಧ ಬಲವಂತದ ಕ್ರಮ ಜರುಗಿಸದಂತೆ ಇ.ಡಿಗೆ ನಿರ್ದೇಶಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

'ಅನಿಲ್ ಗೌಡ ಶಾಸಕ ವೀರೇಂದ್ರ ಅವರಿಗೆ ಕಾನೂನು ಸಲಹೆಗಾರ. ವೀರೇಂದ್ರ ಅವರ ಕಂಪನಿಗಳಲ್ಲಿ ಹೂಡಿಕೆ ಮಾಡಿದ್ದಾರೆಯೇ ಹೊರತು ಕಂಪನಿಯ ದೈನಂದಿನ ವ್ಯವಹಾರಗಳಲ್ಲಿ ಭಾಗಿಯಾಗಿಲ್ಲ. ಇ.ಡಿ ತನ್ನ ಅಧಿಕಾರ ವ್ಯಾಪ್ತಿ ಮೀರಿ, ರಾಜಕೀಯ ಪ್ರೇರಿತ ಮತ್ತು ದುರುದ್ದೇಶದಿಂದ ಸಮನ್ಸ್ ಜಾರಿ ಮಾಡಿ ಅವರಿಂದ ದಾಖಲೆಗಳನ್ನು ಕೇಳಿದೆ. ಹಾಗಾಗಿ, ಅವರನ್ನು ವಿಚಾರಣೆಗೆ ಒಳಪಡಿಸದಂತೆ ಇ.ಡಿಗೆ ನಿರ್ದೇಶಿಸಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಯಾಗಿ ಇ.ಡಿ ಪರ ವಕೀಲ ಮಧುಕರ ಎಂ.ದೇಶಪಾಂಡೆ, 'ವಕೀಲಿಕೆಯ ಹೆಸರಿನಲ್ಲಿ ಅಪರಾಧ ಪ್ರಕರಣಗಳನ್ನು ಎಸಗಿ ಅದರಿಂದ ರಕ್ಷಣೆ ಪಡೆಯಲಾಗದು. ಅನಿಲ್ ಗೌಡ ಅವರು ಕೆ.ಸಿ.ವೀರೇಂದ್ರ ಅವರ ಕಂಪನಿಗಳಲ್ಲಿ ಸಕ್ರಿಯ ಪಾಲುದಾರರಾಗಿದ್ದಾರೆ. ಈ ಕಂಪನಿಗಳಲ್ಲಿ ಅಕ್ರಮ ಹಣ ಹೂಡಿಕೆಯ ಬಗ್ಗೆ ಗಂಭೀರ ಆರೋಪಗಳಿವೆ. ಹಾಗಾಗಿ, ಅನಿಲ್ ಗೌಡ ಅವರ ಹಣ ಹೂಡಿಕೆಯ ಬಗ್ಗೆ ಪರಿಶೀಲನೆ ನಡೆಸುವ ಜರೂರಿದೆ' ಎಂದರು. ವೀರೇಂದ್ರ ಕಂಪನಿಗಳಿಗೆ ಸಂಬಂಧಿಸಿದ ಆ್ಯಪ್‌ಗಳ ಮುಖಾಂತರ ಲಕ್ಷಾಂತರ ಜನರು ಹಣ ಹೂಡಿಕೆ ಮಾಡಿ ಕಳೆದುಕೊಂಡಿದ್ದಾರೆ. ಅಷ್ಟಕ್ಕೂ ವಕೀಲನಾಗಿ ವಾಣಿಜ್ಯ ಕಂಪನಿಗಳ ಪಾಲುದಾರರಾಗುವಂತಿಲ್ಲ. ನಾವು ಅವರಿಂದ ಅವರ ಲ್ಯಾಪ್‌ಟಾಪ್, ಮೊಬೈಲ್ ವಿವರ ಮತ್ತಿತರೆ ಸಂಬಂಧಿತ ದಾಖಲೆಗಳನ್ನು ಕೇಳಿದ್ದೇವೆಯೇ ಹೊರತು ಅವರ ವಕೀಲ ವೃತ್ತಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವ ಇಚ್ಛೆ ಹೊಂದಿಲ್ಲ' ಎಂದು ಪ್ರತಿಪಾದಿಸಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಸೆ.1ಕ್ಕೆ ಮುಂದೂಡಿತು.

'ವರ್ಗಾವಣೆಗೆ ಶಾಸಕರ ಶಿಫಾರಸು ತಪ್ಪಲ್ಲ'

'ಸ್ಥಳೀಯ ಶಾಸಕರ ಸಲಹೆ ಅಥವಾ ಅವರ ಶಿಫಾರಸಿನ ಮೇರೆಗೆ ಸರ್ಕಾರಿ ಅಧಿಕಾರಗಳ ವರ್ಗಾವಣೆ ಮಾಡುವುದರಿಂದ ಅಂತಹ ವರ್ಗಾವಣೆಗೆ ಯಾವುದೇ ಕಾನೂನಾತ್ಮಕ ಅಡ್ಡಿ ಉಂಟಾಗುವುದಿಲ್ಲ' ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಸ್ಪಷ್ಟಪಡಿಸಿದೆ.

ಈ ಸಂಬಂಧ ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕಿನ ಗ್ರೇಡ್-1 ತಹಶೀಲ್ದಾರ್ ಎಸ್.ವೆಂಕಟೇಶಪ್ಪ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿರುವ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ನೇತೃತ್ವದ ವಿಭಾಗೀಯ ನ್ಯಾಯಪೀಠ, ಈ ಕುರಿತಂತೆ ಸುಪ್ರೀಂ ಕೋರ್ಟ್ ತೀರ್ಪನ್ನು ಉಲ್ಲೇಖಿಸಿದೆ.

ಎಸ್.ವೆಂಕಟೇಶಪ್ಪ ಅವರನ್ನು ಬಂಗಾರಪೇಟೆಯ ತಹಶೀಲ್ದಾರ್ ಆಗಿ 2024ರ ಜುಲೈ 31ರಂದು ವರ್ಗಾವಣೆ ಮಾಡಲಾಗಿತ್ತು. ಅದೇ ವರ್ಷದ ಡಿಸೆಂಬರ್ 31ರಂದು, ಅವರನ್ನು ಕೋಲಾರ ಜಿಲ್ಲಾಧಿಕಾರಿ ಕಚೇರಿಗೆ ವರ್ಗಾವಣೆ ಮಾಡಲಾಗಿತ್ತು. ಈ ವರ್ಗಾವಣೆಯನ್ನು ಪ್ರಶ್ನಿಸಿ ವೆಂಕಟೇಶಪ್ಪ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ (ಕೆಎಸ್‌ಎಟಿ) ಮೊರೆ ಹೋಗಿದ್ದರು. 'ನನ್ನ ವರ್ಗಾವಣೆ ಅಕಾಲಿಕ ಮತ್ತು ವರ್ಗಾವಣೆ ಮಾರ್ಗಸೂಚಿಗಳಿಗೆ ವಿರುದ್ಧವಾಗಿದೆ' ಎಂದು ಪ್ರತಿಪಾದಿಸಿದ್ದರು. ಆದರೆ, ಕೆಎಸ್‌ಎಟಿ ಅವರ ಮನವಿಯನ್ನು ತಿರಸ್ಕರಿಸಿತ್ತು.

ಕೆಎಸ್‌ಎಟಿ ಆದೇಶವನ್ನು ಪ್ರಶ್ನಿಸಿ ವೆಂಕಟೇಶಪ್ಪ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ರಿಟ್ ಅರ್ಜಿ ವಿಚಾರಣೆ ನಡೆಸಿದ ವಿಭಾಗೀಯ ನ್ಯಾಯಪೀಠ, ಮೊಹಮ್ಮದ್ ಮಸೂದ್ ಅಹ್ಮದ್ ವರ್ಸಸ್ ಉತ್ತರ ಪ್ರದೇಶ ರಾಜ್ಯದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪನ್ನು ಉಲ್ಲೇಖಿಸುವ ಮೂಲಕ ಅರ್ಜಿ ವಜಾಗೊಳಿಸಿ ಶಾಸಕರ ಶಿಫಾರಸನ್ನು ಎತ್ತಿಹಿಡಿದಿದೆ.

'ನ್ಯಾಯಮಂಡಳಿ ಹೊರಡಿಸಿದ ಆದೇಶದಲ್ಲಿ ನಮಗೆ ಯಾವುದೇ ದೋಷ ಅಥವಾ ಕಾನೂನುಬಾಹಿರ ಅಂಶ ಕಂಡುಬಂದಿಲ್ಲ' ಎಂದು ತಿಳಿಸಿದೆ.

'ಜನರು ತಾವು ಆಯ್ಕೆ ಮಾಡಿದ ಜನಪ್ರತಿನಿಧಿಗಳ ಮುಂದೆ ತಮ್ಮ ತಮ್ಮ ಅಹವಾಲು, ಕುಂದುಕೊರತೆಗಳನ್ನು ವ್ಯಕ್ತಪಡಿಸುವುದು ಸ್ವಾಭಾವಿಕ. ತಮ್ಮ ಕೆಲಸಗಳಿಗೆ ಸೂಕ್ತ ರೀತಿಯಲ್ಲಿ ಸ್ಪಂದಿಸದ ಸರ್ಕಾರಿ ನೌಕರರ ವರ್ಗಾವಣೆಗೆ ವಿನಂತಿಸುವುದೂ ಅಷ್ಟೇ ಸಹಜ. ಇಂತಹ ಸಂದರ್ಭದಲ್ಲಿ ದೂಷಣೆ ಹೊತ್ತ ಸರ್ಕಾರಿ ನೌಕರರನ್ನು ವರ್ಗಾವಣೆಗೆ ಶಿಫಾರಸು ಮಾಡುವುದು ಜನಪ್ರತಿನಿಧಿಯ ಕರ್ತವ್ಯ. ಅಂತೆಯೇ, ಇದು ರಾಜ್ಯ ಸರ್ಕಾರದ ಅಧಿಕಾರ ವ್ಯಾಪ್ತಿಯಲ್ಲಿರುವ ಅಂಶ ಎಂಬ ಸುಪ್ರೀಂ ಕೋರ್ಟ್ ತೀರ್ಪಿನ ಸಾಲುಗಳು ಈ ಸಂದರ್ಭದಲ್ಲಿ ಮನನೀಯ' ಎಂದು ನ್ಯಾಯಪೀಠ ಹೇಳಿದೆ.



ಚಿಟಿಕೆ ಸುದ್ದಿ

'ಸಭಾಪತಿ ಸ್ಥಾನದಿಂದ ಇಳಿಸಲು ಯತ್ನಿಸಿದರೆ ರಾಜೀನಾಮೆ'

ಶಿರಸಿ: 'ವಿಧಾನ ಪರಿಷತ್ತಿನಲ್ಲಿ ಈಗ ಕಾಂಗ್ರೆಸ್‌ಗೆ ಬಹುಮತ ಬಂದರೂ ನನಗೆ ಆತಂಕವಿಲ್ಲ' ಎಂದು ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.


ಬಸವರಾಜ ಹೊರಟ್ಟಿ

'ನನ್ನನ್ನು ಸಭಾಪತಿ ಸ್ಥಾನದಿಂದ ಇಳಿಸಲು ಪ್ರಯತ್ನಿಸಿದರೆ, ತಕ್ಷಣವೇ ರಾಜೀನಾಮೆ ನೀಡುವೆ' ಎಂದು ಅವರು ಶುಕ್ರವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'ಒಂದು ವರ್ಷ ಅಥವಾ ಹತ್ತು ವರ್ಷ ಸಭಾಪತಿಯಾದರೂ ಅಧಿಕಾರದ ಬಳಿಕ, ಮಾಜಿ ಎನ್ನುತ್ತಾರೆ. ಹಿಂದೆ ವಿ.ಎಸ್.ಉಗ್ರಪ್ಪ, ಶಂಕರಮೂರ್ತಿ ಅವರನ್ನು ಪಕ್ಷದ ಬಲ ಬದಲಾದಾಗ ಪದಚ್ಯುತಗೊಳಿಸಲಾಗಿತ್ತು' ಎಂದು ಹೇಳಿದರು.

'ಇಂದು ಪರಿಷತ್‌ನಲ್ಲಿ ಮಾತ್ರವಲ್ಲದೇ ಎಲ್ಲಿಯೂ ಮೌಲ್ಯ ಉಳಿದಿಲ್ಲ. ಅವೆಲ್ಲವೂ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರ ಕಾಲದಲ್ಲೇ ಮುಗಿದಿದೆ' ಎಂದು ಅವರು ಅಭಿಪ್ರಾಯಪಟ್ಟರು.

ವಿದ್ಯಾರ್ಥಿನಿಗೆ ಪ್ರಸವ: ಯುವಕನ ಬಂಧನ

ಶಹಾಪುರ (ಯಾದಗಿರಿ ಜಿಲ್ಲೆ): ವಸತಿ ಶಾಲೆಯ ಶೌಚಾಲಯದಲ್ಲಿ 9ನೇ ತರಗತಿ ವಿದ್ಯಾರ್ಥಿನಿ ಗಂಡು ಶಿಶುವಿಗೆ ಜನ್ಮನೀಡಿದ್ದ ಪ್ರಕರಣದ ಪ್ರಮುಖ ಆರೋಪಿಯನ್ನು ಶಹಾಪುರ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಸುರಪುರ ತಾಲ್ಲೂಕಿನ ಗ್ರಾಮವೊಂದರ ನಿವಾಸಿ ಪರಮಣ್ಣ ವಾರಿ (28) ಬಂಧಿತ. ಆತನ ವಿರುದ್ಧ ಪ್ರಕರಣವನ್ನೂ ದಾಖಲಿಸಿಕೊಂಡು ತನಿಖೆ ಮಾಡಲಾಗುವುದು. ನ್ಯಾಯಾಲಯವು ಆರೋಪಿಗೆ ನ್ಯಾಯಾಂಗ ಬಂಧನ ವಿಧಿಸಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪರಮಣ್ಣ, ಬಾಲಕಿಯ ಸಹೋದರ, ವಸತಿ ಶಾಲೆಯ ಪ್ರಾಂಶುಪಾಲರು, ವಾರ್ಡನ್ ಹಾಗೂ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯ ಸ್ಟಾಫ್ ನರ್ಸ್ ಕಾವೇರಮ್ಮ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿದೆ.

ಬಾಲಕಿಯ ಗ್ರಾಮಸ್ಥನಾದ ಪರಮಣ್ಣ, ಟಂಟಂ ಚಾಲನೆ ಮಾಡುತ್ತಿದ್ದ. ಆತನಿಗೆ ಮದುವೆಯಾಗಿ ಒಂದು ಮಗು ಇದೆ. ಬಾಲಕಿಯನ್ನು ಪುಸಲಾಯಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಕೃತ್ಯದ ಬಗ್ಗೆ ಬಾಯಿ ಬಿಡದಂತೆಯೂ ಆಕೆಗೆ ತಾಕೀತು ಮಾಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಹುದ್ದೆ ಭರ್ತಿಗೆ ಕೆಪಿಎಸ್‌ಸಿ ಆತುರ

ಒಂದನೇ ಪುಟದಿಂದ...

ಆಯೋಗ ವರದಿ ನೀಡಿ, ಒಳ ಮೀಸಲಾತಿ ಇತ್ಯರ್ಥವಾಗುವವರೆಗೆ 2024ನೇ ಅಕ್ಟೋಬರ್ 28ಕ್ಕೆ ಅನ್ವಯವಾಗುವಂತೆ ಎಲ್ಲ ನೇಮಕಾತಿ ಅಧಿಸೂಚನೆಗಳನ್ನು ತಡೆಹಿಡಿಯಬೇಕು. ಇಲಾಖೆಗಳು, ನಿಗಮ–ಮಂಡಳಿಗಳು ಸೇರಿದಂತೆ ಯಾವುದೇ ಸರ್ಕಾರಿ ಸಂಸ್ಥೆಗಳು ನೇಮಕಾತಿ ಅಧಿಸೂಚನೆ ಹೊರಡಿಸಬಾರದು ಎಂದು ಸರ್ಕಾರ ಸುತ್ತೋಲೆ ಹೊರಡಿಸಿತ್ತು.

ಸರ್ಕಾರದ ಸ್ಪಷ್ಟ ಸೂಚನೆ ಇದ್ದರೂ ಕೆಪಿಎಸ್‌ಸಿಯು ಕಲ್ಯಾಣ ಕರ್ನಾಟಕದ 273 ಹುದ್ದೆಗಳಿಗೂ ಸೇರಿ ನೇಮಕಾತಿ ಪ್ರಕ್ರಿಯೆ ಆರಂಭಿಸಿ, ಪರೀಕ್ಷಾ ವೇಳಾಪಟ್ಟಿಯನ್ನೂ ಬಿಡುಗಡೆ ಮಾಡಿದೆ.

'ಪರಿಶಿಷ್ಟ ಜಾತಿಗೆ ಲಭ್ಯವಿರುವ ಶೇಕಡ 17ರಷ್ಟು ಮೀಸಲಾತಿಯ ಪೈಕಿ, ಎಡಗೈ ಸಂಬಂಧಿತ ಜಾತಿಗಳಿರುವ 'ಎ' ಪ್ರವರ್ಗಕ್ಕೆ ಶೇ 6, ಬಲಗೈ ಸಂಬಂಧಿತ ಜಾತಿಗಳಿರುವ 'ಬಿ' ಪ್ರವರ್ಗಕ್ಕೆ ಶೇ 6 ಹಾಗೂ ಲಂಬಾಣಿ, ಬೋವಿ, ಕೊರಚ, ಕೊರಮ ಮತ್ತು ಅಲೆಮಾರಿ ಜಾತಿಗಳಿರುವ 'ಸಿ' ಪ್ರವರ್ಗಕ್ಕೆ ಶೇ 5ರಷ್ಟು ಒಳ ಮೀಸಲಾತಿ ಜಾರಿಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಅದರಂತೆ, ಕೃಷಿ ಇಲಾಖೆಯಲ್ಲಿ ಖಾಲಿ ಇರುವ 'ಎ' ಮತ್ತು 'ಬಿ' ವೃಂದದ 945 ಹುದ್ದೆಗಳನ್ನು ಭರ್ತಿ ಮಾಡಬೇಕು. ಇಲ್ಲದಿದ್ದರೆ ದಲಿತ ಸಮುದಾಯದ ಕೃಷಿ ಪದವೀಧರ (ಬಿ.ಎಸ್‌ಸಿ) ಅಭ್ಯರ್ಥಿಗಳಿಗೆ ಭಾರಿ ಅನ್ಯಾಯವಾಗುತ್ತದೆ. ದಲಿತರ ದಶಕಗಳ ಒಳ ಮೀಸಲಾತಿ ಹೋರಾಟಕ್ಕೆ ಅರ್ಥವೇ ಇಲ್ಲದಂತೆ ಆಗುತ್ತದೆ' ಎನ್ನುತ್ತಾರೆ ಮಾಜಿ ಸಚಿವ ಎಚ್.ಆಂಜನೇಯ.

ಕೃಷಿ ಅಧಿಕಾರಿಗಳ ಹುದ್ದೆ ಭರ್ತಿ ಪ್ರಕ್ರಿಯೆಯನ್ನು ತಕ್ಷಣ ನಿಲ್ಲಿಸಲು ಸೂಚಿಸುವಂತೆ ಮುಖ್ಯಮಂತ್ರಿ ಅವರಿಗೆ ಮನವಿ ಮಾಡಲಾಗಿದೆ
ಡಾ.ಎಚ್.ಸಿ.ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ

ಕೃಷಿ ಇಲಾಖೆ ಸೇರಿದಂತೆ ಎಲ್ಲ ನೇಮಕಾತಿಯಲ್ಲೂ ಒಳ ಮೀಸಲು ಅನ್ವಯಿಸಿ, ತಿದ್ದುಪಡಿ ಅಧಿಸೂಚನೆ ಹೊರಡಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆಯಲಾಗಿದೆ
ಕೆ.ಎಚ್.ಮುನಿಯಪ್ಪ, ಆಹಾರ ಸಚಿವ

ಸಂಕ್ಷಿಪ್ತ ಸುದ್ದಿ

ಬಿಹಾರ ಯಾತ್ರೆ: ಮುಖ್ಯಮಂತ್ರಿಗೆ ಆಪ್ತರ ಸಾಥ್

ಬೆಂಗಳೂರು: ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಬಿಹಾರದಲ್ಲಿ ಆರಂಭವಾಗಿರುವ 'ಮತ ಅಧಿಕಾರ ಯಾತ್ರೆ'ಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಆಪ್ತರ ಜತೆ ಶುಕ್ರವಾರ ಹೆಜ್ಜೆ ಹಾಕಿದರು.

ಬಿಹಾರದ ಗೋಪಾಲ್‌ಗಂಜ್‌ನಲ್ಲಿ ನಡೆದ ಬೃಹತ್ ರ್‍ಯಾಲಿಯಲ್ಲಿ ಗೃಹ ಸಚಿವ ಜಿ.ಪರಮೇಶ್ವರ, ಇಂಧನ ಸಚಿವ ಕೆ.ಜೆ. ಜಾರ್ಜ್, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ವಸತಿ ಸಚಿವ ಜಮೀರ್ ಅಹಮದ್ ಖಾನ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಕಾನೂನು ಸಲಹೆಗಾರ ಪೊನ್ನಣ್ಣ, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹಮದ್, ವಿಧಾನ ಪರಿಷತ್ ಸದಸ್ಯರಾದ ಬಿ.ಕೆ.ಹರಿಪ್ರಸಾದ್, ಡಾ.ಯತೀಂದ್ರ ಅವರು ಸಿದ್ದರಾಮಯ್ಯ ಅವರಿಗೆ ಜತೆಯಾದರು.

ಉತ್ತರ ಪ್ರದೇಶದ ಗೋರಖ್‌ಪುರ ವಿಮಾನ ನಿಲ್ದಾಣದಲ್ಲಿ ಇಳಿದು ಅವರು ಬಿಹಾರದ ಗೋಪಾಲ್‌ಗಂಜ್‌ಗೆ ರಸ್ತೆ ಮಾರ್ಗವಾಗಿ ಪ್ರಯಾಣ ಬೆಳೆಸಿದರು. ಅಲ್ಲಿನ ಪಕ್ಷದ ನಾಯಕರು, ಕಾರ್ಯಕರ್ತರು ಅವರಿಗೆ ಸ್ವಾಗತ ಕೋರಿದರು.

ಕಾಮನ್‌ವೆಲ್ತ್ ಸಂಸದೀಯ ಸಮ್ಮೇಳನ

ಬೆಂಗಳೂರು: ಕಾಮನ್‌ವೆಲ್ತ್ ಸಂಸದೀಯ ಸಂಘದ ಭಾರತ ವಿಭಾಗದ 11 ನೇ ಸಮ್ಮೇಳನ ಸೆ.11 ರಿಂದ ಮೂರು ದಿನಗಳ ಕಾಲ ಬೆಂಗಳೂರಿನಲ್ಲಿ ನಡೆಯಲಿದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ವಿಧಾನಸೌಧದ ಮೆಟ್ಟಿಲುಗಳ ಮೇಲೆ ಸೆ.11 ರ ಸಂಜೆ 5.30 ಕ್ಕೆ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಸೆ.12 ಮತ್ತು 13 ರಂದು ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಸಮ್ಮೇಳನ ನಡೆಯಲಿದ್ದು, ವಿವಿಧ ರಾಜ್ಯಗಳ ವಿಧಾನಸಭಾಧ್ಯಕ್ಷರು, ಉಪಸಭಾಧ್ಯಕ್ಷರು, ಸಭಾಪತಿಗಳು ಮತ್ತು ಉಪಸಭಾಪತಿಗಳು, ಲೋಕಸಭೆ ಮತ್ತು ರಾಜ್ಯಸಭೆಯ ಮಹಾಕಾರ್ಯದರ್ಶಿಗಳು, ವಿವಿಧ ರಾಜ್ಯಗಳ ವಿಧಾನಸಭೆ, ಪರಿಷತ್‌ಗಳ ಕಾರ್ಯದರ್ಶಿ, ಕಾರ್ಯದರ್ಶಿಗಳು ಮತ್ತು ಅಧಿಕಾರಿಗಳು ಭಾಗವಹಿಸಲಿದ್ದಾರೆ. ಸೆ.14 ರಂದು ಗಣ್ಯರಿಗೆ ಮೈಸೂರು ಮತ್ತು ಸುತ್ತಮುತ್ತಲಿನ ಸ್ಥಳಗಳಿಗೆ ಪ್ರವಾಸ ಆಯೋಜಿಸಲಾಗಿದೆ ಎಂದು ಅವರು ಹೇಳಿದರು.

ಕೇಂದ್ರ ಶಿಕ್ಷಣ ಸಚಿವಾಲಯದ ಏಕೀಕೃತ ಜಿಲ್ಲಾ ಮಾಹಿತಿ ವ್ಯವಸ್ಥೆ (ಯುಡೈಸ್) ವರದಿ

ಮಕ್ಕಳಿಲ್ಲದ ಶಾಲೆಗಳಲ್ಲಿ 308 ಶಿಕ್ಷಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ ವಿದ್ಯಾರ್ಥಿಗಳೇ ಇಲ್ಲದ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ 308ಕ್ಕೆ ಇಳಿದಿದೆ. ಕಳೆದ ಸಾಲಿನಲ್ಲಿ ಇಂತಹ ಶಾಲೆಗಳಲ್ಲಿ ಶಿಕ್ಷಕರ ಸಂಖ್ಯೆ 1,572 ಇತ್ತು.

ಕೇಂದ್ರ ಶಿಕ್ಷಣ ಸಚಿವಾಲಯ ಬಿಡುಗಡೆ ಮಾಡಿದ 2024–25ನೇ ಸಾಲಿನ ಏಕೀಕೃತ ಜಿಲ್ಲಾ ಮಾಹಿತಿ ವ್ಯವಸ್ಥೆ (ಯುಡೈಸ್) ವರದಿ ಪ್ರಕಾರ, ವಿದ್ಯಾರ್ಥಿಗಳ ದಾಖಲೆ ಹೆಚ್ಚಿರುವ ಕೆಲವು ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದ್ದರೂ, ಸರ್ಕಾರ ವಿದ್ಯಾರ್ಥಿಗಳಿಲ್ಲದ ಶಾಲೆಗಳಲ್ಲಿ ಶಿಕ್ಷಕರನ್ನು ಉಳಿಸಿಕೊಂಡಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಸಂಖ್ಯೆ ಕಡಿಮೆ ಇದೆ. ಶೂನ್ಯ ದಾಖಲೆ ಹೊಂದಿದ್ದ ಶಾಲೆಗಳ ಸಂಖ್ಯೆ 1,078ರಿಂದ 270ಕ್ಕೆ ಇಳಿಕೆಯಾಗಿದೆ.

'ಯಾವುದೇ ಸರ್ಕಾರಿ ಶಾಲೆಯನ್ನು ಮುಚ್ಚಬಾರದು ಎಂಬ ಸರ್ಕಾರದ ನೀತಿಗೆ ಅನುಗುಣವಾಗಿ ಅಂತಹ ಶಾಲೆಗಳಲ್ಲಿ ಒಬ್ಬ ಶಿಕ್ಷಕರನ್ನು ಉಳಿಸಿಕೊಂಡಿದ್ದೇವೆ. ಶಿಕ್ಷಕರು ಇದ್ದಾರೆ ಎಂಬ ಕಾರಣಕ್ಕೆ ಪೋಷಕರು ಮಕ್ಕಳನ್ನು ಕಳುಹಿಸುವ ಸಾಧ್ಯತೆ ಇರುತ್ತದೆ. ಕೆಲವು ಶಾಲೆಗಳಲ್ಲಿ ಒಬ್ಬ ವಿದ್ಯಾರ್ಥಿಗಾಗಿ ಶಿಕ್ಷಕರನ್ನು ನೇಮಕ ಮಾಡಲಾಗಿದೆ' ಎಂದು ವಿದ್ಯಾರ್ಥಿಗಳಿಲ್ಲದ ಶಾಲೆಗಳಲ್ಲಿ ಶಿಕ್ಷಕರನ್ನು ನೇಮಕ ಮಾಡಿದ ಕ್ರಮವನ್ನು ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳು ಸಮರ್ಥಿಸಿಕೊಂಡಿದ್ದಾರೆ.

ಕರ್ನಾಟಕದಲ್ಲಿ 74,859 ಶಾಲೆಗಳಿದ್ದು, 1,17,80,251 ವಿದ್ಯಾರ್ಥಿಗಳು ಹಾಗೂ 4,52,602 ಶಿಕ್ಷಕರು ಇದ್ದಾರೆ. ಶೇ 69ರಷ್ಟು ಶಿಕ್ಷಕರು ಮಾತ್ರ ತರಬೇತಿ ಪಡೆದಿದ್ದಾರೆ. ಶೇ 63.7ರಷ್ಟು ಶಿಕ್ಷಕರು ವೃತ್ತಿಪರ ಅರ್ಹತೆ ಹೊಂದಿದ್ದಾರೆ. 2.23 ಲಕ್ಷ ವಿದ್ಯಾರ್ಥಿಗಳಿರುವ 7,349 ಏಕ ಶಿಕ್ಷಕರ ಶಾಲೆಗಳಿವೆ. ಕಳೆದ ವರ್ಷ 2,74,814 ವಿದ್ಯಾರ್ಥಿಗಳಿದ್ದ 7,821 ಏಕಶಿಕ್ಷಕರ ಶಾಲೆಗಳಿದ್ದವು.

ಬಲಿಷ್ಠ ಪ್ರಾಥಮಿಕ ಶಿಕ್ಷಣ

ಪ್ರಾಥಮಿಕ ಹಂತದಲ್ಲಿ ಶಾಲೆ ಬಿಟ್ಟು ಹೋಗುವವರ ಪ್ರಮಾಣ ಶೂನ್ಯಕ್ಕೆ ಇಳಿದಿದೆ. ಕಳೆದ ವರ್ಷ ಈ ಪ್ರಮಾಣ ಶೇ 2 ಇತ್ತು. ಮಧ್ಯಪ್ರದೇಶ, ಮಹಾರಾಷ್ಟ್ರ, ತೆಲಂಗಾಣ, ದೆಹಲಿ, ಉತ್ತರಪ್ರದೇಶಗಳಿಗೆ ಹೋಲಿಸಿದರೆ ಕರ್ನಾಟಕವು ಪ್ರಾಥಮಿಕ ಹಂತದ ಶಿಕ್ಷಣದಲ್ಲಿ ಉನ್ನತ ಸ್ಥಾನದಲ್ಲಿದೆ.

ಮಾಧ್ಯಮಿಕ ಹಂತದಲ್ಲಿ (9 ಮತ್ತು 10ನೇ ತರಗತಿ) ಶಾಲೆ ತೊರೆಯುವವರ ಸಂಖ್ಯೆ ಶೇ 18.30ರಷ್ಟಿದ್ದು, ರಾಜ್ಯದ ಮಾಧ್ಯಮಿಕ ಶಿಕ್ಷಣ ಬಲಗೊಳ್ಳುವ ಅಗತ್ಯವಿದೆ ಎಂದು ರಾಜ್ಯ ಶಿಕ್ಷಣ ನೀತಿ ಆಯೋಗ ಶಿಫಾರಸು ಮಾಡಿದೆ.

ಅಂಕಿ ಅಂಶ

74,859 ಒಟ್ಟು ಶಾಲೆಗಳು

64,183 ಕ್ರೀಡಾಂಗಣವಿರುವ ಶಾಲೆಗಳು

41,662 ಕಂಪ್ಯೂಟರ್ ಸೌಲಭ್ಯ

37,921 ಇಂಟರ್ನೆಟ್ ಸೌಲಭ್ಯ

ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರಮಾಣ

ಶೇ	ಶಾಲೆಗಳಲ್ಲಿ
8.1	10ಕ್ಕಿಂತ ಕಡಿಮೆ
11.7	11ರಿಂದ 20
6	500ಕ್ಕೂ ಹೆಚ್ಚು

ಬೆಳೆ ಹಾನಿ: ರೈತನ ನಿರೀಕ್ಷೆಗಳಿಗೆ 'ತಣ್ಣೀರು'

ಧಾರಾಕಾರ ಮಳೆ: ಜೇವರ್ಗಿ ತಾಲ್ಲೂಕಿನಲ್ಲಿ ನೆಲಕ್ಕುರುಳಿದ ಪಪ್ಪಾಯ ಗಿಡಗಳು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ನದಿ ಪಾತ್ರದಲ್ಲಿ ಹೊಲ, ಗ್ರಾಮಗಳು ಜಲಾವೃತ
- ರೈತರಿಗೆ ₹35 ಲಕ್ಷಕ್ಕೂ ಅಧಿಕ ನಷ್ಟ

ಕಲಬುರಗಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಯಾದಗಿರಿ ಜಿಲ್ಲೆಗಳಲ್ಲಿ ಶುಕ್ರವಾರವೂ ಮಳೆಯಾಗಿದ್ದು, ನದಿ, ಹಳ್ಳ, ಕೊಳ್ಳಗಳು ಉಕ್ಕಿ ಹರಿದಿವೆ. ಜೇವರ್ಗಿ ತಾಲ್ಲೂಕಿನಲ್ಲಿ ಹಳ್ಳದ ನೀರು ಹರಿದಿದ್ದರಿಂದ ರೈತರ 5,800 ಪಪ್ಪಾಯ ಗಿಡಗಳು ನೆಲಕಚ್ಚಿವೆ. ಸೇತುವೆ ಮುಳುಗಡೆಯಾಗಿ ಸಂಚಾರ ಬಂದ್ ಆಗಿತ್ತು.

ಕಲಬುರಗಿ ನಗರ, ಗ್ರಾಮಾಂತರ ಭಾಗದಲ್ಲಿ ಭಾರಿ ಮಳೆಯಾಯಿತು. ಜೇವರ್ಗಿ ತಾಲ್ಲೂಕಿನ ಬಿರಾಳ (ಕೆ) ಗ್ರಾಮದಲ್ಲಿ ನೀರು ಹೊಕ್ಕಿದ್ದು ನುಗ್ಗಿದ್ದು, ಕಟಾವಿಗೆ ಬಂದಿದ್ದ ಪಪ್ಪಾಯ ಗಿಡಗಳು ಸಂಪೂರ್ಣ ನೆಲಕಚ್ಚಿವೆ.

ಇದರಿಂದಾಗಿ ರೈತರಿಗೆ ₹35 ಲಕ್ಷಕ್ಕೂ ಅಧಿಕ ನಷ್ಟವಾಗಿದೆ ಎಂದು ಭೂಮಿಯನ್ನು ಬಾಡಿಗೆಗೆ ಪಡೆದು ಪಪ್ಪಾಯ ನೆಟ್ಟಿದ್ದ ರೈತ ಖಾಜಾ ಹುಸೇನಿ ಅಲವತ್ತುಕೊಂಡರು. ಜೇವರ್ಗಿ ತಾಲ್ಲೂಕಿನ ಕೋಳಕೂರ, ಹರವಾಳ ಗ್ರಾಮದಲ್ಲಿ ಹತ್ತಿ ಬೆಳೆಗೆ ನೀರು ನುಗ್ಗಿದೆ.

ಬೆಳೆ ಹಾನಿಯಿಂದಾಗಿ ಕೃಷಿ ಲಾಭದ ನಿರೀಕ್ಷೆಯಲ್ಲಿದ್ದ ಆ ಭಾಗದ ಅನೇಕ ರೈತರ ನಿರೀಕ್ಷೆಗಳು ಹುಸಿಯಾಗಿವೆ.

ಜಿಲ್ಲೆಯ ಕಾಳಗಿ-ಮಲಘಾಣ ನಡುವಿನ ರಸ್ತೆಯ ಸೇತುವೆ ಮುಳುಗಿ ಸಂಪರ್ಕ ಕಡಿತಗೊಂಡಿತು. ಚಿಣ್ಣೋರಾ ಜಲಾಶಯದಿಂದ 8,400 ಕ್ಯೂಸೆಕ್ ನೀರು ಬಿಡಲಾಗಿದ್ದು, ನದಿ ಪಾತ್ರದಲ್ಲಿ ಹೊಲ, ಗ್ರಾಮಗಳು ಜಲಾವೃತವಾಗಿವೆ.

ನದಿ ದಂಡೆಯ ಹಳೆ ಹೆಬ್ಬಾಳ, ಕಣಸೂರ, ಮಲಘಾಣ, ತೆಂಗಳಿ, ಕಲಗುರ್ತಿ ಗ್ರಾಮಗಳ ಹೊಲ, ಮನೆ, ಗುಡಿ ಗುಂಡಾರ, ಹೋಟೆಲ್, ಅಂಗಡಿ, ಸಮುದಾಯ ಭವನಕ್ಕೆ ನೀರು ನುಗ್ಗಿದೆ. ಡೊಣ್ಣೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ದಾರಿ ಬಂದ್ ಆಗಿದ್ದರಿಂದ ಶಾಲೆಗೆ ರಜೆ ನೀಡಲಾಯಿತು.

ಬೀದರ್ ಜಿಲ್ಲೆಯಲ್ಲಿ ಮಾಂಜ್ರಾ, ಕಾರಂಜಾ ನದಿಗಳು ಮೈದುಂಬಿ ಹರಿಯುತ್ತಿವೆ. ಔರಾದ್ ತಾಲ್ಲೂಕಿನ ಏಕಂಬಾ ಕೆರೆ ಕೋಡಿ ಹರಿದಿದೆ. ಏಕಂಬಾ ತಾಂಡಾದ ಜನರನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ. ಯಾದಗಿರಿ ಜಿಲ್ಲೆಯ ಹಲವೆಡೆ ಜೋರು ಮಳೆಯಾಗಿದೆ.



ಕಲಬುರಗಿ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಬಿರಾಳ(ಕೆ) ಗ್ರಾಮದಲ್ಲಿ ಪಪ್ಪಾಯ ಗಿಡಗಳು ನೆಲಕಚ್ಚಿವೆ ಚಿತ್ರ: ತಾಜುದ್ದೀನ್ ಆಜಾದ್



ಕಲಬುರಗಿ ಜಿಲ್ಲೆಯ ಕಾಳಗಿ–ಮಲಘಾಣ ನಡುವಿನ ರಸ್ತೆಯ ಸೇತುವೆ ಮುಳುಗಡೆಯಾಗಿದೆ –ಪ್ರಜಾವಾಣಿ ಚಿತ್ರ

ಮುಂದುವರಿದ ಮಳೆ ಅಬ್ಬರ

ಒಂದರ ಪುಟದಿಂದ...

ಶುಕ್ರವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಾಸರಿ 9 ಸೆಂ.ಮೀ. ಮಳೆ ದಾಖಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ನಗರ, ಮೂಡಿಗೆರೆ, ಕಳಸ, ಕೊಪ್ಪ, ನರಸಿಂಹರಾಜಪುರ ಭಾಗದಲ್ಲಿ ಮಳೆಯಾಗಿದೆ.

ಹುಲಿಕಲ್–ದಾಖಲೆ ಮಳೆ (ಶಿವಮೊಗ್ಗ ವರದಿ): ಭಾರಿ ಮಳೆಯಿಂದಾಗಿ ಜಿಲ್ಲೆಯಾದ್ಯಂತ ಶುಕ್ರವಾರವೂ ಶಾಲೆ–ಕಾಲೇಜುಗಳಿಗೆ ರಜೆ ನೀಡಲಾಗಿತ್ತು. ಹೊಸನಗರ ತಾಲ್ಲೂಕಿನ ಹುಲಿಕಲ್‌ನಲ್ಲಿ ದಾಖಲೆ 15.9 ಸೆಂ.ಮೀ ಮಳೆ ದಾಖಲಾಗಿದೆ.

ಕಾರ್ಗಲ್‌ನ ಲಿಂಗನಮಕ್ಕಿ ಜಲಾಶಯ ಗರಿಷ್ಠ ಹಂತಕ್ಕೆ ತಲುಪಿದ್ದು, ಶರಾವತಿ ನದಿಗೆ 52,000 ಕ್ಯೂಸೆಕ್ ನೀರು ಹರಿಸಲಾಗಿದ್ದು, ಜೋಗ ಜಲಪಾತದ ವೈಭವ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ.

ಮಡಿಕೇರಿ ವರದಿ: ಕೊಡಗು ಜಿಲ್ಲೆಯಲ್ಲಿ ಶುಕ್ರವಾರ ಬೆಳಿಗ್ಗೆಯಿಂದಲೂ ಭಾರಿ ಮಳೆ ಸುರಿಯಿತು. ಶಾಲೆ–ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು.

ಕೇರಳದ ವಯನಾಡಿಗೆ ಸಂಪರ್ಕ ಕಲ್ಪಿಸುವ ರಸ್ತೆ ತಾಮರಶ್ಶೇರಿ ಘಾಟ್ ಬಳಿ ಭೂಕುಸಿತ ಉಂಟಾಗಿದೆ. ವಯನಾಡು ಜಿಲ್ಲೆಗೆ ಗುಡಲೂರು ಮಾರ್ಗವಾಗಿ ಹೋಗುವ ವಾಹನಗಳು ಗೋಣಿಕೊಪ್ಪಲು–ಕೂಟುಪುಳ–ಇರಿಟ್ಟಿ ಮೂಲಕ ಸಂಚರಿಸಬೇಕು ಎಂದು ಜಿಲ್ಲಾಡಳಿತ ಕೋರಿದೆ.

ಮಳೆ: ಎಲ್ಲಿ, ಎಷ್ಟು (ಸೆಂ.ಮೀಟರ್‌ಗಳಲ್ಲಿ)

ಶಿವಮೊಗ್ಗ ಜಿಲ್ಲೆ	
ಹುಲಿಕಲ್	15.98
ಮಾಣಿ	12.90
ಮಾಸ್ತಿಕಟ್ಟೆ	12.20
ಕೊಡಗು ಜಿಲ್ಲೆ	
ಸಂಪಾಜೆ	11.5
ಭಾಗಮಂಡಲ, ವಿರಾಜಪೇಟೆ	10
ಅಮ್ಮತ್ತಿ	8
ನಾಪೋಕ್ಲು, ಶಾಂತಳ್ಳಿ, ಹುದಿಕೇರಿ, ಪೊನ್ನಂಪೇಟೆ	ತಲಾ 7
ಮಡಿಕೇರಿ, ಶ್ರೀಮಂಗಲ	ತಲಾ 6

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು
ಕೆಆರ್‌ಎಸ್ *	124.80	124.08	7,409	6,569
ಹಾರಂಗಿ	2,859	2,857.91	5,321	6,041
ಕಬಿನಿ	2,284.00	2,284	12,227	7,442
ಹೇಮಾವತಿ	2,922	2,921.81	7,523	7,135
ಲಿಂಗನಮಕ್ಕಿ	1,819	1,817	60,931	52,000
ಸೂಪಾ (ಮೀ)	564	558	24,146.58	2,826.37
ಮಾಣಿ	595	593.49	5,284	-
ತುಂಗಭದ್ರಾ	1,633	1,625.86	41,075	70,376
ಮಲಪ್ರಭಾ	2,079.5	2,078.90	8,862	5,594
ಘಟಪ್ರಭಾ	2175	2,174.96	11,533	11,204
ಭದ್ರಾ *	186	185.1	12,700	10,281
ಆಲಮಟ್ಟಿ (ಮೀ)	519.6	519.51	76,861	72,500
ನಾರಾಯಣಪುರ (ಮೀ)	492.25	492.06	52,000	51,530

* ನೆಲಮಟ್ಟದಿಂದ



ಗಣೇಶ ಮಂಡಳಿಯವರು ಬೀದರ್‌ನ ಸಾಯಿ ಶಾಲೆಯ ಮೈದಾನದಲ್ಲಿ ಪುರಿ ಜಗನ್ನಾಥ ಮಂದಿರದ ಮಾದರಿ ನಿರ್ಮಿಸಿ, ಗಣೇಶ ಮೂರ್ತಿ ಪ್ರತಿಷ್ಠಾಪಿಸಿದ್ದಾರೆ ಚಿತ್ರ: ಲೋಕೇಶ ವಿ. ಬಿರಾದಾರ




ನಟಿ ರವೀನಾ ಟಂಡನ್, ಪುತ್ರಿ ದಶಾ ತದಾನಿ ಕೊಡುಗೆಯಾಗಿ ನೀಡಿದ ₹6 ಲಕ್ಷ ವೆಚ್ಚದ ಯಾಂತ್ರಿಕ ಆನೆಯನ್ನು 'ಪೆಟಾ' ಸಂಸ್ಥೆ ಮೂಡುಬಿದಿರೆ ಜೈನಮಠಕ್ಕೆ ಹಸ್ತಾಂತರಿಸಿದ್ದು, ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮೀಜಿ ಅನಾವರಣಗೊಳಿಸಿದರು

ನಿಧನ ವಾರ್ತೆ

ಎರಿಕ್ ಓಝ್ಯಾರಿಯೊ

ಮಂಗಳೂರು: ಮಾಂಡ್ ಸೊಭಾಣ್ ಮುಖ್ಯಸ್ಥ, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ, ಕೊಂಕಣಿ ಚಳವಳಿಯ ನಾಯಕ ಎರಿಕ್ ಅಲೆಕ್ಸಾಂಡರ್ ಓಝ್ಯಾರಿಯೊ (76) ಶುಕ್ರವಾರ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.



ಎರಿಕ್ ಓಝ್ಯಾರಿಯೊ

ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಭಾನುವಾರ (ಆ. 31)ರಂದು ಇಲ್ಲಿ ನಡೆಯಲಿದೆ.

ಕೊಂಕಣಿ ಸಂಗೀತ ಕ್ಷೇತ್ರಕ್ಕೆ ಮಹತ್ವದ ಕಾಣಿಕೆ ನೀಡಿದ್ದ ಓಝ್ಯಾರಿಯೊ, ಕವಿಗಳ ಗೀತೆಗಳಿಗೆ ಸ್ವರ ಸಂಯೋಜಿಸಿ ಹಾಡಿ, ಜನರ ಬಳಿಗೆ ತಲುಪಿಸಿದ್ದರು. 1986ರಲ್ಲಿ 'ಮಾಂಡ್ ಸೊಭಾಣ್' ಸಂಗೀತ ಪ್ರಯೋಗ ಆರಂಭಿಸಿ ವಿವಿಧೆಡೆ 200ಕ್ಕೂ ಹೆಚ್ಚು ಪ್ರದರ್ಶನ ನೀಡಿದ್ದಾರೆ. 1000ಕ್ಕೂ ಹೆಚ್ಚು ಕವಿತೆಗಳಿಗೆ ಸ್ವರ ಸಂಯೋಜನೆ ಮಾಡಿದ್ದಾರೆ. 26 ಧ್ವನಿಸುರುಳಿ ಹೊರ ತಂದಿದ್ದರು. ಕರ್ನಾಟಕ ರಾಜ್ಯೋತ್ಸವ ಸೇರಿ ಹಲವು ಪ್ರಶಸ್ತಿ ಲಭಿಸಿವೆ.

ಎಸ್‌.ವೈ. ವಟವಟಿ ಕೆಎಟಿ ಅಧ್ಯಕ್ಷ

ಬೆಂಗಳೂರು: ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ (ಕೆಎಟಿ) ಅಧ್ಯಕ್ಷರಾಗಿ ಎಸ್.ವೈ.ವಟವಟಿ ಅವರನ್ನು ನೇಮಕ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶಿಸಿದೆ. ಕೆಎಟಿಯ ನ್ಯಾಯಾಂಗ ಸದಸ್ಯ ವಟವಟಿ ಅವರನ್ನು ಅಧ್ಯಕ್ಷರಾಗಿ ನೇಮಕ ಮಾಡಿದ ಆದೇಶವು ಸೆಪ್ಟೆಂಬರ್ 9ರಿಂದ ಅನ್ವಯವಾಗಲಿದೆ ಎಂದು ಇಲಾಖೆ ತಿಳಿಸಿದೆ.

ಶಿಕ್ಷಕರ 'ಫ್ರೀಡಂ ಪಾರ್ಕ್ ಚಲೊ' ಮುಂದೂಡಿಕೆ

ಬೆಂಗಳೂರು: ವೃಂದ ಮತ್ತು ನೇಮಕಾತಿಯ ಹೊಸ ನಿಯಮಗಳನ್ನು 2017ರ ನಂತರ ನೇಮಕವಾದ ಶಿಕ್ಷಕರಿಗೆ ಅನ್ವಯಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸೆ. 3ರಂದು ಹಮ್ಮಿಕೊಂಡಿದ್ದ 'ಫ್ರೀಡಂ ಪಾರ್ಕ್ ಚಲೊ' ಹೋರಾಟವನ್ನು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮುಂದೂಡಿದೆ.

ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಜತೆ ಶುಕ್ರವಾರ ನಡೆದ ಮಾತುಕತೆ ನಂತರ ಸಂಘದ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ ಮಾತನಾಡಿ, 'ಶಿಕ್ಷಕರ ಬೇಡಿಕೆಗಳನ್ನು ಸೆ. 4ರಂದು ನಡೆಯುವ ಸಚಿವ ಸಂಪುಟ ಸಭೆಗೆ ತರುವ ಪ್ರಯತ್ನ ಮಾಡುವುದಾಗಿ ಸಚಿವರು ತಿಳಿಸಿದ್ದಾರೆ. ಹೋರಾಟವನ್ನು ಮುಂದೂಡುತ್ತಿದ್ದೇವೆ' ಎಂದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**

ಅಭಿಮತ



ಸುಭಾಷಿತ

ಸ್ವಹಿತ ಸವೆಯದೆ ಪರಹಿತ ಪ್ರಜ್ವಲಿಸದು.

-ಕೆ.ಎಸ್. ನಿಸಾರ್ ಅಹಮದ್

ಸಂಪಾದಕೀಯ

ಸಾರ್ವಭೌಮತ್ವಕ್ಕೆ ಸುಂಕದ 'ಪರೀಕ್ಷೆ' ದೇಶದ ಹಿತಾಸಕ್ತಿಯಲ್ಲಿ ರಾಜಿ ಬೇಡ

ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಹೆಚ್ಚುವರಿ ಸುಂಕ ವಿಧಿಸಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೊರಡಿಸಿರುವ ಆದೇಶವು ಜಾರಿಗೆ ಬಂದಿರುವುದರಿಂದ ಭಾರತವು ಈಗ ಕಠಿಣ ಸನ್ನಿವೇಶವನ್ನು ಎದುರಿಸಬೇಕಿದೆ. ಸುಂಕದ ವಿಷಯದಲ್ಲಿ ಅಮೆರಿಕವು ತುಂಬಾ ಆಕ್ರಮಣಕಾರಿ ನಿಲುವನ್ನು ತಾಳಿದೆ. ಉಕ್ರೇನ್‌ನಲ್ಲಿ ನಡೆದಿರುವ ಸಂಘರ್ಷವನ್ನು 'ಮೋದಿ ಅವರ ಯುದ್ಧ' ಎಂದೇ ವ್ಯಾಖ್ಯಾನಿಸಿರುವ ಅಮೆರಿಕ, 'ಶಾಂತಿಯ ಮಾರ್ಗವು ನವದೆಹಲಿಯ ಮೂಲಕವೇ ಹಾದು ಹೋಗುತ್ತದೆ' ಎಂದೂ ಹೇಳಿದ್ದು, ತನ್ನ ಇಬ್ಬಂದಿತನವನ್ನು ಪ್ರದರ್ಶಿಸಿದೆ. 'ಭಾರತದ ವರ್ತನೆಯಿಂದ ಅಮೆರಿಕದಲ್ಲಿ ಪ್ರತಿಯೊಬ್ಬರೂ ಹಾನಿ ಅನುಭವಿಸುತ್ತಿದ್ದಾರೆ' ಎಂದು ಕೂಡ ಆ ದೇಶ ಹೇಳಿದೆ. ರಷ್ಯಾದಿಂದ ರಫ್ತು ಆಗುತ್ತಿರುವ ತೈಲದಲ್ಲಿ ಚೀನಾದ ಖರೀದಿ ಪ್ರಮಾಣವು ಶೇ 47ರಷ್ಟಿದ್ದರೆ, ಭಾರತದ ಖರೀದಿ ಪ್ರಮಾಣವು ಶೇ 37ರಷ್ಟಿದೆ. ಯುರೋಪ್ ಒಕ್ಕೂಟ, ಟರ್ಕಿ ಮತ್ತು ಜಪಾನ್ ಸಹ ರಷ್ಯಾದಿಂದ ದೊಡ್ಡ ಪ್ರಮಾಣದ ತೈಲ ಮತ್ತು ಅನಿಲ ಉತ್ಪನ್ನಗಳನ್ನು ಖರೀದಿಸುತ್ತಿವೆ. ಆದರೆ, ಸುಂಕದ ವಿಷಯದಲ್ಲಿ ಭಾರತವನ್ನು ಮಾತ್ರ ಗುರಿಯಾಗಿಸಲಾಗಿದೆ. ವಿವೇಚನಾರಹಿತ ನೀತಿಗೆ ತರ್ಕ ಅಥವಾ ನ್ಯಾಯ ಯಾವುದೂ ಮುಖ್ಯವಾಗುವುದಿಲ್ಲ. ಭಾರತವು ಈಗ ಹೆಚ್ಚುವರಿ ಸುಂಕದ ಪರಿಣಾಮವನ್ನು ಹೇಗೆ ಎದುರಿಸಬೇಕು ಎಂಬುದರತ್ತ ಗಮನ ಕೇಂದ್ರೀಕರಿಸಬೇಕಿದೆ.

ಏಷ್ಯಾದ ರಾಷ್ಟ್ರಗಳ ಪೈಕಿ ಭಾರತೀಯ ಸರಕುಗಳಿಗೆ ಮಾತ್ರ ಅಮೆರಿಕದಿಂದ ಅತ್ಯಧಿಕ ಪ್ರಮಾಣದ ಸುಂಕ ವಿಧಿಸಲಾಗಿದೆ. ಆ ದೇಶಕ್ಕೆ ರಫ್ತಾಗುವ ಶೇ 55ರಷ್ಟು ಭಾರತೀಯ ಸರಕುಗಳು ಈ ಹೆಚ್ಚುವರಿ ಸುಂಕದ ಬಿಸಿ ಅನುಭವಿಸಲಿವೆ. ಲಾಗಾಯ್ತಿನಿಂದಲೂ ಭಾರತದ ಸರಕುಗಳಿಗೆ ಅಮೆರಿಕ ಬಹುದೊಡ್ಡ ಮಾರುಕಟ್ಟೆಯಾಗಿದೆ. ಎಲೆಕ್ಟ್ರಾನಿಕ್ಸ್ ಮತ್ತು ಔಷಧೀಯ ಉತ್ಪನ್ನಗಳನ್ನು ಸದ್ಯ ಹೆಚ್ಚುವರಿ ಸುಂಕದ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಜವಳಿ, ವಜ್ರ, ಆಭರಣ ಮತ್ತು ಚರ್ಮದ ಉತ್ಪನ್ನಗಳ ಕೈಗಾರಿಕೆಗಳು 'ಟ್ರಂಪ್ ಸುಂಕ'ದಿಂದ ಹೆಚ್ಚು ಬಾಧಿತವಾಗಿವೆ. ಜಾಗತಿಕ ವಹಿವಾಟು ಸಂಶೋಧನಾ ವರದಿಯ ಪ್ರಕಾರ, ಭಾರತವು ಅಮೆರಿಕಕ್ಕೆ ವಾರ್ಷಿಕವಾಗಿ ರಫ್ತು ಮಾಡುವ ₹7.62 ಲಕ್ಷ ಕೋಟಿ ಮೊತ್ತದ ಸರಕುಗಳಲ್ಲಿ ಮೂರನೇ ಎರಡರಷ್ಟು ಪ್ರಮಾಣದ ಸರಕುಗಳು (ಅಂದಾಜು ಮೌಲ್ಯ ₹5.30 ಲಕ್ಷ ಕೋಟಿ) ಹೆಚ್ಚುವರಿ ಸುಂಕದ ಪರಿಧಿಗೆ ಬರುತ್ತವೆ. ವಿಯೆಟ್ನಾಂ ಮತ್ತು ಬಾಂಗ್ಲಾದೇಶದ ಜವಳಿ ಉತ್ಪನ್ನಗಳಿಗೆ ಕಡಿಮೆ ಸುಂಕ ವಿಧಿಸುವ ಕಾರಣ ಅಧಿಕ ಸುಂಕದ ಭಾರ ಹೊತ್ತ ಭಾರತದ ಜವಳಿ ಉತ್ಪನ್ನಗಳು ಪೈಪೋಟಿ ಎದುರಿಸಬೇಕಾದ ಅಮೆರಿಕ ಮಾರುಕಟ್ಟೆಯಲ್ಲಿ ನೆಲೆ ಕಳೆದುಕೊಳ್ಳುವ ಭೀತಿ ಇದೆ. ರಫ್ತು ಇಳಿಕೆಯಾದರೆ ಸಹಜವಾಗಿಯೇ ಉತ್ಪಾದನೆಯೂ ಕುಂಠಿತಗೊಳ್ಳಲಿದೆ. ಇದು, ಉದ್ಯೋಗ ನಷ್ಟಕ್ಕೆ ದಾರಿ ತೆರೆಯುತ್ತದೆ. ತಿರುಪ್ಪೂರ್, ಸೂರತ್‌ನ ಹಲವು ಘಟಕಗಳು ಈಗಾಗಲೇ ಉತ್ಪಾದನೆಯನ್ನು ಸ್ಥಗಿತಗೊಳಿಸಿವೆ.



ಭಾರತವು ಸುಂಕ-ಪ್ರೇರಿತ ಅನಿಶ್ಚಿತತೆಯ ಕಾಲಘಟ್ಟವನ್ನು ಪ್ರವೇಶಿಸಿದೆ. ಆದರೆ, ಬೆದರಿಕೆಗೆ ಮಣಿಯದೆ ದೇಶದ ಹಿತಾಸಕ್ತಿಯಲ್ಲಿ ರಾಜಿ ಆಗುವುದಿಲ್ಲ ಎಂಬ ಬದ್ಧತೆ ಪ್ರದರ್ಶಿಸುವುದು ಮುಖ್ಯವಾಗಿದೆ.

ಪ್ರಸ್ತುತ ಸನ್ನಿವೇಶವನ್ನು ದೇಶ ದೃಢನಿಶ್ಚಯದಿಂದ ಎದುರಿಸಬೇಕು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ರೈತರು ಮತ್ತು ಸಣ್ಣ ಕೈಗಾರಿಕೆಗಳ ಹಿತರಕ್ಷಣೆಯ ವಿಷಯದಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ ಎಂದೂ ಅವರು ಸ್ಪಷ್ಟಪಡಿಸಿದ್ದಾರೆ. ಎದುರಾಗಿರುವ ಸವಾಲುಗಳನ್ನು ಸ್ವಾವಲಂಬನೆ ಮೂಲಕ ಮೆಟ್ಟಿ ನಿಲ್ಲಬೇಕು ಎಂಬುದನ್ನು ಅವರು ಒತ್ತಿ ಹೇಳಿದ್ದಾರೆ. ಭಾರತವು ತಕ್ಷಣಕ್ಕೆ ಮಾಡಬೇಕಾದ ಕೆಲಸವೆಂದರೆ ಹೊಸ ಮಾರುಕಟ್ಟೆಗಳನ್ನು ಹುಡುಕಿಕೊಳ್ಳುವುದು ಮತ್ತು ಸದ್ಯದ ಮಾರುಕಟ್ಟೆಗಳ ವಹಿವಾಟನ್ನು ವಿಸ್ತರಿಸುವುದು. ಆದರೆ, ಈ ಕಾರ್ಯವೇನೂ ಸುಲಭವಲ್ಲ. ಅಮೆರಿಕದೊಂದಿಗೆ ₹3.96 ಲಕ್ಷ ಕೋಟಿಯಷ್ಟು ವ್ಯಾಪಾರ ವಹಿವಾಟು ಹೊಂದಿರುವ ಭಾರತ, ರಷ್ಯಾದೊಂದಿಗೆ ₹5.2 ಲಕ್ಷ ಕೋಟಿಯಷ್ಟು ಮತ್ತು ಚೀನಾದೊಂದಿಗೆ ₹8.8 ಲಕ್ಷ ಕೋಟಿಯಷ್ಟು ಕೊರತೆ ವಹಿವಾಟು ಹೊಂದಿದೆ. ಅಂದರೆ ಈ ಎರಡು ದೇಶಗಳಿಂದ ಆಮದು ಮಾಡಿಕೊಳ್ಳುವ ಪ್ರಮಾಣ ಹೆಚ್ಚಾಗಿದ್ದು, ರಫ್ತು ವಹಿವಾಟು ಕಡಿಮೆ ಇದೆ. ಇಲ್ಲಿ ವ್ಯಾಪಾರ ವೃದ್ಧಿಗೆ ವಿಪುಲ ಅವಕಾಶಗಳಿವೆ. ಹೆಚ್ಚುವರಿ ಸುಂಕದ ಏಟನ್ನು ತಿಂದು ನೆಲ ಕಚ್ಚಿರುವ ಸಣ್ಣ ಉದ್ಯಮಗಳಿಗೆ ಸರ್ಕಾರದಿಂದ ಆರ್ಥಿಕ ನೆರವು ನೀಡುವುದು ಕೂಡ ಅಗತ್ಯವಾಗಿದೆ. ದೇಶವು ಸುಂಕ-ಪ್ರೇರಿತ ಅನಿಶ್ಚಿತತೆಯ ಕಾಲಘಟ್ಟವನ್ನು ಪ್ರವೇಶಿಸಿದೆ. ಯಾವುದೇ ಬೆದರಿಕೆ ಅಥವಾ ಬಲವಂತಕ್ಕೆ ಮಣಿದು ದೇಶದ ಹಿತಾಸಕ್ತಿಯಲ್ಲಿ ರಾಜಿ ಆಗುವುದಿಲ್ಲ ಎಂಬ ವಿಷಯದಲ್ಲಿ ತನ್ನ ಬದ್ಧತೆ ಪ್ರದರ್ಶಿಸುವುದು ತುಂಬಾ ಮುಖ್ಯವಾಗಿದೆ.

ಚಾಟಿಯೇಟು / ಸೇಡಿಗೂ ಮಿತಿ ಇದೆ...



ನಾವು ಪಾಠ ಕಲಿಸುವುದಕ್ಕೆ ಅಥವಾ ಸೇಡು ತೀರಿಸಿಕೊಳ್ಳುವುದಕ್ಕೆ ಮಿತಿ ಇರುತ್ತದೆ. ಮನುಷ್ಯ ಸಹಜ ಮಿತಿಯದು. ದೇವರು ಅಥವಾ ಯೂನಿವರ್ಸ್ ಕಲಿಸುವ ಪಾಠ ಇದೆಯಲ್ಲ, ಅದು ಕಲ್ಪನೆಗೂ ನಿಲುಕದ್ದು.

ಶೋಭಾ ರಾವ್, ಲೇಖಕಿ, ಫೇಸ್‌ಬುಕ್‌ನಿಂದ

ಕಿಡಿನುಡಿ



ಚಾಮುಂಡಿಬೆಟ್ಟ ಸದಾ ಕಾಲದಿಂದಲೂ ಹಿಂದೂಗಳ ದೇವಸ್ಥಾನ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹೇಳಿಕೆ ಹಾಸ್ಯಾಸ್ಪದ. ಇದು ಬೇರೆಯವರ ಶ್ರದ್ಧಾಕೇಂದ್ರ ಆಗಲು ಹೇಗೆ ಸಾಧ್ಯ?

ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ

25 ವರ್ಷಗಳ ಹಿಂದೆ

ಬುಧವಾರ, 30-8-2000

● **ಕೈದಿಗಳ ಬಿಡುಗಡೆಗೆ ಸುಪ್ರೀಂ ಕೋರ್ಟ್ ತಡೆ**

ನವದೆಹಲಿ, ಆಗಸ್ಟ್ 29– ಕರ್ನಾಟಕ ಸರ್ಕಾರ ಮೊಕದ್ದಮೆಗಳನ್ನು ಕೈಬಿಟ್ಟಿರುವ ಯಾವ ಟಾಡಾ ಕೈದಿಯನ್ನೂ ಸೆಪ್ಟೆಂಬರ್ 1ರವರೆಗೆ ಬಿಡುಗಡೆ ಮಾಡಬಾರದೆಂದು ಸುಪ್ರೀಂ ಕೋರ್ಟ್ ಇಂದು ತಡೆಯಾಜ್ಞೆ ನೀಡಿರುವ ಕಾರಣ, ವರನಟ ರಾಜ್‌ಕುಮಾರ್ ಅವರ ಬಿಡುಗಡೆ ಇನ್ನಷ್ಟು ವಿಳಂಬವಾಗುವ ಸಾಧ್ಯತೆಯಿದೆ.

ಕಾಡುಗಳ್ಳ ವೀರಪ್ಪನ್‌ಗೆ ಬಲಿಯಾದ ಸಬ್‌ಇನ್‌ಸ್ಪೆಕ್ಟರ್ ಶಕೀಲ್ ಅಹ್ಮದ್ ಅವರ ತಂದೆ ಅಬ್ದುಲ್ ಕರೀಮ್ ಅವರು, ಸಲ್ಲಿಸಿದ ವಿಶೇಷ ರಜೆ ಅರ್ಜಿಯನ್ನು ವಿಚಾರಣೆಗೆ ಎತ್ತಿಕೊಂಡ ನ್ಯಾಯಮೂರ್ತಿಗಳಾದ ಎಸ್.ಪಿ. ಭರೂಚ, ಎಸ್.ಎಸ್.ಎಂ. ಖಾದ್ರಿ ಮತ್ತು ಸಂತೋಷ್ ಹೆಗ್ಡೆ ಅವರನ್ನು ಒಳಗೊಂಡ ಮೂವರು ಸದಸ್ಯರ ಪೀಠ ಈ ಆದೇಶ ನೀಡಿದೆ.

● **ಆಂಧ್ರಪ್ರದೇಶ ಪೂರ್ಣ ಬಂದ್**

ಹೈದರಾಬಾದ್, ಆಗಸ್ಟ್ 29 (ಪಿಟಿಐ)– ಕಾಂಗ್ರೆಸ್ ಹಾಗೂ ಎಡಪಕ್ಷಗಳ ಕಾರ್ಯಕರ್ತರ ಮೇಲೆ ಹೈದರಾಬಾದ್‌ನಲ್ಲಿ ನಿನ್ನೆ ಪೊಲೀಸರು ನಡೆಸಿದ ಗೋಲಿಬಾರ್ ಪ್ರತಿಭಟಿಸಿ ಇಂದು ಆಂಧ್ರಪ್ರದೇಶದಲ್ಲಿ ಪೂರ್ಣ ಬಂದ್ ಆಚರಿಸಲಾಯಿತು.

ರಾಜ್ಯ ಸಾರಿಗೆ ಸಂಸ್ಥೆ ಬಸ್‌ಗಳ ಮೇಲೆ ಕಲ್ಲು ತೂರಿದ ಮತ್ತು ಕೆಲವು ರೈಲುಗಳನ್ನು ಬಲವಂತವಾಗಿ ತಡೆದ ಘಟನೆಗಳನ್ನು ಹೊರತು ಪಡಿಸಿದರೆ ಉಳಿದಂತೆ ಬಂದ್ ಶಾಂತಿಯುತವಾಗಿತ್ತು.

75 ವರ್ಷಗಳ ಹಿಂದೆ

ಬುಧವಾರ, 30-8-1950

● **ಬೆಂಗಳೂರು ಬಳಿ ವಿಮಾನ ಅಪಘಾತ: ಇಬ್ಬರ ಮರಣ**

ಬೆಂಗಳೂರು, ಆಗಸ್ಟ್ 29– ಭಯಂಕರ ವಿಮಾನ ಅಪಘಾತವೊಂದು ಈ ದಿನ ಬೆಂಗಳೂರು ಮಾಗಡಿ ರಸ್ತೆ ಬಳಿ ಸಂಭವಿಸಿ, ಅದರಲ್ಲಿದ್ದ ಇಬ್ಬರೂ ಸ್ಥಳದಲ್ಲಿಯೇ ದುರಂತ ಮರಣಕ್ಕೆ ತುತ್ತಾದರು.

ಸತ್ತವರಲ್ಲಿ ಒಬ್ಬರು ಹಿಂದೂಸ್ತಾನ ವಿಮಾನ ಕಾರ್ಖಾನೆಯ ಏರೋಪ್ಲೇನ್ ಓವರ್‌ಹಾಲ್ ಸಬ್‌ಡಿವಿಜನ್ ಮುಖ್ಯರು; ಮತ್ತೊಬ್ಬರು ಅಂಬಾಲದ ಭಾರತೀಯ ವೈಮಾನಿಕ ಶಾಖಾ ಶಾಲೆಯ ಫ್ಲೇಯಿಂಗ್ ಆಫೀಸರ್ ಕೌಲ್‌ರವರು.

● **ನಿಜಲಿಂಗಪ್ಪ ಕರ್ನಾಟಕ ಪ್ರಾಂತಾಧ್ಯಕ್ಷರು**

ಹುಬ್ಬಳ್ಳಿ, ಆಗಸ್ಟ್ 29– ಹುಬ್ಬಳ್ಳಿಯಲ್ಲಿ ಇಂದು ಸಭೆ ಸೇರಿದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಇಂದು ಸಿದ್ದವ್ವನಹಳ್ಳಿ ನಿಜಲಿಂಗಪ್ಪ ಅವರನ್ನು ಸಮಿತಿಯ ಬರುವ ವರ್ಷದ ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆರಿಸಿತು.

ಬಿಹಾರ: ಬಚ್ಚಿಟ್ಟಿರುವುದು ಏನನ್ನು?



ವಿಶ್ಲೇಷಣೆ

ಯೋಗೇಂದ್ರ ಯಾದವ್

ಬಿಹಾರದಲ್ಲಿ ನಡೆದಿರುವ 'ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ' ಪ್ರಕ್ರಿಯೆಗೆ ಸಂಬಂಧಿಸಿದಂತೆ ಚುನಾವಣಾ ಆಯೋಗದ ಕಣ್ಣಾಮುಚ್ಚಾಲೆ ಮುಂದುವರಿದಿದೆ. ಸುಪ್ರೀಂ ಕೋರ್ಟ್ ಮಧ್ಯಪ್ರವೇಶದಿಂದ ಆಯೋಗದ ಪ್ರಕ್ರಿಯೆಗೆ ಕೊಂಚ ಕಡಿವಾಣ ಹಾಕಿದಂತೆ ಕಾಣುತ್ತಿದೆಯಾದರೂ, ಮತಪಟ್ಟಿಯಿಂದ ಹೊರಗುಳಿಯುವ ಜನರ ಆತಂಕ ಮುಂದುವರಿದಿದೆ.

ಭಾರತೀಯ ಚುನಾವಣಾ ಆಯೋಗವು (ಇಸಿಐ) ಆಗಸ್ಟ್ 24ರಂದು, ಬಿಹಾರದಲ್ಲಿ 'ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್) ಪ್ರಕ್ರಿಯೆಯು ಅಂದುಕೊಂಡ ರೀತಿಯಲ್ಲೇ ನಡೆಯುತ್ತಿದೆ ಎನ್ನುವ ಆಶಾದಾಯಕ ಸಂಗತಿಯೊಂದನ್ನು ಹೇಳಿದೆ. ಪಟ್ಟಿ ಕುರಿತು ತಕರಾರು ಸಲ್ಲಿಸುವ ಅಥವಾ ದಾಖಲೆ ಪೂರೈಸುವ ಕಾಲಮಿತಿ ಮುಗಿಯಲು ಎಂಟು ದಿನಗಳಿದ್ದಾಗಲೇ, 'ಶೇ 98.2ರಷ್ಟು ಮತದಾರರಿಂದ ದಾಖಲೆಗಳನ್ನು ಸ್ವೀಕರಿಸಲಾಗಿದೆ' ಎಂದೂ ಮಾಹಿತಿ ನೀಡಿದೆ. ಮತದಾರರ ಸೇರ್ಪಡೆ ಅರ್ಜಿಗಳನ್ನು ಸಂಗ್ರಹಿಸಿದ ದಕ್ಷತೆ ಸರಿಸಾಟಿ ಇಲ್ಲವೆಂದು ಅದ್ಭುತ ಯಶಸ್ಸನ್ನು ಅದು ಸಾಧಿಸಿದೆ ಅಥವಾ ಹಾಗೆ ನಾವೆಲ್ಲ ನಂಬಬೇಕು ಎಂದು 'ಇಸಿಐ' ಬಯಸಿದೆ.

ನನಗೆ ಈ ಸಂಗತಿ ಕೇಳಿದಾಕ್ಷಣ ಗಾಲಿಬ್‌ನ 'ನಾನು ನಂಬಿಬಿಟ್ಟಿದ್ದೇನಾದರೆ, ಸಂತೋಷದಿಂದ ಪ್ರಾಣ ಬಿಡುತ್ತಿರಲಿಲ್ಲ' ಎನ್ನುವ ಮಾತು ನೆನಪಾಯಿತು. ಅವಿಶ್ವಸನೀಯವಾದ ದತ್ತಾಂಶವನ್ನು ನಮ್ಮನ್ನು ಚಕಿತಗೊಳಿಸಲು ಅಥವಾ ಏನನ್ನೋ ಮರೆಮಾಚಲು ಇಸಿಐ ವಿನ್ಯಾಸಗೊಳಿಸಿರುವುದು ಸ್ಪಷ್ಟ. 'ಪ್ರಜಾವಾಣಿ'ಯಲ್ಲಿನ ವರದಿಗಾರರು ಸೇರಿದಂತೆ ಬಿಹಾರದ ಯಥಾಸ್ಥಿತಿ ಕುರಿತ ಎಲ್ಲ ವಸ್ತುನಿಷ್ಠ ಬರಹಗಳನ್ನೂ ಬದಿಗೊತ್ತಿ ಮಾಡುವ ರೀತಿಯ ದತ್ತಾಂಶವಿದು. ಇಸಿಐ ಕೇಳಿದ ದಾಖಲೆಗಳನ್ನು ಬಹುತೇಕ ಎಲ್ಲರೂ ನೀಡಿದ್ದಾರೆ ಹಾಗೂ ಕರಡು ಮತದಾರರ ಪಟ್ಟಿಯಲ್ಲಿರುವ ಅವರ ಹೆಸರುಗಳು ಅಂತಿಮ ಪಟ್ಟಿಯಲ್ಲೂ ಇರಲಿವೆ ಎಂದು ಈ ದತ್ತಾಂಶ ನಂಬಿಸುತ್ತದೆ. ಆದರೆ, ಅದು ಮುಖ್ಯವಾದ ಮಾಹಿತಿಯೊಂದನ್ನು ಮರೆಮಾಚುತ್ತಿದೆ. ಇಸಿಐ ಕೇಳಿರುವ ದಾಖಲೆಗಳನ್ನು ಸಲ್ಲಿಸಿರುವ ಮತದಾರರೆಷ್ಟು ಹಾಗೂ ಈಗಾಗಲೇ ನೀಡಿರುವ ಆಧಾರ್ ತರಹದ ದಾಖಲೆಗಳನ್ನು ಇಸಿಐ ತಿರಸ್ಕರಿಸಿರುವುದೆಷ್ಟು ಎನ್ನುವುದರ ಶೇಕಡಾವಾರು ಪ್ರಮಾಣವನ್ನು ಹೇಳಿಲ್ಲ.

ಜುಲೈ 31ರಿಂದ ಆಗಸ್ಟ್ 13ರ ಅವಧಿಯ 'ಭಾರತ್ ಜೋಡೊ' ಅಭಿಯಾನದಲ್ಲಿ ಎರಡನೇ ಸಮೀಕ್ಷೆ ನಡೆಸಲಾಗಿತ್ತು. ಎಸ್‌ಐಆರ್‌ನ ಗಂಭೀರ ಚಿತ್ರಣವನ್ನು ಆ ಸಮೀಕ್ಷೆಯು ಕಟ್ಟಿಕೊಡುತ್ತದೆ. ಮತ ಎಣಿಕೆಗೆ ಅರ್ಜಿಯನ್ನು ಪೂರ್ಣ ಪ್ರಮಾಣದಲ್ಲಿ ಅಪೇಕ್ಷಿತ ದಾಖಲೆಗಳ ಸಹಿತ ಸಲ್ಲಿಸಿದವರ ಸಂಖ್ಯೆ ಶೇ 49ರಷ್ಟು ಮಾತ್ರ, ಬಹುಸಂಖ್ಯಾತರು ಹೇಳಿಕೊಂಡಂತೆ, ಅವರಿಗೆ ಅರ್ಜಿ ಸಲ್ಲಿಸಲು ಆಗಿರಲಿಲ್ಲ ಅಥವಾ ಅಪೂರ್ಣ ಅರ್ಜಿ ಸಲ್ಲಿಸಿದ್ದರು. ನಮ್ಮ ಸಮೀಕ್ಷೆಯ ಪ್ರಕಾರ, ಶೇ 81ರಷ್ಟು ಜನರು ತಮ್ಮ ನೇರವಾಗಿ ಅಥವಾ ಪರೋಕ್ಷವಾಗಿ ಪಡೆದುಕೊಂಡಿದ್ದ ಅರ್ಜಿಯನ್ನು ಸಲ್ಲಿಸಿದ್ದರು; ಅದೂ ಪೂರ್ಣ ಪ್ರಮಾಣದಲ್ಲಿ ಅಥವಾ ಅರೆಬರೆ ತುಂಬಿ. ಕೇವಲ ಶೇ 3ರಷ್ಟು ಜನರು ಅರ್ಜಿಯನ್ನು ಪೂರ್ಣಗೊಳಿಸಿದ್ದಾಗಿ ಸ್ಪಷ್ಟವಾಗಿ ಹೇಳಿದರು. ಶೇ 70ರಷ್ಟು ಜನರಿಗೆ ತಮ್ಮ ಅರ್ಜಿ ಪರಿಗಣಿತವಾಯಿತೇ ಎಂಬುದು ತಿಳಿದಿರಲಿಲ್ಲ. ಎಸ್‌ಐಆರ್‌ನಲ್ಲಿ ಸ್ವೀಕೃತಿ ಪತ್ರ ನೀಡಲಾಗಿಲ್ಲ ಎಂದು ಈಗ ವಿಸ್ತೃತವಾಗಿ ವರದಿಯಾಗಿದೆ. ಆದರೆ, ಈ ಸಂಗತಿಯೇ ಕಾಲ್ಪನಿಕವೆನ್ನುವುದು ಸಮೀಕ್ಷೆಯಿಂದ ಸ್ಪಷ್ಟವಾಯಿತು. ಸಲ್ಲಿಸಿದ ಅರ್ಜಿಯ ಛಾಯಾಪ್ರತಿಯ ಮೂಲಕವೇ ಸ್ವೀಕೃತ ದೃಢೀಕರಣ ನೀಡಲಾಗುತ್ತಿತ್ತು ಎಂದು ಹೇಳಿದವರು ಶೇ 1ರಷ್ಟು ಜನ ಮಾತ್ರ. ಶೇ 10ರಷ್ಟು ಮತದಾರರಿಗೆ ಎಸ್‌ಐಆರ್ ಮೂಲಕ ಅರ್ಜಿ ಸ್ವೀಕೃತವಾಗಿದ್ದು ಗೊತ್ತಾಗಿತ್ತು. ಉಳಿದ ಶೇ 89ರಷ್ಟು ಮಂದಿಯ ಬಳಿ ಅರ್ಜಿ ಸಲ್ಲಿಸಿರುವುದಕ್ಕೆ ಯಾವ ಅಧಿಕೃತ ಸ್ವೀಕೃತಿ ಪತ್ರವೂ ಇರಲಿಲ್ಲ. ಅರ್ಜಿ ಸ್ವೀಕೃತವಾಗಿದೆ ಎಂದು ದೃಢೀಕರಣ ಪತ್ರ ನೀಡುವುದನ್ನು ಸುಪ್ರೀಂ ಕೋರ್ಟ್ ಈಗ ಕಡ್ಡಾಯಗೊಳಿಸಿದೆ. ಆದರೆ, ಅದೀಗ ಸಾಕಷ್ಟು ತಡವಾಗಿದೆ.

ಬಾಕಿ ಶೇ 9ರಷ್ಟು ಮಂದಿ 'ನಾಪತ್ತೆಯಾದ ಮತದಾರರು', ಬಿಹಾರದಲ್ಲಿ ವಾಸವಿದ್ದರೂ ಹಿಂದಿನ ಮತದಾರರ ಪಟ್ಟಿಯಲ್ಲಾಗಲೀ ಇತ್ತೀಚಿನ ಮತದಾರರ ಕರಡು ಪಟ್ಟಿಯಲ್ಲಾಗಲೀ ಹೆಸರು ಮೂಡದವರು. ಇಂತಹ ಮತದಾರರ ಸಂಖ್ಯೆಯೇ ಬಿಹಾರದಲ್ಲಿ ಸುಮಾರು 90 ಲಕ್ಷದಷ್ಟಿದೆ; ಹಿಂದೆ ಯಾವುದಾದರೂ ಮತದಾರರ ಪಟ್ಟಿಯಲ್ಲಿ ಇದ್ದವರಲ್ಲಿ ಅಂದಾಜು ಮೂರನೇ ಒಂದರಷ್ಟು ಮಂದಿ, ಮತದಾರರ ಪಟ್ಟಿಗೆ ಸೇರಲು ಪದೇ ಪದೇ ಯತ್ನಿಸಿದರೂ ಸುಮಾರು ಅರ್ಧದಷ್ಟು ಭಾಗದಷ್ಟು ಜನ, ಮತದಾರರ ಪಟ್ಟಿಯಲ್ಲಿ ಎಂದೂ ಇರದಿದ್ದರೂ ಅದಕ್ಕೆ ಸೇರ್ಪಡೆಯಾಗಲು ಪ್ರಯತ್ನ ನಡೆಸದವರ ಅರ್ಧಕ್ಕೂ ಹೆಚ್ಚು ಮಂದಿ. ಎಸ್‌ಐಆರ್ ಮೂಲಕ ಬಿಹಾರದ ಮತದಾರರ ಪಟ್ಟಿಯಲ್ಲಿ ಹೆಸರುಗಳನ್ನು ಸೇರ್ಪಡೆ ಮಾಡುವುದಕ್ಕಿಂತ ತೆಗೆದುಹಾಕುತ್ತಿರುವುದೇ ಹೆಚ್ಚು ಎಂಬ ನಮ್ಮ ಊಹೆಯನ್ನು ಈ ಅಂಕಿಅಂಶವು ದೃಢಪಡಿಸುತ್ತದೆ.

'ಇಸಿಐ ಪಟ್ಟಿ ಮಾಡಿರುವ 11 ದಾಖಲೆಗಳಲ್ಲಿ ಒಂದನ್ನು ಒದಗಿಸಬೇಕಾದ ಜನರೆಷ್ಟು? ಈ ಮುಖ್ಯವಾದ ಪ್ರಶ್ನೆಯಿಂದ ಇಸಿಐ ವಿಷಯಾಂತರ ಮಾಡುತ್ತಿದೆ. ಎಸ್‌ಐಆರ್‌ನ ಮೂಲ ಆದೇಶದ ಅನ್ವಯ, 2003ರ ಮತದಾರರ ಪಟ್ಟಿಯಲ್ಲಿ ಇದ್ದವರ ಹೆಸರುಗಳನ್ನು ಹೊಂದಿಸಬೇಕಾಗಿತ್ತು. ಜೂನ್ 30ರಂದು ಹೊರಡಿಸಿದ ಮಾಧ್ಯಮ ಪ್ರಕಟಣೆಯಲ್ಲಿ, ಇಸಿಐ ಈ ಸಂಗತಿಯನ್ನು ತುಸು ಮಾರ್ಪಡಿಸಿರುವುದಾಗಿ ತಿಳಿಸಿತು. ಅದರ ಪ್ರಕಾರ, 2003ರ ಮತದಾರರ ಪಟ್ಟಿಯಲ್ಲಿ ಇದ್ದ ಪೋಷಕರ ಹೆಸರುಗಳು ಅಳಿಸಿಹೋಗಿದ್ದಲ್ಲಿ ಅವರ ಮಕ್ಕಳು ದಾಖಲೆಗಳನ್ನು ಪೂರೈಸಬೇಕಾದುದು ಅನಿವಾರ್ಯ. ಆದರೆ, ಈ ನಿಯಮವನ್ನು ಇಸಿಐ ಮಾರ್ಪಾಟು ಮಾಡಿರುವುದನ್ನು ಸುಪ್ರೀಂ ಕೋರ್ಟ್‌ಗೆ ಇಸಿಐ ತಿಳಿಸಿತು. 2003ರ ಮತದಾರರ ಪಟ್ಟಿಯಲ್ಲಿ ಯಾವುದೇ ನಾಗರಿಕರ ಪೋಷಕರು ಅಥವಾ ಸಂಬಂಧಿಕರ ಹೆಸರು ಇದ್ದಲ್ಲಿ ಅಂಥವರು ಯಾವ ದಾಖಲೆಗಳನ್ನೂ ಸಲ್ಲಿಸಬೇಕಾಗಿಲ್ಲ ಎಂದಿತು. ನಮ್ಮ ಸಮೀಕ್ಷೆಯ ಪ್ರಕಾರ, ಒಂದು ವೇಳೆ ಎಸ್‌ಐಆರ್‌ನ ಮೂಲ ಆದೇಶವೇ ಅನ್ವಯವಾಗಿದ್ದಲ್ಲಿ, 2003ರ ಮತದಾರರ ಪಟ್ಟಿಯಲ್ಲಿರುವವರ ಹೆಸರುಗಳ ಪಟ್ಟಿಯನ್ನು ಹೊಂದಿಸಲಾಗದವರು ಶೇ 48ರಷ್ಟು ಇದ್ದು, ಅವರೆಲ್ಲರೂ ಮತದಾರರ ಪಟ್ಟಿಯಿಂದ ಹೊರಗುಳಿಯುತ್ತಿದ್ದರು. ಪೋಷಕರ ಹೆಸರು 2003ರ ಪಟ್ಟಿಯಲ್ಲಿ ಇದ್ದು; ತಾವು ದಾಖಲೆ ನೀಡಬೇಕಾಗಿ ಬಂದಿದ್ದಲ್ಲಿ, ಅದನ್ನು ಹೊಂದಿಸಲಾಗದ ಶೇ 6ರಷ್ಟು ಮಂದಿ ಅಸಹಾಯಕರಾಗುತ್ತಿದ್ದರು. ಸುಪ್ರೀಂ ಕೋರ್ಟ್‌ಗೆ ಇಸಿಐ ತಿಳಿಸಿದಂತೆ ಆಗಿದ್ದಲ್ಲಿ ಶೇ 17ರಷ್ಟು ಮಂದಿ ಮತದಾರರ ಪಟ್ಟಿಯಿಂದ ಹೊರಗೆ ಉಳಿಯುತ್ತಿದ್ದರು.

ಇಸಿಐ ಈಗ ಹೇಳಿಕೊಂಡಿರುವ ಸಂಗತಿಯ ಮೂಲ ಸಮಸ್ಯೆಯನ್ನು ಗಮನಿಸೋಣ. ಮತದಾರರ ಪಟ್ಟಿಯಿಂದ ಹೊರಗುಳಿಯುವ ಆತಂಕವಿದ್ದವರಲ್ಲಿ ಎಷ್ಟು ಮಂದಿ ಸಲ್ಲಿಸಿರುವ ದಾಖಲೆಗಳು ಮಾನ್ಯವಾದವು? ನಮ್ಮ ಸಮೀಕ್ಷೆ ಪ್ರಕಾರ ಈ ವಿಭಾಗದಲ್ಲಿ (2003ರ ಪಟ್ಟಿಯಲ್ಲಿ ಹೆಸರು ಪತ್ತೆ ಮಾಡಲು ಆಗದೆ ದಾಖಲೆ ಒದಗಿಸುವ ಅನಿವಾರ್ಯಕ್ಕೆ ಸಿಲುಕಿದವರು) ಶೇ 59ರಷ್ಟು ಮಂದಿ ಒಂದಲ್ಲ ಒಂದು ದಾಖಲೆಯನ್ನು ಲಗತ್ತಿಸಿ ಅರ್ಜಿ ಸಲ್ಲಿಸಿದ್ದರು. ಕೇವಲ ಶೇ 18ರಷ್ಟು ಜನರಿಗೆ ಸೂಚಿಸಲಾಗಿದ್ದ 11 ದಾಖಲೆಗಳಲ್ಲಿ ಒಂದನ್ನು ಪೂರೈಸುವುದು ಸಾಧ್ಯವಾಗಿತ್ತು (ಬಹುತೇಕ ಮೆಟ್ರಿಕ್ಯುಲೇಷನ್, ವಾಸಸ್ಥಳ ದೃಢೀಕರಣ ಪತ್ರ ಅಥವಾ ಜಾತಿ ಪ್ರಮಾಣ ಪತ್ರ). ಉಳಿದ ಶೇ 41ರಷ್ಟು ಜನರು ಆಧಾರ್ ಅಥವಾ ಪಡಿತರ ಚೀಟಿಯ ಛಾಯಾಪ್ರತಿ ಲಗತ್ತಿಸಿದ್ದರು. ಇಸಿಐ ಸೂಚಿಸಿದ್ದ 11 ದಾಖಲೆಗಳ ಪಟ್ಟಿಯಲ್ಲಿ ಇವುಗಳಿಲ್ಲ.

2003ರ ಮತದಾರರ ಪಟ್ಟಿಯಲ್ಲಿ ತಮ್ಮ ಪೋಷಕರು, ಬಂಧುಗಳ ಹೆಸರಿವೆಯೇ ಎಂಬುದನ್ನು ಪತ್ತೆಹಚ್ಚುವಲ್ಲಿ ವಿಫಲರಾದವರಲ್ಲಿ ಶೇ 43ರಷ್ಟು ಮಂದಿಗೆ, 11 'ಅರ್ಹತಾ' ದಾಖಲೆಗಳಲ್ಲಿ ಒಂದನ್ನೂ ಹೊಂಚಿಕೊಳ್ಳಲು ಸಾಧ್ಯವಾಗಿಲ್ಲ. 12 ಮಂದಿಯಲ್ಲಿ ಒಬ್ಬರಷ್ಟೇ ಜಾತಿ ಅಥವಾ ವಾಸಸ್ಥಳ ದೃಢೀಕರಣ ಪತ್ರಕ್ಕೆ ಅರ್ಜಿ ಹಾಕಿದ್ದರು. 35–40 ಪ್ರತಿಶತ ಮಂದಿ ಒಂದಾದರೂ ಅರ್ಹತಾ ದಾಖಲೆ ಹೊಂಚಿಕೊಳ್ಳಲಾಗದ ಸ್ಥಿತಿಯಲ್ಲಿದ್ದಾರೆ. ಹೀಗಿದ್ದೂ ಇವರಲ್ಲಿ ಶೇ 97ರಷ್ಟು ಜನರ ಬಳಿ ಪಡಿತರ ಚೀಟಿಗಳಿವೆ ಹಾಗೂ 99.5 ಪ್ರತಿಶತ ಜನರಲ್ಲಿ ಆಧಾರ್ ಅಥವಾ ರೇಷನ್ ಕಾರ್ಡ್‌ಗಳಿವೆ.

ಎಸ್‌ಐಆರ್ ಪ್ರಕ್ರಿಯೆಯಲ್ಲಿನ ಹಕ್ಕು ನಿರಾಕರಣೆ ಪ್ರಚೋದನೆ ಕುರಿತು ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶಿಸಿದ್ದು, ಬಿಹಾರದಲ್ಲಿ ಒಂದಿಷ್ಟು ಪರಿಶೀಲನೆ ನಡೆಸಲು ಕಾರಣವಾಗಿದೆ. ಹಕ್ಕು ನಿರಾಕರಣೆ ಯಾವ ರೀತಿ ಇರಲಿದೆ ಎನ್ನುವುದು, ಯಾವ ದಾಖಲೆಯು ಸ್ವೀಕಾರಾರ್ಹ ಎಂಬ ಅಂತಿಮ ನಿರ್ಣಯ ಅವಲಂಬಿಸಿದೆ. ಶೇ 98.2ರಷ್ಟು ಜನರು ಮತದಾರರ ಪಟ್ಟಿ ಸೇರಲು ಅರ್ಜಿ ಸಲ್ಲಿಸಿದ್ದಾರೆ ಎಂಬ ಇಸಿಐನ ಅಚ್ಚರಿಯ ಮಾಹಿತಿಯಲ್ಲಿ ಇನ್ನೊಂದು ಸತ್ಯ ಅಡಗಿದೆ. ಅರ್ಜಿ ಸಲ್ಲಿಸಿರುವ ಮೂರನೇ ಒಂದರಷ್ಟು ಜನರಿಗೆ, ಕೇಳಲಾದ 11 ದಾಖಲೆಗಳಲ್ಲಿ ಒಂದನ್ನು ಪೂರೈಸಲು ಸಾಧ್ಯವಾಗಿಲ್ಲ. ಹೀಗೆ ದಾಖಲೆ ಒದಗಿಸಲಾಗದೆ ಮತದಾರರ ಪಟ್ಟಿಯಿಂದ ಹೊರಗುಳಿಯುವವರಲ್ಲಿ ದಲಿತರು, ಆರ್ಥಿಕವಾಗಿ ಹಿಂದುಳಿದ ವರ್ಗದವರೇ ಹೆಚ್ಚು.

ಅಂತಿಮ ಚಿತ್ರಣಕ್ಕಾಗಿ ಕಾಯುತ್ತಿರುವ ಸಂದರ್ಭದಲ್ಲಿ ಎರಡು ಸಾಧ್ಯತೆಗಳಿವೆ: ಎಸ್‌ಐಆರ್ ಆದೇಶದಲ್ಲಿನ ಅಗತ್ಯ ದಾಖಲೆಗಳ ಪೂರೈಕೆ ನಿಯಮದಲ್ಲಿ ಇಸಿಐ ಬದಲಾವಣೆಗಳನ್ನು ಮಾಡುವಂತೆ ಆಗುವುದು. ಹೀಗಾದಲ್ಲಿ, ಅತಿ ಹೆಚ್ಚಿನ ಮತದಾರರನ್ನು ಹೊರಗಿಡುವ ಇಸಿಐ ಕೈಚಳಕಕ್ಕೆ ಕಡಿವಾಣ ಬೀಳಲಿದೆ. ಆಧಾರ್ ಕಾರ್ಡ್ ಅನ್ನೂ ಪರಿಶೀಲಿತ ದಾಖಲೆಗಳ ಪಟ್ಟಿಗೆ ಸೇರಿಸಿಕೊಂಡರೆ, ಹೊರಗುಳಿಯುವ ಮತದಾರರ ಸಂಖ್ಯೆ ತಗ್ಗಲಿದೆ. ಹೀಗಾಗದಿದ್ದರೆ ಎರಡು ಕೋಟಿಗೂ ಹೆಚ್ಚು ಮಂದಿ ಮತದಾನದ ಹಕ್ಕು ಕಳೆದುಕೊಳ್ಳಲಿದ್ದಾರೆ.



ವಾಚಕರ ವಾಣಿ

ಹೊಣೆಗಾರಿಕೆ ಮರೆತ ಯುವಜನ

ದಶಕಗಳ ಹಿಂದೆ ಪದವಿ ವಿದ್ಯಾರ್ಥಿಗಳು ಸಮಾಜದ ಒಳಿತಿಗಾಗಿ ಹಳ್ಳಿಗಳಲ್ಲಿ ನಾಟಕ ಹಾಗೂ ಭಿತ್ತಿಚಿತ್ರಗಳ ಪ್ರದರ್ಶನದ ಮೂಲಕ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದರು. ಪ್ರಸ್ತುತ ಪದವಿ ಓದುತ್ತಿರುವ ವಿದ್ಯಾರ್ಥಿಗಳಲ್ಲಿ ಇಂತಹ ಆಲೋಚನೆಗಳೇ ಕಂಡುಬರುತ್ತಿಲ್ಲ. ಸಾಮಾಜಿಕ ಜಾಲತಾಣಗಳ ಗುಂಗಿನಲ್ಲಿ ಮುಳುಗಿ ಹೋಗಿದ್ದು, ಧರ್ಮ, ಜಾತಿ ಹೆಸರಿನಲ್ಲಿ ಅವಹೇಳನಕಾರಿ ಪೋಸ್ಟ್, ಕಮೆಂಟ್ ಮಾಡುವುದರಲ್ಲಿ ತಲ್ಲೀನರಾಗಿದ್ದಾರೆ. ಯುವ ಮನಸ್ಸಿನಲ್ಲಿ ಬದಲಾವಣೆ ತರುವ ಕೆಲಸ ನಡೆಯಬೇಕಿದೆ.

ಪ್ರಸನ್ನ ಶಿವಾಜಿ ನಾಯಕ, ಜಮಖಂಡಿ

ಸುಖದ ಪುಗ್ಗೆಗೆ ಕಾನೂನಿನ ಸೂಜಿ

ಜಾರಿ ನಿರ್ದೇಶನಾಲಯದ ವಶದಲ್ಲಿರುವ ಶಾಸಕ ಕೆ.ಸಿ. ವೀರೇಂದ್ರ (ಪಪ್ಪಿ), 'ನಾನು ಸತ್ತರೆ ಇ.ಡಿ ಹೊಣೆ' ಎಂದು ನ್ಯಾಯಾಧೀಶರ ಮುಂದೆ ಹೇಳಿರುವುದು ಅಚ್ಚರಿಯೇನೂ ಅಲ್ಲ (ಪ್ರ.ವಾ., ಆಗಸ್ಟ್ 29). ಕಿರುಕುಳ ನೀಡುತ್ತಿದ್ದಾರೆ, ಶುದ್ಧ ನೀರು, ಆಹಾರ ಕೊಟ್ಟಿಲ್ಲ ಎಂದು ಗೋಗರೆದಿರುವುದು ವ್ಯರ್ಥ ಪ್ರಲಾಪ. ಹಣ ಬಲದಿಂದ ಸುಖದ ಸುಪ್ಪತ್ತಿಗೆಯಲ್ಲಿ ಮೆರೆಯುತ್ತಿರುವವರು ಯಾರೇ ಆದರೂ ಅಕ್ರಮದಲ್ಲಿ ತೊಡಗಿ ಜೈಲಿನ ಕಂಬಿಗಳ ಹಿಂದೆ ಹೋದಾಗ ನ್ಯಾಯಾಧೀಶರ ಮುಂದೆ ಹೀಗೆ ಹೇಳುವುದು ಹೊಸದೇನಲ್ಲ. ಕಾನೂನಿನ ಮುಂದೆ ಯಾರೂ ಅತೀತರಲ್ಲ ಎಂಬುದನ್ನು ನ್ಯಾಯಾಲಯಗಳ ಇತ್ತೀಚಿನ ತೀರ್ಪುಗಳು ಸಾರಿ ಹೇಳಿವೆ.

ನಾರಾಯಣರಾವ ಕುಲಕರ್ಣಿ, ಯಲಬುರ್ಗಾ

ಮೀನುಗಾರರಿಗೆ ಸವಲತ್ತು ಬೇಕು

ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರರಿಗೆ ಸಮುದ್ರದ ಮೀನುಗಾರಿಕೆಯೇ ಜೀವಾಳ. ಆದರೆ, ಕಡಲಿಗೆ ಇಳಿದು ಮೀನುಗಾರಿಕೆ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಎಷ್ಟೋ ಜನ ಸಮುದ್ರದ ಅಲೆಗಳ ಅಬ್ಬರಕ್ಕೆ ಸಿಲುಕಿ ಪ್ರಾಣ ಕಳೆದುಕೊಂಡಿದ್ದಾರೆ. ಮೀನುಗಾರಿಕೆಗೆ ದೋಣಿಗಳು ಬೇಕು. ಇವುಗಳಿಗೆ ಲಕ್ಷಾಂತರ ರೂಪಾಯಿ ವೆಚ್ಚವಾಗುತ್ತದೆ. ಒಮ್ಮೆ ಸಮುದ್ರಕ್ಕೆ ಇಳಿದರೆ ವಾರಕ್ಕಾಗುವಷ್ಟು ಆಹಾರ ಕೊಂಡೊಯ್ಯಬೇಕು. ಅಪಾರ ಪ್ರಮಾಣದ ಇಂಧನ ಬೇಕು. ಇಷ್ಟೆಲ್ಲ ವೆಚ್ಚ ಮಾಡಿ ಅದಕ್ಕೆ ತಕ್ಕಂತೆ ಲಾಭ ಬರದಿದ್ದರೆ ಮೀನುಗಾರರು ಆರ್ಥಿಕ ಸಂಕಷ್ಟ ಎದುರಿಸ ಬೇಕಾಗುತ್ತದೆ. ಎಷ್ಟೋ ಮೀನುಗಾರರ ಮನೆಗಳು ಸಮುದ್ರದ ಹತ್ತಿರ ಇರುತ್ತವೆ. ಮಳೆಗಾಲದಲ್ಲಿ ಆ ಮನೆಗಳು ಕೊಚ್ಚಿ ಹೋಗುತ್ತವೆ. ಸಂತ್ರಸ್ತರಿಗೆ ಸರ್ಕಾರದಿಂದ ಸರಿಯಾದ ಪರಿಹಾರ ಸಿಗುತ್ತಿಲ್ಲ. ಮೀನುಗಾರರಿಗೆ ಸರ್ಕಾರ ಸಹಾಯಹಸ್ತ ಚಾಚಬೇಕಿದೆ.

ಅನುಶ್ರೀ ಆರ್., ಮಂಗಳೂರು

ಮಲೆನಾಡ ಮಳೆಯ ಮಧುರ ಅನುಭೂತಿ

'ಸದ್ದಿರದ ಪಸುರುಡೆಯ ಮಲೆನಾಡ ಬನಗಳಲಿ ಮೊರೆವ ತೊರೆಯೆಡೆಯಲ್ಲಿ ಗುಡಿಸಲೊಂದಿರಲಿ' ಎಂಬ ಕುವೆಂಪು ಅವರ ಕವಿತೆಯೊಂದರ ಸಾಲುಗಳಂತೆ, ಬೀದರ್, ಕಲಬುರಗಿ ಜಿಲ್ಲೆಗಳು ಅಕ್ಷರಶಃ ಮಲೆನಾಡಾಗಿ ಬದಲಾಗಿವೆ. ಅಷ್ಟೊಂದು ಮಳೆ ಇಲ್ಲಿ ಸುರಿದಿದೆ. ನದಿಗಳು, ತೊರೆಗಳು ಭೋರ್ಗರೆಯುತ್ತಿವೆ. ಪ್ರಕೃತಿಪ್ರಿಯರು ಗುಡಿಸಲು ಕಟ್ಟಿಕೊಂಡು ಗಿಳಿ, ಗೊರವಂಕ ಕೋಗಿಲೆಗಳಿಂಚರವು ಕಲೆಯುತಲೆ ಯಲೆಯಾಗಿ ತೇಲಿ ಬರುವುದನ್ನು ಆನಂದಿಸಲು ಇದು ಸಕಾಲ. ಮುಂದೆ ಏಪ್ರಿಲ್, ಮೇ ತಿಂಗಳಿನ ಬಿಸಿಲಿಗೆ, 'ಅಯ್ಯೊ ಸೆಕೆ ತಾಳಲಾರೆ' ಎಂಬ ಉದ್ಗಾರಕ್ಕೆ, ಕುವೆಂಪು ಅವರ, 'ಬಿಸಿಲಿದು ಬರಿ ಬಿಸಿಲಲ್ಲವೋ ಸೂರ್ಯನ ಕೃಪೆ ಕಾಣೋ' ಎಂಬ ಸಾಲುಗಳನ್ನು ನೆನಪಿಸಿಕೊಂಡು ಸಮಾಧಾನಿಸಿಕೊಳ್ಳಬೇಕಷ್ಟೇ.

ವೆಂಕಟೇಶ್ ಮುದಗಲ್, ಕಲಬುರಗಿ

ನಿರುದ್ಯೋಗಿಗಳ ನೋವು ಆಲಿಸಿ

ರಾಜ್ಯದಲ್ಲಿ ಲಕ್ಷಾಂತರ ಸರ್ಕಾರಿ ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ಭರ್ತಿ ಮಾಡುವ ಜವಾಬ್ದಾರಿ ಯಾವ ಪಕ್ಷದ ಯಾವ ಸರ್ಕಾರಕ್ಕೂ ಇಲ್ಲ. ಖಾಲಿ ಹುದ್ದೆಗಳಿಗೆ ಹೊರಗುತ್ತಿಗೆಯಡಿ ನೇಮಿಸಿಕೊಳ್ಳಲಾಗುತ್ತಿದೆ. ಇದರಿಂದ ಸರ್ಕಾರಿ ನೌಕರಿ ಬಯಸಿ ಕಾದು ಕುಳಿತಿರುವ ಯುವಜನರ ಬವಣೆ ಹೇಳತೀರದಾಗಿದೆ.

ಪರಿಶಿಷ್ಟ ಜಾತಿಯ ಒಳಮೀಸಲಾತಿ ಸಮಸ್ಯೆಯೂ ಬಗೆಹರಿದಿದೆ. ಮತ್ತೊಂದೆಡೆ ಪರೀಕ್ಷೆಗೆ ಸಿದ್ಧರಾಗಿ ಉದ್ಯೋಗಕ್ಕಾಗಿ ಕಾದು ಕುಳಿತ ಯುವಜನರ ವಯಸ್ಸು ಮೀರುತ್ತಿದೆ. ಹಾಗಾಗಿ, ಸರ್ಕಾರ ಖಾಲಿ ಹುದ್ದೆಗಳ ಭರ್ತಿಗೆ ತ್ವರಿತವಾಗಿ ಅಧಿಸೂಚನೆ ಪ್ರಕಟಿಸಬೇಕಿದೆ. ಜೊತೆಗೆ, ಹುದ್ದೆಗಳ ಭರ್ತಿಯಲ್ಲಿ ಅನಗತ್ಯ ವಿಳಂಬ ಮಾಡಬಾರದು. ಕಾಲಮಿತಿಯೊಳಗೆ ಪಾರದರ್ಶಕತೆ ಕಾಯ್ದುಕೊಂಡು ಭರ್ತಿ ಮಾಡಬೇಕಿದೆ.

ಗೌರೀಶ ನಾಯಕ, ಅಂಕೋಲಾ

ಏಕತೆ ಸಾರುವ ಸಮಚಿತ್ತದ ಬರಹ

'ಎಲ್ಲರ ಎದೆ ಬೆಳಗಲಿ ಹಣತೆ!' ಲೇಖನವು (ಲೇ: ರವೀಂದ್ರ ಭಟ್ಟ, ಪ್ರ.ವಾ., ಆಗಸ್ಟ್ 29) ಏಕತೆಯ ಬಿಂಬ. ಮೈಸೂರು ದಸರಾ ಪರಂಪರೆ, ಇತಿಹಾಸದಲ್ಲಿ ಸರ್ವ ಜನಾಂಗದ ಶಾಂತಿಯ ತೋಟ ಆಗಿರುವುದರ ಪಕ್ಷಿನೋಟವಿದು. ಉತ್ತಮ ಹಾಗೂ ಸಮಚಿತ್ತದ ಮಾಹಿತಿಪೂರ್ಣ ಬರಹ. ಸಾಹಿತಿ ಬಾನು ಮುಷ್ತಾಕ್ ಅಲ್ಪಸಂಖ್ಯಾತರು ಎಂಬ ಕಾರಣಕ್ಕೆ ಅವರ ಸಾಹಿತ್ಯ ಸಾಧನೆಯನ್ನು ಕಡೆಗಣಿಸಿ ರಾಜಕೀಯ ಮಾಡುವುದು, ಅಸೂಯೆ, ಅಸಹನೆಯಿಂದ ಟೀಕಿಸುವುದು ಸರಿಯಲ್ಲ.


ಕಾರಣವಿಲ್ಲದೆಯೂ ಟೀಕಿಸುವವರು, ತಪ್ಪು ಅಭಿಪ್ರಾಯ ಹೊಂದಿದವರು ಮನನ ಮಾಡಬೇಕಾದ ಹಾಗೂ ತಮ್ಮೊಳಗಿನ ಆತ್ಮಸಾಕ್ಷಿಗೆ ಪ್ರಶ್ನೆ ಹಾಕಿಕೊಳ್ಳಬಹುದಾದ ಬರಹ ಇದು. ಅನಗತ್ಯ ವಿವಾದಕ್ಕೆ ತೆರೆ ಎಳೆಯುವ ಇಂಥ ಎಚ್ಚರ ಮೂಡಿಸುವ ವಿಚಾರಗಳು ಇಂದಿನ ಅಗತ್ಯವಾಗಿವೆ.

ಆರ್.ಜಿ. ಹಳ್ಳಿ ನಾಗರಾಜ, ಬೆಂಗಳೂರು

ಚುರುಮುರಿ

ವತ್ಸಲೆ ಸದಾ ನಮಸ್ತೆ

● ಗುರು ಪಿ.ಎಸ್.



'ವತ್ಸಲೆ ಸದಾ ನಮಸ್ತೆ...' ಎನ್ನುತ್ತಾ ಒಳಬಂದ ಪಿಎ ಮುದ್ದಣ್ಣ.

'ಆ ಗೀತೆಯನ್ನ ಯಾಕ್ ಉಲ್ಟಾ ಹೇಳ್ತಿದಿಯಾ, ಅದು ನಮಸ್ತೆ ಸದಾ ವತ್ಸಲೇ ಮಾತೃಭೂಮಿ ಅಂತ, ಸರಿಯಾಗಿ ಹೇಳಬೇಕು ಅದನ್ನ' ಗದರಿದರು ಮಿನಿಸ್ಟರ್ ವಿಜಿ.

'ಮೊದಲು ನಾನದನ್ನ ಸರಿಯಾಗಿಯೇ ಹೇಳ್ತಿದ್ದೆ ಸಾರ್. ಆದರೆ, ಆ ಗೀತೆ ಹೇಳಿದ್ದಕ್ಕೆ ನೀವು ಸಾರಿ ಕೇಳಿದ್ರಲ್ಲ, ಅದಕ್ಕೆ ಉಲ್ಟಾ ಹೇಳಿದೆ. ಹೇಗಿದ್ದರೂ ಅರ್ಥದಲ್ಲೇನೂ ವ್ಯತ್ಯಾಸವಾಗಲ್ವಲ್ಲ ಸಾರ್' ಎಂದ ಮುದ್ದಣ್ಣ.

'ಇರಲಿ, ಇರಲಿ. ಲೆಕ್ಕಕ್ಕೇ ಇಲ್ಲದವರೆಲ್ಲ ನನ್ನನ್ನ ಅಣಕಿಸುವಂತಾಗಿದೆ. ಸಮಯ ಬಂದಾಗ ಒದ್ದು ಒಳಗೆ ಹಾಕಿಸೋದೆಲ್ಲ ಗೊತ್ತಿದೆ ನಂಗೆ' ಗತ್ತಿನಲ್ಲಿ ಹೇಳಿದರು ಸಾಹೇಬ್ರು.

'ಆದರೂ ಸರ್, ನೀವು ಸದನದಲ್ಲೇ ಆರ್‌ಎಸ್‌ಎಸ್ ಗೀತೆ ಹಾಡಿದಾಗ ನನ್ನ ಕಣ್ಣಿಗೆ ಹೇಗೆ ಕಾಣ್ತಿದ್ರಿ ಗೊತ್ತಾ?'

'ಹೇಗೆ ಕಾಣ್ತಿದ್ದೆ?'

'ನೋಟಿಸ್ ಪೀರಿಯಡ್‌ನಲ್ಲಿರೋ ಉದ್ಯೋಗಿ ಥರ'.

'ಅಂದ್ರೆ?'

'ಹೇಗಿದ್ರೂ ಹೊರಗೆ ಹೋಗ್ತೀನಿ, ಯಾವ ಮ್ಯಾನೇಜ್‌ಮೆಂಟ್ ಏನ್ ಮಾಡುತ್ತೆ, ಕಂಪನಿ ಪಾಲಿಸಿ ವಿರುದ್ಧ ಮಾತಾಡಿದರೂ ಏನಾಗೋದಿದೆ ಅನ್ನೋ ಥರ ಇರ್ತಾರಲ್ಲ, ಹಾಗೆ ಕಾಣ್ತಿದ್ರಿ'.

'ಸುಮ್ನಿರಯ್ಯ ಸಾಕು, ನಾನು ಪಕ್ಷದ ನಿಷ್ಠಾವಂತ ಕಾರ್ಯಕರ್ತ. ಈಗ ನನ್ನನ್ನ ಟೀಕೆ ಮಾಡ್ತಿರೋರು ನಾನು ಈ ಪಕ್ಷಕ್ಕೆ ಕೊಟ್ಟಿರೋ ಕೊಡುಗೆಯಲ್ಲಿ 10 ಪರ್ಸೆಂಟ್ ಆದರೂ ಕೆಲಸ ಮಾಡಿದ್ದಾರಾ ಹೇಳು'.

'ಆದರೂ ನೀವು ಲಕ್ಕಿ ಬಿಡಿ ಸಾರ್'.

'ಹೇಗೆ?'

'ಬೇರೆಯವರು ಪಾರ್ಟಿ ನಾಯಕರ ಅಭಿಪ್ರಾಯದ ವಿರುದ್ಧ ಸ್ಟೇಟ್‌ಮೆಂಟ್ ಕೊಟ್ಟರೆ ಅವರನ್ನ ಟರ್ಮಿನೇಟ್ ಮಾಡೇ ಬಿಟ್ಟರು. ನೀವು ಸದನದಲ್ಲೇ ಹಾಡು ಹೇಳಿದರೂ ಸುಮ್ಮನೆ ಬಿಟ್ಟಿದ್ದಾರಲ್ಲ...'

'ಅದಕ್ಕೇ ಈಗ ಕ್ಷಮೆ ಕೇಳಿಲ್ವ ನಾನು'.

'ಹಾಡಬೇಕಿತ್ತೇಕೆ? ಹಾಡಿದ ಮೇಲೆ ಕ್ಷಮೆ ಕೇಳಬೇಕಿತ್ತೇಕೆ?'

'ಮುಂದೇನೇನಾಗುತ್ತೋ ಏನೋ... ಅದಕ್ಕೆ ಆಗಾಗ ಇಂತಹ ದಾಳ ಉದುರಿಸುತ್ತಿರಬೇಕು... ಇದೆಲ್ಲ ನಿನಗೆ ಗೊತ್ತಾಗಲ್ಲ ಸುಮ್ನಿರು' ಕಣ್ಣು ಮಿಟುಕಿಸಿದರು ಸಾಹೇಬರು!

ಸಂಗತ

ಎಳೆಯ ಮನಸ್ಸುಗಳಲ್ಲಿ ಹಿಂಸೆಯ ನೆರಳು


ಮಕ್ಕಳು ಹಿಂಸಾತ್ಮಕ ಚಟುವಟಿಕೆಗಳಲ್ಲಿ ಭಾಗಿಯಾಗುವ ವಿದ್ಯಮಾನಗಳು ಹೆಚ್ಚುತ್ತಿವೆ. ಎಳೆ ಮನಸ್ಸುಗಳು ಒರಟಾಗುವಲ್ಲಿ ಪೋಷಕರು, ಶಿಕ್ಷಕರ ಪಾತ್ರವಿದೆ.

● ರಾಜಕುಮಾರ ಕುಲಕರ್ಣಿ

ವಿಜಯಪುರದ ಖಾಸಗಿ ಶಾಲೆಯೊಂದರಲ್ಲಿ ವಿದ್ಯಾರ್ಥಿಗಳ ಹೊಡೆದಾಟದಲ್ಲಿ ಗಾಯಗೊಂಡ ಐದನೇ ತರಗತಿಯ ವಿದ್ಯಾರ್ಥಿ ಮೃತಪಟ್ಟ ವರದಿ ಓದಿ ದಿಗ್ಭ್ರಮೆಯಾಯಿತು. ಮಕ್ಕಳ ಭವಿಷ್ಯವನ್ನು ರೂಪಿಸುವ ಕಲಿಕಾ ಕೇಂದ್ರಗಳಲ್ಲಿ ಹಿಂಸಾತ್ಮಕ ಘಟನೆಗಳು ನಡೆಯುವುದು ಆತಂಕದ ಸಂಗತಿ.

ಮನೋವಿಜ್ಞಾನಿಗಳು ಹೇಳುವಂತೆ, ಸಾಮಾಜಿಕ ಮಾಧ್ಯಮಗಳ ವ್ಯಸನ ಮತ್ತು ಶೈಕ್ಷಣಿಕವಾಗಿ ಪಾಲಕರ ಅತಿಯಾದ ನಿರೀಕ್ಷೆ ಮಕ್ಕಳಲ್ಲಿ ಹೆಚ್ಚುತ್ತಿರುವ ಹಿಂಸಾಪ್ರವೃತ್ತಿಗೆ ಮುಖ್ಯ ಕಾರಣಗಳಾಗಿವೆ. ಸಮೀಕ್ಷೆಯೊಂದರ ಪ್ರಕಾರ, ಪ್ರತಿ ಹತ್ತರಲ್ಲಿ ಆರು ಮಕ್ಕಳು ದಿನದಲ್ಲಿ ಮೂರು ಗಂಟೆಗಳಷ್ಟು ಸಮಯವನ್ನು ಸಾಮಾಜಿಕ ಮಾಧ್ಯಮದ ಉಪಯೋಗಕ್ಕೆ ವಿನಿಯೋಗಿಸುತ್ತಿದ್ದಾರೆ.

ಕುಟುಂಬದ ಸದಸ್ಯರೆಲ್ಲ ಒಂದೇ ಸೂರಿನಡಿ ವಾಸಿಸುವ ಚಿತ್ರಣ ಈಗ ನೋಡಲು ಸಿಗುವುದು ಕಷ್ಟ. ಸಣ್ಣ ಕುಟುಂಬಗಳಲ್ಲಿ ಪತಿ–ಪತ್ನಿ ಇಬ್ಬರೂ ಸಾಮಾನ್ಯವಾಗಿ ಉದ್ಯೋಗಿಗಳಾಗಿರುತ್ತಾರೆ. ಅಂಥ ಸಂದರ್ಭದಲ್ಲಿ, ಶಾಲಾ ಅವಧಿಯ ನಂತರ ಮನೆಯಲ್ಲಿ ಮಕ್ಕಳನ್ನು ಒಂಟಿತನ ಬಾಧಿಸುತ್ತಿದೆ. ಮಕ್ಕಳ ಒಂಟಿತನವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಪಾಲಕರೇ ಮುಂದಾಗಿ ಮಕ್ಕಳ ಕೈಗೆ ಮೊಬೈಲ್ ಕೊಡುತ್ತಿದ್ದಾರೆ. ಆದರೆ, ಅಂತರ್ಜಾಲದಲ್ಲಿ ಮಕ್ಕಳು ಏನನ್ನು ವೀಕ್ಷಿಸಬೇಕು ಎನ್ನುವುದು ಪಾಲಕರ ನಿಯಂತ್ರಣಕ್ಕೆ ಒಳಪಟ್ಟಿಲ್ಲ.



ಭವಿಷ್ಯದಲ್ಲಿ ಉತ್ತಮ ಬದುಕಿಗಾಗಿ ಮಕ್ಕಳು ಸ್ಪರ್ಧಾತ್ಮಕವಾದ ವರ್ತಮಾನದಲ್ಲಿ ಬದುಕಬೇಕಾಗಿದೆ. ಸದ್ಯದ ಸಂದರ್ಭದಲ್ಲಿ ಮಕ್ಕಳ ಕಲಿಕೆಯನ್ನು ಸ್ಪರ್ಧೆಯಾಗಿ ನೋಡಲಾಗುತ್ತಿದೆ. ಸ್ಪರ್ಧಾತ್ಮಕ ಬೆಳವಣಿಗೆಗೆ ಅಗತ್ಯವಾದ ಎಲ್ಲ ಅವಶ್ಯಕತೆಗಳನ್ನು ಮಕ್ಕಳಿಗೆ ಒದಗಿಸಲಾಗುತ್ತಿದೆ. ಪಾಲಕರ ಮಹತ್ವಾಕಾಂಕ್ಷೆಯ ಪರಿಣಾಮ, ಮಕ್ಕಳು ಸ್ಪರ್ಧಾತ್ಮಕ ಜಗತ್ತಿಗೆ ತಮ್ಮನ್ನು ಒಡ್ಡಿಕೊಳ್ಳಲೇಬೇಕು. ಈ ಸ್ಪರ್ಧಾತ್ಮಕ ಓಟದಲ್ಲಿ ಹಿಂದೆ ಬೀಳುವ ಮಕ್ಕಳು ಸಹಜವಾಗಿಯೇ ಸಮಾಜದ ಬಗ್ಗೆ ಕಹಿ ಬೆಳೆಸಿಕೊಳ್ಳುವ ಸಾಧ್ಯತೆಯಿದೆ. ಗೆಲುವು ಸಾಧಿಸಿದ ಮಕ್ಕಳು ಪ್ರೀತಿ, ವಾತ್ಸಲ್ಯಗಳಿಲ್ಲದೆ ಯಂತ್ರದಂತಾಗುತ್ತಾರೆ.

ಶಾಲೆ–ಕಾಲೇಜುಗಳಲ್ಲಿನ ವಾತಾವರಣವೂ ಮಕ್ಕಳಲ್ಲಿ ಹೆಚ್ಚುತ್ತಿರುವ ಹಿಂಸೆಯ ಪ್ರವೃತ್ತಿಗೆ ಕಾರಣವಾಗುತ್ತಿದೆ. ವಿದ್ಯಾರ್ಥಿಗಳನ್ನು ಅಜ್ಞಾನದ ಕತ್ತಲೆಯಿಂದ ಜ್ಞಾನದ ಬೆಳಕಿನೆಡೆಗೆ ಕೈಹಿಡಿದು ಕರೆದೊಯ್ದು ಮಾದರಿಯಾಗಬೇಕಾದ ಶಿಕ್ಷಕರಲ್ಲಿ ಕೆಲವರು ಕ್ರೌರ್ಯ ಮೆರೆದು, ಇಡೀ ಶಿಕ್ಷಕ ಸಮೂಹಕ್ಕೆ ಕಳಂಕ ತರುತ್ತಿದ್ದಾರೆ. ಜಾತಿ, ಧರ್ಮ ಆಧರಿಸಿ ತರಗತಿಗಳಲ್ಲಿ ವಿದ್ಯಾರ್ಥಿಗಳ ನಡುವೆ ತಾರತಮ್ಯದ ಗೋಡೆ ಕಟ್ಟುತ್ತಿರುವ ಶಿಕ್ಷಕರ ಸಂಖ್ಯೆ ಕಡಿಮೆಯಿಲ್ಲ. ತರಗತಿಯ ಕೋಣೆಯಲ್ಲಿ ವಿದ್ಯಾರ್ಥಿಗಳ ಮೇಲೆ ಹಲ್ಲೆ ಮಾಡುವುದು, ಮಕ್ಕಳನ್ನು ಲೈಂಗಿಕವಾಗಿ ಶೋಷಣೆಗೆ ಒಳಪಡಿಸುವುದು ಇತ್ಯಾದಿ ದುರ್ವರ್ತನೆಗಳು ಶಿಕ್ಷಕರಲ್ಲಿ ಕಂಡುಬರುತ್ತಿವೆ. ಶಿಕ್ಷಕರ ಇಂಥ ಅಸಂಗತ ವರ್ತನೆ ವಿದ್ಯಾರ್ಥಿಗಳನ್ನು ಕ್ರೌರ್ಯಕ್ಕೆ ಪ್ರೇರೇಪಿಸುತ್ತಿದೆ.


ಯಶವಂತ ಚಿತ್ತಾಲರು ಹೇಳಿದಂತೆ, ಹಣಕ್ಕಾಗಿ ಅಧಿಕಾರವನ್ನು, ಅಧಿಕಾರಕ್ಕಾಗಿ ಹಣವನ್ನು ಹೀಗೆ ಒಂದು ಇನ್ನೊಂದನ್ನು ಬೆನ್ನಟ್ಟುವಂಥ ಆತ್ಮಹೀನವೂ ಅರ್ಥಶೂನ್ಯವೂ ಆದ ಕ್ರಿಯೆಯಲ್ಲಿ ತೊಡಗಿಸಿಕೊಂಡಿರುವ ನಮ್ಮನ್ನು ಆಗೀಗಲಾದರೂ ಮನುಷ್ಯರಾಗಿ ಉಳಿಸುವ ಬಲ ಬಹುಶಃ ಕಲೆಗಳಿಗಷ್ಟೇ ಇದೆಯೇನೋ. ಈ ಕಲೆಗಳಲ್ಲಿ ಸಿನಿಮಾ ಮಾಧ್ಯಮವೂ ಒಂದು. ಆತಂಕದ ಸಂಗತಿ ಎಂದರೆ, ಇತ್ತೀಚಿನ ದಿನಗಳಲ್ಲಿ ಮಕ್ಕಳಲ್ಲಿ ಉತ್ತಮ ಆಸಕ್ತಿ ಮತ್ತು ಅಭಿರುಚಿಯನ್ನು ಉತ್ತೇಜಿಸುವ ಸಿನಿಮಾಗಳ ಸಂಖ್ಯೆ ಕ್ಷೀಣಿಸುತ್ತಿದೆ. ಸಿನಿಮಾಗಳು ಮನರಂಜನೆಯ ಹೆಸರಿನಲ್ಲಿ ಮಕ್ಕಳನ್ನು ದಾರಿತಪ್ಪಿಸುತ್ತಿವೆ; ಅತಿಯಾದ ಹಿಂಸಾತ್ಮಕ ದೃಶ್ಯಗಳು ಮಕ್ಕಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತಿವೆ. ಮಕ್ಕಳ ಸಿನಿಮಾಗಳ ನಿರ್ಮಾಣ ಕನ್ನಡ ಚಿತ್ರರಂಗದಲ್ಲಿ ಹೆಚ್ಚೂ ಕಡಿಮೆ ಸ್ಥಗಿತಗೊಂಡಿದೆ.

ಮನೆಗಳಲ್ಲಿ ಕಡಿಮೆಯಾಗುತ್ತಿರುವ ಪುಸ್ತಕಗಳ ಓದು, ಶಾಲೆಗಳಲ್ಲಿ ನೀತಿ ಶಿಕ್ಷಣದ ಕೊರತೆ, ಸಾಮಾಜಿಕ ಮಾಧ್ಯಮವಾದ ಸಿನಿಮಾ ಮಾಧ್ಯಮದ ಬೇಜವಾಬ್ದಾರಿತನ, ಈ ಎಲ್ಲ ಕಾರಣಗಳಿಂದಾಗಿ ಮಕ್ಕಳಲ್ಲಿ ನೀತಿ ಮತ್ತು ಮೌಲ್ಯಗಳನ್ನು ಬೆಳೆಸಲು ಸಾಧ್ಯವಾಗುತ್ತಿಲ್ಲ. ಪಾಲಕರು ತಮ್ಮ ಮಕ್ಕಳು ಪಠ್ಯಕ್ರಮದಾಚೆ ಸಾಹಿತ್ಯ ಕೃತಿಗಳನ್ನು ಓದಲು ಆದ್ಯತೆ ನೀಡುತ್ತಿಲ್ಲ. ಶಾಲೆಗಳಲ್ಲಾದರೂ ಮಕ್ಕಳ ಪುಸ್ತಕಗಳನ್ನು ಸಂಗ್ರಹಿಸಿಟ್ಟು ಓದಲು ಅವಕಾಶ ಮಾಡಿಕೊಡಬೇಕು. ಭಾಷೆ, ಗಣಿತ, ವಿಜ್ಞಾನದಂತೆ ನೀತಿ ಶಿಕ್ಷಣಕ್ಕೂ ತರಗತಿಯ ವೇಳಾಪಟ್ಟಿಯಲ್ಲಿ ಮಹತ್ವ ನೀಡಬೇಕು. ಸಿನಿಮಾಗಳಲ್ಲಿ ನೀತಿಗೆ ಆದ್ಯತೆ ನೀಡುವ ದಿಸೆಯಲ್ಲಿ ಸಿನಿಮಾ ಮಾಧ್ಯಮದವರಿಗೆ ಸಾಮಾಜಿಕ ಜವಾಬ್ದಾರಿಯ ಅರಿವು ಮೂಡಿಸುವುದು ಅಗತ್ಯವಾಗಿದೆ.

ಶಿವರಾಮ ಕಾರಂತರು ತಮ್ಮ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಆತ್ಮಕಥನದಲ್ಲಿ, 'ನಾವು ಭೂಮಿಗೆ ಬಂದ ದಿನ ನಮ್ಮ ಸುತ್ತಣ ಬದುಕು ಇದ್ದುದಕ್ಕಿಂತ ಒಂದಿಷ್ಟು ಹೆಚ್ಚು ಚಂದವಾಗುವಂತೆ ಮಾಡಿ ಇಲ್ಲಿಂದ ಹೊರಡಬೇಕು ಎಂಬ ಭಾವನೆ ನನ್ನದು. ಜಾತ್ರೆಗೆ ಬಂದವರು ಜಾತ್ರೆ ಮುಗಿಸಿ ಹೊರಡುವಾಗ ತಾವು ನಲಿದು ಉಂಡುಹೋದ ನೆಲದ ಮೇಲೆ ಎಲ್ಲೆಲ್ಲೂ ತಮ್ಮ ಉಚ್ಚಿಷ್ಟವನ್ನು ಚೆಲ್ಲಿ ಹೋದರೆ ಹೇಗಾದೀತು? ಅಲ್ಲಿಗೆ ನಾವು ತಿರುಗಿ ಬಾರದಿದ್ದರೇನಾಯಿತು? ಅಲ್ಲಿಗೆ ಬರುವ ನಮ್ಮ ಮಕ್ಕಳು ಏನೆಂದುಕೊಂಡಾರು? ಅಷ್ಟನ್ನಾದರೂ ಯೋಚಿಸುವ ಬುದ್ಧಿ ಈ ದೇಶವನ್ನು ನಡೆಸುವ ಹಿರಿಯರಿಗೆ ಇಲ್ಲದೇ ಹೋದರೆ ಹೇಗೆ?' ಎಂದಿದ್ದಾರೆ. ಈ ಅರಿವು ನಮ್ಮದಾಗಬೇಕು. ಭವಿಷ್ಯದ ಭರವಸೆಯಾದ ಮಕ್ಕಳಿಗಾಗಿ ನಾವು ಎಂತಹ ವರ್ತಮಾನವನ್ನು ಸೃಷ್ಟಿಸಬೇಕು ಎನ್ನುವುದರ ಬಗ್ಗೆ ಪಾಲಕರು ಮತ್ತು ಶಿಕ್ಷಕರು ಯೋಚಿಸಬೇಕಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.









ರಿಜಿಸ್ಟರ್ಡ್ ಪೋಸ್ಟ್ ನೇಪಥ್ಯಕ್ಕೆ

● ಎನ್.ಜಗನ್ನಾಥ ಪ್ರಕಾಶ್

ಭಾರತೀಯ ಅಂಚೆ ವ್ಯವಸ್ಥೆಯಲ್ಲಿ ಬಹುಮುಖ್ಯ ಸ್ಥಾನ ಪಡೆದಿದ್ದ ನೋಂದಾಯಿತ ಅಂಚೆ (ರಿಜಿಸ್ಟರ್ಡ್ ಪೋಸ್ಟ್) ಸೇವೆ ಭಾನುವಾರ (ಆಗಸ್ಟ್ 31) ನೇಪಥ್ಯಕ್ಕೆ ಸರಿಯಲಿದೆ. ತ್ವರಿತ ಅಂಚೆ (ಸ್ಪೀಡ್ ಪೋಸ್ಟ್) ಸೇವೆಯೊಂದಿಗೆ ಅದು ವಿಲೀನಗೊಳ್ಳಲಿದೆ.

ಈಸ್ಟ್ ಇಂಡಿಯಾ ಕಂಪನಿಯು ಮದ್ರಾಸ್ (ಈಗಿನ ಚೆನ್ನೈ), ಮುಂಬೈ ಹಾಗೂ ಕಲ್ಕತ್ತಾಗಳಲ್ಲಿ (ಈಗಿನ ಕೋಲ್ಕತ್ತಾ) 1774ರಿಂದ 1794 ಅವಧಿಯಲ್ಲಿ ಕಂಪನಿ ಉಪಯೋಗಕ್ಕಾಗಿ ಅಂಚೆ ಕಚೇರಿಗಳನ್ನು ಆರಂಭಿಸಿತ್ತು. ವಾರನ್ ಹೇಸ್ಟಿಂಗ್ಸ್ ಅವರು 1774ರಲ್ಲಿ ಸಾರ್ವಜನಿಕರಿಗೂ ಈ ಸೇವೆಯನ್ನು ಒದಗಿಸುವ ನಿರ್ಧಾರ ತೆಗೆದುಕೊಂಡಿದ್ದರು.

1837ರಲ್ಲಿ ಜಾರಿಗೆ ಬಂದ ಬ್ರಿಟಿಷ್ ಆಡಳಿತ ಅಂಚೆ ಕಚೇರಿ ಕಾಯ್ದೆಯು ಎಲ್ಲಾ ನಾಗರಿಕರಿಗೂ ಅಂಚೆ ಸೌಲಭ್ಯ ಬಳಸುವ ಹಕ್ಕು ನೀಡಿತು. ಎಲ್ಲಾ ಅಂಚೆ ಕಚೇರಿಗಳ ದಾಖಲೆಯ ಪುಸ್ತಕಗಳಲ್ಲಿ ನಮೂದು ಮಾಡಿ ನಿರ್ದಿಷ್ಟ ವ್ಯಕ್ತಿ ಅಥವಾ ಸಂಸ್ಥೆಗಳಿಗೆ ನೋಂದಾಯಿತ ಅಂಚೆ ರವಾನೆ ಸೇವೆಯ ಸೌಲಭ್ಯವು 171 ವರ್ಷಗಳಷ್ಟು ಸುದೀರ್ಘ ಕಾಲ ಭಾರತೀಯರಿಗೆ ಲಭಿಸಿದೆ. ಶುರುವಿನಲ್ಲಿ ಈ ಸೇವೆಗಳಿಗೆ ಹೆಚ್ಚಿನ ಶುಲ್ಕವಿರಲಿಲ್ಲ. 1850ರ ಡಿಸೆಂಬರ್ 27ರಿಂದ ನೋಂದಾಯಿತ ಶುಲ್ಕವಾಗಿ ಪ್ರತಿ ಅಂಚೆ ಲಕೋಟೆಗೆ 8 ಆಣೆಯನ್ನು ಇಲಾಖೆ ಪಡೆಯಲಾರಂಭಿಸಿತು.

ಸಂವಹನ ಮಾಧ್ಯಮವಾಗಿ ರೂಪುಗೊಂಡ ಅಂಚೆ ಸೇವೆಗಳು ಅಂಚೆ ಚೀಟಿಗಳೊಂದಿಗೆ ಮುಂದುವರಿಕೆಯಾಗಿದ್ದು 1840ರಲ್ಲಿ; ಫೆನ್ನಿ ಬ್ಲಾಕ್ ಅಂಚೆ ಚೀಟಿ ಉಪಯೋಗದ ಮೂಲಕ. ಇಂಗ್ಲೆಂಡಿನಲ್ಲಿ ಪ್ರಾರಂಭವಾಗಿ ಇತರ ಯುರೋಪ್ ದೇಶಗಳಿಗೂ ಈ ಆಧುನಿಕ ಸಂದೇಶ ವಾಹಕ ವ್ಯವಸ್ಥೆ ಹರಡಿತು.

ಪಾರಿವಾಳಗಳ ಮೂಲಕ ಸಂದೇಶ ರವಾನಿಸುವ ಏರ್ಪಾಡು ಭಾರತದಲ್ಲಿ ಬಹು ಹಿಂದಿನಿಂದಲೂ ಇತ್ತು. ನಂತರ ಓಲೆಕಾರರು ಹಾಗೂ ಹರಿಕಾರರ ಮೂಲಕ ಕಾಗದ ಪತ್ರಗಳನ್ನು ರವಾನಿಸುವ ವ್ಯವಸ್ಥೆಯೂ ಆರಂಭಗೊಂಡಿತು. ಯುರೋಪ್ ನಂತರ ಅಂಟು ಲೇಪಿತ ಅಂಚೆ ಚೀಟಿಗಳನ್ನು ಕಾಗದ ಪತ್ರಗಳ ರವಾನೆಗೆ ಬಳಸಲು ಮುಂದಾದ ಏಷ್ಯಾದ ದೇಶಗಳಲ್ಲೂ ಭಾರತವೇ ಮುಂದು. ಅಖಂಡ ಭಾರತದಲ್ಲಿ ಮೊದಲ ಅಂಚೆ ಚೀಟಿ ಸಿಂಧ್ ಡಾಕ್ ಬಿಡುಗಡೆಯಾಗಿದ್ದು 1852ರಲ್ಲಿ.

ಕರ್ನಾಟಕದ ಹೆಮ್ಮೆ ಮೈಸೂರು ಅಂಚೆ: ಸ್ವಾತಂತ್ರ್ಯಪೂರ್ವದಲ್ಲೂ ಭಾರತದ ಅನೇಕ ದೇಶೀಯ ಸಂಸ್ಥಾನಗಳು ಪ್ರತ್ಯೇಕ ಅಂಚೆ ವ್ಯವಸ್ಥೆ ಹೊಂದಿದ್ದವು. ಮೈಸೂರು ಒಡೆಯರ್ ರಾಜಮನೆತನದ ಆಳ್ವಿಕೆಯಲ್ಲಿ ಇಡೀ ಸಂಸ್ಥಾನಕ್ಕೆ ಅನ್ವಯವಾಗುವಂತಹ ಮೈಸೂರು ಅಂಚೆ ವ್ಯವಸ್ಥೆ ಅಸ್ತಿತ್ವದಲ್ಲಿತ್ತು. ನಂತರ ಎಲ್ಲಾ ಸ್ಥಳೀಯ ಅಂಚೆ ವ್ಯವಸ್ಥೆಗಳೂ ಬ್ರಿಟಿಷರು ಆರಂಭಿಸಿದ ಇಂಡಿಯನ್ ಪೋಸ್ಟ್ ಜತೆಗೆ ವಿಲೀನವಾದವು. ಒಂದೂವರೆ ಶತಮಾನಕ್ಕೂ ಹೆಚ್ಚು ಬಹುಮುಖ್ಯ ಕಾಗದ ಪತ್ರಗಳು ವಸ್ತುಗಳ ರವಾನೆಗೆ ಬಳಕೆಯಾಗುತ್ತಿದ್ದ ನೋಂದಾಯಿತ ಅಂಚೆ ವಿಶ್ವಾಸಾರ್ಹ ಅಂಚೆ ಸೇವೆಯಾಗಿತ್ತು.

ಎಲ್ಲಾ ವಲಯಗಳಿಗಿಂತ ನೋಂದಾಯಿತ ಅಂಚೆಯನ್ನು ಹೆಚ್ಚು ಅವಲಂಬನೆಯಾಗಿರುವುದು ನ್ಯಾಯಾಂಗ. ನ್ಯಾಯಾಲಯಗಳು, ವಕೀಲರು ನೋಂದಾಯಿತ ಅಂಚೆಯ ಮುದ್ರೆ ಹಾಗೂ ಸ್ವೀಕೃತಿ ಪತ್ರಗಳನ್ನು ವಿಶ್ವಾಸಾರ್ಹ ದಾಖಲೆಗಳೆಂದು ಪರಿಗಣಿಸುವುದು, ಸಾಕ್ಷ್ಯವೆಂದು ಒಪ್ಪಿರುವುದು ಇಂದಿಗೂ ಇದೆ. ನ್ಯಾಯಾಂಗ ಪತ್ರ ವ್ಯವಹಾರಗಳಲ್ಲಿ ನೋಂದಾಯಿತ (ರಿಜಿಸ್ಟರ್ಡ್) ನೋಟಿಸ್‌ಗಳಿಗೆ ಬಹುಮುಖ್ಯ ಸ್ಥಾನ. ನೋಂದಾಯಿತ ಅಂಚೆ ಮೂಲಕ ಕಾಗದ ಹಾಗೂ ಅಮೂಲ್ಯ ವಸ್ತುಗಳನ್ನು ರವಾನಿಸುವುದು ನಂಬಿಕೆಯ ವಿಚಾರ.

ಅಂಚೆ ಕಚೇರಿಯ ನೋಂದಣಿ ಪುಸ್ತಕದಲ್ಲಿ (ರಿಜಿಸ್ಟರ್) ದಾಖಲಾಗಿ ಅಂಚೆಯ ಜತೆಯಲ್ಲೇ ಹೋಗುವ ಪತ್ರಕ್ಕೆ ಸ್ವೀಕೃತಿ ಪಡೆಯುವುದು ಈ ಸೇವೆಯ ಬಹುಮುಖ್ಯ ದಾಖಲೆ. ನ್ಯಾಯಾಲಯ ಸೇರಿದಂತೆ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಕಚೇರಿಗಳಲ್ಲೂ ಇದಕ್ಕೇ ಮನ್ನಣೆ.

ನೋಂದಾಯಿತ ಅಂಚೆ ಲಕೋಟೆ, ಕಾರ್ಡು, ಇನ್‌ಲ್ಯಾಂಡ್ ಪತ್ರಗಳ ಮುಂಭಾಗದಲ್ಲಿ ನೋಂದಾಯಿತ ಅಂಚೆ ಎಂದು ಪ್ರತ್ಯೇಕ ಮುದ್ರೆ (ಠಸ್ಸೆ) ಈಗಲೂ ಇರುವುದಾದರೂ ನೋಂದಾಯಿತ ಪತ್ರವೆಂದು ತಕ್ಷಣಕ್ಕೆ ಗೊತ್ತಾಗುವಂತೆ ಅದಕ್ಕೆ ಸ್ಥಳೀಯ ನಮೂದಿತ ಸಂಖ್ಯೆ ನೀಡುವುದು, ನಮೂದಿತ ಸಂಖ್ಯೆ ಇರುವ ಸ್ಟ್ಯಾಂಪು ಹಚ್ಚುವ ರೂಢಿಯೂ ಇದೆ. ಇದಲ್ಲದೆ 1886ರಲ್ಲೇ ಯುರೋಪ್‌ನಲ್ಲಿ ನೋಂದಾಯಿತ ಅಂಚೆ ಎಂದು ಲಕೋಟೆಯ ಮೇಲ್ಭಾಗದಲ್ಲೇ ಮುದ್ರಿಸುವ ವ್ಯವಸ್ಥೆಯೂ ಇತ್ತು.

ಭಾರತದಲ್ಲಿ ಅಂಚೆ ಚೀಟಿಗಳ ಮುದ್ರಣ ಮೊದಲು ಶುರುವಾಗಿದ್ದು ನಾಸಿಕ್ ಸೆಕ್ಯೂರಿಟಿ ಪ್ರೆಸ್‌ನಲ್ಲಿ. ಭಾರತದಲ್ಲಿ ನೋಂದಾಯಿತ ಅಂಚೆ ಎಂದು ಮುದ್ರಿಸಿದ ಲಕೋಟೆಗಳ ಬೇಡಿಕೆ ಹೆಚ್ಚಿ ಅಂಚೆ ಚೀಟಿ ಮುದ್ರಿಸುವ ನಾಸಿಕ್ ಸೆಕ್ಯೂರಿಟಿ ಪ್ರೆಸ್‌ನಲ್ಲೇ ಇಂತಹ ಲಕೋಟೆಗಳನ್ನು ಮುದ್ರಿಸಿ ದೇಶದ ಅಂಚೆ ಕಚೇರಿಗಳಿಗೆ ವಿತರಿಸುವ ವ್ಯವಸ್ಥೆಯನ್ನು ಮಾಡಲಾಗಿತ್ತು.

ಪ್ರಾರಂಭದಲ್ಲಿ ನೋಂದಾಯಿತ ಅಂಚೆಗೆ ಪತ್ರ ತಲುಪುವ ಸ್ಥಳದ ದೂರದ ಮೇಲೆ ಶುಲ್ಕ ನಿರ್ಧಾರವಾಗುವ ಮೊದಲು ಕೆಲಕಾಲ ಏಕರೂಪದ ಶುಲ್ಕ ವ್ಯವಸ್ಥೆ ಇತ್ತು. ನೋಂದಾಯಿತ ಅಂಚೆ ಶುಲ್ಕ ಮೊದಲಿಗೆ ಇದ್ದಿದ್ದು ಎಂಟು ಆಣೆ. ಕೆಲಕಾಲದ ಬಳಿಕ ಅಂತರದೇಶೀಯ ಶುಲ್ಕವನ್ನು ನಾಲ್ಕು ಆಣೆಗಳಿಗೆ ಇಳಿಸಲಾಯಿತು. ವಿದೇಶಗಳಿಗೆ ರವಾನೆಯಾಗುವ ನೋಂದಾಯಿತ ಅಂಚೆ ಶುಲ್ಕ ಅದು ಕ್ರಮಿಸುವ ದೂರ ಹಾಗೂ ಕಾಗದ ಪತ್ರಗಳಿರುವ ಲಕೋಟೆಯ ತೂಕವನ್ನು ಆಧರಿಸಿರುತ್ತದೆ.


ತ್ವರಿತ ಅಂಚೆ (ಸ್ಪೀಡ್ ಪೋಸ್ಟ್) ಸೇವೆಯು ಪಿನ್‌ಕೋಡ್‌ಗಳಿರುವ ಎಲ್ಲಾ ಸ್ಥಳಗಳಲ್ಲೂ ಲಭ್ಯವಿಲ್ಲದೇ ಇರುವುದರಿಂದ ಭಾರತೀಯ ಅಂಚೆ ಇಲಾಖೆಯು ನೋಂದಾಯಿತ ಅಂಚೆ ಸೇವೆಯನ್ನು ಈವರೆಗೂ ಮುಂದುವರಿಸಿತ್ತು. ಈಗ ನೋಂದಾಯಿತ ಅಂಚೆ ಸೇವೆಯನ್ನು ತ್ವರಿತ ಅಂಚೆ ಸೇವೆಯಲ್ಲಿ ವಿಲೀನಗೊಳಿಸುವ ನಿರ್ಧಾರವನ್ನು ಇಲಾಖೆ ಕೈಗೊಂಡಿದ್ದು, ಸೋಮವಾರದಿಂದ ಅದು ಜಾರಿಗೂ ಬರಲಿದೆ.

ಅಧ್ಯಯನ ಶೀಲ ಸುಶೀಲ್ ಮೆಹ್ರಾ

‘ನೋಂದಾಯಿತ ಅಂಚೆ’ ಅಸ್ತಿತ್ವ ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ ನೋಂದಾಯಿತ ಅಂಚೆ ಚರಿತ್ರೆಯನ್ನು ಅಧ್ಯಯನ ನಡೆಸಿ, ಅಂಚೆ ಲಕೋಟೆಗಳು, ಅಂಚೆ ಚೀಟಿ ಸೇರಿದಂತೆ ಅಂಚೆಗೆ ಸಂಬಂಧಿಸಿದ ವಸ್ತು ಪ್ರದರ್ಶನವನ್ನು ಆಯೋಜಿಸಲು ಸಿದ್ಧತೆ ನಡೆಸುತ್ತಿದ್ದಾರೆ ಸುಶೀಲ್ ಮೆಹ್ರಾ.

ಕರ್ನಾಟಕ ಅಂಚೆ ಚೀಟಿ ಸಂಗ್ರಹಕಾರರ ಸಂಘದ ಅಧ್ಯಕ್ಷರಾಗಿರುವ 74ರ ಹರೆಯದ ಸುಶೀಲ್ ಮೆಹ್ರಾ ನವದೆಹಲಿಯಲ್ಲಿ ಜನಿಸಿ ಬೆಂಗಳೂರಿನಲ್ಲಿ ನೆಲಸಿದ್ದಾರೆ. ಭಾರತದ ಸ್ವಾತಂತ್ರ್ಯ ಹೋರಾಟ, ಮಹಾ ಸತ್ಯಾಗ್ರಹಿ ಮಹಾತ್ಮ ಗಾಂಧಿ, ಕರ್ನಾಟಕದಲ್ಲಿ ಬಾಪೂ ಹೆಜ್ಜೆಗಳು, ಬಾಲಗಂಗಾಧರ ತಿಲಕ್... ಮತ್ತಿತರ ವಿಷಯಗಳ ಕುರಿತು ಅಸಂಖ್ಯ ಅಂಚೆ ಚೀಟಿಗಳನ್ನು ಸಂಗ್ರಹಿಸಿ ಅನೇಕ ಪ್ರದರ್ಶನಗಳನ್ನು ಏರ್ಪಡಿಸಿರುವ ಮೆಹ್ರಾ ಅವರಿಗೆ ಹಲವಾರು ಗೌರವ ಪುರಸ್ಕಾರಗಳು ಸಂದಿವೆ.

ಅಂಚೆ ಚೀಟಿ ಸಂಗ್ರಹ, ಕಾಯಂ ಚಿತ್ರ ಮುದ್ರೆಗಳು, ಜೈ ಹಿಂದ್ ಅಂಚೆ ಚರಿತ್ರೆ ಮೊದಲಾದ ಮೌಲಿಕ ಕೃತಿಗಳನ್ನು ಸುಶೀಲ್ ರಚಿಸಿ ಅದಕ್ಕಾಗಿ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ.



ರಿಜಿಸ್ಟರ್ಡ್ ಪೋಸ್ಟ್‌ನೊಂದಿಗೆ ಸುಶೀಲ್ ಮೆಹ್ರಾ

ಭಾರತೀಯ ಅಂಚೆ: ಪ್ರಮುಖ ಮೈಲಿಗಲ್ಲುಗಳು

ವರ್ಷ	ಘಟನೆ
1296	ಅಲ್ಲಾವುದ್ದೀನ್ ಖಿಲ್ಜಿಯ ಆಡಳಿತದಲ್ಲಿ ಕುದುರೆ ಮತ್ತು ನಡಿಗೆ ಅಂಚೆ ವ್ಯವಸ್ಥೆ ಜಾರಿ
1341	ತುಘಲಕ್ ಆಡಳಿತದಲ್ಲಿ ಕುದುರೆ ಮೂಲಕ ಮತ್ತು ಜನರು ನಡಿಗೆ ಮೂಲಕ ಅಂಚೆ ಸೇವೆ ನೀಡುತ್ತಿದ್ದುದರ ಬಗ್ಗೆ ವಿದೇಶಿ ಪ್ರವಾಸಿಗ ಇಬನ್ ಬಟ್ಟೂಟ ಪ್ರಸ್ತಾಪ
1541	ಬಂಗಾಳ ಮತ್ತು ಸಿಂಧ್ ನಡುವಿನ 2,000 ಮೈಲಿ ದೂರದ ನಡುವೆ ಕುದುರೆ ಅಂಚೆ ವ್ಯವಸ್ಥೆ ಜಾರಿ ಮಾಡಿದ ಸುಲ್ತಾನ ಶೇರ್ ಶಾ
1672	ಮಹಾರಾಜ ಚಿಕ್ಕ ದೇವರಾಯ ಒಡೆಯರ್ ಅವರಿಂದ ‘ಮೈಸೂರು ಅಂಚೆ’ ಸೇವೆ ಆರಂಭ
1774	ಅಂಚೆ ಕಚೇರಿಗಳನ್ನು ಆರಂಭಿಸಿದ ವಾರನ್ ಹೇಸ್ಟಿಂಗ್ಸ್
1766	ರಾಬರ್ಟ್ ಕ್ಲೈವ್ (ಬಂಗಾಳ ಪ್ರೆಸಿಡೆನ್ಸಿಯ ಮೊದಲ ಗವರ್ನರ್) ಅವರಿಂದ ಸಾಮಾನ್ಯ ಅಂಚೆ ವ್ಯವಸ್ಥೆ ಸ್ಥಾಪನೆ
1774-94	ಕಲ್ಕತ್ತಾ (1774ರ ಮಾರ್ಚ್ 31), ಮದ್ರಾಸ್ (1786 ಜೂನ್ 1) ಮತ್ತು ಬಾಂಬೆ (1794) ಕಚೇರಿಆರಂಭ
1850	ಅಂಚೆ ಕಚೇರಿ ಆಯೋಗ ರಚನೆ
1854	ಅಂಚೆ ಕಚೇರಿ ಕಾಯ್ದೆ–XVII ಜಾರಿ
1860	ಅಂಚೆ ಕೈಪಿಡಿ ಪ್ರಕಟ
1873	ಅಂಚೆ ಲಕೋಟೆ ಮಾರಾಟ ಆರಂಭ
1876	ಜಾಗತಿಕ ಅಂಚೆ ಒಕ್ಕೂಟಕ್ಕೆ ಭಾರತ ಸೇರ್ಪಡೆ
1879-80	ಪೋಸ್ಟ್‌ಕಾರ್ಡ್ ಬಳಕೆ, ರೈಲಿನ ಮೂಲಕ ಅಂಚೆ ರವಾನೆ/ಮನಿ ಆರ್ಡರ್ ಸೇವೆ ಶುರು
1882	ಅಂಚೆ ಕಚೇರಿ ಉಳಿತಾಯ ಬ್ಯಾಂಕ್ ಸೇವೆ ಆರಂಭ
1884	ಅಂಚೆ ಜೀವ ವಿಮೆಗೆ ಚಾಲನೆ
1886	ಒಂದು ಆಣೆಯ ರೆವೆನ್ಯೂ ಅಂಚೆಚೀಟಿ ಮಾರಾಟ ಆರಂಭ
1898	ಜುಲೈ 1ರಂದು ಅಂಚೆ ಕಚೇರಿ ಕಾಯ್ದೆ VI ಜಾರಿ
1935	ಭಾರತೀಯ ಪೋಸ್ಟಲ್ ಆರ್ಡರ್ (ಐಪಿಒ) ಸೇವೆ ಆರಂಭ
1947	ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಮೂರು ಅಂಚೆ ಚೀಟಿಗಳ ಬಿಡುಗಡೆ
1954	ಮೊದಲ ಅಂಚೆ ಚೀಟಿ ಬಿಡುಗಡೆಯ ಶತಮಾನೋತ್ಸವ
1959	ಜನರಿಗೆ ರಾತ್ರಿ –ಹಗಲು ಸೇವೆ ನೀಡುವ ಧ್ಯೇಯ ಅಳವಡಿಸಿಕೊಂಡ ಇಲಾಖೆ
1986	ಆಗಸ್ಟ್ 1ರಂದು ಸ್ಪೀಡ್ ಪೋಸ್ಟ್ ಸೇವೆ ಆರಂಭ
1994	ಎಕ್ಸ್‌ಪ್ರೆಸ್ ಪಾರ್ಸೆಲ್/ವಿಎಸ್‌ಎಟಿ ಮನಿ ಆರ್ಡರ್ ಸೇವೆ ಆರಂಭ
2003	ಮೇಘದೂತ ಸಾಫ್ಟ್‌ವೇರ್ ಅಳವಡಿಕೆ
2006	ಜೂನ್ 25ರಂದು ಇ–ಪಾವತಿ ಸೇವೆ ಆರಂಭ
2008	ಅಂಚೆ ಕಚೇರಿಗಳ ಆಧುನೀಕರಣಕ್ಕಾಗಿ–ಆ್ಯರೋ ಯೋಜನೆ ಅನುಷ್ಠಾನ
2012	ಐಟಿ ಆಧುನೀಕರಣ ಯೋಜನೆ ಜಾರಿ
2018	ಭಾರತೀಯ ಅಂಚೆ ಪೇಮೆಂಟ್ಸ್ ಬ್ಯಾಂಕ್ ಆರಂಭ

ಕಾನೂನು ಪ್ರಕ್ರಿಯೆಗೆ ಅಡ್ಡಿ

ಪ್ರಜಾವಾಣಿ ವಾರ್ತೆ

ಭಾರತೀಯ ಅಂಚೆಯು ರಿಜಿಸ್ಟರ್ಡ್ ಪೋಸ್ಟ್ (ನೋಂದಾಯಿತ ಅಂಚೆ) ಸೇವೆಯನ್ನು ಸ್ಪೀಡ್ ಪೋಸ್ಟ್ ಸೇವೆಯೊಂದಿಗೆ ವಿಲೀನ ಮಾಡಿರುವುದಕ್ಕೆ ಗ್ರಾಹಕರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ರಿಜಿಸ್ಟರ್ಡ್ ಪೋಸ್ಟ್‌ನಿಂದ ಇದ್ದಂಥ ಕೆಲವು ಅನುಕೂಲಗಳು ಸ್ಪೀಡ್ ಪೋಸ್ಟ್‌ಗೆ ಇಲ್ಲ ಎನ್ನುವುದು ಕೆಲವರ ವಾದ.

ರಿಜಿಸ್ಟರ್ಡ್ ಪೋಸ್ಟ್ ಸೇವೆಯು ವ್ಯಕ್ತಿ ನಿರ್ದಿಷ್ಟವಾಗಿದ್ದು, ಪೋಸ್ಟ್ ಸ್ವೀಕರಿಸಿದವರ ಸಹಿ ಇರುವ ಸ್ವೀಕೃತಿ ರಸೀದಿಯು ಅದರ ಭಾಗವಾಗಿರುತ್ತದೆ. ಪೋಸ್ಟ್ ಅನ್ನು ನಿಗದಿತ ವ್ಯಕ್ತಿಗೇ ತಲುಪಿಸಿ, ಅವರಿಂದ ಸಹಿ ಪಡೆದು, ಅಂಚೆ ಸಂದಾಯವಾಗಿರುವುದನ್ನು ದೃಢೀಕರಿಸಬೇಕಾಗುತ್ತದೆ. ನ್ಯಾಯಾಲಯಗಳು, ಸರ್ಕಾರಿ ಕಚೇರಿ ಮತ್ತಿತರ ಕಡೆಗಳಲ್ಲಿ ಅದನ್ನು ಸಾಕ್ಷ್ಯವಾಗಿಯೂ ಪರಿಗಣಿಸಲಾಗುತ್ತಿದೆ. ರಿಜಿಸ್ಟರ್ಡ್ ಪೋಸ್ಟ್ ನೇಪಥ್ಯಕ್ಕೆ ಸರಿಯುವುದರಿಂದ ಇನ್ನು ಮುಂದೆ ಈ ಸೌಲಭ್ಯ ಗ್ರಾಹಕರಿಗೆ ಸಿಗುವುದಿಲ್ಲ.

ಆದರೆ, ಸ್ಪೀಡ್ ಪೋಸ್ಟ್ ವಿಳಾಸ ನಿರ್ದಿಷ್ಟವಾಗಿದೆ. ಪೋಸ್ಟ್‌ನಲ್ಲಿ ನಮೂದಿಸಿದ ವಿಳಾಸದಲ್ಲಿ ಇರುವ ವ್ಯಕ್ತಿ, ಅವರ ಕುಟುಂಬ ಸದಸ್ಯರು, ನೆರೆಹೊರೆಯವರು, ಕಾವಲುಗಾರರು ಹೀಗೆ ಆ ಸಂದರ್ಭದಲ್ಲಿ ಯಾರು ಲಭ್ಯರಿರುತ್ತಾರೋ ಅವರಿಗೆ ಪೋಸ್ಟ್ ಅನ್ನು ತಲುಪಿಸಲಾಗುತ್ತದೆ.

ಕಾಯ್ದೆಗಳಲ್ಲಿಯೇ ಉಲ್ಲೇಖ: ಭಾರತದ ಕೆಲವು ಕಾಯ್ದೆಗಳಲ್ಲಿ ರಿಜಿಸ್ಟರ್ಡ್ ಪೋಸ್ಟ್ ಅನ್ನು ಪತ್ರ ರವಾನೆಯ ಅಧಿಕೃತ ಮಾರ್ಗ ಎಂದೇ ಉಲ್ಲೇಖಿಸಲಾಗಿದೆ. ದೇಶದ ಕಾನೂನಿನಲ್ಲಿ ಮಹತ್ವದ ಸ್ಥಾನ ಹೊಂದಿರುವ ‘ದಿ ಜನರಲ್ ಕ್ಲಾಸಸ್ ಆ್ಯಕ್ಟ್’ನ ಸೆಕ್ಷನ್ 27ರಲ್ಲಿ, ‘ಕೇಂದ್ರದ ಯಾವುದೇ ಕಾಯ್ದೆಗೆ ಸಂಬಂಧಿಸಿದ ದಾಖಲೆಗಳನ್ನು ಅಂಚೆ ಮೂಲಕ ಕಳುಹಿಸಬೇಕಾದಲ್ಲಿ, ರಿಜಿಸ್ಟರ್ಡ್ ಪೋಸ್ಟ್ ಮೂಲಕ ರವಾನಿಸಿದರೆ ಮಾತ್ರವೇ ಅದನ್ನು ಮಾನ್ಯ ಮಾಡಲಾಗುವುದು’ ಎಂದು ಉಲ್ಲೇಖಿಸಲಾಗಿದೆ. ಕೆಲವು ಕಾಯ್ದೆಗಳಲ್ಲಿ ನಿರ್ದಿಷ್ಟವಾಗಿ ಸ್ಪೀಡ್ ಪೋಸ್ಟ್ ಮತ್ತು ಇತರ ವಿಧಾನಗಳನ್ನು ಉಲ್ಲೇಖಿಸಲಾಗಿದ್ದು, ಅಂಥ ಕಾಯ್ದೆಗಳ ಸಂಖ್ಯೆ ಕಡಿಮೆ ಇದೆ.

ಕೇಂದ್ರದ 13 ಕಾಯ್ದೆಗಳು ರಿಜಿಸ್ಟರ್ಡ್ ಪೋಸ್ಟ್ ಅನ್ನು ಅಧಿಕೃತ ರವಾನೆಯ ಮಾರ್ಗವಾಗಿ ಉಲ್ಲೇಖಿಸಿದ್ದರೆ, ನಾಲ್ಕರಲ್ಲಿ ಸ್ಪೀಡ್ ಪೋಸ್ಟ್ ಅನ್ನು ಉಲ್ಲೇಖಿಸಲಾಗಿದೆ. ಮಹಾರಾಷ್ಟ್ರದಲ್ಲಿ 15 ಕಾಯ್ದೆಗಳಲ್ಲಿ, ಉತ್ತರ ಪ್ರದೇಶದ 8 ಕಾಯ್ದೆಗಳಲ್ಲಿ ರಿಜಿಸ್ಟರ್ಡ್ ಪೋಸ್ಟ್ ಉಲ್ಲೇಖವಾಗಿದ್ದರೆ, ಈ ರಾಜ್ಯಗಳ ಯಾವ ಕಾಯ್ದೆಯಲ್ಲೂ ಸ್ಪೀಡ್ ಪೋಸ್ಟ್‌ನ ಉಲ್ಲೇಖವಾಗಿಲ್ಲ. ‘ಕಂಪನಿಗಳ ಕಾಯ್ದೆ 2013’ ರಿಜಿಸ್ಟರ್ಡ್ ಪೋಸ್ಟ್ ಅಥವಾ ಸ್ಪೀಡ್ ಪೋಸ್ಟ್ ಎಂದು ಉಲ್ಲೇಖಿಸಿದೆ.

ಎರಡರ ನಡುವಿನ ವ್ಯತ್ಯಾಸ: ರಾಜಸ್ಥಾನ ಹೈಕೋರ್ಟ್ ಸೇರಿದಂತೆ ಹಲವು ನ್ಯಾಯಾಲಯಗಳು ರಿಜಿಸ್ಟರ್ಡ್ ಪೋಸ್ಟ್ ಮತ್ತು ಸ್ಪೀಡ್ ಪೋಸ್ಟ್‌ನ ವ್ಯತ್ಯಾಸದ ಬಗ್ಗೆ ಪ್ರಸ್ತಾಪಿಸಿವೆ. ‘ಭಾರತೀಯ ಅಂಚೆ ಕಚೇರಿ ನಿಯಮಗಳು 1933’ರ ನಿಯಮ 63ರ ಪ್ರಕಾರ, ರಿಜಿಸ್ಟರ್ಡ್ ಪೋಸ್ಟ್ ಅನ್ನು ನಿಗದಿತ ವ್ಯಕ್ತಿ ಅಥವಾ ಅವರ ಪ್ರತಿನಿಧಿಗೆ ಮಾತ್ರವೇ ತಲುಪಿಸಬೇಕು ಮತ್ತು ಅವರಿಂದ ಅಂಚೆ ಇಲಾಖೆಯ ಮಹಾನಿರ್ದೇಶಕರು (ಡೈರೆಕ್ಟರ್ ಜನರಲ್) ನಿಗದಿಪಡಿಸಿದ ದಾಖಲೆಯಲ್ಲಿ ಸಹಿ ಪಡೆದು, ಸ್ವೀಕೃತಿ ರಸೀದಿಯನ್ನು ಪಡೆಯಬೇಕು. ಇದೇ ರೀತಿ, ‘ಭಾರತೀಯ ಅಂಚೆ ಕಚೇರಿ ನಿಯಮಗಳು 1933’ರ ನಿಯಮ 66ಬಿ ಅನ್ವಯ, ಸ್ಪೀಡ್ ಪೋಸ್ಟ್‌ನ ಮುಖ್ಯ ಉದ್ದೇಶವು ಅಂಚೆಯನ್ನು ತ್ವರಿತವಾಗಿ ಮುಟ್ಟಿಸುವುದಾಗಿದೆ. ಈ ಎರಡು ನಿಯಮಗಳ ಬಗ್ಗೆ ವಿಶ್ಲೇಷಿಸಿದ್ದ ರಾಜಸ್ಥಾನ ಹೈಕೋರ್ಟ್, ಎರಡೂ ಒಂದೇ ಅಲ್ಲ ಎಂದು ಹೇಳಿದೆ.

ರಿಜಿಸ್ಟರ್ಡ್ ಪೋಸ್ಟ್ ಮತ್ತು ಸ್ಪೀಡ್ ಪೋಸ್ಟ್ ಅನ್ನು ವಿಲೀನಗೊಳಿಸಲಾಗಿದ್ದರೂ ಕಾನೂನಿನ ಪ್ರಕ್ರಿಯೆಯಲ್ಲಿ ಆಗಬೇಕಿರುವ ಬದಲಾವಣೆಗಳು ಮತ್ತು ಮುಂದಿನ ದಿನಗಳಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಕಾನೂನು ಸಚಿವಾಲಯ ಆಗಲಿ ಅಥವಾ ಕಾನೂನು ವ್ಯವಹಾರಗಳ ಇಲಾಖೆ ಆಗಲಿ ಯಾವುದೇ ಪ್ರಕಟಣೆ ನೀಡಿಲ್ಲ ಎಂದು ಕಾನೂನು ತಜ್ಞರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕಾನೂನು ಪ್ರಕ್ರಿಯೆಗಳ ಮಟ್ಟಿಗಾದರೂ ಭಾರತೀಯ ಅಂಚೆಯು ರಿಜಿಸ್ಟರ್ಡ್ ಪೋಸ್ಟ್ ಅನ್ನು ಮುಂದುವರಿಸಬೇಕು ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ಆಧಾರ: ಇಂಡಿಯಾ ಪೋಸ್ಟ್ ವೆಬ್‌ಸೈಟ್, ಪಿಐಬಿ, ಮಾಧ್ಯಮ ವರದಿಗಳು

ಸೆ.1ರಿಂದ ಸ್ಪೀಡ್ ಪೋಸ್ಟ್ ಸೇವೆಯೊಂದಿಗೆ ವಿಲೀನ


‘ಸ್ಥಗಿತ ಅಲ್ಲ, ವಿಲೀನ’

‘ರಿಜಿಸ್ಟರ್ಡ್ ಪೋಸ್ಟ್ ಸೇವೆಯನ್ನು ಸ್ಥಗಿತಗೊಳಿಸುತ್ತಿಲ್ಲ. ಸ್ಪೀಡ್ ಪೋಸ್ಟ್ ಸೇವೆ ಜೊತೆ ವಿಲೀನಗೊಳಿಸಲಾಗುತ್ತಿದೆ’ ಎಂಬುದು ಅಂಚೆ ಇಲಾಖೆಯ ಸ್ಪಷ್ಟನೆ.

ಅಂಚೆ ಸೇವೆಯನ್ನು ಇನ್ನಷ್ಟು ಸುಧಾರಿಸಲು, ಸರಳೀಕರಣಗೊಳಿಸಲು ಮತ್ತು ದೇಶದಾದ್ಯಂತ ಎಲ್ಲ ಪ್ರದೇಶಗಳಲ್ಲೂ ಪರಿಣಾಮಕಾರಿಯಾಗಿ ನೀಡಲು ಈ ಬದಲಾವಣೆ ಮಾಡಲಾಗಿದೆ ಎಂಬುದು ಅದರ ಹೇಳಿಕೆ.

ಆನ್‌ಲೈನ್ ಟ್ರ್ಯಾಕಿಂಗ್, ಒಟಿಪಿ ಆಧಾರಿತ ಸುರಕ್ಷಿತ ಸೇವೆ ಸೇರಿದಂತೆ ಇನ್ನಿತರ ಆಧುನಿಕ ತಂತ್ರಜ್ಞಾನ ಆಧಾರಿತ ಸೇವೆಗಳು ಇದರಲ್ಲಿ ಲಭ್ಯವಿವೆ ಎಂದು ಅಂಚೆ ಇಲಾಖೆ ಹೇಳಿದೆ.









ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

30 ಆಗಸ್ಟ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಸಪ್ತಮಿ ಗಂ. 22-47 **ನಕ್ಷತ್ರ:** ವಿಶಾಖ ಗಂ. 14-38 **ಯೋಗ:** ಐಂದ್ರ ಗಂ. 15-10 **ಕರಣ:** ಗರ ಗಂ. 9-36 ಸಿಂಹ ಮಾಸದ 13 ನೇ ದಿನ. **ಮಳೆ ನಕ್ಷತ್ರ :** ಮಘಾ 4 ನೇ ಪಾದ. **ರಾಹುಕಾಲ :** ಬೆಳಿಗ್ಗೆ 09-00 10-30 , **ಸೂರ್ಯೋದಯ :** 06-23 **ಸೂರ್ಯಾಸ್ತ :** 06-40 **ಮುಸ್ಲಿಂ ದಿನಾಂಕ :** 06 ರಬಿಉಲ್ಲಾವಲ್ , **ಅದೃಷ್ಟ ಸಂಖ್ಯೆ :** 4, 12

ಮೇಷ: ಅಡಿಕೆ ಮತ್ತು ತೆಂಗು ಬೆಳೆಗಳು ನಿರೀಕ್ಷಿಸಿದ ಲಾಭವನ್ನು ತರಲಿವೆ. ಕಾರ್ಯಕ್ಷೇತ್ರದಲ್ಲಿ ಒತ್ತಡ ತೋರಿಬಂದರೂ ಅಭಿವೃದ್ಧಿದಾಯಕ ಬೆಳವಣಿಗೆ ಹರ್ಷ ತರವುದು. ಉದಾಸೀನತೆ ತೋರಬೇಡಿ.

ವೃಷಭ: ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸುವವರಿಗೆ ಪ್ರೋತ್ಸಾಹ ಸಿಗಲಿದೆ. ಆಸ್ತಿ ಹಂಚಿಕೆಯ ವಿಚಾರದಲ್ಲಿ ಮಗನೊಡನೆ ಮಾತುಕತೆ ನಡೆಯುವ ಸಂಭವವಿದೆ. ಯೋಗ್ಯ ವಯಸ್ಕರರಿಗೆ ವಿವಾಹ ಭಾಗ್ಯ ಒದಗಿ ಬರುವುದು.

ಮಿಥುನ: ದಿನಸಿ ವ್ಯಾಪಾರದಲ್ಲಿ ಅತೀವ ಆಸಕ್ತಿ ಮೂಡುತ್ತದೆ. ಲಾಭ ಹೊಂದುವಿರಿ. ದಿನನಿತ್ಯದ ಜೀವನಕ್ಕೆ ಹಣಕಾಸಿನ ಕೊರತೆ ಇರುವುದಿಲ್ಲ. ವೈವಾಹಿಕ ಜೀವನ ಸುಧಾರಿಸಲಿದೆ.

ಕರ್ಕಾಟಕ: ಕ್ರೀಡಾಪಟುಗಳ ಅಥವಾ ಸಂಗೀತಗಾರರ ಅಭ್ಯಾಸದ ಕೊರತೆಯು ವೈಫಲ್ಯಕ್ಕೆ ಕಾರಣವಾಗುವುದು. ದಾಂಪತ್ಯ ಜೀವನ ಉತ್ತಮವಾಗಿರುತ್ತದೆ. ಸಂತಾನ ಭಾಗ್ಯದ ಸುದ್ದಿ ಕೇಳುವಿರಿ.

ಸಿಂಹ: ಸಾಲ ಅಥವಾ ಸಹಾಯದ ರೂಪದಲ್ಲಿ ಹಣ ದೊರೆಯಲಿದೆ. ವಕೀಲರಿಗೆ ಮಾತಿನಲ್ಲಿ ಎದುರಾಳಿಯನ್ನು ಕಟ್ಟಿಹಾಕುವ ಅವಕಾಶ ಸಿಗಲಿದೆ. ಒಂದು ಸಂಸ್ಥೆಯ ಜವಾಬ್ದಾರಿ ನೋಡಲು ಒತ್ತಡಗಳು ಬರಲಿವೆ.

ಕನ್ಯಾ: ವ್ಯಾಪಾರ ವ್ಯವಹಾರದಲ್ಲಿ ನಿರೀಕ್ಷಿಸಿದ ಲಾಭ ಪಡೆಯಲು ಪರಿಶ್ರಮ ಜತೆಯಲ್ಲಿ ಬುದ್ಧಿವಂತಿಕೆ ಬಹುಮುಖ್ಯ. ಯೋಜಿತ ಕೆಲಸಗಳು ವಿಳಂಬವಾಗಬಹುದು. ಸ್ತ್ರೀಯರಿಗೆ ಅಭಿವೃದ್ಧಿಯಾಗಲಿದೆ.

ತುಲಾ: ಸಕ್ರಿಯತೆ ಹಾಗೂ ಕಾರ್ಯಮಗ್ನತೆಯಿಂದ ಯೋಜನೆಗಳು ಮುಕ್ತಾಯ ಹಂತಕ್ಕೆ ತಲುಪಲಿವೆ. ರಿಯಲ್ ಎಸ್ಟೇಟ್ ಏಜೆಂಟ್‌ಗಳಿಗೆ ಲಾಭ ಇರಲಿದೆ. ಓದಿನಲ್ಲಿ ಅತೀವ ಆಸಕ್ತಿ ಇರುವುದು.

ವೃಶ್ಚಿಕ: ಸತ್ಯ, ಧರ್ಮ, ನೀತಿ, ನಡವಳಿಕೆಯನ್ನು ಜೀವನದಲ್ಲಿ ಅಳವಡಿಸಿ-ಕೊಳ್ಳುವುದು ಕಷ್ಟವೆಂದು ತೀರ್ಮಾನಿಸಬೇಡಿ. ವಸ್ತ್ರ ವಿನ್ಯಾಸದಲ್ಲಿ ವಿಶೇಷ ಪರಿಣತಿಯನ್ನು ಪಡೆದುಕೊಳ್ಳುವಿರಿ.

ಧನು: ಆರಂಭಿಸಿದ ವೈಯಕ್ತಿಕ ಕಾರ್ಯ ಆರ್ಥಿಕ ಸಮಸ್ಯೆಗಳಿಂದ ಸ್ಥಗಿತಗೊ-ಳ್ಳುವ ಸಾಧ್ಯತೆಗಳಿವೆ. ಪರಿಶ್ರಮದಿಂದ ಫಲ ಸಿಗಲಿಲ್ಲವೆಂದು ಬೇಸರಪಟ್ಟುಕೊ-ಳ್ಳುವ ಅಗತ್ಯವಿಲ್ಲ. ಮಹಾಗಣಪತಿ ಅಭಿವೃದ್ಧಿಯ ದಾರಿಯನ್ನು ತೋರಿಸುತ್ತಾನೆ.

ಮಕರ: ಸರ್ಕಾರಿ ಕೆಲಸಗಳು ಸುಗಮವಾಗಿ ಸಾಗಲಿವೆ. ಮಗನ ಉದ್ಯೋಗ ನಿಮಿತ್ತದ ವಿದೇಶ ಪ್ರಯಾಣ ಸಂತೋಷವನ್ನು ಉಂಟುಮಾಡುವುದು. ಸ್ವಂತ ಮನೆ ನಿರ್ಮಾಣವನ್ನು ಮಾಡಲು ಅಥವಾ ಕೊಳ್ಳಲು ಸುಸಮಯ.

ಕುಂಭ: ಉದ್ಯೋಗದಲ್ಲಿ ಎದುರಾಗುವ ಸಂಕಷ್ಟದಿಂದ ಹಿಮ್ಮುಖ ಚಲನೆಯ ತೀರ್ಮಾನವನ್ನು ತೆಗೆದುಕೊಳ್ಳಬೇಡಿ. ದೃಢಚಿತ್ತದಿಂದ ಮುಂದುವರಿಯಿರಿ. ಹೂಡಿಕೆಗಾಗಿ ನೂತನ ಭೂ ಖರೀದಿಯ ಚಿಂತನೆ ನಡೆಸಬಹುದು.

ಮೀನ: ಯೋಚಿಸಿದ ವಿಶೇಷ ಕಾರ್ಯಗಳಿಗೆ ಪತ್ನಿ ಮಕ್ಕಳಿಂದ ಸಹಕಾರ ದೊರೆತು ಕಾರ್ಯ ನೆರವೇರುವುದು. ಸಂಘ-ಸಂಸ್ಥೆಗಳಿಗೆ ಪದಾಧಿಕಾರಿಯಾ-ಗುವ ಅವಕಾಶ ಸಿಗಲಿದೆ. ಮಿತ್ರರ ಭೇಟಿಯಿಂದ ಸಂತೋಷ ಹೆಚ್ಚುವುದು.

ಪದಬಂಧ 6149


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಕರದಲ್ಲಿರು ಮಣ್ಣಿನ ಭಿಕ್ಷಾಪಾತ್ರೆ (3)
4.ಕೊನೆಗೆ ವೃಕ್ಷವಿದ್ದಾಗ ಆವರಿಸಿದ ಕ್ಷಾಮ (3)
5.ಸ್ವಂತ ಅನುಭವಕ್ಕೆ ಬಂದಿರುವ ತಿಳಿವು (4)
6. ನಡುವೆ ಪತ್ರ ಬಂದದಕ್ಕೇ ಈ ತೊಂದರೆ! (4)
7.ನಡುಗುವುದನ್ನ ನೋಡಿದಾಗ ಉಕ್ಕಿದ ಮಂದಹಾಸ (2)
9.ತರತಮ ಮಾಡಿದಾಗ ಆವರಿಸಿದ ಕತ್ತಲು (2)
13.ಕಳವಳ ಹೀಗೆ ಬಂದಿದೆ (4)
14.ಹಾರ ಹಿಡಿದುಕೊಂಡಿರುವ ದ್ವಾರಪಾಲಕ (4)
15.ದನಕರುಗಳ ಮೂತ್ರ (3)
16.ಹದ್ದಿನ ಜಾತಿಗೆ ಸೇರಿದ ಪಕ್ಷಿ (3)

ಮೇಲಿಂದ ಕೆಳಕ್ಕೆ

1.ಗಾದೆಯಂತೆ ಗಡಿಗೆ ತುಪ್ಪ ತಿನ್ನಲು ಮಾಡಬೇಕಾದ್ದು! (4)
2.ಕೈಯನ್ನು ತಟ್ಟುವಿಕೆ (5)
3.ಅನುಭೂತಿಗಾಗಿ ಧರಿಸಿರುವ ಭಸ್ಮ (3)
5.ಕಬ್ಬಿಣವನ್ನು ಆಕರ್ಷಿಸುವ ಗುಣ ಇದಕ್ಕಿದೆ (4)
8.ಆಚಾರ್ಯನಿಂದ ಮಹತ್ತರವಾದುದು ಬಂದಿದೆ! (4)
10.ಅಳಿಯನನ್ನು ಹೀಗೂ ಹೇಳಬಹುದು (5)
11.ಮರ ಬಳ್ಳಿ ಇಲ್ಲಿ ಕಾಣುತ್ತಿವೆ (4)
12.ಇದು ಗುರುತು (3)



6148ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ವನ 3.ಪಿಕ
6.ಕಲರವ 8.ಗಾಳಿ
9.ಚರಣ 10.ಅಜ
11.ಬಹುರೂಪಿಚೌಡಯ್ಯ
12.ಜಾಣ 13.ಸುಗಮ
14.ಕಣ್ಣು 15.ಹರಿವಾಣ
16.ತತ್ತಿ 17.ಜರಿ

ಮೇಲಿಂದ ಕೆಳಕ್ಕೆ:

1.ನಕಲಿ 3.ಕರಣ 4.ಮಹಾರಾಜ
7.ವಚನಪಿತಾಮಹ 10.ಅಯ್ಯ 11.ಬಣ
12.ಜಾಯಮಾನ 13.ಸುಕೃತ
14.ಕಣಜ

ಸುಡೊಕು 6533


ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4	5		9		1		3	
								4
8		3	4		5	9		
7								8
	8		1	6	2		9	
		9	7			2		
		8		1			4	
9	6	4	8		7	1		5
	1			9			8	

6532 ಸುಡೊಕು

6	2	4	9	1	7	3	5	8
5	1	3	8	4	6	9	2	7
9	7	8	2	5	3	4	1	6
7	4	9	5	3	8	1	6	2
1	8	6	4	2	9	7	3	5
2	3	5	6	7	1	8	4	9
4	9	2	3	8	5	6	7	1
3	6	1	7	9	2	5	8	4
8	5	7	1	6	4	2	9	3

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 24,500
ಇಂದಿನ ಅಂತ್ಯ: 24,426
ದಿನದ ಕನಿಷ್ಠ: 24,404
▼ 74

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು 100 ಕ್ಕೆ ₹555
12 ಕ್ಕೆ ₹75
ಮೈಸೂರು: 100 ಕ್ಕೆ ₹563

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹388-627
ದ್ವಿತಳಿ (ಬಿ.ವಿ) ₹463-813

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹186.50
ಆರ್‌ಎಸ್‌ಎಸ್-5 ₹181.50
ಗುಡ್ ಲಾಟ್ ₹166.50

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಅರಸೀಕೆರೆ ₹16000-19500
ದಾವಣಗೆರೆ ₹14800-14800

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1355 (1375)
ಸೋಯಾ (ರಿಫೈನ್ಡ್)	₹1260 (1265)
ಸೂರ್ಯಕಾಂತಿ (ರಿಫೈನ್ಡ್)	₹1410 (1410)
ಪಾಮೋಲಿನ್	₹1265 (1275)

ಚಿಟಿಕೆ ಸುದ್ದಿ

ಸಿಗಡಿ ರಫ್ತು ಶೇ 18ರಷ್ಟು ಇಳಿಕೆ ನಿರೀಕ್ಷೆ: ಕ್ರಿಸಿಲ್

ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಸಿಗಡಿ ರಫ್ತು ಶೇ 15ರಿಂದ ಶೇ 18ರಷ್ಟು ಇಳಿಕೆಯಾಗಬಹುದು ಎಂದು ರೇಟಿಂಗ್ ಸಂಸ್ಥೆ ಕ್ರಿಸಿಲ್ ಅಂದಾಜಿಸಿದೆ.

ಅಮೆರಿಕವು, ಭಾರತದ ಸಿಗಡಿ ಮೇಲೆ ಆಗಸ್ಟ್ 27ರಿಂದ ವಿಧಿಸುತ್ತಿರುವ ಶೇ 58.26ರಷ್ಟು ಸುಂಕವೇ ರಫ್ತು ಇಳಿಕೆಗೆ ಕಾರಣ ಎಂದು ಶುಕ್ರವಾರ ಹೇಳಿದೆ. ಈ ಸುಂಕದಿಂದ ದೇಶದ ರಫ್ತುದಾರರು ಆರ್ಥಿಕ ನಷ್ಟಕ್ಕೆ ಒಳಗಾಗಲಿದ್ದಾರೆ ಎಂದು ಹೇಳಿದೆ.

ಕಳೆದ ಆರ್ಥಿಕ ವರ್ಷದಲ್ಲಿ ₹44,108 ಕೋಟಿ ಮೌಲ್ಯದ ಸಿಗಡಿ ರಫ್ತಾಗಿದ್ದವು. ಈ ಪೈಕಿ ಅಮೆರಿಕ ಶೇ 48ರಷ್ಟು ಪಾಲನ್ನು ಹೊಂದಿತ್ತು. ಈಕ್ವೆಡಾರ್, ವಿಯೆಟ್ನಾಂ, ಇಂಡೋನೇಷ್ಯಾ ಮತ್ತು ಥಾಯ್ಲೆಂಡ್‌ನಲ್ಲಿ ಭಾರತಕ್ಕೆ ಹೋಲಿಸಿದರೆ ಸುಂಕ ಕಡಿಮೆ ಇದೆ. ಇದರ ಪರಿಣಾಮವಾಗಿ, ಅಮೆರಿಕಕ್ಕೆ ಭಾರತದ ಸಿಗಡಿ ರಫ್ತು ಪ್ರಮಾಣ ಕುಸಿಯಲಿದೆ ಎಂದು ಹೇಳಿದೆ.

ಮುಂದಿನ ವರ್ಷ ಜಿಯೊ ಐಪಿಒ

ಈ ಐಪಿಒ ಭಾರತದ ಇತಿಹಾಸದಲ್ಲಿ ಅತಿದೊಡ್ಡ ಸಾರ್ವಜನಿಕ ಷೇರು ಮಾರಾಟ ಆಗಲಿದೆ: ಮಾರುಕಟ್ಟೆ ತಜ್ಞರ ಅಂದಾಜು


ಮುಕೇಶ್ ಅಂಬಾನಿ

ನವದೆಹಲಿ (ಪಿಟಿಐ): 2026ರ ಮೊದಲ ಭಾಗದಲ್ಲಿ ರಿಲಯನ್ಸ್ ಜಿಯೊದ ಷೇರುಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುವ ಪ್ರಕ್ರಿಯೆ (ಐಪಿಒ) ಆರಂಭಿಸಲಾಗುವುದು ಎಂದು ರಿಲಯನ್ಸ್ ಇಂಡಸ್ಟ್ರೀಸ್‌ನ ಅಧ್ಯಕ್ಷ ಮುಕೇಶ್ ಅಂಬಾನಿ ಹೇಳಿದ್ದಾರೆ.

ಐಪಿಒಗೆ ಅರ್ಜಿ ಸಲ್ಲಿಸಲು ಎಲ್ಲ ಪ್ರಕ್ರಿಯೆಗಳನ್ನು ಮಾಡಲಾಗುತ್ತಿದೆ. ಮುಂದಿನ ವರ್ಷದ ಮೊದಲ ಭಾಗದಲ್ಲಿ ಐಪಿಒ ಪ್ರಕಟಿಸುವ ಗುರಿ ಹೊಂದಿದ್ದೇವೆ ಎಂದು ಹೇಳಿದ್ದಾರೆ. ಪ್ರಸ್ತುತ ಜಿಯೊ ಬಳಕೆದಾರರ ಸಂಖ್ಯೆ 50 ಕೋಟಿ ದಾಟಿದೆ ಎಂದಿದ್ದಾರೆ.

ಜಿಯೊದಲ್ಲಿ, ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಶೇ 66.3ರಷ್ಟು ಪಾಲು ಹೊಂದಿದೆ. ಮೆಟಾ ಶೇ 10 ಮತ್ತು ಗೂಗಲ್ ಶೇ 7.7ರಷ್ಟು ಪಾಲನ್ನು ಹೊಂದಿವೆ. ಉಳಿದ ಶೇ 16ರಷ್ಟನ್ನು ಈಕ್ವಿಟಿ ಹೂಡಿಕೆದಾರರು ಹೊಂದಿದ್ದಾರೆ.

ಅಂಬಾನಿ ಅವರು ಷೇರುಗಳ ಮಾರಾಟದ ಪ್ರಮಾಣವನ್ನು ಬಹಿರಂಗಪಡಿಸಿಲ್ಲ. ಆದರೂ, ಈ ಐಪಿಒ ಭಾರತದ ಇತಿಹಾಸದಲ್ಲಿ ಅತಿದೊಡ್ಡ ಸಾರ್ವಜನಿಕ ಷೇರು ಮಾರಾಟ ಆಗಲಿದೆ ಎಂದು ಮಾರುಕಟ್ಟೆ ತಜ್ಞರು ಅಂದಾಜಿಸಿದ್ದಾರೆ.

ಮೆಟಾ, ಗೂಗಲ್ ಜೊತೆ ಪಾಲುದಾರಿಕೆ

ವ್ಯಾಪಾರ ಸಂಸ್ಥೆಗಳಿಗೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಸೇವೆ ಒದಗಿಸಲು ರಿಲಯನ್ಸ್ ಇಂಡಸ್ಟ್ರೀಸ್, ಮೆಟಾದೊಂದಿಗೆ ಜಂಟಿ ಪಾಲುದಾರಿಕೆ ಮಾಡಿಕೊಂಡಿದೆ.

ಆರಂಭಿಕವಾಗಿ ₹855 ಕೋಟಿ ಹೂಡಿಕೆ ಮಾಡಿದೆ. ಇದರಲ್ಲಿ ಶೇ 70ರಷ್ಟು ರಿಲಯನ್ಸ್ ಇಂಡಸ್ಟ್ರೀಸ್ ಹೂಡಿಕೆ ಮಾಡಿದ್ದರೆ, ಶೇ 30ರಷ್ಟು ಮೆಟಾ ಕಂಪನಿಯದ್ದಾಗಿದೆ.

ಎ.ಐ ದತ್ತಾಂಶ ಕೇಂದ್ರಗಳ ಸ್ಥಾಪನೆಗೆ ಗೂಗಲ್ ಜೊತೆಗೆ ರಿಲಯನ್ಸ್ ಪಾಲುದಾರಿಕೆ ಮಾಡಿಕೊಂಡಿದೆ. ಮೆಟಾದ ಲಾಮಾ ಮಾದರಿಯನ್ನು ಉದ್ಯಮಗಳಿಗೆ ನೀಡಲಿದೆ.

'ಮೆಟಾ ಮತ್ತು ರಿಲಯನ್ಸ್ ಒಪ್ಪಂದದ ಮೂಲಕ ಸೃಷ್ಟಿಯಾಗಲಿರುವ ಎ.ಐ ಮಾದರಿಗಳು ಭಾರತದ ಉದ್ಯಮಗಳಿಗೆ ಸಹಾಯ ಮಾಡಲಿವೆ. ರಿಲಯನ್ಸ್ ಜೊತೆಗಿನ ಒಪ್ಪಂದದಿಂದ ಈ ಸೇವೆಯು ಭಾರತದ ಪ್ರತಿ ಮೂಲೆಗೂ ತಲುಪಲಿದೆ' ಎಂದು ಮೆಟಾ ಸಂಸ್ಥಾಪಕ ಮತ್ತು ಸಿಇಒ ಮಾರ್ಕ್ ಜುಕರ್‌ಬರ್ಗ್ ಹೇಳಿದ್ದಾರೆ.

'ರಿಲಯನ್ಸ್ ಇಂಟೆಲಿಜೆನ್ಸ್' ಎ.ಐ ಸ್ಥಾಪನೆ

'ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನವನ್ನು ಎಲ್ಲರಿಗೂ, ಎಲ್ಲೆಡೆ ಒದಗಿಸಲು 'ರಿಲಯನ್ಸ್ ಇಂಟೆಲಿಜೆನ್ಸ್' ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗುವುದು' ಎಂದು ಮುಕೇಶ್ ಅಂಬಾನಿ ಘೋಷಿಸಿದ್ದಾರೆ.

ಇದು ರಿಲಯನ್ಸ್ ಇಂಡಸ್ಟ್ರೀಸ್ ಅಂಗಸಂಸ್ಥೆಯಾಗಿದೆ. ದೇಶದಲ್ಲಿ ಎ.ಐ ಮೂಲಸೌಕರ್ಯವನ್ನು ದೊಡ್ಡ ಮಟ್ಟದಲ್ಲಿ ಸ್ಥಾಪಿಸುವ ಮೂಲಕ ಕೃತಕ ಬುದ್ಧಿಮತ್ತೆಯನ್ನು ಒದಗಿಸಲಾಗುವುದು ಎಂದು ಕಂಪನಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಶುಕ್ರವಾರ ಹೇಳಿದ್ದಾರೆ.

ಎ.ಐ ಮೂಲಸೌಕರ್ಯ ಸ್ಥಾಪಿಸುವುದು, ಜಾಗತಿಕ ಪಾಲುದಾರಿಕೆ ಮಾಡಿಕೊಳ್ಳುವುದು, ಭಾರತಕ್ಕಾಗಿ ಎ.ಐ ಸೇವೆಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಪ್ರತಿಭೆಗಳನ್ನು ಬೆಳಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದ್ದಾರೆ.

ಜಾಮ್‌ನಗರದಲ್ಲಿ ಗಿಗಾವಾಟ್, ಎ.ಐ ದತ್ತಾಂಶ ಕೇಂದ್ರಗಳ ಸ್ಥಾಪನೆಯ ಕಾರ್ಯ ಈಗಾಗಲೇ ಆರಂಭವಾಗಿದೆ. ಈ ಘಟಕಗಳು ದೇಶದ ಅಗತ್ಯಗಳನ್ನು ಪೂರೈಸಲಿವೆ. ಇದಕ್ಕಾಗಿ ಜಾಗತಿಕ ತಂತ್ರಜ್ಞಾನ ಕಂಪನಿಗಳೊಂದಿಗೆ ಪಾಲುದಾರಿಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ.

ಸಣ್ಣ ವ್ಯಾಪಾರಿಗಳು, ಉದ್ಯಮಿಗಳು, ಶಿಕ್ಷಣ, ಆರೋಗ್ಯ, ಕೃಷಿ ವಲಯಕ್ಕೆ ಕೃತಕ ಬುದ್ಧಿಮತ್ತೆ ಸೇವೆಗಳನ್ನು ಒದಗಿಸ ಲಾಗುವುದು. ಈ ಸೇವೆಯು ವಿಶ್ವಾಸಾರ್ಹವಾಗಿದ್ದು, ಪ್ರತಿಯೊಬ್ಬ ಭಾರತೀಯನಿಗೆ ಕೈಗೆಟುಕುವ ದರದಲ್ಲಿರುತ್ತದೆ. ಎ.ಐ ಉತ್ಪಾದಕತೆ, ಸಾಮರ್ಥ್ಯವನ್ನು ಹೆಚ್ಚಿಸಲಿದ್ದು, ಮಾನವನ ಸಾಮರ್ಥ್ಯವನ್ನು ಊಹಿಸಲಾಗದ ಮಟ್ಟಕ್ಕೆ ಹೆಚ್ಚಿಸುತ್ತದೆ. ಕೃತಕ ಬುದ್ಧಿಮತ್ತೆಯು 'ಕಾಮಧೇನು' ಆಗಿದೆ ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಅಮೆರಿಕದಿಂದ 50 ಲಕ್ಷ ಬ್ಯಾರೆಲ್ ತೈಲ ಖರೀದಿಸಿದ ಇಂಡಿಯನ್ ಆಯಿಲ್

ನವದೆಹಲಿ / ಸಿಂಗಪುರ (ರಾಯಿಟರ್ಸ್): ದೇಶದ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) 50 ಲಕ್ಷ ಬ್ಯಾರೆಲ್‌ನಷ್ಟು ಅಮೆರಿಕದ ವೆಸ್ಟ್ ಟೆಕ್ಸಾಸ್ ಇಂಟರ್‌ಮಿಡಿಯೇಟ್ (ಡಬ್ಲ್ಯುಟಿಐ) ದರ್ಜೆಯ ಕಚ್ಚಾ ತೈಲವನ್ನು ಖರೀದಿಸಿದೆ ಎಂದು ಮೂಲಗಳು ತಿಳಿಸಿವೆ.


ಈ ತೈಲವು ಕಂಪನಿಗೆ ಅಕ್ಟೋಬರ್ ಮತ್ತು ನವೆಂಬರ್‌ಗೆ ವಿತರಣೆಯಾಗಲಿದೆ ಎಂದು ತಿಳಿಸಿವೆ.

ಸ್ಪರ್ಧಾತ್ಮಕ ದರದಿಂದಾಗಿ ಭಾರತೀಯ ತೈಲ ಸಂಸ್ಕರಣಾಗಾರರು ಈ ತಿಂಗಳು ಅಮೆರಿಕದಿಂದ ಕಚ್ಚಾ ತೈಲ ಖರೀದಿಯನ್ನು ಹೆಚ್ಚಿಸಿದ್ದಾರೆ. ಅಮೆರಿಕ ಮತ್ತು ಭಾರತದ ನಡುವಿನ ವ್ಯಾಪಾರ ಬಿಕ್ಕಟ್ಟಿನ ನಡುವೆಯೇ ತೈಲ ಖರೀದಿಸಿರುವುದು ದೇಶದ ವ್ಯಾಪಾರ ಕೊರತೆಯನ್ನು ತಗ್ಗಿಸಲು ಸಹಾಯ ಮಾಡಲಿದೆ ಎಂದು ಹೇಳಿವೆ.

ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ತಲಾ 20 ಲಕ್ಷ ಬ್ಯಾರೆಲ್ ಡಬ್ಲ್ಯುಟಿಐ ಕಚ್ಚಾ ತೈಲವನ್ನು ಖರೀದಿಸಿವೆ.

ಏಷ್ಯಾದ ಇತರ ರಾಷ್ಟ್ರಗಳ ಜೊತೆಗೂ ಭಾರತ ತೈಲ ಖರೀದಿಯನ್ನು ಹೆಚ್ಚಿಸಿಕೊಂಡಿವೆ. ಯುರೋಪ್‌ನ ಗನ್ವೋರ್ ಮತ್ತು ಈಕ್ವಿನಾರ್ ತಲಾ 20 ಲಕ್ಷ ಬ್ಯಾರೆಲ್ ಮತ್ತು ಮರ್ಕ್ಯುರಿಯಾ 10 ಲಕ್ಷ ಬ್ಯಾರೆಲ್ ತೈಲವನ್ನು ಐಒಸಿಗೆ ಮಾರಾಟ ಮಾಡಿವೆ. ಬಿಪಿಸಿಎಲ್ ನೈಜೀರಿಯಾದಿಂದ ತೈಲ ಖರೀದಿಸಿದೆ.

ಅಮೆರಿಕವು ಸುಂಕವನ್ನು ಶೇ 50ರಷ್ಟು ಹೆಚ್ಚಿಸಿದ ಬಳಿಕ ಭಾರತವು ಅಮೆರಿಕದಿಂದ ಹೆಚ್ಚಿನ ತೈಲವನ್ನು ಖರೀದಿಸುವ ಒತ್ತಡದಲ್ಲಿದೆ ಎಂದು ತಿಳಿಸಿವೆ.



ವಿತ್ತೀಯ ಕೊರತೆ ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್-ಜುಲೈ ಅವಧಿಯಲ್ಲಿ ಕೇಂದ್ರ ಸರ್ಕಾರದ ವರಮಾನ ಮತ್ತು ವೆಚ್ಚದ ನಡುವಿನ ಅಂತರವಾದ ವಿತ್ತೀಯ ಕೊರತೆಯು ಇಡೀ ವರ್ಷದ ಗುರಿಯ ಶೇ 29.9ರಷ್ಟಾಗಿದೆ.

ಮೌಲ್ಯದ ಲೆಕ್ಕದಲ್ಲಿ ಇದು ₹4.68 ಲಕ್ಷ ಕೋಟಿಯಾಗಿದೆ ಎಂದು ಲೆಕ್ಕಪತ್ರಗಳ ಮಹಾನಿಯಂತ್ರಕರ ವರದಿ ಶುಕ್ರವಾರ ತಿಳಿಸಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಶೇ 17.2ರಷ್ಟು ದಾಖಲಾಗಿತ್ತು.

2025–26ರಲ್ಲಿ ವಿತ್ತೀಯ ಕೊರತೆಯನ್ನು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇ 4.4ಕ್ಕೆ ತಗ್ಗಿಸಲು ಸರ್ಕಾರ ಗುರಿ ನಿಗದಿಪಡಿಸಲಾಗಿದೆ.

ಜುಲೈವರೆಗೆ ಸರ್ಕಾರಕ್ಕೆ ₹10.95 ಲಕ್ಷ ಕೋಟಿ ತೆರಿಗೆ ಮೂಲಕ ಸಂಗ್ರಹವಾಗಿದೆ. ಇದು ಬಜೆಟ್ ಅಂದಾಜಿನ ಶೇ 31ರಷ್ಟಾಗಿದೆ. ₹4.28 ಲಕ್ಷ ಕೋಟಿಯನ್ನು ರಾಜ್ಯಗಳಿಗೆ ತೆರಿಗೆ ಪಾಲಾಗಿ ವರ್ಗಾಯಿಸಿದೆ. ಇದೇ ಅವಧಿಯಲ್ಲಿ ಸರ್ಕಾರದ ಒಟ್ಟು ವೆಚ್ಚವು ₹15.63 ಲಕ್ಷ ಕೋಟಿಯಾಗಿದೆ. ಬಡ್ಡಿಗೆ ₹4.46 ಲಕ್ಷ ಕೋಟಿ ಪಾವತಿಸಲಾಗಿದ್ದು, ₹1.13 ಲಕ್ಷ ಕೋಟಿ ಸಬ್ಸಿಡಿಗಳಿಗೆ ನೀಡಲಾಗಿದೆ ಎಂದು ತಿಳಿಸಿದೆ.

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಅಡಿಕೆ ಧಾರಣೆ

ಕುಮಟಾ	
ಚಾಲಿ	38919-42099
ಚಿಪ್ಪು	25269-32189
ಕೋಕ	7099-23089
ಫ್ಯಾಕ್ಟರಿ	4029-30929
ಹೊಸಚಾಲಿ	34899-43313
ಶಿವಮೊಗ್ಗ	
ಬೆಟ್ಟೆ	56599-65499
ಗೊರಬಲು	19010-36280
ರಾಶಿ	46099-60399
ಸರಕು	62099-98196
ಶಿರಸಿ	
ಬೆಟ್ಟೆ	34110-38299
ಬಿಳಿಗೋಟು	24599-34909
ಚಾಲಿ	38101-44048
ಕೆಂಪುಗೋಟು	25421-25421
ರಾಶಿ	47899-50308
ಯಲ್ಲಾಪುರ	
ಆಪಿ	60021-69421
ಬಿಳಿಗೋಟು	18612-33500
ಕೋಕ	12109-21329
ಕೆಂಪುಗೋಟು	20899-27800
ರಾಶಿ	43389-55368
ತಟ್ಟಿಬೆಟ್ಟೆ	29002-37700

₹11 ಲಕ್ಷ ಕೋಟಿ ಕರಗಿದ ಸಂಪತ್ತು

ಮೂರು ದಿನದಲ್ಲಿ ಸೆನ್ಸೆಕ್ಸ್ 1,826, ನಿಫ್ಟಿ 540 ಅಂಶ ಇಳಿಕೆ



ನವದೆಹಲಿ (ಪಿಟಿಐ): ಅಮೆರಿಕದ ಸುಂಕ ಜಾರಿ ಮತ್ತು ವಿದೇಶಿ ಬಂಡವಾಳದ ಹೊರಹರಿವಿನಿಂದ ಶುಕ್ರವಾರದ ವಹಿವಾಟಿನಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಆಗಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 270 ಅಂಶ ಇಳಿಕೆಯಾಗಿ, 79,809ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 74 ಅಂಶ ಕಡಿಮೆಯಾಗಿ, 24,426ಕ್ಕೆ ಕೊನೆಗೊಂಡಿದೆ.

ಕಳೆದ ಮೂರು ವಹಿವಾಟಿನ ದಿನದಲ್ಲಿ ಷೇರು ಸೂಚ್ಯಂಕಗಳ ಇಳಿಕೆಯಿಂದ ಹೂಡಿಕೆದಾರರ ಸಂಪತ್ತು ₹11.21 ಲಕ್ಷ ಕೋಟಿ ಕರಗಿದೆ.

ಸೆನ್ಸೆಕ್ಸ್ 1,826 ಮತ್ತು ನಿಫ್ಟಿ 540 ಅಂಶ ಇಳಿಕೆಯಾಗಿದೆ.

ಚಿನ್ನದ ಧಾರಣೆ ₹2,100 ಏರಿಕೆ



ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನದ ದರ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹2,100 ಹೆಚ್ಚಳವಾಗಿ, ₹1,03,670ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹1,03,100 ಆಗಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹1 ಸಾವಿರ ಇಳಿಕೆಯಾಗಿ, ₹1.19 ಲಕ್ಷವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಡಾಲರ್ ಎದುರು ರೂಪಾಯಿ ಮೌಲ್ಯವು ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಕುಸಿತವಾಗಿರುವುದು ಮತ್ತು ಅಮೆರಿಕದ ಸುಂಕ ಹೆಚ್ಚಳವು ಹಳದಿ ಲೋಹದ ದರ ಏರಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ. ದಾಸ್ತಾನುಗಾರರಿಂದ ನಿರಂತರ ಖರೀದಿ ಸಹ ಚಿನ್ನದ ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಹೇಳಿದ್ದಾರೆ.

ಮುಂಬೈ ಧಾರಣೆ (ಶೇಂಗಾ)
29-08-2025

ಜಾವಾ 70/80(ಹೊಸ)	10500-10600
ಜಾವಾ 80/90(ಹೊಸ)	9800-9900
ದಪ್ಪ ಮಧ್ಯಪ್ರದೇಶ (ಹೊಸ)	7400-7500
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1365 (1385)
ಒಂದು ವಾರದ ಡೆಲಿವರಿ	1360 (1380)
ಪಾಮ್ ವಾರದ ಡೆಲಿವರಿ	1263 (1273)
ಸೂರ್ಯಕಾಂತಿ ಎಣ್ಣೆ ಕಚ್ಚಾ	1345 (1350)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,02,300 (1,01,000)
ಬೆಳ್ಳಿ ಕೆ.ಜಿಗೆ	1,17,600 (1,17,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಶ್ರೀಲಂಕಾದ ಇಬ್ಬರು ರಾಜಕಾರಣಿಗಳ ಬಂಧನ

ಕೊಲಂಬೊ (ಪಿಟಿಐ): ಭ್ರಷ್ಟಾಚಾರ ಆರೋಪದಡಿ ಶ್ರೀಲಂಕಾದ ಮಾಜಿ ಸಚಿವ ರಜಿತ ಸೇನಾರತ್ನ ಹಾಗೂ ಮಾಜಿ ಸಂಸದರೂ ಆದ ಬೌದ್ಧ ಸನ್ಯಾಸಿ ಅತುರಲಿಯೇ ರಥನ ಅವರನ್ನು ಶುಕ್ರವಾರ ಬಂಧಿಸಲಾಗಿದೆ.

ತಲೆಮರೆಸಿಕೊಂಡಿದ್ದ ಈ ಇಬ್ಬರು ತಮ್ಮ ವಿರುದ್ಧದ ಪ್ರಕರಣಗಳ ವಿಚಾರಣೆಗಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದರು.

ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಸೇನಾರತ್ನ ಅವರನ್ನು ಸೆಪ್ಟೆಂಬರ್ 9ರವರೆಗೆ ಹಾಗೂ ಸಬ್‌ಅರ್ಬನ್ ನುಗೆಗೊಡ ನ್ಯಾಯಾಲಯ ರಥನ ಅವರನ್ನು ಸೆ.12ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿವೆ.

2013ರಲ್ಲಿ ಸೇನಾರತ್ನ ಅವರು ಮೀನುಗಾರಿಕೆ ಸಚಿವರಾಗಿದ್ದಾಗ ಕೊರಿಯಾದ ಕಂಪನಿಯೊಂದಕ್ಕೆ ಮರಳು ಗಣಿಗಾರಿಕೆ ನಡೆಸಲು ಗುತ್ತಿಗೆ ನೀಡುವ ಮೂಲಕ ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡಿದ್ದರು ಎಂಬ ಆರೋಪವಿದೆ. ಬೌದ್ಧ ಸನ್ಯಾಸಿಯ ಅಪಹರಣ ಪ್ರಕರಣ ಸಂಬಂಧ ರಥನ ಅವರನ್ನು ಬಂಧಿಸಲಾಗಿದೆ.

ಭ್ರಷ್ಟಾಚಾರ ಆರೋಪದಡಿ ಬಂಧನದಲ್ಲಿದ್ದ ಶ್ರೀಲಂಕಾದ ಮಾಜಿ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಅವರಿಗೆ ಇತ್ತೀಚೆಗೆ ಜಾಮೀನು ದೊರೆತಿತ್ತು.

ಜಪಾನ್ ನಗರಗಳಿಗೆ ನೇರ ವಿಮಾನ; ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಪಾನ್‌ನ ಕೈಗಾರಿಕಾ ನಗರಗಳಾದ ಒಸಾಕಾ ಮತ್ತು ನಗೋಯಾಗೆ ಬೆಂಗಳೂರಿನಿಂದ ನೇರ ವಿಮಾನ ಸೇವೆ ಒದಗಿಸುವ ಬಗ್ಗೆ ಬೃಹತ್ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಅವರು, ಬೆಂಗಳೂರಿನಲ್ಲಿರುವ ಜಪಾನ್ ಕಾನ್ಸುಲ್ ಜನರಲ್ ನಕಾನೆ ಸುಟೋಮು ಜತೆಗೆ ಮಾತುಕತೆ ನಡೆಸಿದರು.

ಸಭೆಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಎಂ.ಬಿ. ಪಾಟೀಲ ಅವರು, 'ಬೆಂಗಳೂರಿನಿಂದ ಟೋಕಿಯೋಗೆ ಮಾತ್ರ ನೇರ ವಿಮಾನ ಸೇವೆ ಇದೆ. ಫೆಬ್ರುವರಿಯಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ, ಜಪಾನ್‌ನ ಉದ್ದಿಮೆ ಗಳ ಜತೆಗೆ ₹7,500 ಕೋಟಿಯಷ್ಟು ಹೂಡಿಕೆಗೆ ಒಪ್ಪಂದ ಮಾಡಿಕೊಳ್ಳ ಲಾಗಿದೆ. ಉದ್ದಿಮೆ ಸಂಬಂಧ ವೃದ್ಧಿಗೆ ಒಸಾಕಾ ಮತ್ತು ನಗೋಯಾ ನಗರಗಳಿಗೆ ನೇರ ವಿಮಾನ ಸೇವೆ ಒದಗಿಸುವ ಅಗತ್ಯವಿದೆ' ಎಂದು ಹೇಳಿದರು.

'ಭಾರತದಲ್ಲಿ ಜಪಾನ್‌ನ 1,400 ಕಂಪನಿಗಳಿವೆ. ಇದರಲ್ಲಿ ಅರ್ಧದಷ್ಟು ಕಂಪನಿಗಳು ತಯಾರಿಕೆ ವಲಯವೊಂದರಲ್ಲೇ ಸಕ್ರಿಯವಾಗಿವೆ. ಭಾರತ ದಲ್ಲಿನ ವಿದೇಶಿ ನೇರ ಬಂಡವಾಳ ಹೂಡಿಕೆಯಲ್ಲಿ ಜಪಾನ್ ಐದನೆಯ ಸ್ಥಾನದಲ್ಲಿದೆ. ಈ ಎಲ್ಲ ನಿಟ್ಟಿನಲ್ಲೂ ನೇರ ವಿಮಾನ ಸೇವೆಯ ಅಗತ್ಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ' ಎಂದು ಮಾಹಿತಿ ನೀಡಿದರು.


ಎಂ.ಬಿ.ಪಾಟೀಲ ಅವರು ನಕಾನೆ ಸುಟೋಮು ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಉಪಸ್ಥಿತರಿದ್ದರು

'ಜಪಾನ್ ಜತೆಗೆ ಹೂಡಿಕೆ, ಸಾಂಸ್ಕೃತಿಕ ವಿನಿಮಯ, ಶೈಕ್ಷಣಿಕ ಸಹಕಾರ ಹಾಗೂ ಭಾಷಾ ಕಲಿಕೆಯ ಉಪಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರ ಬದ್ಧವಾಗಿದೆ. ಈ ಸಲುವಾಗಿ ಸೆಪ್ಟೆಂಬರ್ 6ರಿಂದ 10 ದಿನ ಜಪಾನ್ ಪ್ರವಾಸ ಕೈಗೊಳ್ಳಲಾಗುತ್ತದೆ' ಎಂದರು.

ತೆರಿಗೆ ನಷ್ಟ ಭರ್ತಿಗೆ ಬಿಗಿಪಟ್ಟು

ಒಂದನೇ ಪುಟದಿಂದ...

ಹೀಗಾಗಿ, ರಾಜ್ಯ ಸರ್ಕಾರ ಮುಂಚೂಣಿಯಲ್ಲಿ ನಿಂತು ಸಮಾನ ಮನಸ್ಕರ ರಾಜ್ಯಗಳನ್ನು ಒಗ್ಗೂಡಿಸಿ ಕೇಂದ್ರದ ವಿರುದ್ಧ ಧ್ವನಿ ಎತ್ತಲು ಅಣಿಯಾಗಿದೆ.

ಶೇ 20ರಷ್ಟು ಆದಾಯ ನಷ್ಟ: 'ಕೇಂದ್ರದ ಆದಾಯದಲ್ಲಿ ಜಿಎಸ್‌ಟಿ ಪಾಲು ಶೇ 28ರಷ್ಟು ಮಾತ್ರ. ಉಳಿದ ಶೇ 72ರಷ್ಟು ಆದಾಯವನ್ನು ವಿವಿಧ ಮೂಲಗಳಿಂದ ಗಳಿಸುತ್ತದೆ. ನೇರ ತೆರಿಗೆ, ಆದಾಯ ತೆರಿಗೆ, ಕಸ್ಟಮ್ಸ್, ಡಿವಿಡೆಂಟ್ ಹಾಗೂ ವಿವಿಧ ಸೆಸ್‌ಗಳು ಕೇಂದ್ರದ ಆದಾಯದ ಮೂಲ. ಸೆಸ್ ಮೂಲಕವೇ ಕೇಂದ್ರ ಸರ್ಕಾರ ಶೇ 17ರಿಂದ ಶೇ 20ರಷ್ಟು ಆದಾಯ ಗಳಿಸುತ್ತದೆ. ಸೆಸ್ ಆದಾಯದಲ್ಲಿ ಒಂದು ರೂಪಾಯಿಯನ್ನೂ ಕೇಂದ್ರ ಸರ್ಕಾರವು ರಾಜ್ಯಗಳ ಜೊತೆ ಹಂಚಿಕೊಳ್ಳುವುದಿಲ್ಲ. ಆದರೆ, ರಾಜ್ಯಗಳ ಆದಾಯದಲ್ಲಿ ಜಿಎಸ್‌ಟಿ ಪಾಲು ಶೇ 50ರಷ್ಟು. ಹೀಗಾಗಿ ಅಭಿವೃದ್ಧಿಗಾಗಿ ಹಾಗೂ ಆದಾಯ ಸಂಗ್ರಹಣೆಗೆ ರಾಜ್ಯಗಳು ಜಿಎಸ್‌ಟಿಯನ್ನೇ ನೆಚ್ಚಿಕೊಂಡಿವೆ. ಇಂತಹ ಸಂದರ್ಭದಲ್ಲಿ ರಾಜ್ಯಗಳ ಆದಾಯದಲ್ಲಿ ಶೇ 20ರಷ್ಟು ನಷ್ಟವಾದರೆ ರಾಜ್ಯಗಳ ಆರ್ಥಿಕ ಸ್ವಾಯತ್ತತೆಗೆ ಹೊಡೆತ ಬೀಳುತ್ತದೆಎಂದು ಕರ್ನಾಟಕ ಕಳವಳ ವ್ಯಕ್ತಪಡಿಸಿದೆ.

'ರಾಜ್ಯಗಳ ಆರ್ಥಿಕ ಸ್ವಾಯತ್ತೆಗೆ ಹೊಡೆತ'

ಒಂದನೇ ಪುಟದಿಂದ...

'ಪ್ರಸ್ತಾವಿತ ಜಿಎಸ್‌ಟಿ ಸರಳೀಕರಣದಿಂದ ರಾಜ್ಯ ಸರ್ಕಾರಗಳಿಗೆ ಯಾವ ಪ್ರಮಾಣದಲ್ಲಿ ಆದಾಯ ಖೋತಾ ಆಗಬಹುದು ಎಂಬ ಅಂದಾಜಿನ ಕುರಿತು ಕೇಂದ್ರ ಸರ್ಕಾರ ಈವರೆಗೆ ಯಾವುದೇ ಮಾಹಿತಿ ನೀಡಿಲ್ಲ. ರಾಜ್ಯ ಸರ್ಕಾರಗಳಿಗೆ ಆದಾಯ ನಷ್ಟ ಉಂಟಾದರೆ ಕೇಂದ್ರ ಸರ್ಕಾರಕ್ಕೂ ನಷ್ಟವಾಗಲಿದೆ. ಹೀಗಾಗಿ ಜಿಎಸ್‌ಟಿ ಸ್ಥಿರಗೊಳ್ಳುವವರೆಗೆ ಕೇಂದ್ರ ಸರ್ಕಾರ ತನ್ನ ಖಜಾನೆಯಿಂದ ಒಂದು ರೂಪಾಯಿಯನ್ನೂ ನೀಡುವ ಅಗತ್ಯವಿಲ್ಲ. ಬದಲಿಗೆ ಜಿಎಸ್‌ಟಿ ಕೌನ್ಸಿಲ್ ಪರಿಧಿಯಲ್ಲೇ ಪ್ರತಿಯೊಂದು ರಾಜ್ಯಗಳಿಗೂ ಪರಿಹಾರ ನೀಡಲಿ' ಎಂದು ಒತ್ತಾಯಿಸಿದರು.

'ಜಿಎಸ್‌ಟಿಯನ್ನು ಪರಿಚಯಿಸುವಾಗ ಈ ನೂತನ ತೆರಿಗೆ ವ್ಯವಸ್ಥೆ ಆರ್ಥಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತದೆ ಎಂದು ಭಾವಿಸಲಾಗಿತ್ತು. ಇದು ನಿಜವಾಗಿದ್ದರೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಆದಾಯ ದುಪ್ಪಟ್ಟಾಗಬೇಕಿತ್ತು. ಆದರೆ, ಕಳೆದ 7-8 ವರ್ಷಗಳ ಅನುಭವದಲ್ಲಿ ಈ ಹೇಳಿಕೆ ಸುಳ್ಳು ಎಂದು ಸಾಬೀತಾಗಿದೆ. ಪ್ರತಿ ವರ್ಷವೂ ಎಲ್ಲ ರಾಜ್ಯಗಳ ನಿವ್ವಳ ಆದಾಯ ಗಣನೀಯವಾಗಿ ಇಳಿಯುತ್ತಲೇ ಇದೆ. ಜಿಎಸ್‌ಟಿಗೆ ಮುನ್ನ ವ್ಯಾಟ್ ಅಡಿಯಲ್ಲಿ ತೆರಿಗೆ ಸಂಗ್ರಹಿಸುತ್ತಿದ್ದ ಕಾಲದಲ್ಲಿ ದೇಶದ ಜಿಡಿಪಿಗೆ ವ್ಯಾಟ್ ಕೊಡುಗೆ ಶೇ 6.1ರಷ್ಟು ಇತ್ತು. ಆದರೆ, ಜಿಎಸ್‌ಟಿ ಜಾರಿಯಾದ ಬಳಿಕ ಈ ಪ್ರಮಾಣ ಈವರೆಗೆ ಶೇ 6.1ರಷ್ಟಕ್ಕೆ ತಲುಪಿಲ್ಲ. ಪ್ರಸ್ತುತ ಜಿಡಿಪಿಗೆ ಜಿಎಸ್‌ಟಿ ಕೊಡುಗೆ ಶೇ 5.9ರಷ್ಟು ಮಾತ್ರ. ಜಿಎಸ್‌ಟಿಯಿಂದಾಗಿ ರಾಜ್ಯ ಹಾಗೂ ಕೇಂದ್ರಕ್ಕೆ ಆದಾಯ ನಷ್ಟವಾಗುತ್ತಿರುವುದು ಸ್ಪಷ್ಟವಾಗಿದೆ' ಎಂದು ವಿವರಿಸಿದರು.

ಪ್ರಧಾನಿ ಸ್ಥಾನದಿಂದ ಶಿನೊವಾತ್ರಾ ವಜಾ

ಬ್ಯಾಂಕಾಕ್ (ಎಪಿ): ಥಾಯ್ಲೆಂಡ್‌ನ ಸಾಂವಿಧಾನಿಕ ನ್ಯಾಯಾಲಯವು ಪೆಟೊಂಟಾರ್ನ್ ಶಿನೊವಾತ್ರಾ ಅವರನ್ನು ಪ್ರಧಾನಮಂತ್ರಿ ಸ್ಥಾನದಿಂದ ಶುಕ್ರವಾರ ವಜಾಗೊಳಿಸಿದೆ.

ಕಾಂಬೋಡಿಯಾ ಸೆನೆಟ್‌ನ ಅಧ್ಯಕ್ಷರಾಗಿರುವ ಹುನ್ ಸೆನ್ ಅವರೊಂದಿಗಿನ ದೂರವಾಣಿ ಸಂಭಾಷಣೆ ವೇಳೆ ಶಿನೊವಾತ್ರಾ ಅವರು ದೇಶದ ಸಾಂವಿಧಾನಿಕ ನಿಯಮ, ನಿಬಂಧನೆಗಳನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ ಎಂದೂ ನ್ಯಾಯಾಲಯ ಹೇಳಿದೆ. ಈ ಮೂಲಕ ವರ್ಷದ ಹಿಂದಷ್ಟೇ ಪ್ರಧಾನಿ ಹುದ್ದೆಗೇರಿದ್ದ ಪೆಟೊಂಟಾರ್ನ್ ಶಿನೊವಾತ್ರಾ ಅವರು ಅಧಿಕಾರವಧಿ ಪೂರ್ಣವಾಗುವ ಮೊದಲೇ ಪ್ರಧಾನಮಂತ್ರಿ ಸ್ಥಾನದಿಂದ ಕೆಳಗಿಳಿದಂತಾಗಿದೆ.

ಹುನ್ ಸೆನ್ ಜತೆಗಿನ ಶಿನೊವಾತ್ರಾ ಅವರ ದೂರವಾಣಿ ಸಂಭಾಷಣೆ ಸೋರಿಕೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಜುಲೈ 1ರಂದು ನ್ಯಾಯಾಲಯ ಸಮ್ಮತಿಸಿತ್ತು. ಅಂದೇ ಶಿನೊವಾತ್ರಾ ಅವರನ್ನು ಅಮಾನತುಗೊಳಿಸಿ, ಉಪ ಪ್ರಧಾನಿ ಫುಮ್ತಾಮ್ ಅವರಿಗೆ ಹಂಗಾಮಿ ಅಧಿಕಾರ ನೀಡಲಾಗಿತ್ತು.


ಪೆಟೊಂಟಾರ್ನ್ ಶಿನೊವಾತ್ರಾ

ಇದೀಗ ಪ್ರಧಾನಿ ಸ್ಥಾನದಿಂದ ಶಿನೊವಾತ್ರಾ ಕೆಳಗಿಳಿದರೂ ಹೊಸ ಪ್ರಧಾನಿ ಆಯ್ಕೆಗೆ ಸಂಸತ್ತು ಒಪ್ಪಿಗೆ ನೀಡುವವರೆಗೆ ಫುಮ್ತಾಮ್ ನೇತೃತ್ವದ ಸಂಪುಟವು ಹಂಗಾಮಿ ಸರ್ಕಾರವಾಗಿ ಅಧಿಕಾರದಲ್ಲಿ ಇರುವ ನಿರೀಕ್ಷೆ ಇದೆ. ಇದೇ ಸಂಪುಟವು ಸಂಸತ್ತನ್ನು ವಿಸರ್ಜಿಸಿ ಹೊಸದಾಗಿ ಚುನಾವಣೆ ನಡೆಸಲು ಅವಕಾಶವನ್ನೂ ನೀಡಬಹುದಾಗಿದೆ.

ಹುನ್ ಸೆನ್ ಅವರೊಂದಿಗೆ ದೂರವಾಣಿ ಸಂಭಾಷಣೆಯಲ್ಲಿ ಪೆಟೊಂಟಾರ್ನ್ ಶಿನೊವಾತ್ರಾ ಬಹಳ ಆತ್ಮೀಯವಾಗಿ ಮಾತನಾಡಿದ್ದರು. ಅಲ್ಲದೇ, ಅವರೊಂದಿಗೆ ರಾಷ್ಟ್ರೀಯ ಭದ್ರತೆ ಕುರಿತಾದ ವಿಚಾರಗಳನ್ನು ಚರ್ಚಿಸುವುದು ಮಾತ್ರವಲ್ಲದೆ ಥಾಯ್ಲೆಂಡ್‌ನ ಸೇನಾ ಜನರಲ್ ಬಗೆಗಿನ ಅಸಮಾಧಾನದ ಬಗ್ಗೆಯೂ ಹೇಳಿಕೊಂಡಿದ್ದರು. ಈ ಸಂಭಾಷಣೆಯ ಆಡಿಯೊ ಸೋರಿಕೆಯಾಗುತ್ತಿದ್ದಂತೆಯೇ ಪೆಟೊಂಟಾರ್ನ್ ಶಿನೊವಾತ್ರಾ ಅವರ ರಾಜೀನಾಮೆಗೂ ಒತ್ತಡ ಹೆಚ್ಚಾಗಿತ್ತು.

ತೈಲ ಖರೀದಿ ಮೂಲಕ ಅಕ್ರಮ ನೆರವು: ನವರೊ

ವಾಷಿಂಗ್ಟನ್ (ಪಿಟಿಐ): 'ತೈಲ ಖರೀದಿ ಕಾರ್ಯತಂತ್ರ'ದ ಮೂಲಕ ಭಾರತವು, ರಷ್ಯಾಕ್ಕೆ ಅಕ್ರಮವಾಗಿ ಹಣಕಾಸಿನ ನೆರವು ಒದಗಿಸುತ್ತಿದೆ' ಎಂದು ಶ್ವೇತ ಭವನದ ವ್ಯಾಪಾರ ಸಲಹೆಗಾರ ಪೀಟರ್ ನವರೊ ಆರೋಪಿಸಿದ್ದಾರೆ.

'ಭಾರತದ ತೈಲ ಖರೀದಿ ಲಾಬಿಯ ಅಕ್ರಮ ಹಣವನ್ನು ಉಕ್ರೇನ್ ವಿರುದ್ಧದ ಯುದ್ಧಕ್ಕೆ ರಷ್ಯಾ ಬಳಸಿಕೊಳ್ಳುತ್ತಿದೆ. ಭಾರತವು ರಷ್ಯಾದಿಂದ ಶಸ್ತ್ರಾಸ್ತ್ರ ಖರೀದಿಸುತ್ತದೆ. ಇನ್ನೊಂದೆಡೆ ಅಮೆರಿಕದ ಉದ್ಯಮಿಗಳಿಗೆ ಭಾರತದಲ್ಲಿ ತಯಾರಿಕಾ ಘಟಕ ಸ್ಥಾಪಿಸುವಂತೆ, ಸೂಕ್ಷ್ಮವಾದ ಸೇನಾ ತಂತ್ರಜ್ಞಾನ ವರ್ಗಾಯಿಸುವಂತೆ ಭಾರತ ಒತ್ತಾಯಿಸುತ್ತಿದೆ. ರಷ್ಯಾದ ಆಡಳಿತ ಕಚೇರಿ ಕ್ರೆಮ್ಲಿನ್ ಪಾಲಿಗೆ, ಭಾರತವು ತೈಲ ಖರೀದಿ ಅಕ್ರಮ ಹಣ ಶುದ್ಧೀಕರಣ ಕೇಂದ್ರವಾಗಿದೆ' ಎಂದು ನವರೊ ದೂರಿದ್ದಾರೆ.

ಹೆಚ್ಚುವರಿ ಸುಂಕ ಸೇರಿ ಅಮೆರಿಕವು ಭಾರತದ ಮೇಲೆ ಹೇರಿರುವ ಶೇ 50ರಷ್ಟು ಸುಂಕವು ಬುಧವಾರದಿಂದ ಜಾರಿಗೆ ಬಂದಿದ್ದು, ಇದಕ್ಕೆ ಪ್ರತಿಕ್ರಿಯಿಸಿರುವ ನವರೊ, 'ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತವು, ಅಮೆರಿಕದ ಕಾರ್ಯತಂತ್ರದ ಪಾಲುದಾರ ದೇಶವಾಗಿ ಇರಲು ಬಯಸಿದರೆ, ಅದಕ್ಕೆ ತಕ್ಕಂತೆ ವರ್ತಿಸಬೇಕು' ಎಂದಿದ್ದಾರೆ.

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1500-1900
ಮಧ್ಯಮ	₹1000-1500
ಸಣ್ಣ	₹500-1000

ಶಾಂಘೈ ಶೃಂಗ: ಮೋದಿ–ಷಿ ಸಭೆ ಸಾಧ್ಯತೆ

ಬೀಜಿಂಗ್ (ಪಿಟಿಐ): ಟಿಯಾನ್‌ಜಿನ್‌ನಲ್ಲಿ ಭಾನುವಾರದಿಂದ ಆರಂಭವಾಗಲಿರುವ ಶಾಂಘೈ ಸಹಕಾರ ಸಂಘಟನೆಯ (ಎಸ್‌ಸಿಒ) ಶೃಂಗಸಭೆ ವೇಳೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಚೀನಾದ ಅಧ್ಯಕ್ಷ ಷಿ-ಜಿನ್‌ಪಿಂಗ್ ಅವರು ಎರಡು ದ್ವಿಪಕ್ಷೀಯ ಸಭೆಗಳನ್ನು ನಡೆಸುವ ನಿರೀಕ್ಷೆ ಇದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನಿರ್ಧಾರಗಳಿಂದಾಗಿ ಜಾಗತಿಕ ವ್ಯಾಪಾರ ವ್ಯವಸ್ಥೆಯಲ್ಲಿ ಉದ್ವಿಗ್ನತೆ ಹೆಚ್ಚಾಗಿದ್ದು, ಭಾರತ ಮತ್ತು ಚೀನಾ ನಡುವಿನ ಸಂಬಂಧವನ್ನು ವೃದ್ಧಿಸಿಕೊಳ್ಳಲು ಉಭಯ ರಾಷ್ಟ್ರಗಳು ಯೋಜಿಸಿರುವಂತೆಯೇ ಈ ಬೆಳವಣಿಗೆ ಮಹತ್ವ ಪಡೆದಿದೆ.

ಜಪಾನ್‌ನಿಂದ ಟಿಯಾನ್‌ಜಿನ್‌ಗೆ ಶನಿವಾರ ಆಗಮಿಸಲಿರುವ ಪ್ರಧಾನಿ ಮೋದಿ ಅವರು ಚೀನಾ ಅಧ್ಯಕ್ಷರೊಂದಿಗೆ ಭಾನುವಾರ ಮಧ್ಯಾಹ್ನ ಮೊದಲ ಸಭೆ ನಡೆಸಲಿದ್ದಾರೆ. ಶಾಂಘೈ ಶೃಂಗದ ಔತಣಕೂಟದ ಕಾರ್ಯಕ್ರಮಕ್ಕೂ ಮುನ್ನ ಮತ್ತೊಂದು ಸುತ್ತಿನ ಸಭೆ ನಡೆಸುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.

ಸೋಮವಾರ ಶೃಂಗದಲ್ಲಿ ಪಾಲ್ಗೊಳ್ಳುವ ಮೋದಿ, ಬಳಿಕ ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರೊಂದಿಗೂ ದ್ವಿಪಕ್ಷೀಯ ಸಭೆ ನಡೆಸುವ ಸಾಧ್ಯತೆಗಳಿವೆ ಎನ್ನಲಾಗಿದೆ.

ಜಿಡಿಪಿ: 15 ತಿಂಗಳಲ್ಲೇ ಗರಿಷ್ಠ

ಒಂದನೇ ಪುಟದಿಂದ...

ಈಗ ದಾಖಲಾಗಿರುವ ಜಿಡಿಪಿಯು ಅಮೆರಿಕ ಹೆಚ್ಚುವರಿ ಸುಂಕ ವಿಧಿಸುವ ಮೊದಲಿನ ಪ್ರಗತಿ ದರ. ಆದರೆ, 'ಟ್ರಂಪ್ ಸುಂಕ'ದಿಂದ ದೇಶದ ಜವಳಿ, ವಜ್ರ, ಆಭರಣ ಮತ್ತು ಚರ್ಮದ ಉದ್ಯಮಗಳು ಹೆಚ್ಚು ಬಾಧಿತವಾಗಲಿವೆ. ಹೀಗಾಗಿ ಜುಲೈ-ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ದರದಲ್ಲಿ ಇಳಿಕೆಯಾಗುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ತಜ್ಞರು ವಿಶ್ಲೇಷಿಸಿದ್ದಾರೆ.

ಕೃಷಿ, ವ್ಯಾಪಾರ, ಹೋಟೆಲ್, ಹಣಕಾಸು, ರಿಯಲ್ ಎಸ್ಟೇಟ್ ವಲಯಗಳಲ್ಲಿನ ಗಣನೀಯ ಪ್ರಗತಿಯಿಂದ ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಜಿಡಿಪಿ ಉತ್ತಮ ಬೆಳವಣಿಗೆ ಕಂಡಿದೆ ಎಂದು ರಾಷ್ಟ್ರೀಯ ಅಂಕಿಅಂಶಗಳ ಕಚೇರಿ (ಎನ್‌ಎಸ್‌ಒ) ಹೇಳಿದೆ.

'ಎನ್‌ಎಸ್‌ಒ' ಪ್ರಕಟಣೆ ಪ್ರಕಾರ, 2025–26ರ ಮೊದಲ ತ್ರೈಮಾಸಿಕದಲ್ಲಿ ವಾಸ್ತವ ಜಿಡಿಪಿ ಸ್ಥಿರ ಬೆಲೆಯು ₹47.89 ಲಕ್ಷ ಕೋಟಿ ಆಗಿದೆ. 2024–25ರ ಮೊದಲ ತ್ರೈಮಾಸಿಕದಲ್ಲಿ ಇದು ₹44.42 ಲಕ್ಷ ಕೋಟಿ ಇತ್ತು.

ಆರ್‌ಬಿಐ ಅಂದಾಜಿಗಿಂತ ಹೆಚ್ಚಿನ ಪ್ರಗತಿ

ಭಾರತೀಯ ರಿಸರ್ವ್ ಬ್ಯಾಂಕ್ ಈಚೆಗೆ ಬಿಡುಗಡೆ ಮಾಡಿದ ವರದಿಯಲ್ಲಿ, ಭಾರತದ ವಾಸ್ತವ ಜಿಡಿಪಿ ಬೆಳವಣಿಗೆ ದರವು 2025–26ರಲ್ಲಿ ಶೇ 6.5ರಷ್ಟು ಇರಲಿದೆ ಎಂದು ಹೇಳಿತ್ತು. ಮೊದಲ ತ್ರೈಮಾಸಿಕದಲ್ಲಿ ಶೇ 6.5, ಎರಡನೆಯ ತ್ರೈಮಾಸಿಕದಲ್ಲಿ 6.7, ಮೂರನೆಯ ತ್ರೈಮಾಸಿಕದಲ್ಲಿ ಶೇ 6.6 ಮತ್ತು ನಾಲ್ಕನೆಯ ತ್ರೈಮಾಸಿಕದಲ್ಲಿ ಶೇ 6.3ರಷ್ಟು ಜಿಡಿಪಿ ದಾಖಲಾಗಲಿದೆ ಎಂದು ಅಂದಾಜಿಸಿತ್ತು. ಏಪ್ರಿಲ್-ಜೂನ್ ತ್ರೈಮಾಸಿಕದಲ್ಲಿ ಆರ್‌ಬಿಐ ಅಂದಾಜಿಗಿಂತ ಹೆಚ್ಚಿನ ಜಿಡಿಪಿ ಬೆಳವಣಿಗೆ ದರ ದಾಖಲಾಗಿದೆ.

ರೂಪಾಯಿ ಮೌಲ್ಯ ಕುಸಿತ

ಒಂದನೇ ಪುಟದಿಂದ..

ಶುಕ್ರವಾರ ಬೆಳಿಗ್ಗೆ ರೂಪಾಯಿ ವಿನಿಮಯ ಮೌಲ್ಯ ಡಾಲರ್ ಎದುರು ₹87.73 ಇತ್ತು. ಮಧ್ಯಂತರದಲ್ಲಿ ಇದು ₹88.33ಕ್ಕೆ ಕುಸಿಯಿತು. ಸಂಜೆ ವೇಳೆಗೆ ₹88.09ರಲ್ಲಿ ವಹಿವಾಟು ಕೊನೆಗೊಳಿಸಿತು. ಗುರುವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯ 11 ಪೈಸೆಯಷ್ಟು ಹೆಚ್ಚಿ ₹87.58ರಲ್ಲಿ ಕೊನೆಗೊಂಡಿತ್ತು.

ಸಿನಿಮಾದೊಳಗೊಂದು ಸಿನಿಮಾ ಕಥೆ!

ಜೀವನದಲ್ಲಿ ಒಂದೆಲ್ಲ ಒಂದು ದಿನ ಸಿನಿಮಾ ಮಾಡಬೇಕು, ದೊಡ್ಡ ಪರದೆಯಲ್ಲಿ ಕಾಣಿಸಿಕೊಳ್ಳಬೇಕು ಅಥವಾ ನನ್ನ ಹೆಸರು ಬೆಳ್ಳಿಪರದೆಯಲ್ಲಿ ಕಾಣಬೇಕು ಎಂಬುದು ಕಿರುತೆರೆ, ಹಿರಿತೆರೆಗಳಲ್ಲಿ ಕೆಲಸ ಮಾಡುವ ಬಹುತೇಕರ ಕನಸು. ನಟನಾಗಿಯೋ, ನಿರ್ದೇಶಕನಾಗಿಯೋ ಅಥವಾ ಯಾವುದೋ ವಿಭಾಗದ ತಂತ್ರಜ್ಞನಾಗಿಯೋ ಯಶಸ್ಸು ಸಾಧಿಸಬೇಕೆಂದು ಸಿನಿಮಾ ಕ್ಷೇತ್ರಕ್ಕೆ ಬರುತ್ತಾರೆ. ಹಾಗೆ ಕನಸು ಕಟ್ಟಿಕೊಂಡು ಬರುವ ಮಲೆನಾಡು ಭಾಗದ ಹಳ್ಳಿಯ ಹುಡುಗ ಕುಮಾರನ ಬದುಕು, ಬವಣೆಯೆ 'ಅಂದೊಂದಿತ್ತು ಕಾಲ' ಚಿತ್ರದ ಒಟ್ಟಾರೆ ಕಥೆ. ಚಿತ್ರ ನಿರ್ದೇಶಕನೊಬ್ಬನ ಹಿಂದಿನ ಮತ್ತು ಪ್ರಸ್ತುತದ ಕಥೆಯನ್ನು ಒಟ್ಟಿಗೆ ಹೇಳುವ ಯತ್ನವನ್ನು ನಿರ್ದೇಶಕರು ಮಾಡಿದ್ದಾರೆ. ಆದರೆ ಬಿಗಿಯಾದ ಚಿತ್ರಕಥೆಯನ್ನು ಹೆಣೆಯುವಲ್ಲಿ ಅಲ್ಲಲ್ಲಿ ಎಡವಿದ್ದಾರೆ.

ಚಿತ್ರದ ಶೀರ್ಷಿಕೆಯೇ ಹೇಳುವಂತೆ ಹಳ್ಳಿಗಳಲ್ಲಿ ಟೆಂಟ್ ಸಿನಿಮಾಗಳು ಪ್ರದರ್ಶನಗೊಳ್ಳುತ್ತಿದ್ದ ಕಾಲಘಟ್ಟದಲ್ಲಿ ನಡೆಯುವ ಕಥೆಯಿದು. 'ನಾಗರಹಾವು' ಚಿತ್ರ ಬಿಡುಗಡೆಗೊಂಡಾಗ ಈ ಚಿತ್ರದ ನಾಯಕ ಕುಮಾರ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದ ಹುಡುಗ. ಆತನಿಗೆ ಬಾಲ್ಯದಿಂದಲೇ ಸಿನಿಮಾ ಹುಚ್ಚು. ಅಲ್ಲಿಂದಲೇ ಕಥೆ ಪ್ರಾರಂಭವಾಗುತ್ತದೆ. ಆ ಕಾಲಘಟ್ಟದ ಶಾಲೆ, ಕಾಲೇಜು ಜೀವನ, ಹಳ್ಳಿಯಲ್ಲಿನ ಬದುಕನ್ನು ನಿರ್ದೇಶಕರು ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ. ಆ ಕಾಲಘಟ್ಟದ ಕಥೆಯಾದರೂ ಚಿತ್ರೀಕರಣಗೊಂಡಿದ್ದು ಈ ಕಾಲದಲ್ಲಿ. ಸೆಟ್ ಹಾಕದೆ ಸಹಜವಾದ ಜಾಗಗಳಲ್ಲಿಯೇ ಚಿತ್ರೀಕರಿಸಿದ್ದಾರೆ. ಹೀಗಾಗಿ ಕಥೆ ನಡೆಯುವ ಕೆಲ ಜಾಗಗಳು ಸಹಜವಾಗಿ ಇವತ್ತಿನದ್ದು ಎಂಬ ಭಾವ ಮೂಡಿಸುತ್ತವೆ. ಆದಾಗ್ಯೂ ಛಾಯಾಚಿತ್ರಗ್ರಾಹಕ ಅಭಿಷೇಕ್ ಕಾಸರಗೋಡು ಆ ತಪ್ಪುಗಳನ್ನು ಮಾಚಲು ಸಾಕಷ್ಟು ಯತ್ನಿಸಿದ್ದಾರೆ. ಉದಾಹರಣೆಗೆ ಕುಮಾರ ಮತ್ತು ಆತನ ಅಪ್ಪ ಮಾತನಾಡುತ್ತ, ಸೈಕಲ್ ತಳ್ಳಿಕೊಂಡು ನಡೆದುಕೊಂಡು ಹೋಗುವ ದೃಶ್ಯವಿದೆ. ಗದ್ದೆ ಬದಿಯಲ್ಲಿ ಅದನ್ನು ಚಿತ್ರೀಕರಿಸಿ, ಯಾವ ಕಾಲಘಟ್ಟದಲ್ಲಿ ಚಿತ್ರೀಕರಣಗೊಂಡಿದ್ದು ಎಂದು ಗೊತ್ತಾಗದಂತೆ ಮಾಡಿದ್ದಾರೆ. ಮೆಜೆಸ್ಟಿಕ್, ಕಂಠೀರವ ಸ್ಟುಡಿಯೋ ಮೊದಲಾದ ಸನ್ನಿವೇಶಗಳನ್ನು ಬಹಳ ನಾಜೂಕಿನಿಂದ ನಿಭಾಯಿಸಿದ್ದಾರೆ. ಛಾಯಾಚಿತ್ರಗ್ರಹಣ ಮತ್ತು ಅದಕ್ಕೆ ಪೂರಕವಾದ ಹಿನ್ನೆಲೆ ಸಂಗೀತ ಚಿತ್ರದ ಬಹುದೊಡ್ಡ ಶಕ್ತಿ.


ಅದಿತಿ, ವಿನಯ್

ಕಥೆ ಎರಡು ಟ್ರ್ಯಾಕ್‌ಗಳಲ್ಲಿ ಸಾಗುತ್ತದೆ. ಒಂದು ನಿರ್ದೇಶಕನಾಗಬೇಕೆಂದು ಬೆಂಗಳೂರಿಗೆ ಬಂದಿರುವ ಕುಮಾರ. ಇನ್ನೊಂದು ಆತನ ನೆನಪಿನಲ್ಲಿ ಅವನ ಬಾಲ್ಯದ ಕಥೆಗಳು. 'ಅಂದೊಂದಿತ್ತು ಕಾಲ' ಎಂಬ ಹಳೆಯ ನೆನಪುಗಳನ್ನು ತೆರೆದಿಡುವ ಒಂದಷ್ಟು ಸನ್ನಿವೇಶಗಳೊಂದಿಗೆ ಮೊದಲಾರ್ಧ ಮುಗಿದುಹೋಗುತ್ತದೆ. ಕುತೂಹಲವನ್ನೋ, ತಿರುವುಗಳನ್ನೋ ಹೊಂದಿರುವ ಕಥೆ ಇದಲ್ಲ. ಹೀಗಾಗಿ ಇಲ್ಲಿ ಚಿತ್ರಕಥೆ ಬಹಳ ಮುಖ್ಯ.

ನಾವು ನೋಡಿದ ಸಿನಿಮಾ

ಅಂದೊಂದಿತ್ತು ಕಾಲ

- **ನಿರ್ಮಾಣ: ಭುವನ್ ಸುರೇಶ್**
- **ನಿರ್ದೇಶನ: ಕೀರ್ತಿ ಕೃಷ್ಣಪ್ಪ**
- **ತಾರಾಗಣ: ವಿನಯ್ ರಾಜ್‌ಕುಮಾರ್, ಅದಿತಿ ಪ್ರಭುದೇವ, ನಿಶಾ ರವಿಕೃಷ್ಣ ಮತ್ತಿತರರು**

ಆದರೆ ಚಿತ್ರಕಥೆ ಬಿಗಿಯಿಲ್ಲದೆ ಮೊದಲಾರ್ಧ ಅಲ್ಲಲ್ಲಿ ಸ್ವಲ್ಪ ಉದ್ದ ಎನ್ನಿಸುತ್ತದೆ.

ಚಿತ್ರರಂಗಕ್ಕೆ ಕಾಲಿಟ್ಟ ಆತ ಯಶಸ್ವಿ ನಿರ್ದೇಶಕನಾಗುತ್ತಾನೋ ಅಥವಾ ಇಲ್ಲವೋ ಎಂಬುದೇ ಚಿತ್ರದ ದ್ವಿತೀಯಾರ್ಧ. ಕುಮಾರನಾಗಿ ವಿನಯ್ ರಾಜ್‌ಕುಮಾರ್ ಪಾತ್ರವನ್ನು ಜೀವಿಸಿದ್ದಾರೆ. ಚಿತ್ರರಂಗದಲ್ಲಿ ಸಹ, ಸಹಾಯಕ ನಿರ್ದೇಶಕನಾಗಿ ಅನುಭವಿಸುವ ಸಂಕಷ್ಟಗಳನ್ನೆಲ್ಲ ತೀರ ಸಹಜ ಎನಿಸುವಂತೆ ನಟಿಸಿದ್ದಾರೆ. ಉಳಿದ ಯಾವ ಪಾತ್ರಗಳು ಕಥೆಯ ಮೇಲೆ ಅಷ್ಟೊಂದು ಪ್ರಭಾವ ಬೀರುವುದಿಲ್ಲ, ತೆರೆಯ ಮೇಲೆ ಅವುಗಳಿಗೆ ಸಿಕ್ಕ ಸಮಯವೂ ಕಡಿಮೆ. ಚಿತ್ರರಂಗದ ನಿರ್ದೇಶಕರ ಬದುಕು ಬವಣೆಯನ್ನು ಇನ್ನಷ್ಟು ಚೆಂದವಾಗಿ, ಕಥೆಯನ್ನು ಮತ್ತಷ್ಟು ಭಾವನಾತ್ಮಕವಾಗಿ ಕಟ್ಟಿಕೊಡುವ ಅವಕಾಶವನ್ನು ನಿರ್ದೇಶಕರು ಕೈಚೆಲ್ಲಿದ್ದಾರೆ.

ನೋಡಬಹುದಾದ ಚಿತ್ರ

ಅ.24ರಂದು 'ಬಿಳಿಚುಕ್ಕಿ ಹಳ್ಳಿಹಕ್ಕಿ' ತೆರೆಗೆ

'ಮಹಿರಾ' ಸಿನಿಮಾ ಖ್ಯಾತಿಯ ಮಹೇಶ್ ಗೌಡ ನಿರ್ಮಾಣ ಮಾಡಿ ನಿರ್ದೇಶಿಸಿ ಮುಖ್ಯಭೂಮಿಕೆಯಲ್ಲಿ ನಟಿಸಿರುವ 'ಬಿಳಿಚುಕ್ಕಿ ಹಳ್ಳಿಹಕ್ಕಿ' ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ.

ಈಗಾಗಲೇ ಪೋಸ್ಟರ್ ಮೂಲಕ ಗಮನಸೆಳೆದಿರುವ ಈ ಸಿನಿಮಾದ ಬಿಡುಗಡೆ ದಿನಾಂಕ ಘೋಷಣೆಯಾಗಿದೆ. ಚಿತ್ರ ಅಕ್ಟೋಬರ್ 24ರಂದು ತೆರೆಕಾಣುತ್ತಿದೆ.

'ಇದು ಭಿನ್ನ ಬಗೆಯ ಸಿನಿಮಾ. ನಮ್ಮ ಸುತ್ತಮುತ್ತಲೇ ವಿಟಲಿಗೋ ಅಂದರೆ ತೊನ್ನು ಎಂಬ ಚರ್ಮದ ಸಮಸ್ಯೆ ಅನೇಕರನ್ನು ಆವರಿಸಿಕೊಂಡಿರುತ್ತದೆ. ಅಂತಹ ಕಾಯಿಲೆಯಲ್ಲದ ಕಾಯಿಲೆಯ ಮೇಲೆ ತಯಾರಾಗಿರುವ ಸಿನಿಮಾವಿದು. ಹೊರ ಜಗತ್ತಿನ ಪಾಲಿಗೆ ತೊನ್ನು ಅನ್ನುವುದು ಚರ್ಮ ವ್ಯಾಧಿ. ಅದರ ಸುತ್ತ ಹಬ್ಬಿಕೊಂಡಿರುವ ಚಿತ್ರವಿಚಿತ್ರ ನಂಬಿಕೆಗಳದ್ದೇ ದೊಡ್ಡ ಕಥೆಯಿದೆ. ಈ ಸಮಸ್ಯೆಗೊಳಗಾಗದ ಜೀವವೊಂದರ ಕಥೆ ಇದು' ಎಂದಿದ್ದಾರೆ ಮಹೇಶ್.

ಹೊನ್ನುಡಿ ಪ್ರೊಡಕ್ಷನ್ಸ್ ಬ್ಯಾನರಿನಡಿಯಲ್ಲಿ ಈ ಸಿನಿಮಾ ನಿರ್ಮಾಣವಾಗಿದ್ದು, ಕಾಜಲ್ ಕುಂದರ್ ಇಲ್ಲಿ 'ಕವಿತಾ' ಎಂಬ ಪಾತ್ರವನ್ನು ನಿಭಾಯಿಸಿದ್ದಾರೆ. ಸ್ವತಃ ಈ ಸಮಸ್ಯೆ ಹೊಂದಿರುವ ಮಹೇಶ್ ಗೌಡ ಅವರೇ ಈ ಸಿನಿಮಾದ ನಾಯಕನಾಗಿ ನಟಿಸಿದ್ದಾರೆ. ವಿಶಿಷ್ಟವಾದ ಕಥೆಯನ್ನು ಕಮರ್ಷಿಯಲ್ ಧಾಟಿಯಲ್ಲಿ ಮನರಂಜನಾತ್ಮಕವಾದ ಅಂಶಗಳೊಂದಿಗೆ ಕಟ್ಟಿಕೊಡಲಾಗಿದೆ ಎಂದು ಚಿತ್ರತಂಡ ತಿಳಿಸಿದೆ. ವೀಣಾ ಸುಂದರ್, ಜಹಾಂಗೀರ್, ರವಿ ಭಟ್ ಮುಂತಾದವರು ತಾರಾಬಳಗದಲ್ಲಿದ್ದಾರೆ.


ಮಹೇಶ್ ಗೌಡ, ಕಾಜಲ್ ಕುಂದರ್

'ಮಿರಾಯ್'ನಲ್ಲಿ ತೇಜ್ ಸಜ್ಜಾ ಮಿಂಚು



ತೆಲುಗಿನ 'ಹನುಮಾನ್' ಸಿನಿಮಾ ಖ್ಯಾತಿಯ ನಟ ತೇಜ್ ಸಜ್ಜಾ ಅಭಿನಯದ ಹೊಸ ಪ್ಯಾನ್ ಇಂಡಿಯಾ ಸಿನಿಮಾ 'ಮಿರಾಯ್'ನ ಟ್ರೇಲರ್ ಬಿಡುಗಡೆಯಾಗಿದೆ. ಸೂಪರ್ ಯೋಧನ ಪಾತ್ರದಲ್ಲಿ ತೇಜ್ ಕಾಣಿಸಿಕೊಂಡಿದ್ದು, ಸಿನಿಮಾ ಸೆ.12ರಂದು ತೆರೆಕಾಣುತ್ತಿದೆ.

ಟ್ರೇಲರ್ ಭರ್ಜರಿಯಾಗಿ ಮೂಡಿಬಂದಿದ್ದು, ವಿಎಫ್‌ಎಕ್ಸ್ ಅಚ್ಚುಕಟ್ಟಾಗಿ ಮೈನವಿರೇಳಿಸುವಂತಿದೆ. ಈ ಸಿನಿಮಾ ಪ್ರೇಕ್ಷಕರಿಗೆ ವಿಷ್ಯುವಲ್ ಟ್ರೀಟ್ ನೀಡುವ ಲಕ್ಷಣಗಳನ್ನು ಹೊಂದಿದೆ. ನಟ ಮಂಚು ಮನೋಜ್ ಖಳನಾಯಕನಾಗಿ ಅಬ್ಬರಿಸಿದ್ದಾರೆ. ಭರ್ಜರಿ ಆ್ಯಕ್ಷನ್ ಜೊತೆಗೆ ಪುರಾಣದ ಕಥೆಯನ್ನು ಇದು ಕಟ್ಟಿಕೊಟ್ಟಿದೆ. ತ್ರೇತಾಯುಗದಲ್ಲಿ ಶ್ರೀರಾಮನ ಅವಧಿಯಲ್ಲಿ ತಯಾರಿಸಿದಂಥ ಒಂದು ಆಯುಧದ ಹಿನ್ನೆಲೆಯಲ್ಲಿ ಇಡೀ ಸಿನಿಮಾದ ಕಥೆಯಿದೆ. ಚಿತ್ರದಲ್ಲಿ ತೇಜ್ ಸಜ್ಜಾಗೆ ರಿತಿಕಾ ನಾಯಕ್ ಜೋಡಿಯಾಗಿದ್ದಾರೆ. 'ಕಾರ್ತಿಕೇಯ', 'ಕಾರ್ತಿಕೇಯ-2', 'ಧಮಾಕ' ಸೇರಿದಂತೆ ಹಲವು ಹಿಟ್ ಚಿತ್ರಗಳ ಸಾರಥಿ ಕಾರ್ತಿಕ್ ಗಟ್ಟಮ್ನೇನಿ ಸಜ್ಜಾ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. 'ಹನುಮಾನ್'ನಲ್ಲಿ ಸೂಪರ್ ಹೀರೊ ಆಗಿದ್ದ ತೇಜ್ ಈಗ 'ಮಿರಾಯ್'ನಲ್ಲಿ ಸೂಪರ್ ಯೋಧನಾಗಿದ್ದಾರೆ.

ಪೀಪಲ್ ಮೀಡಿಯಾ ಫ್ಯಾಕ್ಟರಿಯಡಿ ಟಿ.ಜಿ.ವಿಶ್ವಪ್ರಸಾದ್ ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. 'ಮಿರಾಯ್' ಸಿನಿಮಾ 2ಡಿ ಹಾಗೂ 3ಡಿಯಲ್ಲಿ ಏಳು ಭಾಷೆಗಳಲ್ಲಿ ರಿಲೀಸ್ ಆಗಲಿದೆ. ಕನ್ನಡದಲ್ಲಿ ಈ ಚಿತ್ರವನ್ನು ವಿಕೆ ಫಿಲ್ಮ್ ಬ್ಯಾನರ್‌ನಡಿ ಹೊಂಬಾಳೆ ಫಿಲ್ಮ್ ರಿಲೀಸ್ ಮಾಡುತ್ತಿದೆ.

ಚಿಟಿಕೆ ಸುದ್ದಿ

ಜರಾಂಗೆ ಮತ್ತೆ ಉಪವಾಸ

ಮುಂಬೈ (ಪಿಟಿಐ): ಮರಾಠ ಸಮುದಾಯಕ್ಕೆ ಮೀಸಲಾತಿಗೆ ಆಗ್ರಹಿಸಿ ಹೋರಾಟಗಾರ ಮನೋಜ್ ಜರಾಂಗೆ ಅವರು ಮುಂಬೈನ ಆಜಾದ್ ಮೈದಾನದಲ್ಲಿ ಶುಕ್ರವಾರ ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ.


ಮನೋಜ್ ಜರಾಂಗೆ

'ಬೇಡಿಕೆ ಈಡೇರುವವರೆಗೆ ಸತ್ಯಾಗ್ರಹ ಕೈಬಿಡುವುದಿಲ್ಲ. ಗುಂಡಿಟ್ಟು ಕೊಂದರೂ ನಾನು ಹಿಂದೆ ಸರಿಯುವುದಿಲ್ಲ' ಎಂದು ಜರಾಂಗೆ ಹೇಳಿದ್ದಾರೆ.

ಮನೋಜ್ ಜರಾಂಗೆ ಜೊತೆ ಮಾತನಾಡಲು ಸಿದ್ಧ ಎಂದು ಸರ್ಕಾರ ತಿಳಿಸಿದೆ.

ಮರಾಠವಾಡ ಪ್ರದೇಶದ ಸಂಸದರು ಮತ್ತು ಶಾಸಕರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ್ದಾರೆ.

'ವಕೀಲೆಯರಿಗೂ ಪೋಷ್ ಅನ್ವಯ'

ನವದೆಹಲಿ (ಪಿಟಿಐ): ವಕೀಲರ ಸಂಘಗಳಲ್ಲಿ ನೋಂದಣಿಯಾಗಿರುವ ವಕೀಲೆಯರಿಗೂ 'ಉದ್ಯೋಗದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ತಡೆ, ನಿರ್ಬಂಧ ಮತ್ತು ಪರಿಹಾರ) ಕಾಯ್ದೆ (ಪೋಷ್ ಕಾಯ್ದೆ-2013) ಅನ್ವಯಿಸುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಶುಕ್ರವಾರ ಒಪ್ಪಿಗೆ ನೀಡಿದೆ.

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಆರ್. ಮಹಾದೇವನ್ ಅವರು ಅರ್ಜಿಯ ವಿಚಾರಣೆ ನಡೆಸಿದರು. ಅರ್ಜಿಯ ಕುರಿತು ಪ್ರತಿಕ್ರಿಯಿಸುವಂತೆ ಕೇಂದ್ರ ಸರ್ಕಾರ ಹಾಗೂ ಭಾರತೀಯ ವಕೀಲರ ಪರಿಷತ್ತಿಗೆ ನೋಟಿಸ್ ಜಾರಿಗೆ ಆದೇಶಿಸಿದರು. ವಕೀಲೆ ಮತ್ತು ಲೇಖಕಿ ಸೀಮಾ ಜೋಶಿ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.

'ವಕೀಲೆಯರ ದೂರುಗಳ ಕುರಿತು ವಿಚಾರಣೆ ನಡೆಸಲು ಆಂತರಿಕ ದೂರು ಸಮಿತಿಗಳನ್ನು ರಚಿಸುವಂತೆ ನಿರ್ದೇಶನ ನೀಡಬೇಕು. ವಕೀಲರ ಸಂಘಗಳಿಗೆ ಪೋಷ್ ಕಾಯ್ದೆ ಅನ್ವಯಿಸುವ ಬಗ್ಗೆ ಕಾಯ್ದೆಯಲ್ಲಿ ಸ್ಪಷ್ಟತೆ ಇಲ್ಲ. ಆದ್ದರಿಂದ, ಭಾರತದ ವಕೀಲೆಯರಿಗೆ ಸುರಕ್ಷತೆ ಇಲ್ಲದಂತಾಗಿದೆ' ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಜಪಾನ್: ₹60 ಸಾವಿರ ಕೋಟಿ ಹೂಡಿಕೆ

ಭಾರತ – ಜಪಾನ್ 15ನೇ ಶೃಂಗಸಭೆ
ಮೋದಿ, ಶಿಗೆರು ಇಶಿಬಾ ಮಾತುಕತೆ

ಟೋಕಿಯೊ (ಪಿಟಿಐ): ವ್ಯಾಪಾರ, ಹೂಡಿಕೆ, ತಂತ್ರಜ್ಞಾನ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಬಾಂಧವ್ಯ ವಿಸ್ತರಿಸುವುದರ ಭಾಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಇಲ್ಲಿ ನಡೆದ 15ನೇ ಭಾರತ-ಜಪಾನ್ ಶೃಂಗಸಭೆಯಲ್ಲಿ ಜಪಾನ್ ಪ್ರಧಾನಿ ಶಿಗೆರು ಇಶಿಬಾ ಅವರೊಂದಿಗೆ ಮಾತುಕತೆ ನಡೆಸಿದರು.

ಭಾರತದಲ್ಲಿ ಮುಂದಿನ 10 ವರ್ಷಗಳಲ್ಲಿ ಅಂದಾಜು ₹60 ಸಾವಿರ ಕೋಟಿಯಷ್ಟು ಹೂಡಿಕೆ ಗುರಿಯನ್ನು ಜಪಾನ್ ನಿಗದಿಪಡಿಸಿದೆ. ಸೆಮಿಕಂಡಕ್ಟರ್, ಶುದ್ಧ ಇಂಧನ, ದೂರಸಂಪರ್ಕ, ಔಷಧ, ಖನಿಜಗಳು, ತಂತ್ರಜ್ಞಾನ ಕ್ಷೇತ್ರ ಸೇರಿ ಉಭಯ ದೇಶಗಳ ನಡುವೆ 13 ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಲಾಯಿತು.

ಶೃಂಗಸಭೆಗೂ ಮುನ್ನ ಭಾರತ-ಜಪಾನ್ ಉದ್ಯಮ ವೇದಿಕೆಯ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ ಮೋದಿ, 'ಸ್ಥಿರತೆ, ಪ್ರಗತಿ ಮತ್ತು ಸಮೃದ್ಧಿಯಲ್ಲಿ ಭಾರತ ಮತ್ತು ಜಪಾನ್ ಜತೆಯಾಗಿ ಕೈಜೋಡಿಸಿ ಏಷ್ಯಾದ ಶತಮಾನವನ್ನು (21ನೇ ಶತಮಾನ) ರೂಪಿಸುತ್ತೇವೆ' ಎಂದರು.

> **ಭಾರತ-ಜಪಾನ್ ನಡುವಿನ ಒಪ್ಪಂದವು ಎರಡು ದೇಶಗಳಿಗೆ ಮಾತ್ರವಲ್ಲ, ವಿಶ್ವ ಶಾಂತಿ ಮತ್ತು ಸುಸ್ಥಿರತೆ ದೃಷ್ಟಿಯಿಂದಲೂ ಮಹತ್ವದ್ದು**
> **ನರೇಂದ್ರ ಮೋದಿ**
> ಪ್ರಧಾನಿ

'ಭಾರತದ ಪ್ರಗತಿಯ ಹಾದಿಯಲ್ಲಿ, ಜಪಾನ್ ಯಾವತ್ತಿಗೂ ಮಹತ್ವದ ಪಾಲುದಾರ ದೇಶ' ಎಂದು ಸ್ಮರಿಸಿದ ಪ್ರಧಾನಿ, ಜಪಾನ್‌ನ ಉದ್ಯಮಿಗಳ ಪಾಲಿಗೆ ಭಾರತವು 'ಚಿಮ್ಮುಹಲಗೆ' ಎಂದು ಬಣ್ಣಿಸಿದರು. ಭಾರತದಲ್ಲಿ ತೊಡಗಿಸುವ ಬಂಡವಾಳವು ಬೆಳೆಯುವುದು ಮಾತ್ರವಲ್ಲ, ದ್ವಿಗುಣಗೊಳ್ಳುತ್ತದೆ. ಜಪಾನ್‌ನ ತಂತ್ರಜ್ಞಾನ ಮತ್ತು ಭಾರತದ ಸಾಮರ್ಥ್ಯವು ಒಂದುಗೂಡಿದಾಗ ಈ ಶತಮಾನದ ತಾಂತ್ರಿಕ ಕ್ರಾಂತಿ ಸಂಭವಿಸುತ್ತದೆ' ಎಂದು ಪ್ರಧಾನಿ ಹೇಳಿದರು.


ಟೋಕಿಯೊದಲ್ಲಿ ಶುಕ್ರವಾರ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಜಪಾನ್ ಪ್ರಧಾನಿ ಶಿಗೆರು ಇಶಿಬಾ ಅವರು ಹಸ್ತಲಾಘವದೊಂದಿಗೆ ಒಗ್ಗಟ್ಟು ಪ್ರದರ್ಶಿಸಿದರು — ಎಎಫ್‌ಪಿ ಚಿತ್ರ

ಪಹಲ್ಗಾಮ್ ಘಟನೆಗೆ ಖಂಡನೆ: ಪಹಲ್ಗಾಮ್ ದಾಳಿಯ ಹಿಂದಿನ ಅಪರಾಧಿಗಳು, ಸೂತ್ರಧಾರಿಗಳು ಮತ್ತು ಹಣಕಾಸು ಒದಗಿಸುವವರನ್ನು ಶಿಕ್ಷೆಗೆ ಗುರಿಪಡಿಸಲು ವಿಳಂಬ ಮಾಡಲೇಬಾರದು ಎಂದು ಭಾರತ ಮತ್ತು ಜಪಾನ್ ಒತ್ತಾಯಿಸಿವೆ.

ಉಭಯ ದೇಶಗಳ ಪ್ರಧಾನಿಗಳು ಪಹಲ್ಗಾಮ್ ಘಟನೆ ಖಂಡಿಸಿದ್ದಾರೆ.

ಚಂದ್ರಯಾನ –5ಕ್ಕೆ ಜಂಟಿ ಒಪ್ಪಂದ

ಚಂದ್ರಯಾನ–5 ಯೋಜನೆಗೆ ಭಾರತ ಮತ್ತು ಜಪಾನ್ ಶುಕ್ರವಾರ ಸಹಿ ಹಾಕಿದೆ. ಈ ಯೋಜನೆಯಡಿ ಉಭಯ ದೇಶಗಳ ಬಾಹ್ಯಾಕಾಶ ಸಂಸ್ಥೆಗಳು ಜಂಟಿಯಾಗಿ ಚಂದ್ರನ ಧ್ರುವಪ್ರದೇಶದ ಅಧ್ಯಯನ ನಡೆಸಲಿವೆ.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಮತ್ತು ಜಪಾನ್‌ನ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಜಕ್ಸಾ ನಡುವೆ ಈ ಸಂಶೋಧನೆಗೆ ಸಂಬಂಧಿಸಿದಂತೆ ಒಡಂಬಡಿಕೆಗೆ ಸಹಿ ಹಾಕಲಾಯಿತು.

ಚಂದ್ರನ ದಕ್ಷಿಣ ಧ್ರುವದಲ್ಲಿನ ನೆರಳಿನ ಪ್ರದೇಶ (ಪಿಎಸ್‌ಆರ್) ಮತ್ತು ಚಂದ್ರನ ಮೇಲ್ಮೈನಲ್ಲಿರುವ ನೀರಿನ ಕುರಿತ ಸಂಶೋಧನೆಯನ್ನು ಮುಖ್ಯವಾಗಿ ಚಂದ್ರಯಾನ–5 ಯೋಜನೆ ಹೊಂದಿದೆ.

ಎಂ.ಎಂ.ಗುಪ್ತ ಪಿಟಿಐ ಅಧ್ಯಕ್ಷ

ನವದೆಹಲಿ (ಪಿಟಿಐ): 'ಜಾಗರಣ್ ಪ್ರಕಾಶನ್ ಲಿಮಿಟೆಡ್'ನ ಕಾರ್ಯನಿರ್ವಾಹಕೇತರ ಅಧ್ಯಕ್ಷ ಮಹೇಂದ್ರ ಮೋಹನ್ ಗುಪ್ತ (84) ಅವರು ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ (ಪಿಟಿಐ) ಸುದ್ದಿಸಂಸ್ಥೆಯ ನಿರ್ದೇಶಕರ ಮಂಡಳಿಯ ಅಧ್ಯಕ್ಷರಾಗಿ ಶುಕ್ರವಾರ ಆಯ್ಕೆ ಆಗಿದ್ದಾರೆ.


ಮಹೇಂದ್ರ ಮೋಹನ್ ಗುಪ್ತ

ಅವರಿಗೂ ಮುನ್ನ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ಪ್ರಕಾಶನ ಸಂಸ್ಥೆಯಾಗಿರುವ 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್'ನ ನಿರ್ದೇಶಕ ಕೆ.ಎನ್. ಶಾಂತಕುಮಾರ್ ಅವರು ಅಧ್ಯಕ್ಷರಾಗಿದ್ದರು.

ಎಂ.ಎಂ. ಗುಪ್ತ ಅವರು 2006ರ ಏಪ್ರಿಲ್‌ನಿಂದ 2012ರ ಏಪ್ರಿಲ್‌ವರೆಗೆ ರಾಜ್ಯಸಭಾ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ.

'ಮಾತೃಭೂಮಿ ಗ್ರೂಪ್'ನ ಎಂ.ವಿ. ಶ್ರೇಯಾಂಸ್ ಕುಮಾರ್ ಅವರು ಪಿಟಿಐನ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಸುದ್ದಿ ಸಂಸ್ಥೆಯ ವಾರ್ಷಿಕ ಮಹಾಸಭೆಯ ನಂತರ ನಡೆದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಈ ಆಯ್ಕೆ ನಡೆದಿದೆ.

ಪಿಟಿಐ ನಿರ್ದೇಶಕ ಮಂಡಳಿಯ ಸದಸ್ಯರು: ಮಹೇಂದ್ರ ಮೋಹನ್ ಗುಪ್ತ, ಶ್ರೇಯಾಂಸ್ ಕುಮಾರ್, ಶಾಂತಕುಮಾರ್ ಸೇರಿ ಪಿಟಿಐ ನಿರ್ದೇಶಕ ಮಂಡಳಿ 15 ಸದಸ್ಯರನ್ನು ಹೊಂದಿದೆ.

ಅವೀಕ್ ಸರ್ಕಾರ್ (ಆನಂದ ಬಜಾರ್ ಪತ್ರಿಕಾ), ವಿಜಯ್ ಕುಮಾರ್ ಚೋಪ್ರಾ (ಪಂಜಾಬ್ ಕೇಸರಿ), ವಿನೀತ್ ಜೈನ್ (ಟೈಮ್ಸ್ ಆಫ್ ಇಂಡಿಯಾ), ಎನ್. ರವಿ (ದಿ ಹಿಂದೂ), ವಿವೇಕ್ ಗೋಯೆಂಕಾ (ಎಕ್ಸ್‌ಪ್ರೆಸ್ ಸಮೂಹ), ರಿಯಾದ್ ಮ್ಯಾಥ್ಯೂ (ಮಲಯಾಳ ಮನೋರಮ), ಸಮೀರ್ ಸಿಂಗ್ (ಹಿಂದೂಸ್ತಾನ್ ಟೈಮ್ಸ್), ಎಲ್. ಆದಿಮೂಲಂ (ದಿನಮಲರ್), ಹೊರ್ಮುಸ್ಜಿ ಎನ್. ಕಾಮಾ (ಬಾಂಬೆ ಸಮಾಚಾರ್), ಹಿರಿಯ ಅರ್ಥಶಾಸ್ತ್ರಜ್ಞ ಪ್ರೊ. ದೀಪಕ್ ನಯ್ಯರ್, ಮಾಜಿ ವಿದೇಶಾಂಗ ಕಾರ್ಯದರ್ಶಿ ಶಿವಶಂಕರ್ ಮೆನನ್ ಮತ್ತು ಟಾಟಾ ಸನ್ಸ್‌ನ ಮಾಜಿ ಕಾರ್ಯನಿರ್ವಾಹಕ ನಿರ್ದೇಶಕ ಆರ್. ಗೋಪಾಲಕೃಷ್ಣನ್ ಇತರ ಸದಸ್ಯರಾಗಿದ್ದಾರೆ.

ಹಲವು ಕುಟುಂಬಗಳು ಸಂಕಷ್ಟದಲ್ಲಿ • ಮುಂದುವರಿದ ಮಳೆ

ಉತ್ತರಾಖಂಡ ಮೇಘಸ್ಫೋಟ: 5 ಸಾವು

ಡೆಹ್ರಾಡೂನ್ (ಪಿಟಿಐ): ಭಾರಿ ಮಳೆ ಮತ್ತು ಮೇಘಸ್ಫೋಟದಿಂದಾಗಿ ಉತ್ತರಾಖಂಡದ ಹಲವು ಜಿಲ್ಲೆಗಳು ತತ್ತರಿಸಿದ್ದು, ಶುಕ್ರವಾರ ಮುಂಜಾನೆ ಐವರು ಮೃತಪಟ್ಟಿದ್ದಾರೆ.

ಮಳೆಯಿಂದಾಗಿ ಸಂಭವಿಸಿದ ಅವಘಡಗಳಲ್ಲಿ ಹನ್ನೊಂದು ಮಂದಿ ನಾಪತ್ತೆಯಾಗಿದ್ದಾರೆ. ಚಮೋಲಿ, ರುದ್ರಪ್ರಯಾಗ, ತೆಹ್ರಿ ಮತ್ತು ಬಾಗೇಶ್ವರ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿದೆ.

ಗುರುವಾರ ರಾತ್ರಿಯಿಡಿ ಸುರಿದ ಮಳೆಯಿಂದಾಗಿ ಬಾಗೇಶ್ವರ ಜಿಲ್ಲೆಯಲ್ಲಿ ಹಲವು ಮನೆಗಳಿಗೆ ಹಾನಿಯಾಗಿದೆ. ಇಬ್ಬರು ಮೃತಪಟ್ಟಿದ್ದು, ಮೂವರು ನಾಪತ್ತೆಯಾಗಿದ್ದಾರೆ ಎಂದು ಉತ್ತರಾಖಂಡದ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

ರುದ್ರಪ್ರಯಾಗ ಮತ್ತು ಚಮೋಲಿ ಜಿಲ್ಲೆಯಲ್ಲಿ ಮನೆ ಕುಸಿದು ಮೂವರು ಮೃತಪಟ್ಟಿದ್ದಾರೆ. ರುದ್ರಪ್ರಯಾಗದ ಆರಕ್ಕೂ ಹೆಚ್ಚು ಗ್ರಾಮಗಳಿಗೆ ಹಾನಿಯಾಗಿದೆ. 30ರಿಂದ 40 ಕುಟುಂಬಗಳು ಅವಶೇಷಗಳಡಿ ಮತ್ತು ಪ್ರವಾಹದಲ್ಲಿ ಸಿಲುಕಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.


ಭೂಕುಸಿತದ ಸ್ಥಳದಲ್ಲಿ ರಕ್ಷಣಾ ಸಿಬ್ಬಂದಿ ಶೋಧ ನಡೆಸಿದರು — ಪಿಟಿಐ ಚಿತ್ರ

ನಿರಂತರ ಮಳೆಯಿಂದಾಗಿ ಅಲಕಾನಂದ, ಮಂದಾಕಿನಿ ಸೇರಿದಂತೆ ಹಲವು ನದಿಗಳ ನೀರಿನ ಮಟ್ಟದಲ್ಲಿ ಏರಿಕೆಯಾಗಿದೆ. ನದಿ ಪಾತ್ರದಲ್ಲಿನ ಜನರಿಗೆ ಸ್ಥಳಾಂತರಗೊಳ್ಳುವಂತೆ ಸೂಚನೆ ನೀಡಲಾಗಿದೆ

ಚೆನಗಢ ಪ್ರದೇಶದಲ್ಲಿ ಹಲವು ನೇಪಾಳಿಗರು ಮತ್ತು ನಾಲ್ವರು ಸ್ಥಳೀಯರು ಅವಶೇಷಗಳಡಿ ಸಿಲುಕಿದ್ದಾರೆ. 7ರಿಂದ 8 ಕಡೆಗಳಲ್ಲಿ ರಸ್ತೆ ಕುಸಿತವಾಗಿರುವುದರಿಂದ ಸ್ಥಳಕ್ಕೆ ತಲುಪಲು ಸಾಧ್ಯವಾಗುತ್ತಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭೂಕುಸಿತದಿಂದಾಗಿ ಬದರೀನಾಥ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ಸ್ಥಗಿತವಾಗಿದೆ. ಕೇದರನಾಥ ಹೆದ್ದಾರಿ ಕೂಡ ಬಂದ್ ಆಗಿದೆ. ವಾಹನ ಸಂಚಾರ ಪುನರ್ ಆರಂಭಗೊಂಡಿರುವುದು ಖಚಿತವಾದ ಬಳಿಕ ಭಕ್ತರು ಬರಬಹುದು ಎಂದು ಸ್ಥಳೀಯಾಡಳಿತ ಮನವಿ ಮಾಡಿದೆ.

ಮಳೆಗೆ ಸಂಬಂಧಿಸಿದ ಅವಘಡಗಳಲ್ಲಿ 9 ಯೋಧರು, 39 ನೇಪಾಳಿಗರು ಸೇರಿದಂತೆ ಈವರೆಗೆ ಒಟ್ಟು 64 ಮಂದಿ ಉತ್ತರಾಖಂಡದಲ್ಲಿ ನಾಪತ್ತೆಯಾಗಿದ್ದಾರೆ.

ಮುಂಬೈ: ಕಟ್ಟಡ ಕುಸಿತ, 17 ಸಾವು

ಪಾಲ್ಘರ್ (ಪಿಟಿಐ): ಮಹಾರಾಷ್ಟ್ರದ ವಿರಾರ್‌ನಲ್ಲಿ ಕಟ್ಟಡವೊಂದು ಕುಸಿದು ಬಿದ್ದ ಪರಿಣಾಮ 17 ಮಂದಿ ಮೃತಪಟ್ಟಿದ್ದು, 7 ಜನ ಗಾಯಗೊಂಡಿದ್ದಾರೆ.

ಕುಸಿದು ಬಿದ್ದ ಕಟ್ಟಡ ಅನಧಿಕೃತ ಎನ್ನಲಾಗುತ್ತಿದ್ದು, ಗುತ್ತಿಗೆದಾರನನ್ನು ಬಂಧಿಸಲಾಗಿದೆ.

2012ರಲ್ಲಿ ನಿರ್ಮಾಣವಾಗಿದ್ದ ನಾಲ್ಕು ಅಂತಸ್ತಿನ ಈ ಕಟ್ಟಡದಲ್ಲಿ ಒಟ್ಟು 50 ಫ್ಲ್ಯಾಟ್‌ಗಳು ಇದ್ದವು. ಅದರಲ್ಲಿ ಮೇಲಂತಸ್ತಿನಲ್ಲಿದ್ದ 12 ಫ್ಲ್ಯಾಟ್‌ಗಳು ಕುಸಿದು ಬಿದ್ದಿವೆ.

ಕಟ್ಟಡ ಕುಸಿಯುವ ವೇಳೆಗೆ 1 ವರ್ಷ ವಯಸ್ಸಿನ ಮಗುವಿನ ಹುಟ್ಟುಹಬ್ಬದ ಆಚರಣೆಯೂ ನಡೆಯುತ್ತಿತ್ತು. ಮಗು, ಪೋಷಕರು ಮತ್ತು ಕೆಲ ಅತಿಥಿಗಳು ಪ್ರಾಣ ಕಳೆದುಕೊಂಡಿದ್ದಾರೆ.

ಭಾಗವತ್ ವಿರುದ್ಧ ಓವೈಸಿ ಕಿಡಿ

ಹೈದರಾಬಾದ್ (ಪಿಟಿಐ): ಪ್ರತಿ ಕುಟುಂಬವು ಮೂರು ಮಕ್ಕಳನ್ನು ಹೊಂದುವ ಅಗತ್ಯವಿದೆ ಎಂದು ಪ್ರತಿಪಾದಿಸಿದ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ವಿರುದ್ಧ ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಓವೈಸಿ ಅವರು ಶುಕ್ರವಾರ ವಾಗ್ದಾಳಿ ನಡೆಸಿದರು.


ಅಸಾದುದ್ದೀನ್ ಓವೈಸಿ

'ಪಿಟಿಐ' ಸುದ್ದಿಸಂಸ್ಥೆಯೊಂದಿಗೆ ಮಾತನಾಡಿದ ಅವರು, 'ಜನರ ಜೀವನದಲ್ಲಿ ಹಸ್ತಕ್ಷೇಪ ಮಾಡಲು ಅವರು (ಭಾಗವತ್) ಯಾರು? ಭಾರತೀಯ ಮಹಿಳೆಯರಿಗೆ ಅವರದ್ದೇ ಆದ ಆದ್ಯತೆಗಳಿವೆ, ಅವರ ಮೇಲೆ ಹೊರೆ ಹೇರಲು ಯತ್ನಿಸುತ್ತಿರುವುದು ಏಕೆ' ಎಂದು ಹರಿಹಾಯ್ದರು.

ಭಾಗವತ್ ಅವರು ಗುರುವಾರ, 'ಜನಸಂಖ್ಯಾ ಕುಸಿತ ತಡೆಯಲು ಹಾಗೂ ಸ್ಥಿರತೆ ತರಲು ಪ್ರತಿ ಕುಟುಂಬವು ಮೂರು ಮಕ್ಕಳನ್ನು ಹೊಂದುವ ಅಗತ್ಯವಿದೆ' ಎಂದು ಹೇಳಿದ್ದರು.

ಧಾರ್ಮಿಕತೆ ಸೇರಿದಂತೆ ಯಾವುದೇ ಮಾದರಿಯ ದಾಳಿ ಬಗ್ಗೆ ಆರ್‌ಎಸ್‌ಎಸ್ ನಂಬಿಕೆ ಹೊಂದಿಲ್ಲ ಎಂಬ ಹೇಳಿಕೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಓವೈಸಿ, 'ಭಾಗವತ್ ಅವರು ಅನೇಕ ಬಾರಿ ಮುಸ್ಲಿಮರನ್ನು 'ಕದ್ದ ಮಾಲು' ಮತ್ತು 'ಮೊಘಲರ ವಂಶಸ್ಥರು' ಎಂದು ಕರೆದಿದ್ದಾರೆ' ಎಂದು ಹೇಳಿದರು.

ಧರ್ಮ ಸಂಸದ್‌ಗಳನ್ನು ಆಯೋಜಿಸಿದವರು, ಮುಸ್ಲಿಮರ ನರಮೇಧಕ್ಕೆ ಕರೆ ನೀಡಿದವರು ಮತ್ತು ಮಹಿಳೆಯರ ಮೇಲೆ ಅತ್ಯಾಚಾರಕ್ಕೆ ಕರೆ ನೀಡಿದವರು ಯಾರು ಎಂದು ಪ್ರಶ್ನಿಸಿದರು.

ಮುಸ್ಲಿಂ ವಿರೋಧಿ ದ್ವೇಷ ಭಾವನೆ ಹರಡಲು ಆರ್‌ಎಸ್‌ಎಸ್ ಮತ್ತು ಬೆಂಬಲಿತ ಸಂಸ್ಥೆಗಳೇ ಕಾರಣ ಎಂದು ಅವರು ದೂರಿದರು.

ಬಿಜೆಪಿ–ಕಾಂಗ್ರೆಸ್ ಕಾರ್ಯಕರ್ತರ ಘರ್ಷಣೆ

ಒಂದನೇ ಪುಟದಿಂದ...

'ಇದು ಒಂದು ಸಣ್ಣ ಘರ್ಷಣೆ ಆಗಿದ್ದು, ಎರಡೂ ಕಡೆಯಲ್ಲಿ ಕಾರ್ಯಕರ್ತರು ಗಾಯಗೊಂಡಿರುವ ಬಗ್ಗೆ ನಮಗೆ ದೂರುಗಳು ಬಂದಿವೆ. ಇಡೀ ಘಟನೆಯ ಸಮಗ್ರ ತನಿಖೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪಟ್ನಾ ಎಸ್‌ಪಿ (ಕೇಂದ್ರ) ದೀಕ್ಷಾ ತಿಳಿಸಿದರು.

ಬಿಜೆಪಿ 'ಗೂಂಡಾಗಿರಿ' ನಡೆಸುತ್ತಿದೆ ಎಂದು ಆರೋಪಿಸಿ ಪ್ರತಿಭಟಿಸಿದ ಕಾಂಗ್ರೆಸ್ ಕಾರ್ಯಕರ್ತರು ಸದಾಕತ್ ಆಶ್ರಮದ ಹೊರಗೆ ಕೆಲಹೊತ್ತು ಧರಣಿ ಕುಳಿತರು.

'ಪ್ರಧಾನಿ ಮೋದಿಯವರಿಗೆ ಆಗಿರುವ ಅವಮಾನವನ್ನು ಸಹಿಸಲು ಸಾಧ್ಯವಿಲ್ಲ. ರಾಹುಲ್ ಗಾಂಧಿ ಮತ್ತು ಅವರ ಬೆಂಬಲಿಗರು ರಾಷ್ಟ್ರದ ಕ್ಷಮೆಯಾಚಿಸಬೇಕು' ಎಂದು ನಿತಿನ್ ನವೀನ್ ಆಗ್ರಹಿಸಿದರು.

ಖಂಡನೆ: ಸದಾಕತ್ ಆಶ್ರಮಕ್ಕೆ ಬಿಜೆಪಿ ಮುತ್ತಿಗೆ ಹಾಕಿದ ಘಟನೆಯನ್ನು ಕಾಂಗ್ರೆಸ್ ನಾಯಕರು ಖಂಡಿಸಿದ್ದಾರೆ. 'ಯಾರಾದರೂ ಪ್ರಧಾನಿ ವಿರುದ್ಧ ಅವಹೇಳನಕಾರಿ ಭಾಷೆ ಬಳಸಿದರೆ ಅವರು ಖಂಡನೆಗೆ ಅರ್ಹರು. ಆದರೆ, ಈ ಘಟನೆಯನ್ನು ಕಾಂಗ್ರೆಸ್ ಮತ್ತು ಇಂಡಿಯಾ ಮೈತ್ರಿಕೂಟದ ಜತೆ ಜೋಡಿಸುವುದು ತಪ್ಪು. ನಮ್ಮ ಪಕ್ಷದ ರಾಜ್ಯ ಪ್ರಧಾನ ಕಚೇರಿಯ ಮೇಲಿನ ದಾಳಿ ಖಂಡನೀಯ. ಬಿಹಾರ ಸರ್ಕಾರ ಆರೋಪಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವ ವಿಶ್ವಾಸವಿದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಸಚಿನ್ ಪೈಲಟ್ ಹೇಳಿದ್ದಾರೆ.

> **'ಮತದಾರರ ಅಧಿಕಾರ ಯಾತ್ರೆ'ಗೆ ಜನರ ಅಭೂತಪೂರ್ವ ಪ್ರತಿಕ್ರಿಯೆಯಿಂದ ವಿಚಲಿತರಾಗಿರುವ ಅಮಿತ್ ಶಾ ಅವರು ರಾಹುಲ್ ಗಾಂಧಿ ಮತ್ತು ಇತರ ನಾಯಕರ ಬಗ್ಗೆ ಸುಳ್ಳು ಸುದ್ದಿ ಹರಡುತ್ತಿದ್ದಾರೆ**
> **ಜೈರಾಮ್ ರಮೇಶ್**
> ಎಐಸಿಸಿ ಪ್ರಧಾನ ಕಾರ್ಯದರ್ಶಿ

'ನಾವು ಘಟನೆಯನ್ನು ತಕ್ಷಣವೇ ಖಂಡಿಸಿದ್ದೇವೆ. ಆದರೆ, ಪ್ರಧಾನಿ ಸೇರಿದಂತೆ ಬಿಜೆಪಿಯ ಹಿರಿಯ ನಾಯಕರು ಈಚೆಗಿನ ವರ್ಷಗಳಲ್ಲಿ ನೀಡಿದ್ದ ಅವಹೇಳನಕಾರಿ ಹೇಳಿಕೆಗಳಿಗೆ ಬಿಜೆಪಿ ಎಂದಾದರೂ ಕ್ಷಮೆಯಾಚಿಸಿದೆಯೇ' ಎಂದು ಆರ್‌ಜೆಡಿ ರಾಷ್ಟ್ರೀಯ ವಕ್ತಾರ ಮನೋಜ್ ಝಾ ಪ್ರಶ್ನಿಸಿದ್ದಾರೆ.

ಒಳನುಸುಳುಕೋರರ ವಿಚಾರಕ್ಕೆ ಸಂಬಂಧಿಸಿದಂತೆ ಕೇಂದ್ರವನ್ನು ಪ್ರಶ್ನಿಸಿದ 'ಸುಪ್ರೀಂ'

'ಅಮೆರಿಕದಂತೆ ತಡೆಗೋಡೆ ನಿರ್ಮಿಸುತ್ತೀರಾ?'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಅಕ್ರಮ ವಲಸಿಗರು ದೇಶದೊಳಗೆ ನುಸುಳುವುದನ್ನು ತಪ್ಪಿಸಲು ಗಡಿಯಲ್ಲಿ ಅಮೆರಿಕದಂತೆಯೇ ತಡೆಗೋಡೆ ನಿರ್ಮಿಸಲು ಕೇಂದ್ರ ಸರ್ಕಾರ ಬಯಸಿದೆಯೇ' ಎಂಬುದನ್ನು ತಿಳಿಸುವಂತೆ ಸುಪ್ರೀಂ ಕೋರ್ಟ್ ಶುಕ್ರವಾರ ಕೇಂದ್ರಕ್ಕೆ ಕೇಳಿತು.

ಬಾಂಗ್ಲಾದೇಶದ ಅಕ್ರಮ ಒಳನುಸುಳುಕೋರರನ್ನು ಗಡಿಪಾರು ಮಾಡುವಲ್ಲಿ ಸರ್ಕಾರಗಳು ಅಳವಡಿಸಿಕೊಂಡಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನದ (ಎಸ್‌ಒಪಿ) ಬಗ್ಗೆ ವಿವರಣೆ ನೀಡುವಂತೆಯೂ ಹೇಳಿದೆ.

'ಬಂಗಾಳಿ ಭಾಷೆ ಮಾತನಾಡುವ ವಲಸೆ ಕಾರ್ಮಿಕರನ್ನು ಬಾಂಗ್ಲಾದೇಶದ ಪ್ರಜೆಗಳು ಎಂಬ ಅನುಮಾನದ ಮೇಲೆ ಬಂಧಿಸಲಾಗುತ್ತಿದೆ' ಎಂದು ಹೇಳುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ಜಾಯ್‌ಮಾಲ್ಯ ಬಾಗ್ಚಿ ಹಾಗೂ ವಿಪುಲ್ ಎಂ. ಪಂಚೋಲಿ ಅವರನ್ನೊಳಗೊಂಡ ಪೀಠವು, 'ನಿರ್ದಿಷ್ಟ ಭಾಷೆಯನ್ನು ಬಳಸುವುದನ್ನು ವಿದೇಶಿಯರು ಎಂಬುದನ್ನು ಗುರುತಿಸಲು ಬಳಸಲಾಗುತ್ತಿದೆಯೆ' ಎಂದು ಕೇಂದ್ರದಿಂದ ಸ್ಪಷ್ಟನೆ ಕೋರಿತು.

ಬಂಗಾಳಿ ಮತ್ತು ಪಂಜಾಬಿ ಮಾತನಾಡುವ ಭಾರತೀಯರು ನೆರೆಹೊರೆಯ ಕೆಲವು ದೇಶಗಳೊಂದಿಗೆ ಒಂದೇ ಭಾಷೆ ಮಾತನಾಡುವುದರ ಜೊತೆಗೆ ಸಂಸ್ಕೃತಿಯನ್ನೂ ಹಂಚಿಕೊಂಡಿದ್ದಾರೆ. ಆದರೆ, ಗಡಿಯಿಂದ ವಿಭಜನೆಗೊಂಡಿದ್ದರೂ, ಭಾಷಾ ಪರಂಪರೆ ಮತ್ತು ಸಾಂಸ್ಕೃತಿಕ ಐತಿಹ್ಯದ ಒಂದೇ ಪರಂಪರೆಯನ್ನು ಇಂದಿಗೂ ಅನುಸರಿಸುತ್ತಿದ್ದಾರೆ' ಎಂದೂ ನ್ಯಾಯಾಲಯ ಇದೇ ಸಂದರ್ಭ ವಿವರಿಸಿದೆ.

ಹಲ್ಲೆ: ಐವರು ವಕೀಲರಿಗೆ ಶಿಕ್ಷೆ

ಇಂದೋರ್ (ಪಿಟಿಐ): ಪತ್ರಕರ್ತನ ಮೇಲೆ ಕ್ರೂರವಾಗಿ ಹಲ್ಲೆ ನಡೆಸಿದ ಪ್ರಕರಣದಲ್ಲಿ ಇಲ್ಲಿನ ನ್ಯಾಯಾಲಯವು ಐವರು ವಕೀಲರಿಗೆ ಶಿಕ್ಷೆ ವಿಧಿಸಿದೆ.

ಉಜ್ಜಯಿನಿಯ ವಕೀಲರಾದ ಧರ್ಮೇಂದ್ರ ಶರ್ಮ, ಶೈಲೇಂದ್ರ ಶರ್ಮ, ಭವೇಂದ್ರ ಶರ್ಮ ಹಾಗೂ ಪುರುಷೋತ್ತಮ್ ರಾಯ್ ಅವರಿಗೆ ಇಂದೋರ್‌ನ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಕೃಷ್ಣ ಡಾಗ್ಲಿಯಾ ಅವರು ಏಳು ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿದ್ದಾರೆ.

ಮತ್ತೊಬ್ಬ ಆರೋಪಿ ಸುರೇಂದ್ರ ಶರ್ಮಾ (90) ಅವರ ವಯಸ್ಸನ್ನು ಪರಿಗಣಿಸಿ ಮೂರು ವರ್ಷ ಸಾಮಾನ್ಯ ಜೈಲು ಶಿಕ್ಷೆ ವಿಧಿಸಿದ್ದಾರೆ. ಐವರು ಆರೋಪಿಗಳಿಗೂ ತಲಾ ₹10 ಸಾವಿರ ದಂಡ ವಿಧಿಸಲಾಗಿದೆ.

ರಾಮ ಸೇತು: ಪ್ರತಿಕ್ರಿಯೆ ಕೋರಿದ 'ಸುಪ್ರೀಂ'

ನವದೆಹಲಿ (ಪಿಟಿಐ): 'ರಾಮ ಸೇತು'ವನ್ನು ರಾಷ್ಟ್ರೀಯ ಸ್ಮಾರಕ ಎಂಬುದಾಗಿ ಘೋಷಿಸುವಂತೆ ಕೋರಿ ಮಾಜಿ ಸಂಸದ ಸುಬ್ರಮಣಿಯನ್ ಸ್ವಾಮಿ ಸಲ್ಲಿಸಿರುವ ಮನವಿ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರಕ್ಕೆ 'ಸುಪ್ರೀಂ' ಸೂಚಿಸಿದೆ.

'ರಾಮ ಸೇತು'ವನ್ನು ರಾಷ್ಟ್ರೀಯ ಸ್ಮಾರಕವೆಂದು ಘೋಷಿಸಲು ತನ್ನ ಪ್ರಾತಿನಿಧ್ಯವನ್ನು ತ್ವರಿತವಾಗಿ ನಿರ್ಧರಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಿ ಸ್ವಾಮಿ ಅವರು 'ಸುಪ್ರೀಂ'ಗೆ ಅರ್ಜಿ ಸಲ್ಲಿಸಿದ್ದಾರೆ.

ನ್ಯಾಯಮೂರ್ತಿಗಳಾದ ವಿಕ್ರಂನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು ಈ ಅರ್ಜಿಯ ವಿಚಾರಣೆಗೆ ಒಪ್ಪಿಗೆ ಸೂಚಿಸಿ, ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೆ ಆದೇಶಿಸಿತು.

ಭಾರತಕ್ಕೆ ಚೀನಾ ವಿರುದ್ಧ ಗೆಲುವು

ಏಷ್ಯಾ ಕಪ್ ಹಾಕಿ ಟೂರ್ನಿಯ ಮೊದಲ ಪಂದ್ಯದಲ್ಲಿ ಆತಿಥೇಯರಿಗೆ 4–3 ಜಯ



ಭಾರತ (ನೀಲಿ) ಮತ್ತು ಚೀನಾ ಹಾಕಿ ತಂಡದ ಆಟಗಾರರ ನಡುವೆ ಚೆಂಡಿಗಾಗಿ ಸೆಣಸಾಟ ಪಿಟಿಐ ಚಿತ್ರ

ರಾಜಗೀರ್ (ಬಿಹಾರ), (ಪಿಟಿಐ): ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರು ಹ್ಯಾಟ್ರಿಕ್ ಗೋಲುಗಳನ್ನು ಗಳಿಸಿದರೂ, ಏಷ್ಯಾ ಕಪ್ ಹಾಕಿ ಟೂರ್ನಿ ಪಂದ್ಯದಲ್ಲಿ ಭಾರತದ ಒಟ್ಟಾರೆ ಆಟ ನೀರಸ ಎನ್ನುವಂತಿತ್ತು. ಆತಿಥೇಯ ತಂಡ ಶುಕ್ರವಾರ ನಡೆದ ತನ್ನ ಮೊದಲ ಪಂದ್ಯದಲ್ಲಿ ತನಗಿಂತ ಕೆಳಕ್ರಮಾಂಕದ ಚೀನಾ ವಿರುದ್ಧ 4–3 ಗೋಲುಗಳ ಅಲ್ಪಅಂತರದ ಜಯ ಪಡೆಯಿತು.

ಹರ್ಮನ್‌ಪ್ರೀತ್ ಅವರು 'ಎ' ಗುಂಪಿನ ಈ ಪಂದ್ಯದ 20ನೇ, 33ನೇ ಮತ್ತು 47ನೇ ನಿಮಿಷ ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಗೋಲಾಗಿ ಪರಿವರ್ತಿಸುವಲ್ಲಿ ಯಶಸ್ವಿ ಆದರು. ಆದರೆ ಅವರು ಒಮ್ಮೆ 'ಪೆನಾಲ್ಟಿ ಸ್ಟ್ರೋಕ್' ಅವಕಾಶದಲ್ಲಿ ಎಡವಿದರು. ಭಾರತದ ಇನ್ನೊಂದು ಗೋಲನ್ನು ಜುಗರಾಜ್ ಸಿಂಗ್ 18ನೇ ನಿಮಿಷ ಹೊಡೆದರು.

ಚೀನಾ ತಂಡದ ಪರ ಶಿಹಾವೊ ದು (12ನೇ ನಿಮಿಷ), ಬೆನ್ಹಾಲ್ ಚೆನ್ (35ನೇ ನಿಮಿಷ) ಮತ್ತು ಜೀಶೆಂಗ್ ಗಾವೊ (41ನೇ ನಿಮಿಷ) ಗೋಲುಗಳನ್ನು ಗಳಿಸಿದರು.

ಪಂದ್ಯದ ಹೆಚ್ಚಿನ ಅವಧಿಯಲ್ಲಿ ಭಾರತ ಮೇಲುಗೈ ಸಾಧಿಸಿತು. ಆದರೆ ತಂಡದಿಂದ ನಿರೀಕ್ಷಿತ ಮಟ್ಟದ ಆಟ ಬರಲಿಲ್ಲ. 23ನೇ ಕ್ರಮಾಂಕದಲ್ಲಿರುವ ಚೀನಾ ತಂಡಕ್ಕೆ ಚೇತರಿಸಲು ಅವಕಾಶ ಮಾಡಿಕೊಟ್ಟು ಅಪಾಯ ಮೈಮೇಲೆ ಎಳೆದುಕೊಂಡಿತು.

ತನ್ನ ಪಾಲಿನ ಅವಕಾಶಗಳನ್ನೂ ಸರಿಯಾಗಿ ಬಳಸಿಕೊಳ್ಳಲಿಲ್ಲ. 11 ಪೆನಾಲ್ಟಿ ಕಾರ್ನರ್ ಅವಕಾಶಗಳಲ್ಲಿ ಗೋಲಾಗಿದ್ದು ಬರೇ ನಾಲ್ಕರಲ್ಲಷ್ಟೇ. ಚೀನಾ ಗೋಲ್‌ಕೀಪರ್ ವೀಹಾವೊ ಯಂಗ್ ಕೂಡ ಕೆಲವು ಅವಕಾಶಗಳಿಗೆ ತಡೆಗೋಡೆಯಾದರು.

39ನೇ ನಿಮಿಷ ಮನದೀಪ್ ಅವರ ಮೇಲೆ ಎದುರಾಳಿ ಫೌಲ್ ಮಾಡಿದ ಕಾರಣಕ್ಕೆ ಭಾರತಕ್ಕೆ ಪೆನಾಲ್ಟಿ ಸ್ಟ್ರೋಕ್ ನೀಡಲಾಯಿತು. ಆದರೆ ಈ ಅವಕಾಶದಲ್ಲಿ ಹರ್ಮನ್‌ಪ್ರೀತ್ ಹೊಡೆದ ಚೆಂಡು ಗೋಲುಗಂಬಕ್ಕೆ ಹೊಡೆಯಿತು.

ಭಾರತ ತಂಡವು ಭಾನುವಾರ ಜಪಾನ್ ತಂಡವನ್ನು ಎದುರಿಸಲಿದೆ. ಚೀನಾ ತಂಡವು ಅದೇ ದಿನ ಕಜಾಕಸ್ತಾನ ವಿರುದ್ಧ ಆಡಲಿದೆ.

ಆಟಕ್ಕೆ ತೃಪ್ತರಾಗದ ಕೋಚ್: ಮೊದಲ ಪಂದ್ಯದಲ್ಲಿ ಭಾರತದ ನಿರ್ವಹಣೆಯ ಬಗ್ಗೆ ಚೀಫ್ ಕೋಚ್ ಕ್ರೇಗ್ ಫುಲ್ಟನ್ ಅವರಿಗೆ ಪೂರ್ಣ ಸಮಾಧಾನವಾಗಿರಲಿಲ್ಲ. ಆದರೆ ಅಭಿಯಾನವನ್ನು ಗೆಲುವಿನೊಡನೆ ಆರಂಭಿಸುವುದು ಮಹತ್ವದ್ದು ಎಂದರು.

ಭಾರತ ವಿಶ್ವ ಕ್ರಮಾಂಕದಲ್ಲಿ ಏಳನೇ ಸ್ಥಾನದಲ್ಲಿ ಏಳನೇ ಸ್ಥಾನದಲ್ಲಿದ್ದು, 23ನೇ ಸ್ಥಾನದಲ್ಲಿರುವ ಚೀನಾವು ತೀವ್ರ ಪೈಪೋಟಿ ನೀಡಿ ಆತಿಥೇಯರು ಗೆಲುವಿಗೆ ಕಷ್ಟಪಡುವಂತೆ ಮಾಡಿತು.

'ಮೊದಲಾರ್ಧದಲ್ಲಿ ಆಟ ಉತ್ತಮವಾಗಿತ್ತು. ನಾವು ಉತ್ತಮ ರೀತಿ ದಾಳಿಗಿಳಿದೆವು. ಆದರೆ ನಂತರ ಕೆಲವು ತಪ್ಪುಗಳಾದವು. ವಿರಾಮದ ನಂತರ ಕೆಲವು ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಗೋಲಾಗಿ ಪರಿವರ್ತಿಸಿದ್ದು ಸಕಾರಾತ್ಮಕ ಅಂಶ. ಸ್ಟ್ರೋಕ್‌ನಲ್ಲಿ ಗೋಲಾಗದ್ದು ದುರದೃಷ್ಟ' ಎಂದು ಫುಲ್ಟನ್ ಪಂದ್ಯದ ನಂತರ ಸಂವಾದದಲ್ಲಿ ತಿಳಿಸಿದರು.

ಚೀನಾ ಎದುರಿನ ಪಂದ್ಯದಿಂದ ಕಲಿಯಲು ಸಾಕಷ್ಟಿದೆ ಎಂದು ನಾಯಕ ಹರ್ಮನ್‌ಪ್ರೀತ್ ಹೇಳಿದರು. 'ಪಂದ್ಯ ಕಠಿಣವಾಗಿತ್ತು. ಆದರೆ ಗೆಲುವು ಮಹತ್ವದ್ದು. ಅಂತಿಮ ಸೀಟಿಯವರೆಗೆ ನಾವು ಹೋರಾಡಿದೆವು. ಇದು ನಮಗೆ ಉತ್ತಮ ಪಾಠ' ಎಂದು ಅಭಿಪ್ರಾಯಪಟ್ಟರು.

ಇಂದಿನ ಪಂದ್ಯಗಳು

ಬಾಂಗ್ಲಾದೇಶ Vs ಚೀನಾ ಮಧ್ಯಾಹ್ನ 1.00

ದಕ್ಷಿಣ ಕೊರಿಯಾ Vs ಮಲೇಷ್ಯಾ ಸಂಜೆ 3.00

ಲೈವ್: ಸೋನಿ ಟಿವಿ ಆ್ಯಪ್

ಜಪಾನ್‌ಗೆ ಸುಲಭ ತುತ್ತಾದ ಕಜಾಕಸ್ತಾನ

'ಎ' ಗುಂಪಿನ ಮೊದಲ ಪಂದ್ಯದಲ್ಲಿ ಜಪಾನ್ 7–0 ಗೋಲುಗಳಿಂದ ಕಜಾಕಸ್ತಾನ ತಂಡವನ್ನು ಸದೆಬಡಿಯಿತು.

ಜಪಾನ್ ತಂಡದ ಪರ ಕೋಜಿ ಯಮಾಸಕಿ ಎರಡು ಗೋಲುಗಳನ್ನು (13, 36ನೇ ನಿಮಿಷ) ಗಳಿಸಿದರು. ಕೋಸಿ ಕವಾಬೆ (ಮೊದಲ ನಿಮಿಷ), ನಾರು ಕಿಮುರಾ (5ನೇ), ಕೆನ್ ನಾಗಾಯೋಶಿ (48ನೇ) ಮತ್ತು ಶೊಟಾ ಯಮಾಡ (54ನೇ) ಮತ್ತು ರೊಸುಕೆ ಶಿನೊಹರಾ (54ನೇ ನಿಮಿಷ) ಅವರು ಉಳಿದ ಗೋಲುಗಳನ್ನು ಗಳಿಸಿದರು.

'ಬಿ' ಗುಂಪು: ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಮಲೇಷ್ಯಾ 4–1 ಗೋಲುಗಳಿಂದ ದಕ್ಷಿಣ ಕೊರಿಯಾ ತಂಡವನ್ನು ಸುಲಭವಾಗಿ ಮಣಿಸಿತು.

ಹಾಲಿ ಚಾಂಪಿಯನ್ ದಕ್ಷಿಣ ಕೊರಿಯಾ 7–0 ಯಿಂದ ಚೀನಾ ತೈಪೆ ತಂಡವನ್ನು ಬಗ್ಗುಬಡಿಯಿತು.

ಅಮೆರಿಕ ಓಪನ್: ಟಾಮಿ ಪಾಲ್‌ಗೆ ಪ್ರಯಾಸದ ಜಯ

ಪ್ರಿಕ್ವಾರ್ಟರ್ ಫೈನಲ್‌ಗೆ ಅಲ್ಕರಾಜ್



ಅಮೆರಿಕದ ಟಾಮಿ ಪಾಲ್ ಆಟದ ಸೊಬಗು ಎಎಫ್‌ಪಿ ಚಿತ್ರ

ನ್ಯೂಯಾರ್ಕ್ (ಎಎಫ್‌ಪಿ): ಎರಡನೇ ಶ್ರೇಯಾಂಕದ ಕಾರ್ಲೋಸ್ ಅಲ್ಕರಾಜ್ ಅವರು ಶುಕ್ರವಾರ ಅಮೆರಿಕ ಓಪನ್ ಟೆನಿಸ್ ಟೂರ್ನಿ ಪುರುಷರ ಸಿಂಗಲ್ಸ್‌ನಲ್ಲಿ ಪ್ರಿಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

2022ರ ಚಾಂಪಿಯನ್, 22 ವರ್ಷದ ಅಲ್ಕರಾಜ್ 6-2, 6-4, 6-0 ನೇರ ಸೆಟ್‌ಗಳಿಂದ 32ನೇ ಶ್ರೇಯಾಂಕದ ಲೂಸಿಯಾನೊ ದರ್ದೇರಿ (ಇಟಲಿ) ಅವರನ್ನು ಹಿಮ್ಮೆಟ್ಟಿಸಿದರು. ಮೊಣಕಾಲಿನ ನೋವಿನಿಂದ ಬಳಲುತ್ತಿದ್ದ ಸ್ಪೇನ್‌ನ ತಾರೆ ವೈದ್ಯಕೀಯ ನೆರವು ಪಡೆದು ಆಟವಾಡಿದರು.

ಐದು ಗ್ರ್ಯಾನ್‌ಸ್ಲಾಮ್ ಕಿರೀಟಗಳಿಗೆ ಒಡೆಯನಾಗಿರುವ ಅಲ್ಕರಾಜ್ ಇಲ್ಲಿ ಮೂರು ವರ್ಷಗಳ ಬಳಿಕ ಪ್ರಶಸ್ತಿ ಗೆಲ್ಲುವ ಛಲದಲ್ಲಿದ್ದಾರೆ. ಮುಂದಿನ ಸುತ್ತಿನಲ್ಲಿ ಅವರು ಫ್ರಾನ್ಸ್‌ನ ಆರ್ಥರ್ ರಿಂಡರ್‌ಕ್ನೆಚ್ ಅವರನ್ನು ಎದುರಿಸಲಿದ್ದಾರೆ.

ಟಾಮಿ ಪಾಲ್ ಮುನ್ನಡೆ: ಅಮೆರಿಕದ ಟಾಮಿ ಪಾಲ್ ಮತ್ತು ಪೋರ್ಚುಗಲ್‌ನ ನ್ಯೂನೊ ಬೋರ್ಗೆಸ್ ನಡುವಣ ಎರಡನೇ ಸುತ್ತಿನ ಸುದೀರ್ಘ ಪಂದ್ಯ ಶುಕ್ರವಾರ ಬೆಳಗಿನ ಜಾವ ಮುಗಿಯಿತು. 14ನೇ ಶ್ರೇಯಾಂಕದ ಪಾಲ್ ಈ ಪಂದ್ಯವನ್ನು ಐದು ಸೆಟ್‌ಗಳಲ್ಲಿ ಹರಸಾಹಸದಿಂದ ಗೆದ್ದು ಮೂರನೇ ಸುತ್ತಿಗೆ ಕಾಲಿಟ್ಟರು.

4 ಗಂಟೆ 25 ನಿಮಿಷ ನಡೆದ ಈ ಪಂದ್ಯದಲ್ಲಿ ಪಾಲ್ 7-6 (8-6), 6-3, 5-7, 5-7, 7-5 ರಲ್ಲಿ 28 ವರ್ಷ ಎದುರಾಳಿಯೆದುರು ವಿಜೇತರಾದರು. ಗುರುವಾರ ರಾತ್ರಿ 9.15ಕ್ಕೆ ಶುರುವಾದ ಪಂದ್ಯ ಶುಕ್ರವಾರ ಬೆಳಗಿನ ಜಾವ 1 ಗಂಟೆ 46 ನಿಮಿಷಕ್ಕೆ ಮುಗಿಯಿತು! ವಿಶ್ವ ಕ್ರಮಾಂಕದಲ್ಲಿ 41ನೇ ಸ್ಥಾನದಲ್ಲಿರುವ ಬೋರ್ಗೆಸ್ ಯಾವ ಹಂತದಲ್ಲೂ ಸುಲಭವಾಗಿ ಬಿಟ್ಟುಕೊಡಲಿಲ್ಲ.

'ಎಂದೂ ನಿದ್ರಿಸದ ನಗರಿ' ಎಂಬ ಉಪಮೆ ಹೊಂದಿರುವ ನ್ಯೂಯಾರ್ಕ್‌ನ ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ಇವರಿಬ್ಬರ ಪೈಪೋಟಿ ಐದನೇ ಸೆಟ್‌ಗೆ ಬೆಳೆದಾಗ ಪ್ರೇಕ್ಷಕರಲ್ಲಿ ಬಹುತೇಕರು ಜಾಗ ಖಾಲಿಮಾಡಿದ್ದರು!

28 ವರ್ಷ ವಯಸ್ಸಿನ ಟಾಮಿ ಪಾಲ್ ಮೂರನೇ ಸುತ್ತಿನಲ್ಲಿ ಕಜಾಕಸ್ತಾನದ ಅಲೆಕ್ಸಾಂಡರ್ ಬುಬ್ಲಿಕ್ ಅವರನ್ನು ಎದುರಿಸುವರು. ಬುಬ್ಲಿಕ್ 23ನೇ ಶ್ರೇಯಾಂಕ ಗಳಿಸಿದ್ದಾರೆ.

ಶ್ವಾಂಟೆಕ್ ಮುನ್ನಡೆ: ಮಹಿಳೆಯರ ಸಿಂಗಲ್ಸ್‌ನಲ್ಲಿ, ವಿಶ್ವದ ಎರಡನೇ ಕ್ರಮಾಂಕದ ಆಟಗಾರ್ತಿ ಇಗಾ ಶ್ವಾಂಟೆಕ್ ಮಹಿಳೆರಯ ಸಿಂಗಲ್ಸ್ ಮೂರನೇ ಸುತ್ತಿಗೆ ಮುನ್ನಡೆದರು. ಅವರು 6-1, 4-6, 6-4 ರಿಂದ 66ನೇ ಕ್ರಮಾಂಕದ ಸುಝಾನ್ ಲೇಮೆನ್ಸ್ (ನೆದರ್ಲೆಂಡ್ಸ್) ಅವರನ್ನು ಸೋಲಿಸಿದರು.

2022ರ ಚಾಂಪಿಯನ್ ಶ್ವಾಂಟೆಕ್ ಅಂತಿಮ 16ರ ಘಟ್ಟಕ್ಕೆ ತಲುಪುವ ಹಾದಿಯಲ್ಲಿ 29ನೇ ಶ್ರೇಯಾಂಕದ ಅನ್ನಾ ಕಲಿನ್‌ಸ್ಕಾಯಾ (ರಷ್ಯಾ) ಅವರ ಸವಾಲನ್ನು ಎದುರಿಸಬೇಕಾಗಿದೆ.

ವಾಂಗ್ ಸಾಹಸ: ಅರ್ಹತಾ ಸುತ್ತಿನ ಮೂಲಕ ಪ್ರವೇಶ ಪಡೆದಿದ್ದ ಹಾಂಗ್‌ಕಾಂಗ್‌ನ 21 ವರ್ಷ ವಯಸ್ಸಿನ ಕೋಲ್ಮನ್ ವಾಂಗ್ ಅವರು 32ರ ಸುತ್ತನ್ನು ತಲುಪಿದರು. ವಾಂಗ್ 7-6 (7-5), 6-2, 4-6, 6-4 ರಿಂದ ಆಸ್ಟ್ರೇಲಿಯಾದ ಆ್ಯಡಂ ವಾಲ್ಟನ್ ಅವರನ್ನು ಹಿಮ್ಮೆಟ್ಟಿಸಿದರು.

16ರ ಸುತ್ತಿಗೆ ರಿಬಾಕಿನಾ: ಒಂಬತ್ತನೇ ಶ್ರೇಯಾಂಕದ ಆಟಗಾರ್ತಿ ಎಲೆನಾ ರಿಬಾಕಿನಾ ಮಹಿಳಾ ಸಿಂಗಲ್ಸ್ 16ರ ಸುತ್ತಿಗೆ ದಾಪುಗಾಲಿಟ್ಟರು. ಕಜಕಸ್ತಾನದ ಆಟಗಾರ್ತಿ, ಶುಕ್ರವಾರ ನಡೆದ ಮೂರನೇ ಸುತ್ತಿನ ಪಂದ್ಯದಲ್ಲಿ ಬ್ರಿಟನ್‌ನ ಎಮ್ಮಾ ರಾಡುಕಾನು ಅವರನ್ನು 6-1, 6-2 ರಿಂದ ಸುಲಭವಾಗಿ ಮಣಿಸಿದರು.

ಚಿಟಿಕೆ ಸುದ್ದಿ

ವೇಟ್‌ಲಿಫ್ಟಿಂಗ್: ದಿಲ್‌ಬಾಗ್‌ಗೆ ಬೆಳ್ಳಿ

ಅಹಮದಾಬಾದ್ (ಪಿಟಿಐ): ರಾಷ್ಟ್ರೀಯ ಕ್ರೀಡಾಕೂಟದ ಚಾಂಪಿಯನ್ ದಿಲ್‌ಬಾಗ್ ಸಿಂಗ್ ಅವರು ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್ ಚಾಂಪಿಯನ್ ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದರು. ಇದರೊಂದಿಗೆ ಸೀನಿಯರ್ ವಿಭಾಗದಲ್ಲಿ ಭಾರತದ ಪದಕಗಳ ಸಂಖ್ಯೆ ಏಳಕ್ಕೆ ಏರಿಕೆಯಾಗಿದೆ.

ಕೂಟದ ಐದನೇ ದಿನವಾದ ಶುಕ್ರವಾರ ಪುರುಷರ 94 ಕೆ.ಜಿ ಸ್ಪರ್ಧೆ ಯಲ್ಲಿ ದಿಲ್‌ಬಾಗ್ 342 ಕೆ.ಜಿ (153 ಕೆಜಿ ಸ್ನ್ಯಾಚ್ + 189 ಕೆ.ಜಿ ಕ್ಲೀನ್ ಮತ್ತು ಜರ್ಕ್) ಭಾರ ಎತ್ತಿ ಎರಡನೇ ಸ್ಥಾನ ಗಳಿಸಿದರು. ಮಲೇಷ್ಯಾದ ಮೊಹಮ್ಮದ್ ಶ್ಯಾಮಿ 343 ಕೆ.ಜಿ (150 + 193) ಭಾರ ಎತ್ತಿ ಚಿನ್ನಕ್ಕೆ ಕೊರಳೊಡ್ಡಿದರು.

ಮಹಿಳೆಯರ 86 ಕೆ.ಜಿ ವಿಭಾಗದಲ್ಲಿ ವಂಶಿತಾ ವರ್ಮಾ 222 ಕೆ.ಜಿ (95 + 127) ಭಾರ ಎತ್ತುವ ಮೂಲಕ ಕಂಚಿನ ಪದಕ ಗೆದ್ದರು. ಆಸ್ಟ್ರೇಲಿಯಾದ ಎಲೀನ್ ಸಿಕಮಟಾನಾ 255 ಕೆಜಿ (110 + 145) ಚಿನ್ನ ಜಯಿಸಿದರು.

ಕೋಲಾರ ಓಪನ್: ಕ್ಷಿತಿಜ್‌ಗೆ ಪ್ರಶಸ್ತಿ

ಕೋಲಾರ: ಅಂತಿಮ ಸುತ್ತಿನ ಕೊನೆಯಲ್ಲಿ ಚೇತರಿಕೆಯ ಆಟವಾಡಿದ ದೆಹಲಿಯ ಕ್ಷಿತಿಜ್ ನವೀದ್ ಕೌಲ್ ಅವರು ಶುಕ್ರವಾರ 7 ಅಂಡರ್‌ಗಳಲ್ಲಿ 65 ಸ್ಕೋರ್ ಹಾಗೂ ಒಟ್ಟು 9 ಅಂಡರ್ 279ರ ಸ್ಕೋರ್‌ನೊಡನೆ ಕೋಲಾರ ಓಪನ್ ಗಾಲ್ಫ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಝಿಯಾನ್ ಹಿಲ್ಸ್ ಗಾಲ್ಫ್ ಕೌಂಟಿಯಲ್ಲಿ ನಡೆದ ನಾಲ್ಕು ದಿನಗಳ ಟೂರ್ನಿ ₹1 ಕೋಟಿ ಬಹುಮಾನ ಮೊತ್ತ ಹೊಂದಿತ್ತು. 24 ವರ್ಷದ ಕೌಲ್ ಮೂರನೇ ದಿನದ ಕೊನೆಗೆ ಐದನೇ ಸ್ಥಾನದಲ್ಲಿದ್ದರು. ಆದರೆ ಕೊನೆಯ ದಿನ ಮೂರು ಬರ್ಡಿಗಳು, ಒಂದು ಈಗಲ್ ನೆರವಿನಿಂದ ಮುನ್ನಡೆ ಪಡೆದರು. ಅವರು ಪ್ರಶಸ್ತಿ ಜೊತೆ ₹15 ಲಕ್ಷ ನಗದು ಬಹುಮಾನ ತಮ್ಮದಾಗಿಸಿಕೊಂಡರು. ದೆಹಲಿಯ ಶೌರ್ಯ ಭಟ್ಟಾಚಾರ್ಯ ರನ್ನರ್ ಅಪ್ ಸ್ಥಾನ ಪಡೆದರು. ಗುರುಗ್ರಾಮದ ಧ್ರುವ್ ಶಿಯೊರನ್ ನಾಲ್ಕು ಅಂಡರ್ 284ರಲ್ಲಿ ಮೂರನೇ ಸ್ಥಾನ ಗಳಿಸಿದರು.

ಪ್ರೊ ಲೀಗ್‌ಗೆ ಪಾಕ್; ಭಾರತ ವಿರುದ್ಧ ಪಂದ್ಯ ತಟಸ್ಥ ತಾಣದಲ್ಲಿ

ನವದೆಹಲಿ (ಪಿಟಿಐ): ಪುರುಷರ ಎಫ್‌ಐಎಚ್ ಪ್ರೊ ಲೀಗ್ ಹಾಕಿಯ ಏಳನೇ ಆವೃತ್ತಿಯಲ್ಲಿ ಪಾಕಿಸ್ತಾನ ತಂಡ ಸೇರ್ಪಡೆಯಾಗಿದೆ. ಆದರೆ ಸಾಂಪ್ರದಾಯಿಕ ತವರು– ಎದುರಾಳಿ ದೇಶದಲ್ಲಿ ಆಡುವ ಮಾದರಿಯ ಬದಲು ಭಾರತ ತಂಡವನ್ನು ಅದು ತಟಸ್ಥ ತಾಣದಲ್ಲಿ ಎದುರಿಸಲಿದೆ.

ಭಾರತ, ಪಾಕಿಸ್ತಾನ ತಂಡಗಳ ಜೊತೆ ಅರ್ಜೆಂಟೀನಾ, ಆಸ್ಟ್ರೇಲಿಯಾ, ಬೆಲ್ಜಿಯಂ, ಇಂಗ್ಲೆಂಡ್, ಜರ್ಮನಿ, ನೆದರ್ಲೆಂಡ್ಸ್ ಮತ್ತು ಸ್ಪೇನ್ ತಂಡಗಳೂ ಮುಂಬರುವ ಋತುವಿನ ಪ್ರೊ ಲೀಗ್‌ನಲ್ಲಿ ಆಡಲಿವೆ. ವೇಳಾಪಟ್ಟಿ ಅಂತಿಮಗೊಳ್ಳಬೇಕಿದೆ.

ಪಾಕಿಸ್ತಾನ ತಂಡ ಎಫ್‌ಐಎಚ್ ಹಾಕಿ ನೇಷನ್ಸ್ ಕಪ್ ಮೂಲಕ ಅರ್ಹತೆ ಪಡೆಯಿತು.

ರಾಷ್ಟ್ರೀಯ ಹಾಕಿ ತಂಡದ ಮಾಜಿ ಗೋಲ್‌ಕೀಪರ್ ಎ.ಬಿ.ಸುಬ್ಬಯ್ಯ

ಭಾರತ ತಂಡದಲ್ಲಿ ಮತ್ತೆ ರಾಜ್ಯದ ಪ್ರತಿಭೆಗಳ 'ಆಟ'

ಪ್ರಜಾವಾಣಿ ವಾರ್ತೆ



ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿರುವ ಕೆಒಎ ಭವನದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ಮಾಜಿ ಅಂತರರಾಷ್ಟ್ರೀಯ ಕ್ರೀಡಾಪಟುಗಳನ್ನು ಗೌರವಿಸಲಾಯಿತು (ಎಡದಿಂದ) ರಾಜನ್ (ಬ್ಯಾಸ್ಕೆಟ್‌ಬಾಲ್), ಎಚ್.ಎಂ. ಜ್ಯೋತಿ (ಅಥ್ಲೀಟ್), ರೀತ್ ಅಬ್ರಾಹಂ (ಅಥ್ಲೀಟ್), ಉದಯ್ ಕೆ ಪ್ರಭು (ಅಥ್ಲೀಟ್), ಕೆ. ಗೋವಿಂದರಾಜ್ (ಕೆಒಎ ಅಧ್ಯಕ್ಷ), ಟಿ. ಅನಂತರಾಜು (ಕೆಒಎ ಮಹಾಪ್ರಧಾನ ಕಾರ್ಯದರ್ಶಿ)



ಎ.ಬಿ. ಸುಬ್ಬಯ್ಯ

ಬೆಂಗಳೂರು: 'ನಮ್ಮ ರಾಜ್ಯದ ಜೂನಿಯರ್ ಹಾಕಿ ವಿಭಾಗದಲ್ಲಿ ಉತ್ತಮ ಆಟಗಾರರು ಇದ್ದಾರೆ. ಇನ್ನೂ ಕೆಲವೇ ವರ್ಷಗಳಲ್ಲಿ ಭಾರತ ತಂಡದಲ್ಲಿ ನಮ್ಮ ರಾಜ್ಯದ ಕನಿಷ್ಠ ಮೂವರು ಆಟಗಾರರು ಆಡುವುದು ಖಚಿತ'

ಭಾರತ ಹಾಕಿ ತಂಡದ ಮಾಜಿ ಆಟಗಾರ ಮತ್ತು ಹಾಕಿ ಕರ್ನಾಟಕ ಮಹಾ ಪ್ರಧಾನ ಕಾರ್ಯದರ್ಶಿ ಎ.ಬಿ. ಸುಬ್ಬಯ್ಯ ಅವರ ವಿಶ್ವಾಸದ ಮಾತುಗಳಿವು. ಶುಕ್ರವಾರ ಕರ್ನಾಟಕ ಒಲಿಂಪಿಕ್ ಸಂಸ್ಥೆಯಲ್ಲಿ ನಡೆದ ರಾಷ್ಟ್ರೀಯ ಕ್ರೀಡಾ ದಿನಾಚರಣೆಯಲ್ಲಿ ಅವರು ಪಾಲ್ಗೊಂಡಿದ್ದರು. ಸಮಾರಂಭದ ನಂತರ 'ಪ್ರಜಾವಾಣಿ' ಯೊಂದಿಗೆ ಅವರು ಮಾತನಾಡಿದರು.

ಇತ್ತೀಚಿನ ವರ್ಷಗಳಲ್ಲಿ ಭಾರತ ತಂಡವನ್ನು ಕರ್ನಾಟಕದಿಂದ ಪ್ರತಿನಿಧಿಸುವವರ ಸಂಖ್ಯೆ ಕಡಿಮೆಯಾಗಿರುವುದರ ಕಾರಣವೇನು ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಕೊಡಗು ಭಾಗದಲ್ಲಿ ಸೌಲಭ್ಯಗಳಿವೆ. ಆದರೆ ನುರಿತ ತರಬೇತುದಾರರ ಕೊರತೆ ಇದೆ. ಬೇಸಿಗೆ ಶಿಬಿರ ಮತ್ತು ಕ್ಯಾಂಪ್‌ಗಳಿದ್ದಾಗ ಹಲವು ಮಕ್ಕಳು ಭಾಗವಹಿಸುತ್ತಾರೆ. ಆದರೆ ಅವರಿಗೆ ಸರಿಯಾದ ಮಾರ್ಗದರ್ಶನ ನೀಡುವುದು ಅಗತ್ಯ. ಅದಕ್ಕಾಗಿ ಉತ್ತಮ ಕೋಚ್‌ಗಳು ಬೇಕು. ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೇವೆ' ಎಂದರು.

'ಉತ್ತರ ಕರ್ನಾಟಕ ಭಾಗದಿಂದಲೂ ಉತ್ತಮ ಆಟಗಾರರು ರಾಜ್ಯ ತಂಡವನ್ನು ಪ್ರತಿನಿಧಿಸಿದ್ದಾರೆ. ಈಚೆಗೆ ನಡೆದ ರಾಷ್ಟ್ರೀಯ ಗೇಮ್ಸ್‌ನಲ್ಲಿ ಕೂಡ ಆಡಿದ್ದರು. ಅವರಲ್ಲಿ ಕೆಲವು ಆಟಗಾರರು ಸಾರ್ವಜನಿಕ ಸಂಸ್ಥೆಗಳಲ್ಲಿ ಉದ್ಯೋಗ ಕೂಡ ಪಡೆದಿದ್ದಾರೆ' ಎಂದರು.

'ರಾಜ್ಯದಲ್ಲಿರುವ ಮೂಲಸೌಲಭ್ಯಗಳ ಬಗ್ಗೆ ನಮಗೆ ಅತೃಪ್ತಿ ಇದೆ. ಅದರಲ್ಲೂ ಬೆಂಗಳೂರಿನಲ್ಲಿರುವುದು ಒಂದೇ ಮೈದಾನ. ಅಲ್ಲಿ ಯಾವಾಗಲೂ ದಟ್ಟಣೆ ಹೆಚ್ಚಾಗಿರುತ್ತದೆ. ನಗರದಲ್ಲಿ ದೂರ ಅಂತರ ಪ್ರಯಾಣಿಸಿ ಕ್ರೀಡಾಂಗಣಕ್ಕೆ ಬರುವುದು ಕೂಡ ಕಷ್ಟ. ಒಡಿಶಾ, ಮಧ್ಯ ಪ್ರದೇಶ, ಪಂಜಾಬ್ ರಾಜ್ಯಗಳಲ್ಲಿರುವಂತಹ ಸೌಲಭ್ಯಗಳು ಇಲ್ಲಿ ಇಲ್ಲ. ಅಲ್ಲಿಯ ಸ್ಪೆಷಲ್ ಏರಿಯಾ ಗೇಮ್ಸ್‌ನಂತಹ ಯೋಜನೆಗಳೂ ಇಲ್ಲಿ ಬರಬೇಕು. ಗ್ರಾಮೀಣ ಮತ್ತು ಗುಡ್ಡಗಾಡು ಪ್ರದೇಶದಲ್ಲಿರುವ ಪ್ರತಿಭಾವಂತ ಆಟಗಾರರಿಗೆ ಅವಕಾಶ ನೀಡಬೇಕು. ಅವರಿಗೆ ತರಬೇತಿ ಮತ್ತಿತರ ಸೌಲಭ್ಯಗಳನ್ನು ಕೊಡಬೇಕು. ಪ್ರತಿಯೊಂದು ಜಿಲ್ಲಾ ಕೇಂದ್ರಕ್ಕೂ ಕ್ರೀಡಾಂಗಣ ಇರಬೇಕು. ಹಾಕಿ ಸೇರಿದಂತೆ ಎಲ್ಲ ಕ್ರೀಡೆಗಳಿಗೂ ಅನುಕೂಲವಾಗಬೇಕು' ಎಂದು ಏಷ್ಯನ್ ಗೇಮ್ಸ್ ಪದಕ ವಿಜೇತರೂ ಆಗಿರುವ ಸುಬ್ಬಯ್ಯ ಹೇಳಿದರು.

'ಈ ಹಿಂದೆ ಎಚ್‌ಎಎಲ್, ಬಿಇಎಲ್, ಬೆಮೆಲ್, ಸಿಐಎಲ್ ಮತ್ತು ಬ್ಯಾಂಕ್ ತಂಡಗಳು ಇದ್ದವು. ಆದ್ದರಿಂದ ಹೆಚ್ಚು ಟೂರ್ನಿಗಳು ನಡೆಯುತ್ತಿದ್ದವು. ಉದ್ಯೋಗಾವಕಾಶಗಳೂ ಹೆಚ್ಚಿದ್ದವು. ಆ ಸಂಸ್ಥೆಗಳಲ್ಲಿ ಈಗ ತಂಡಗಳಿಲ್ಲ. ಕೇಂದ್ರದ ಕೆಲವು ಸಂಸ್ಥೆಗಳು ಮತ್ತು ರಾಜ್ಯದ ಕೆಲವು ಇಲಾಖೆಗಳಲ್ಲಿ ಕ್ರೀಡಾಪಟುಗಳಿಗೆ ಉದ್ಯೋಗಾವಕಾಶಗಳಿವೆ. ಆದರೆ ಅದು ಸಾಲದು' ಎನ್ನುತ್ತಾರೆ.

ನೇಷನ್ಸ್ ಕಪ್ ಭಾರತ ಶುಭಾರಂಭ

ಹಿಸೋರ್ (ತಜಕಿಸ್ತಾನ) (ಪಿಟಿಐ): ನೂತನ ಕೋಚ್ ಖಾಲಿದ್ ಜಮೀಲ್ ಮಾರ್ಗದರ್ಶನದಲ್ಲಿ ಭಾರತದ ಪುರುಷರ ತಂಡವು ಶುಕ್ರವಾರ ನಡೆದ ಸಿಎಎಫ್‌ಎ ನೇಷನ್ಸ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ತನಗಿಂತ ಉನ್ನತ ರ‍್ಯಾಂಕ್ ಹೊಂದಿರುವ ತಜಕಿಸ್ತಾನ ತಂಡವನ್ನು ಮಣಿಸಿ ಶುಭಾರಂಭ ಮಾಡಿತು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 133ನೇ ಸ್ಥಾನದಲ್ಲಿರುವ ಭಾರತ 2–1 ಗೋಲುಗಳಿಂದ ತಜಕಿಸ್ತಾನ ತಂಡಕ್ಕೆ ಆಘಾತ ನೀಡಿತು. ಆತಿಥೇಯ ತಂಡವು 106ನೇ ಕ್ರಮಾಂಕ ಹೊಂದಿದೆ. ಭಾರತದ ಗೆಲುವಿನಲ್ಲಿ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ಮಹತ್ವದ ಪಾತ್ರ ವಹಿಸಿದರು. ಡಿಫೆಂಡರ್ ಅನ್ವರ್ ಅಲಿ (5ನೇ ನಿಮಿಷ) ಮತ್ತು ಸಂದೇಶ್ ಜಿಂಗನ್ (13ನೇ) ಭಾರತದ ಪರ ಗೋಲು ಗಳಿಸಿದರು.

ಜಮೀಲ್ ಪಾಲಿಗೆ ಈ ಟೂರ್ನಿ ಮೊದಲ ಸವಾಲಾಗಿದೆ. 'ಬಿ' ಗುಂಪಿನಲ್ಲಿರುವ ಭಾರತ ತಂಡವು ಸೆ.1ರಂದು ಇರಾನ್, 4ರಂದು ಅಫ್ಗಾನಿಸ್ತಾನ ತಂಡಗಳನ್ನು ಎದುರಿಸಲಿದೆ.

ವಿಶ್ವ ಬ್ಯಾಡ್ಮಿಂಟನ್ ಟೂರ್ನಿ: ಕ್ವಾರ್ಟರ್‌ನಲ್ಲಿ ಸಿಂಧುಗೆ ಸೋಲು



ಭಾರತದ ಪಿ.ವಿ. ಸಿಂಧು

ಪ್ಯಾರಿಸ್ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ದಾಖಲೆಯ ಆರನೇ ಪದಕದ ನಿರೀಕ್ಷೆಯಲ್ಲಿದ್ದ ಭಾರತದ ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಅವರಿಗೆ ಶುಕ್ರವಾರ ಕ್ವಾರ್ಟರ್ ಫೈನಲ್‌ನಲ್ಲಿ ನಿರಾಸೆಯಾಯಿತು. ಮೂರು ಗೇಮ್‌ಗಳ ರೋಚಕ ಹೋರಾಟದಲ್ಲಿ ಇಂಡೊನೇಷ್ಯಾದ ಪುತ್ರಿ ಕುಸುಮಾ ವರ್ದಾನಿ ಅವರಿಗೆ ಮಣಿದರು.

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು 14-21, 21-13, 16-21ರಿಂದ ವಿಶ್ವದ ಒಂಬತ್ತನೇ ಕ್ರಮಾಂಕದ ವರ್ದಾನಿ ಅವರಿಗೆ ಶರಣಾದರು. ಈ ಸವಾಲಿನಲ್ಲಿ ಹೈದರಾಬಾದ್‌ನ ಆಟಗಾರ್ತಿ ಮೇಲುಗೈ ಸಾಧಿಸುತ್ತಿದ್ದರೆ ಆರನೇ ಪದಕ ಖಚಿತವಾಗುತ್ತಿತ್ತು. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್‌ನಲ್ಲಿ ಸೋತವರಿಗೂ ಕಂಚಿನ ಪದಕ ದೊರೆಯುತ್ತದೆ. ಮಹಿಳೆಯ ಸಿಂಗಲ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದ ವರ್ದಾನಿ ಅವರಿಗೆ ಚೊಚ್ಚಲ ಪದಕ ಖಾತರಿಯಾಯಿತು.

15ನೇ ಕ್ರಮಾಂಕದ ಸಿಂಧು ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ವಿಶ್ವದ ಎರಡನೇ ಕ್ರಮಾಂಕದ ವಾಂಗ್ ಝಿ ಯಿ (ಚೀನಾ) ಅವರಿಗೆ ಆಘಾತ ನೀಡಿ ಆರನೇ ಬಾರಿ 'ಪೋಡಿಯಂ ಫಿನಿಷ್' ಮಾಡುವ ಛಲದಲ್ಲಿದ್ದರು. ಅವರು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ 2013 ಮತ್ತು 14ರಲ್ಲಿ ಕಂಚು ಹಾಗೂ 2017 ಮತ್ತು 18ರಲ್ಲಿ ಬೆಳ್ಳಿ ಗೆದ್ದಿದ್ದರು. 2019ರಲ್ಲಿ ಬಾಸೆಲ್‌ನಲ್ಲಿ ನಡೆದ ಕೂಟದಲ್ಲಿ ಐತಿಹಾಸಿಕ ಚಿನ್ನದ ಸಾಧನೆ ಮೆರೆದಿದ್ದರು.

ಇದಕ್ಕೂ ಮುನ್ನ ಮಿಶ್ರ ಡಬಲ್ಸ್‌ನಲ್ಲಿ ಧ್ರುವ್ ಕಪಿಲಾ ಮತ್ತು ತನಿಶಾ ಕ್ರಾಸ್ಟೊ ಜೋಡಿಯ ಅಭಿಯಾನಕ್ಕೂ ಕ್ವಾರ್ಟರ್ ಫೈನಲ್‌ನಲ್ಲಿ ತೆರೆಬಿತ್ತು. ಚೊಚ್ಚಲ ಪದಕದ ಪ್ರಯತ್ನದಲ್ಲಿದ್ದ ಭಾರತದ ಜೋಡಿಯು 15-21 13-21ರ ನೇರ ಗೇಮ್‌ಗಳಲ್ಲಿ ವಿಶ್ವದ ನಾಲ್ಕನೇ ಕ್ರಮಾಂಕದ ಮಲೇಷ್ಯಾದ ಚೆನ್ ಟ್ಯಾಂಗ್ ಜೀ ಮತ್ತು ತೋ ಈ ವೀ ಅವರಿಗೆ ಸೋತರು. ಭಾರತದ ಜೋಡಿಯು 16ರ ಘಟ್ಟದ ಪಂದ್ಯದಲ್ಲಿ 15-21,13-21ರಿಂದ ವಿಶ್ವದ ಐದನೇ ಕ್ರಮಾಂಕದ ಟ್ಯಾಂಗ್ ಚುನ್ ಮ್ಯಾನ್ ಮತ್ತು ತ್ಸೆ ಯಿಂಗ್ ಸೂಟ್ (ಹಾಂಗ್‌ಕಾಂಗ್) ಅವರಿಗೆ ಆಘಾತ ನೀಡಿತ್ತು.

ದುಲೀಪ್ ಟ್ರೋಫಿ: ಅಕೀಬ್ ಬಿರುಗಾಳಿ ದಾಳಿ

ಪ್ರಜಾವಾಣಿ ವಾರ್ತೆ



ಅಕೀಬ್ ನಬಿ

ಬೆಂಗಳೂರು: 'ಹ್ಯಾಟ್ರಿಕ್' ಸಾಧನೆ ಮಾಡಿದ ಕಾಶ್ಮೀರ ಕಣಿವೆಯ ವೇಗಿ ಅಕೀಬ್ ನಬಿ ಧಾರ್ ಬಿರುಗಾಳಿ ದಾಳಿಯ ಮುಂದೆ ಪೂರ್ವ ವಲಯ ತಂಡವು ದೂಳೀಪಟವಾಯಿತು. ಉತ್ತರ ವಲಯ ತಂಡವು ಇಲ್ಲಿ ನಡೆಯುತ್ತಿರುವ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಮೊದಲ ಇನಿಂಗ್ಸ್‌ನಲ್ಲಿ ಭಾರಿ ಮುನ್ನಡೆ ಗಳಿಸಿತು.

ನಗರದ ಹೊರವಲಯದಲ್ಲಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಮೈದಾನದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನದಾಟದಲ್ಲಿ 175 ರನ್‌ಗಳ ದೊಡ್ಡ ಮುನ್ನಡೆಯನ್ನು ಉತ್ತರ ವಲಯ ತಂಡವು ಗಳಿಸಿತು. ಮೊದಲು ಬ್ಯಾಟಿಂಗ್ ಮಾಡಿದ್ದ ಉತ್ತರ ವಲಯ ತಂಡವು 93.2 ಓವರ್‌ಗಳಲ್ಲಿ 405 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಶುಕ್ರವಾರ ಪೂರ್ವ ವಲಯ ತಂಡವು 56.1 ಓವರ್‌ಗಳಲ್ಲಿ 230 ರನ್‌ಗಳಿಗೆ ಕುಸಿಯಿತು. ಅಕೀಬ್ (28ಕ್ಕೆ5) ಅವರು ತಮ್ಮ ಬಳಗದ ಮುನ್ನಡೆಗೆ ಕಾರಣರಾದರು. ಪೂರ್ವ ತಂಡದ ವಿರಾಟ್ ಸಿಂಗ್ (69; 102ಎ, 4X7, 6X2) ಅರ್ಧಶತಕ ಹೊಡೆದರು.

ಆದಿತ್ಯಗೆ ಮೂರು ವಿಕೆಟ್: ಕೇಂದ್ರ ವಲಯ ತಂಡದ ಆದಿತ್ಯ ಠಾಕರೆ (23ಕ್ಕೆ3) ಮತ್ತು ಹರ್ಷ ದುಬೆ (19ಕ್ಕೆ2) ಅವರ ಉತ್ತಮ ಬೌಲಿಂಗ್ ಮುಂದೆ ಈಶಾನ್ಯ ವಲಯ ತಂಡದ ಬ್ಯಾಟರ್‌ಗಳು ತಡಬಡಾಯಿಸಿದರು.

ದಾನೀಶ್ ಮಾಳೆವರ್ (ಗಾಯಗೊಂಡು ನಿವೃತ್ತಿ 203) ದ್ವಿಶತಕ ಮತ್ತು ಯಶ್ ರಾಥೋಡ್ (ಔಟಾಗದೇ 87) ಅವರು ಉತ್ತಮ ಬ್ಯಾಟಿಂಗ್ ಮಾಡಿದರು. ಅದರಿಂದಾಗಿ ತಂಡವು 102 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 532 ರನ್‌ಗಳಿಗೆ ಡಿಕ್ಲೇರ್ ಮಾಡಿಕೊಂಡಿತು. ದಿನದಾಟದ ಕೊನೆಗೆ ಈಶಾನ್ಯ ವಲಯವು 65 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 168 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಉತ್ತರ ವಲಯ: 93.2 ಓವರ್‌ಗಳಲ್ಲಿ 405(ಕನ್ಹಯಾ ವಾಧ್ವಾನ್ 76, ಮಯಂಕ್ ದಾಗರ್ 28, ಆಕಿಬ್ ನಬಿ 44, ಅರ್ಷದೀಪ್ ಸಿಂಗ್ ಔಟಾಗದೇ 12, ಮನೀಷಿ 111ಕ್ಕೆ6) ಪೂರ್ವ ವಲಯ: 56.1 ಓವರ್‌ಗಳಲ್ಲಿ 230 (ಉತ್ಕರ್ಷ್ ಸಿಂಗ್ 38, ರಿಯಾನ್ ಪರಾಗ್ 39, ವಿರಾಟ್ ಸಿಂಗ್ 69, ಕುಮಾರ ಕುಶಾಗ್ರ 29, ಅಕಿಬ್ ನಬಿ ಧಾರ್ 28ಕ್ಕೆ5, ಹರ್ಷಿತ್ ರಾಣಾ 56ಕ್ಕೆ2)

ಮೊದಲ ಇನಿಂಗ್ಸ್: ಕೇಂದ್ರ ವಲಯ: 102 ಓವರ್‌ಗಳಲ್ಲಿ 4ಕ್ಕೆ532 ಡಿಕ್ಲೇರ್ಡ್ (ದಾನೀಶ್ ಮಾಳೆವರ್ 203, ಯಶ್ ರಾಥೋಡ್ ಔಟಾಗದೇ 87, ಶುಭಂ ಶರ್ಮಾ 34, ಆಕಾಶ್ ಚೌಧರಿ 103ಕ್ಕೆ2) ಈಶಾನ್ಯ ವಲಯ: 65 ಓವರ್‌ಗಳಲ್ಲಿ 7ಕ್ಕೆ168 (ಕರ್ಣಜೀತ್ ಯಮನಮ್ 48, ಆಶಿಶ್ ಥಾಪಾ 35, ಅಂಕುರ್ ಮಲಿಕ್ ಬ್ಯಾಟಿಂಗ್ 31, ಆದಿತ್ಯ ಠಾಕರೆ 23ಕ್ಕೆ3, ಹರ್ಷ ದುಬೆ 19ಕ್ಕೆ2)

ಕಾಮನ್‌ವೆಲ್ತ್ ಗೇಮ್ಸ್ ಆತಿಥ್ಯ: ಭಾರತ ಬಿಡ್ ಸಲ್ಲಿಕೆ



ಹರ್ಷ ಸಾಂಘವಿ

ಲಂಡನ್ (ಪಿಟಿಐ): ಭಾರತವು 2030ರ ಕಾಮನ್‌ವೆಲ್ತ್ ಕ್ರೀಡಾಕೂಟವನ್ನು ಆಯೋಜಿಸುವ ಕುರಿತು ಪ್ರಸ್ತಾವವನ್ನು ಶುಕ್ರವಾರ ಅಧಿಕೃತವಾಗಿ ಸಲ್ಲಿಸಿದೆ.

ಗುಜರಾತ್ ಸರ್ಕಾರದ ಕ್ರೀಡಾ ಸಚಿವ ಹರ್ಷ ಸಾಂಘವಿ ಅವರು ಲಂಡನ್‌ನಲ್ಲಿ ಕಾಮನ್‌ವೆಲ್ತ್ ಸ್ಪೋರ್ಟ್‌ಗೆ ಭಾರತದ ಪ್ರಸ್ತಾವವನ್ನು ಸಲ್ಲಿಸಿದರು.

ಭಾರತದ ಹೈಕಮಿಷನ್‌ನಲ್ಲಿ ಮಾತನಾಡಿದ ಸಾಂಘವಿ, '2030ಕ್ಕೆ 100 ವರ್ಷ ಪೂರೈಸಲಿರುವ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಅಹಮದಾಬಾದ್ ಅನ್ನು ಆತಿಥೇಯ ನಗರವಾಗಿ ಬಿಡ್ ಮಾಡಲಾಗಿದೆ' ಎಂದರು.

ಪ್ರೊ ಕಬಡ್ಡಿ ಲೀಗ್: ಪುಣೇರಿ ಪಲ್ಟನ್ ತಂಡಕ್ಕೆ ರೋಚಕ ಗೆಲುವು

ಟೈಬ್ರೇಕರ್‌ನಲ್ಲಿ ಬೆಂಗಳೂರು ಬುಲ್ಸ್‌ಗೆ ನಿರಾಸೆ

ಪ್ರಜಾವಾಣಿ ವಾರ್ತೆ

ವಿಶಾಖಪಟ್ಟಣ: ಬೆಂಗಳೂರು ಬುಲ್ಸ್ ತಂಡವು ಶುಕ್ರವಾರ ಆರಂಭವಾದ ಪ್ರೊ ಕಬಡ್ಡಿ ಟೂರ್ನಿಯ ಪಂದ್ಯದಲ್ಲಿ 'ಗೋಲ್ಡನ್ ರೇಡ್' ನಂತರ ಪುಣೇರಿ ಪಲ್ಟನ್ ಎದುರು ನಿರಾಸೆ ಅನುಭವಿಸಿತು.

ನಿಗದಿತ ಅವಧಿಯಲ್ಲಿ ಉಭಯ ತಂಡಗಳು 32–32 ಅಂಕಗಳಿಂದ ಸಮಬಲ ಸಾಧಿಸಿದವು. ನಂತರ ನಡೆದ 'ಗೋಲ್ಡನ್ ರೇಡ್' ಟೈಬ್ರೇಕರ್‌ನಲ್ಲಿ ಪುಣೇರಿ 6–4ರಿಂದ ಗೆಲುವು ಸಾಧಿಸಿತು. ಈ ಹಿಂದೆ ಪ್ಲೇ ಆಫ್ ಪಂದ್ಯಗಳಿಗೆ ಮಾತ್ರ ಸೀಮಿತವಾಗಿದ್ದ 'ಗೋಲ್ಡನ್ ರೇಡ್' ನಿಯಮವನ್ನು ಈ ಬಾರಿ ಲೀಗ್ ಹಂತಕ್ಕೂ ವಿಸ್ತರಿಸಲಾಗಿದೆ.

ಅನುಭವಿ ಕೋಚ್ ಬಿ.ಸಿ. ರಮೇಶ್ ಅವರ ಗರಡಿಯಲ್ಲಿ ಪಳಗಿರುವ ಬುಲ್ಸ್ ಆಟಗಾರರು ರೇಡಿಂಗ್ ಮತ್ತು ಟ್ಯಾಕಲ್ ಎರಡರಲ್ಲಿ ಮಿಂಚಿದರೂ ಪದೇ ಪದೇ ಸಮನ್ವಯ ಕಾಯ್ದುಕೊಳ್ಳಲು ಎಡವಿದರು. ಬುಲ್ಸ್ ರೇಡರ್ ಆಕಾಶ್ ಶಿಂದೆ (12) ಸೂಪರ್ ಟೆನ್ ಸಾಧನೆ ಮಾಡಿದರು. ಅವರಿಗೆ ಆಶಿಶ್ ಮಲಿಕ್ (8) ಸಾಥ್ ನೀಡಿದರು. ಪುಣೇರಿ ತಂಡದ ಗೆಲುವಿನಲ್ಲಿ ಆದಿತ್ಯ ಶಿಂದೆ (9) ಮತ್ತು ಪಂಕಜ್ ಮೋಹಿತೆ (6) ಪ್ರಮುಖ ಪಾತ್ರ ವಹಿಸಿದರು.



'ಸೂಪರ್ ಟೆನ್' ಸಾಧನೆ ಮಾಡಿದ ಬುಲ್ಸ್ ತಂಡದ ಆಕಾಶ್ ಶಿಂದೆ ಎಕ್ಸ್ ಚಿತ್ರ

ತಲೈವಾಸ್‌ಗೆ ಮಣಿದ ಟೈಟನ್ಸ್

ಅರ್ಜುನ್ ದೇಸ್ವಾಲ್ ಮತ್ತು ಪವನ್ ಶೆರಾವತ್ ಅವರ ಚುರುಕಾದ ದಾಳಿಯ ಬಲದಿಂದ ತಮಿಳ್ ತಲೈವಾಸ್ ತಂಡವು ಶುಕ್ರವಾರ ಪ್ರೊ ಕಬಡ್ಡಿ ಟೂರ್ನಿಯ ಉದ್ಘಾಟನೆ ಪಂದ್ಯದಲ್ಲಿ ರೋಚಕ ಜಯ ಸಾಧಿಸಿತು. ಆತಿಥೇಯ ತೆಲುಗು ಟೈಟನ್ಸ್ ಸೋಲಿನ ಕಹಿಯುಂಡಿತು.

ವಿಶ್ವನಾಥ್ ಸ್ಪೋರ್ಟ್ಸ್ ಕ್ಲಬ್ ಒಳಾಂಗಣದಲ್ಲಿ ನಡೆದ ಪಂದ್ಯ ದಲ್ಲಿ; ತಮಿಳ್ ತಲೈವಾಸ್ ತಂಡವು 38–35ರಿಂದ ತೆಲುಗು ಟೈಟನ್ಸ್ ವಿರುದ್ಧ ಜಯಭೇರಿ ಬಾರಿಸಿತು.

ತಮಿಳ್ ತಲೈವಾಸ್ ತಂಡದ ರೇಡರ್ ಅರ್ಜುನ್ ದೇಸ್ವಾಲ್ ಅವರು 12 ಅಂಕಗಳನ್ನು ತಮ್ಮ ತಂಡದ ಖಾತೆಗೆ ತಂದುಕೊಟ್ಟರು. ಸ್ಟಾರ್ ಆಟಗಾರ, ನಾಯಕ ಪವನ್ ಶೇರಾವತ್ ಕೂಡ 9 ಅಂಕಗಳನ್ನು ಗಳಿಸಿ ತಂಡದ ಬಲ ಹೆಚ್ಚಿಸಿದರು.

ಇಂದಿನ ಪಂದ್ಯಗಳು

ತೆಲುಗು ಟೈಟನ್ಸ್–ಯುಪಿ ಯೋಧಾಸ್ (ರಾತ್ರಿ 8)

ಯು ಮುಂಬಾ– ಗುಜರಾತ್ ಜೈಂಟ್ಸ್ (ರಾತ್ರಿ 9)

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

RERA No. PRM/KA/RERA/1251/310/PR/030125/007344

RAJESHWARI AASHIRVAD
Develop | Build | Sale

AASHIRVAD SIDDHI PRIYA
your dreams! our goal...

BMRDA & RERA APPROVED

A-KHATA ನಿವೇಶನಗಳು

ದೊಡ್ಡಆಲದ ಮರದ ಹತ್ತಿರ

ಮೈಸೂರು ರಸ್ತೆ

₹2699/- PER SQFT

Few Sites Only



- ✓ ನೋಂದಣಿಗೆ ಮತ್ತು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ
- ✓ ಬ್ಯಾಂಕಿನಿಂದ ಸಾಲ ಸೌಲಭ್ಯವಿದೆ
- ✓ ಎಲ್ಲಾ ಕಾನೂನಾತ್ಮಕ ದಾಖಲೆಗಳನ್ನು ಹೊಂದಿದೆ
- ✓ ಲೇಔಟ್ ಅಭಿವೃದ್ಧಿಯಾಗಿದೆ

Layout Video Scan Here

📞 6399889911 www.aashirvad.net

SITE DIMENSIONS: 30X35, 30X40 ODD DIMENSIONS

ಬೆಂಗಳೂರಿನಲ್ಲಿ ಉತ್ತಮ ನಿವೇಶನಗಳನ್ನು ಹೊಂದಲು ಚಿನ್ನದಂತಹ ಅವಕಾಶ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ದಿಂದ ಅನುಮೋದನೆ ಆಗಿರುವ

BDA APPROVED NO. BDA/TPM/PRL-29/24-25/1627/25-26

ನಿಮ್ಮ ಕನಸಿನ ನಿವೇಶನಗಳು

ನಾಡಪ್ರಭು ಕೆಂಪೇಗೌಡ ಬಿಡಿಎ

ಬಡಾವಣೆಗೆ ಹೊಂದಿಕೊಂಡಿದೆ

320 ಅಡಿ ರಸ್ತೆಗೆ ಹತ್ತಿರವಿದೆ

ಕನೆಕ್ಟಿವಿಟಿ : ಮೈಸೂರು ರಸ್ತೆ, ಚಲ್ಲಘಟ್ಟ ಮೆಟ್ರೋ ನಿಲ್ದಾಣಕ್ಕೆ 1 ಕಿ.ಮೀ.
ಕೆಂಗೇರಿ ರೈಲ್ವೆ ಸ್ಟೇಷನ್ ಮತ್ತು ಬಸ್ ನಿಲ್ದಾಣಕ್ಕೆ 3 ಕಿ.ಮೀ.

BDA APPROVED PLOTS



ನಿವೇಶನದ ಅಳತೆಗಳು : 20x30, 30x40, 40x60

ನೋಂದಣಿಗೆ ಮತ್ತು ಮನೆ ಕಟ್ಟಲು ಸಿದ್ಧವಾಗಿದೆ, ಸೈಟು ಖರೀದಿಸಲು ಬ್ಯಾಂಕ್ ಸಾಲ ಸೌಲಭ್ಯವಿದೆ

DMR PROPERTIES

ಸೈಟ್ ನೋಡಲು ಕರೆ ಮಾಡಿ: 9036558777-9916374836

ಶರಣ್ಯ ಫಾರ್ಮ್ಸ್
Sharanya Farms
Create your own Sunshine

Marketing Partner
MS REALTIES
A TRADITION OF TRUST

ನಿಮ್ಮ ಕನಸಿನ ತೋಟದ ಮನೆ ನನಸು ಮಾಡುವುದೇ ನಮ್ಮ ಆದ್ಯತೆ

Sharanya Hillview Farms

Phase- II

51 acre fully gated community

"Experience Luxury Amidst Nature" - Dive into our ready Swimming Pool while anticipating upcoming Resort Amenities

ಶ್ರೀಗಂಧದ ಮರದೊಂದಿಗೆ ನಿಮ್ಮ ಹಣವನ್ನು ಬೆಳೆಸಿ

Bengaluru-Mysuru Road

RESORT: Club House, Restaurant, Cottages

ಫಾರ್ಮ್ ಲ್ಯಾಂಡ್ ಖರೀದಿಸಿ - ನಿರ್ವಹಣೆ ನಮ್ಮದು, ಲಾಭ ನಿಮ್ಮದು









*Actual Pictures of farmhouse

*T&C Apply

ಒಂದು ಹೂಡಿಕೆಯಿಂದ ನಾಲ್ಕು ಲಾಭಗಳು!

- ಫಾರಂ ಲ್ಯಾಂಡ್ ಖರೀದಿಸಿ ನಿಮಗೂ ಮತ್ತು ನಿಮ್ಮ ಕುಟುಂಬದವರಿಗೆ ರೆಸಾರ್ಟ್ ಸೌಲಭ್ಯ ಉಚಿತವಾಗಿ ಪಡೆಯಿರಿ.
- ಇಲ್ಲಿನ ಫಲವತ್ತಾದ ಭೂಮಿಯಲ್ಲಿ ಶ್ರೀಗಂಧ ಮರಗಳ ಅಧಿಕ ಲಾಭ ಪಡೆಯಿರಿ.
- ನಿಮ್ಮ ಫಾರಂ ಹೌಸ್ ಅನ್ನು ಬಾಡಿಗೆಗೆ ನೀಡುವುದರ ಮೂಲಕ ಪ್ರತಿ ತಿಂಗಳು ಆದಾಯ ಪಡೆಯಿರಿ.
- ಇಂದಿನ ನಿಮ್ಮ ಹೂಡಿಕೆಯ ಮೇಲೆ ಮುಂದಿನ ದಿನಗಳಲ್ಲಿ ದುಪ್ಪಟ್ಟು ಲಾಭ ಪಡೆಯಿರಿ ಹಾಗೂ ಒಂದು ಹೂಡಿಕೆಯಿಂದ ಇನ್ನು ಅನೇಕ ಲಾಭಗಳನ್ನು ಪಡೆಯಿರಿ.

www.sharanyafarms.com

ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ:

70 26 26 22 33

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER ಕ್ಲಾಸಿಫೈಡ್ಸ್

AVAILABLE FOR RENT

5000 sqft ground floor 68 feet Road facing Restaurant/Hotel Building with sufficient front side parking available for rent on Jigani Bommasandra Link Road at Bomsandra near to Metro Station

4000 sqft Industrial Shed 30 feet roof height crane provision shed 120 KVA Power at KIADB Bommasandra on Jigani Link Road

Contact Mob: 86601 16107 / 63634 64670
E-mail: harshaprecitech@gmail.com



Kempegowda Layout



50×80 Commercial Site 80 feet Road attached & **30×40** Residential Site 30 feet Road attached @ Nadaprabhu Kempegowda Layout in Kommagatta 9000/ sqft fixed. **Call: 9900040218**

NADAPRABHU KEMPEGOWDA Layout 2nd Block I Sector 30x40 NF Near 300ft Road Good Location: 6360050356

Nagarbhavi

SITE SALE 30X50 West South Corner BDA Nagarbhavi Rajajinagar Housing Co Operative Society, Near BDA Complex. Call: 8105688602.

30X29 KEMPEGOWDA Layout M' Sector East Facing. Nagarbhavi 30x40 BDA D' Group West Facing: 9980409820

Vishweshwariah Layout

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, BANASHANKARI 6th Stage. Contact: 8892901567

"VISHVESWARAIAH 6TH-BLOCK 60ft Road 50x80 South facing Commercial Property with 75 Squares Building. 9845500019/ 7019314962"

"50X80 EAST_FACING 60`FEET ROAD TOP_LOCATION BDA_SITE 6TH BLOCK VISHVESHWARAIH LAYOUT- 9845143579"

"VISHVESWARAIAH LAYOUT 6th Block 40x60 South-Facing Site for sale Near Upcoming BDA Complex. Genuine`Buyers only Contact: 7892224597"

DIRECT OWNER Commercial 30x40, 40x60, 50x80 Vishweshwaraiah Layout, Kempegowda Layout Near Metro Station: 9620696913/9880781399

VISHWESHWARAIAH LAYOUT 9th 50X60 NW Site. 2145 Commercial 60ft RTO Road Rs. 24000/- Sqft: 9845793121

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

Nelamangala

NELMANGALA BMRDA A Katha South West Corner Site 33.5.X50 (60ft, 30ft Road) Near NH-4: 8310681025

Vidyaranyapura

2600 SQFT AND 1200 SQFT SITES SALE WITH COMPOUND, SHED, ELECTRICITY, BBMP E-AASTHI, KHATHA 9035883017

Anjanapura

ANJANAPURA BDA Site for Sale at 5th G Block 30x40sft, North facing.Contact: 9686094278

House

Basavanagudi

SALE 30X50 East Facing SITE, House with Rental income nearby N.R.colony Rs. 23000/= Sft. 9886044313

Basaweshwaranagar

SALE INDEPENDENT 5BHK GROUND 2BHK FIRST FLOOR 3BHK 3 CAR-PARK A KHATHA 2 Crore: 9035883017

Padmanabha Nagar

NEAR KIDNEY foundation, 2 unit House, West, 1370 sft. (220 sft. Extra site) 3,50,00,000/- -9845144365

Shivajinagar And Around

800 SQFT DUPLEX HOUSE SALE VACANT POSITION LOCATED GANGENAHALLI WITH EASTHI KHATHA 56 LAKHS 9035883017

Residential/ Commercial

Devanahalli

NANDIHILLS BENGALURUNORTH 19602 Sqft converted eKhata gated 15furnished rooms rental income 6L Sale 10Cr Ph:9900106706

Hoskote

PLOT FOR IMMEDIATE SALE Location:Haraluru,Hoskote 6000sqft atRs.2500/sqft West facing Corner plot,5Km toHoskote Government hospital with BMTC accessCall: +91 9448011981

Commercial Land

Mysore

COMMERCIAL LAND FOR SALE
52,272 sqft / 1.08 Acres
Rs.1300/- per sqft
Suitable for Hotels, Lodge, Apartment, School, Petrol Bunk, Villa Houses, Choultry, Farm House. 10km from Palace Surrounded by Layouts General Property HD Kote Main Road Mysore.
Contact: GANISHKA PROPERTIES 97397 03467 Buy and sell

APARTMENT INVESTORS Required for Land Lord intending tobuild classy Apartments, Commercial Spaces and Star Hotel on Mysore Express Waynear to Mysore on a Joint Venture Basis. Very high Return on Investmentoffered. Contact Owner 9741019028

2 ACRES Commercial land available for JV. Suitable for Apartment and 4 Star Hotel plus Office Spaces. On Mysore Express Highway near Mysore Contact Owner 9741019028

Flat

Kanakapura Road

SALE OF FLATS Close to Silk Institute Metro & Nice Road Flats with Feel of A Villa 3 BHK starts from 1.25Cr. Private Varanda Space, RERA APPROVED, 100%Vastu Compliant Homes, Balinese Theme Land Space, with 60+Amenities. Call: 9743859000.

Seshadripuram

1 BHK flat, North east facing, near to Chaitanya School. Safe residential locality, all amenities nearby. Call 9663587845

Agricultural Land

Chikkaballapura

1 ACER 8 GUNTA CORNER Land For Sale, 3km From Chikkaballapur District Manchenahalli Taluk. Contact: 9844603127

Davangere

HARIHARA, BANNIKODU Village 4-05 ACRES and 0-27 GUNTAS Agricultural Lands for Sale, Contact 7795494932

REAL ESTATE BUYING

Sites

Banashankari

BDA-SITES WANTED @ Banashankari 6th Stage Any Block Vishweshwaraiah Layout 30x40, 40x60, 50x80 Sattlement Immediately Contact: 98455-55666

Electronic City

WANTED SITE Surya City, Chandapura, KHB Layout Phase 2/3, Any Dimension Immediate Settlement. 9900556688

Multiple Locations

WANTED BDA_SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout. Contact: SAPTHAGIRI. 9036360366.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

Resedential/ Commercial

Multiple Locations

WANTED RESIDENTIAL Property 1200 to 10,000sft in Jayanagar, Basavanagudi, Chamrajpet, JP Nagar, Banashankari 2nd Stage, Koramangala and Indiranagar. Call Verna Developers, Barton Centre, MG Road. 9916310226/ 9353128035. (Brokers Excuse)

Industrial & Factory

Multiple Locations

WANTED CITY Limits Private Industrial Land from 10,000sq.ft. upto 2 Acres and KIADB Land measuring 10,000sq.ft. to 4 Acres in Bangalore Urban & Rural District. Call Verna Developers, Barton Center, MG Road, BLR. 9353128035/ 9916310226.

Tumkur Road

"WANTED KIADB 20,000 Sqft Industrial Shed/ space at Vasanthanarasapura Industrial Area, 1st Phase, Tumkur. 9008725029"

General

REPUTED COMPANY seeking warehouse space in Bangalore:- Space: 20,000 to 2,00,000sqft- Location: in and around Bangalore If you're a property owner or broker with suitable warehouse space. Call: 9739990666, 7760635050

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

14000 K sq.ft. basement plus three floors commercial building is available for rent jayanagar 7 th block suitable for office tutorials software or diagnostic center contact 9845010485

COMMERCIAL PREMISES For rent on 9th Floor, Mittal Tower 445 sqft, Contact:- 7208012111/ 8892051858.

BUSINESS

Business Offers

Finance

MSME LOANS Available for Any Startup Companies,Any Existing Companies NOTE:Also one Approved Loan Available Contact-7204995189

PERSONAL

Change of Name

I SAMIULLA MOHAMMED SAFIULLA Resding at No. 8, 1st floor, Anjanadri Layout, near Reliance School behind Ali Masjid Rachenahalli Tanisandra, Bangalore- 560077, have changed my name to MOHAMMED SAIFULLA vide affidavit dated 28/08/2025, before notary S. Jayanna, Bangalore.

CHANGE OF NAME
We, **Zuber Ahmed Khan & Heena Kouser S**, R/at No.16/2-1, 1st Floor, 3rd Main, 2nd Cross, Behind AK Ashram, Matadahalli, R.T. Nagar, Bengaluru-560032, have changed our minor son's name from **SHAAD AHMED KHAN** to **SAFWAAN AHMED KHAN** vide affidavit dated 28-08-2025 before notary Sivakumara M.N., Bengaluru.

CHANGE OF NAME
I, **C S Lakshmaiah,** residing at # 370, 6th Cross, Pragathipura, BSK 2nd Stage, Bangalore 560070, have changed my name to **C S LAKSHMAN** vide affidavit registered with Sl. No. 105 in , Page 81, Vol No. 03 dated 22.08.2025 before notary L Puttaraju.,Bengaluru.

CHANGE OF NAME
I, **SYED MOHAMED AFAQ BADRI,** residing at No. 28, 2nd Floor, 6th Cross, 8th Main Road, Gupta Layout, Jayanagar 3rd Block, Bengaluru-560041, have changed my name to **MOHAMMED AFAQ BADRI S/o Badruddin Mohammed** vide affidavit dated 28-08-2025 sworn before advocate and notary H.S. Dharma Prasad, Bengaluru.

Lost

PUBLIC NOTICE
This is to inform the General Public that I, **T.S.PRAJWAL,** S/o **Mr.T.R.Swamy,** has lost / misplaced the file containing the original documents i.e., Sale Deed, Allotment letter, Possession certificate and BDA application with respect to the Residential property No. 376/A, Hosuru-Sarjapura Road Layout, Sector – III, BBMP Ward No.174, Bangalore.
The report of these lost documents has been lodged at Bangalore City Police station, Bangalore on 23.08.2025, vide FIR Lost Report No.1766563/2025. If, any person is in the possession of the above mentioned original documents, i.e., Sale Deed, Allotment letter, Possession certificate and BDA application, kindly do get in touch with the undersigned.
T.S.PRAJWAL
S/o MR.T.R.SWAMY,
No.11, Sri Ranga Nilaya,
1st Cross, Achaiah Shetty Layout,
Sadashivanagar, Bangalore-80.
Mobile: 9845978757
Place:Bangalore, Date:28-08-2025

REAL ESTATE SELLING

Sites

Banashankari

AVAILABLE BANASHANKARI 6TH STAGE 6TH BLOCK 20X30 #971 W/F 68 LAKHS CONTACT OWNER 8050908920/ 9986866661

"AVAILABLE" BANASHANKARI 6th Stage,2nd Block 30x40,E/F 40ft Road 6th Block 30x40,W/F Call Lingaraju 9663393533

BDA SITES Available @`Banashankari 6th Stage all Blocks 20x30, 30x40, 40x60 50x80 In Good Location Contact: 99722-06988

BSK 3RD Stage near Big Bazaar BDA 40x60 South facing, Sale 27,000/-sft. Jagruthi Estates- 9972535002/ 9341280002

BDA SITE 30x40, East facing, Banashankari 5th Stage, Near NPS, Rs. 18,500 square foot. Slightly negotiable. 9449820405.

Bannerghatta Road

SALE: BDA SITE No.90, BTM 1st Stage, North facing 40x60, opp:-Income tax tribunal, Adjacent to JALABHAVAN, approx 100 mtr to Bannerghatta Main Road. Genuine Buyers Call: Muralidhar-9741929567

Jakkur

PRIME RESIDENTIAL Corner Plot for Sale, 4,400sqft north/ west, at Jakkur, Telecom Layout. Call: 9019144869.

Kengeri

SALE NAGADEVANAHALLI near Shirke Apartment 2500sqft Commercial property facing 90ft Ring road, clear titles. Owner 9900276199.

SUNCITY PROPERTY 40X60 West Rs.8500 Sft BALAJI LAYOUT:Vishweshwaraiah 1st BLOCK 55X40 East Rs.9500 sft Contact: 9448793428

Kanakapura Road

NARAYAN NAGAR 30x40, 40x60 and 1700 Sqft. Available For SALE with Clear Documents. Contact: 9740148870/ 9880606768.

RMV

2800 SQFT SOCIETY SITE WITH BBMP E-AASTHI KHATHA, WITH COMPOUND WALL ETC. 4 CRORES: 9035883017


email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್










ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

INCHARA FARMS
Managed Villa Plots

Own a Weekend Retreat at Inchara Farms



ನೆಲಮಂಗಲ

Beautiful Serene view

"ಮೂಲ ಕೃಷಿ ಭೂಮಿ ಬೆಳೆಗೆ ಅಭಿವೃದ್ಧಿ ಪಡಿಸಿರುವ ಫಾರಂ ಲ್ಯಾಂಡಿನ ಮಾಲೀಕರಾಗಿ"

• DON'T MISS THIS OPPORTUNITY •

Amenities
- Gated Community
- Swimming pool
- Club house
- Spread across 7 acres.
- 20+ Resort-Type Amenities
- Indoor & Out door Games & more

Surrounding BMRDA PLOTS Market Price
~~₹3000-4000~~ per sqft

Our Price
₹1299 per sqft

Plot size: 5000+ sqft

NISCHITHA PROPERTIES Pvt.Ltd.
More Than Real Estate
9164009004
www.nischithaproperties.com

RAJATHADRI GREEN CITY

PRM/KA/RERA/1251/310/PR/150225/007509

BMICAPA Approved
RERA Regd.

Premium & Luxury Plots in **SOUTH BANGALORE**

ಕೇವಲ 1.5 km ಅಂತರದಲ್ಲಿ ಬೆಂಗಳೂರು - ಮೈಸೂರು ಎಕ್ಸ್‌ಪ್ರೆಸ್‌ವೇ



Top notch Developments & Amenities
- Wide Roads - 60 ft, 40ft & 33ft.
- Amphitheatre
- Kids play area
- Semi-Opened out door gym.
- 3 Beautiful parks
- Underground Drainage & Electricity

NOW or NEVER
80%
ಮಾರಾಟವಾಗಿದೆ

PREMIUM PLOTS ARE AVAILABLE
PRICE ₹51 LACS*
30x40, 30x50 & Odd dimensions.

80-90% ಬ್ಯಾಂಕ್ ಸಾಲ ಲಭ್ಯವಿದೆ
9164 009 004

SRIVEN DAKSHA ELITE
ಶ್ರೀವೆನ್ ದಕ್ಷ ಎಲೈಟ್

Breathe Easy with Ample Ventilation & Natural Light in every Corner!

ಬೊಮ್ಮಸಂದ್ರ
ಕೈಗಾರಿಕಾ ಪ್ರದೇಶದ ಹತ್ತಿರ



Modern Amenities
- 24/7 Power & Water backup
- Luxury club house
- Easy pool access

Gated community with Just
168 units or 1.24 acres
Perfect for Families, IT Professionals & Investors

Pre Launch Offer
~~39.5 Lakhs~~
1 BHK ₹33 LACS*

2BHK
~~58.5 Lakhs~~
49.9 lakhs

3BHK
~~68.5 Lakhs~~
53.9 lakhs

ಬ್ಯಾಂಕ್ ಸಾಲ ಲಭ್ಯವಿದೆ
9164 007 001

ARVIND PROPERTIES
FOR FAITH AND RELIABILITY

Move in for an extraordinary LIFESTYLE in the HEART OF NATURE




- E - Khata
- Ready for Registration
- BMRDA & RERA Approved
- Bank Loan Available

ನೆಲಮಂಗಲ ಈಗ ಬೆಂಗಳೂರಿನ ರಿಯಲ್ ಎಸ್ಟೇಟ್ **ಹಾಟ್‌ಸ್ಪಾಟ್** ಆಗಿದೆ!

50 Acres Project | 900 Premium Plots

COMFORTS



PROXIMITY
- Located on the Intermediate Ring Road, with a newly upgraded double road ensuring seamless connectivity.
- In the vicinity of proposed International Airport.
- Strategically located near Dabaspet industrial area.
- Minutes away from upcoming Metro and Economic Corridors.
- Close to the City's future - Knowledge Health Innovation Research-City (KHIR-City) Project.

99986 08666
www.arvindproperties.com

ನೆಲಮಂಗಲ, ಸೊಂಡೆಕೊಪ್ಪ ರಸ್ತೆಯಲ್ಲಿಯೇ ಪ್ರತಿಷ್ಠಿತ ಬಡಾವಣೆ